ಸಂಪುಟ : ೨೭

ಸಂಚಿಕೆ : ೪

ಕರ್ನಾಟಕ ಭಾರತಿ

ಅಕ್ಷಯ ತೃತೀಯಾ ಸಂಚಿಕೆ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಗೌರವ ಸಂಪಾದಕರು

ಡಾ. ಎಸ್. ರಾಮೇಗೌಡ

ಕುಲಪತಿಗಳು

ಸಂಪಾದಕರು

ಡಾ. ವೀರಣ್ಣ ರಾಜೂರ

ಡಾ. ಬಿ. ಆರ್. ಹಿರೇಮಠ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಏಪ್ರಿಲ್, ೧೯೯೫

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೨೭ ಸಂಚಿಕೆ : ೪

ಪ್ರಕಟನೆ : ದಿನಾಂಕ, ಜನೆವರಿ, ೧೯೯೮

ಅಕ್ಷಯ ತೃತೀಯಾ ಸಂಚಿಕೆ

ಪ್ರಕಾಶಕರು

ಪ್ರೊ. ಎಚ್. ವಿ. ನಾಗೇಶ್

ಮುದ್ರಕರು

ಡಾ. ಎ. ಮುರಿಗೆಪ್ಪ

ನಿರ್ದೇಶಕರು

ಕ. ವಿ. ಮುದ್ರಣಾಲಯ, ಧಾರವಾಡ -೩

ಲೇಖಕರಿಗೆ ಸೂಚನೆಗಳು

``ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನವು ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ.

ಲೇಖನಗಳನ್ನು, ಪುಸ್ತಕಗಳನ್ನು ವಿಮರ್ಶೆಗಾಗಿ ಸಂಪಾದಕರು, `ಕರ್ನಾಟಕ ಭಾರತಿ' ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ -೫೮೦ ೦೦೩, ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ	೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ	೪. ಅಕ್ಷಯ ತೃತೀಯಾ ಸಂಚಿಕೆ

ಬಿಡಿ ಸಂಚಿಕೆಯ ಬೆಲೆ ರೂ. ೨೦.೦೦

ಪರಿವಿಡಿ

ಯೋಗವು ಆತ್ಮೋನ್ನತಿಯ ಮಾರ್ಗ*

-ಡಾ. ಚಂದ್ರಮೌಳಿ ನಾಯ್ಕರ

ಮನುಷ್ಯನು ಯಾವಾಗಲೂ ಸುಖವಾಗಿರಬೇಕೆಂದು ಬಯಸುತ್ತಾನೆ. ಅವನು ಸುಖವಾಗಿದ್ದಾನೆಯೆ ? ಎಂಬ ಪ್ರಶ್ನೆ ಸ್ವಾಭಾವಿಕವಾಗಿ ಉದ್ಭವಿಸುವುದು. ಆಧ್ಯಾತ್ಮಿಕ ಗ್ರಂಥಗಳಲ್ಲಿ ಸುಖಿಯಾಗಿರುವವರೆಂದರೆ ಇಬ್ಬರು ಎಂದು ಹೇಳಿದೆ. ಅವರ್‍ಯಾರು ಎಂದರೆ ಒಬ್ಬನು ಸತ್ತಿದ್ದಾನೆ, ಇನ್ನೊಬ್ಬನು ಹುಟ್ಟಬೇಕಾಗಿದೆ. ಅಂದರೆ ಈ ಹುಟ್ಟು ಮತ್ತು ಸಾವಿನ ಮಧ್ಯದಲ್ಲಿ ಜೀವಿಸಿರುವ ಮನುಷ್ಯನು ಸುಖಕ್ಕಾಗಿ ಪರದಾಡುತ್ತಿದ್ದಾನೆ.

ಪ್ರಾಪಂಚಿಕ ಜೀವನದಲ್ಲಿ ಸಿಕ್ಕು ಒದ್ದಾಡುವ ಮಾನವ, ಶಾಶ್ವತ ಸುಖ ಪಡೆಯಬಲ್ಲ. ಮಹಾದೇವನಾಗಲು ಸಾಂಸಾರಿಕ ಅಂದರೆ ಪ್ರೇಯೋಮಾರ್ಗವನ್ನು ಬಿಟ್ಟು ಆಧ್ಯಾತ್ಮಿಕ ಸಾಧನೆಯ ಶ್ರೇಯೋ ಮಾರ್ಗವನ್ನು ಆಶ್ರಯಿಸಬೇಕಾಗುತ್ತದೆ. ಇದು ಎಲ್ಲರಿಗೂ ಸಾಧ್ಯವಿಲ್ಲ. ಯಾಕೆಂದರೆ 'ಆಧ್ಯಾತ್ಮವು ದುರ್ಬಲರ ಹಾಗೂ ಮೂರ್ಖರ ಕ್ಷೇತ್ರವಲ್ಲ' ವೆಂದು ಶ್ರೇಷ್ಠರು ಹೇಳಿರುವರು.

ಇಂಥ ಆಧ್ಯಾತ್ಮಿಕ ಸಾಧನೆ ಮಾಡಬೇಕಾದರೆ ಅದರ ಅವಿಭಾಜ್ಯ ಭಾಗವಾದ ಯೋಗವನ್ನು ಕೈಗೊಳ್ಳಬೇಕಾಗುವುದು.

೧. 'ಯೋಗ : ಕರ್ಮಸು ಕೌಶಲಮ್'

೨. 'ಸಮತ್ವಂ ಯೋಗ ಉಚ್ಯತೆ'

೩. 'ದುಃಖ ಸಂಯೋಗ ನಿಯೋಗಂ ಯೋಗ ಸಂಜ್ಞಕಮ್'

ಇತ್ಯಾದಿಯಾಗಿ ಯೋಗದ ಸಾಮಾನ್ಯ ವ್ಯಾಖ್ಯೆಗಳನ್ನು ತಿಳಿಯಬಹುದಾಗಿದೆ. ಇವೆಲ್ಲವನ್ನೂ ಸಾಧಿಸಲು ಅಥವಾ ಜೀವನದಲ್ಲಿ ಏನನ್ನಾದರೂ ಸಾಧಿಸಲು `ಮನೋನಿರ್ಧಾರ' ಅವಶ್ಯ. ಅಂಥ ಮನಸ್ಸನ್ನು ನಿರ್ಧರಿಸಲು ಅದು ನಮ್ಮ ವಶದಲ್ಲಿರಬೇಕು. ಆದುದರಿಂದ ನಾವು ಆ ಮನಸ್ಸನ್ನು ನಿಗ್ರಹಿಸಬೇಕು. ಅದರಲ್ಲಿ ನಾವು ಯಶಸ್ವಿಯಾದರೆ ನಮಗೆ

---

* ದಿ. ೨೬. ೧೦. ೧೯೯೪ರಂದು, ವಿಜಾಪುರದ ಎ. ವಿ. ಸಮಿತಿಯ ಆಯುರ್ವೇದ ಮಹಾವಿದ್ಯಾಲಯದ ೧೯೯೪ -೯೫ರ `ಯೋಗ ಕಮ್ಮಟ'ದಲ್ಲಿ ನೀಡಿದ ವಿಶೇಷ ಉಪನ್ಯಾಸ.

ಮೋಕ್ಷ ಅಥವಾ ಬಿಡುಗಡೆ ಸಿಗುವುದು. ಇಲ್ಲದಿದ್ದರೆ ಬಂಧನವಾಗುತ್ತದೆ. ಆದ್ದರಿಂದ ಬಂಧ- ಮೋಕ್ಷಗಳಿಗೆ ಮನವೇ ಕಾರಣವೆಂದು ಹೇಳಲಾದ ಹಿನ್ನೆಲೆಯಲ್ಲಿ ಪತಂಜಲಿ ಮಹರ್ಷಿಗಳು `ಯೋಗಶ್ಚಿತ್ತ ವೃತ್ತಿ ನಿರೋಧ: ' ಎಂದು ಹೇಳಿದರು. `ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ ' ಎಂಬ ನುಡಿಗೆ ಪತಂಜಲಿಗಳ (ಮಾತು) ಉಪದೇಶ ಸಾರ್ಥಕವಾಗಿದೆ.

ಇಲ್ಲಿ `ಯೋಗಶ್ಚಿತ್ತವೃತ್ತಿ ನಿರೋಧಃ' ಎಂಬಲ್ಲಿ ಚಿತ್ತವೃತ್ತಿಯೇ ಯೋಗದ ಪರಮ ಗುರಿಯಲ್ಲದಿದ್ದರೂ ಪರಮ ಗುರಿಯಾದ ಶಿವಾದ್ವೈತವನ್ನು ಸಾಧಿಸಲು ಈ ಚಿತ್ತವೃತ್ತಿ ನಿರೋಧ ಬಹೂಪಯುಕ್ತವಾಗಿದೆ. ಚಿತ್ತವೆಂಬುದು ಸ್ವಾಭಾವಿಕವಾಗಿ ಚಂಚಲವಾಗಿದೆ. ಆದ್ದರಿಂದ ಇದಕ್ಕೆ ಮರ್ಕಟ ಮನಸ್ಸು (Monkey mind or restless beast) ಎಂಬುದಾಗಿ ಹೇಳಲಾಗಿದೆ. ಇದನ್ನು ಸಮಾಧಾನಗೊಳಿಸುವ ಪ್ರಯತ್ನ ಮಾಡಬೇಕಾಗುತ್ತದೆ. (Harnessing the monkey mind). ಈ ಪ್ರಯತ್ನಕ್ಕೂ ಮನಸ್ಸು ಮಾಡಬೇಕಾಗುವುದು. ಆವಾಗಲೇ ಮುಕ್ತಿ ಪಡೆಯಲು ಸಾಧ್ಯ. ಅಂದರೆ `Freedom from bondage is liberation' ಎಂದು ಹೇಳಲಾಗಿದೆ.

`Philosophy is the way of thinking'

`Yoga is the way of doing'.

`Realization is the way of undoing'

ಮುಕ್ತಿ ಅಥವಾ ಆತ್ಮಸಾಕ್ಷಾತ್ಕಾರ ಸಾಧನೆಯೂ ಬಹು ಸುಲಭವಲ್ಲ. ಅದಕ್ಕಾಗಿಯೇ ಶ್ರೇಷ್ಠರು ಹೇಳಿದಂತೆ ಇದು ದುರ್ಬಲರ ಹಾಗೂ ಮೂರ್ಖರ ಕ್ಷೇತ್ರವಲ್ಲ. ಇದನ್ನು ಬಹಳ ನಿಷ್ಠೆಯಿಂದ ಮತ್ತು ನಿಯಮಿತತನದಿಂದ ಮಾಡಬೇಕಾಗುತ್ತದೆ. ಈ ರೀತಿ ಮಾಡಬೇಕಾದ ಕಾರ್ಯಕ್ಕೆ ಯೋಗವು ಬಹು ಪ್ರಯೋಜನಕಾರಿಯಾಗಿದೆ.

ಈ ಯೋಗವೆಂಬುದು ಜ್ಞಾನಯೋಗ, ಕರ್ಮಯೋಗ, ಜೈನಯೋಗ, ಬೌದ್ಧಯೋಗ, ಜಪಯೋಗ, ತಪಯೋಗ, ಮಂತ್ರಯೋಗ, ಲಯಯೋಗ, ಹಠಯೋಗ ಹಾಗೂ ರಾಜಯೋಗವೆಂದು ಹಲವು ಬಗೆಯಾಗಿದೆ. ಪ್ರಮುಖವಾದವುಗಳೆಂದರೆ ಮಂತ್ರ, ಲಯ, ಹಠ ಹಾಗೂ ರಾಜಯೋಗವೆಂಬ ಚತುರ್ವಿಧಗಳು. (ಮಂತ್ರೋ ಲಯೋ ಹಠೋ ರಾಜಯೋಗಶ್ಚೇತಿ ಚತುರ್ವಿಧಮ್). ಇವುಗಳು ಕೆಲವು ಅಂಗಗಳನ್ನು ಹೊಂದಿರುವುದರಿಂದ ಅವುಗಳಿಗೆ ಯೋಗಾಂಗಗಳೆಂದು ಹೇಳುವರು. ಪತಂಜಲಿಗಳ ಯೋಗವು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿಗಳಿಂದ ಕೂಡಿದ ಅಷ್ಟಾಂಗಯೋಗವಾಗಿದೆ. ಗೋರಕ್ಷನಾಥ ಮೊದಲಾದವರು ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿಗಳಿಂದ ಕೂಡಿದ ಷಡಂಗಯೋಗವನ್ನು

ಪ್ರಚುರಪಡಿಸಿದರು. ಹಠಯೋಗವನ್ನು ಪ್ರಚುರಪಡಿಸಿದ ಸ್ವಾತ್ಮಾರಾಮರು ಆಸನ, ಪ್ರಾಣಾಯಾಮ, ದಶಮುದ್ರೆ ಮತ್ತು ನಾದಾನುಸಂಧಾನ ಎಂಬ ಚದುರಂಗಯೋಗವನ್ನು ನಿರೂಪಿಸಿದ್ದು -

`ಆಸನಂ ಕುಂಭಕಂ ಚಿತ್ರಂ ಮುದ್ರಾಖ್ಯಂ ಕರಣಂ ತಥಾ।
ಅಥ ನಾದಾನುಸಂಧಾನಂ ಅಭ್ಯಾಸಾನುಕ್ರಮೋ ಹಠೆ' ॥

ಎಂದು ಸ್ವಾತ್ಮಾರಾಮರು ಸಾದರಪಡಿಸಿದ ಹಠಯೋಗವು ರಾಜಯೋಗದ ಸೋಪಾನವಾಗಿದೆ. ಇಲ್ಲಿ `ಹ' ಅಂದರೆ `ಪಿಂಗಳಾ' ಅಥವಾ ಸೂರ್ಯ ನಾಡಿ ಅಥವಾ ಬಲಹೊರಳೆ. `ಠ' ಅಂದರೆ `ಇಡಾ' ಅಥವಾ ಚಂದ್ರನಾಡಿ ಅಥವಾ ಎಡಹೊರಳೆ. ಇವೆರಡರ ಮೂಲಕ ಆಚರಿಸಬೇಕಾದ (ಪ್ರಾಣಾಯಾಮ) ಪೂರಕ, ಕುಂಭಕ, ರೇಚಕ ವಿಧಾನವಾದ ಪ್ರಾಣಾಯಾಮವೆಂಬುದು ಇಲ್ಲಿ ಸ್ಪಷ್ಟವಾಗಿ ತಿಳಿಸಲ್ಪಡುವುದು. ಈ `ಹಠಯೋಗ'ವನ್ನು ಸ್ವಾತ್ಮಾರಾಮರು ಹೇಳಿರುವಂತೆ ಜಾಣರ ಜಾಣ, ರಾಜರ ರಾಜ, ಒಡೆಯರ ಒಡೆಯ, ನಾಥರ ನಾಥ, ಆದಿನಾಥ, ಪರಶಿವ ಈ ಯೋಗವನ್ನು ಹೇಳಿದ್ದಾಗಿ ತಮ್ಮ ಹಠಪ್ರದೀಪಿಕೆಯಲ್ಲಿ ಬರೆದಿರುವರು.

ಹಠಯೋಗವು ದೈಹಿಕ ವಿಕಾಸಗೊಳಿಸುವುದು. ಆ ಮೂಲಕವಾಗಿ ರಾಜಯೋಗವು ಮಾನಸಿಕ ವಿಕಾಸಗೊಳಿಸುವುದು. ಹೀಗೆ ಯೋಗವು ಸಿದ್ಧಿಸುವುದು. ಬೇರೆ ನುಡಿಗಳಲ್ಲಿ ಹೇಳಬೇಕೆಂದರೆ, ದೈಹಿಕ ಪ್ರಗತಿಯು ಮಾನಸಿಕ ಪ್ರಗತಿಗೆ ದಾರಿ ಮಾಡಿಕೊಡುತ್ತದೆ. ಅದರ ನಂತರ ಮಾನಸಿಕ ಪ್ರಗತಿಯಿಂದ ಆತ್ಮಸಾಕ್ಷಾತ್ಕಾರವು ಲಭಿಸುತ್ತದೆ.

ಯೋಗದ ಸಾಮಾನ್ಯ ಆಚರಣೆಗಳಾದ ಆಸನಗಳು ಮುಗಿದ ಮೇಲೆ ದೇಹವನ್ನು ಸ್ವಚ್ಛಗೊಳಿಸಿಕೊಳ್ಳಬೇಕಾದ ಸಾಧಕನ ಷಟ್ಕ್ರಿಯಗಳಾದ ಧೌತಿ, ಬಸ್ತಿ, ನೇತಿ, ತ್ರಾಟಕ, ನೌಲಿಕ, ಕಪಾಲಭಾತಿಗಳ ತಂತ್ರಗಳನ್ನು ಅವುಗಳ ಪ್ರಯೋಜನಗಳನ್ನು ವರ್ಣಿಸಲಾಗಿದೆ. ಈ ಮಲಶೋಧನ ಕ್ರಿಯೆಗಳು ಮುಗಿದ ಮೇಲೆ ನಾಡಿಶೋಧನದ ಸಾಧನವಾದ ಪ್ರಾಣಾಯಾಮದ ಮೂರು ಸ್ಥಿತಿಗಳನ್ನು, ಬೆವರು, ಕಂಪನ, ಬ್ರಹ್ಮರಂಧ್ರ ಪ್ರವೇಶವೆಂಬ ಸ್ಥಿತಿಗಳು ಹೇಳಲ್ಪಟ್ಟಿವೆ. ಅಲ್ಲಿ ಅಷ್ಟಕುಂಭಕಗಳಾದ ಸೂರ್ಯಭೇದನ, ಉಜ್ಜಾಯೀ, ಸೀತ್ಕಾರೀ ಶೀತಲೀ, ಭಸ್ತ್ರಿಕಾ, ಭ್ರಾಮರೀ, ಮೂರ್ಛಾ ಹಾಗೂ ಪ್ಲಾವಿನೀ ಇವುಗಳು ದೇಹದಲ್ಲಿರುವ ೭೨೦೦೦ ನಾಡಿಗಳನ್ನು ಶುದ್ಧಗೊಳಿಸಿ ಸಾಧಕನನ್ನು ಬಹಳ ಆಕರ್ಷಕನನ್ನಾಗಿ ಮಾಡುತ್ತದೆ. 'ಯೋಗಿನೀ ಚಕ್ರ ಸಮ್ಮಾನ್ಯಃ' ವೆಂಬ ಮಾತು ಯೋಗಿನಿಯರಿಗೂ ಈತನು ಆಕರ್ಷಕನಾದವನೆಂಬುದು ಆವನ ಆಕರ್ಷಕತ್ವವನ್ನು ಮಾತ್ರ ಸೂಚಿಸುವುದೇ ಹೊರತು ಯೋಗಿನಿಯರಿಗೆ ಆಕರ್ಷಕನಾಗಲು ಈ ಕುಂಭಕವನ್ನು ಆಚರಿಸಬೇಕೆಂದಲ್ಲ.

ಈ ಅಷ್ಟ ಕುಂಭಕಗಳನ್ನಾಚರಿಸುವ ಸಾಧಕನು ಪ್ರಗತಿಯ ಮಾರ್ಗದಲ್ಲಿ ಬಂದೊದಗುವ ರುದ್ರಗ್ರಂಥಿ, ವಿಷ್ಣುಗ್ರಂಥಿ ಹಾಗೂ ಬ್ರಹ್ಮಗ್ರಂಥಿಗಳೆಂಬ ಗ್ರಂಥಿತ್ರಯಗಳನ್ನು ದಾಟಿ ಮುಂದುವರೆಯುವನು. ಗ್ರಂಥಿತ್ರಯಗಳನ್ನು ಭೇದಿಸಿ ವಾಯುವು ಸುಷುಮ್ನಾ ನಾಡಿಯ ಮೂಲಕ ಪ್ರವೇಶಿಸಿ ಸಹಸ್ರಾರದ ವರೆಗೆ ನಿರಾಯಾಸವಾಗಿ ಸಾಗುವದು. ಈ ಹಂತದಲ್ಲಿ ಸಾಧಕನಿಗೆ ಕುಂಡಲಿನಿ ಶಕ್ತಿಯು ಜಾಗೃತವಾಗಲು ಸಹಾಯವಾಗುವುದು.

ಕುಂಡಲಿನಿಯೆಂದರೆ ಒಂದು ವಿಶೇಷ ಸಿದ್ಧಿಯ ಅವಸ್ಥೆ - ` Gaining a kind of Rich Experience' ಎಂದು ಅದರ ವರ್ಣನೆ ಮಾಡಲಾಗಿದೆ.

ಮಹಾಮುದ್ರೆ, ಮಹಾಬಂಧ, ಮಹಾವೇಧ, ಖೇಚರೀ, ಉಡ್ಡೀಯಾನಬಂಧ, ಮೂಲಬಂಧ, ಜಾಲಂಧರ ಬಂಧ, ವಿಪರೀತಕರಣೀ, ವಜ್ರೋಲಿ ಹಾಗೂ ಶಕ್ತಿಚಾಲನವೆಂಬ ದಶಮುದ್ರೆಗಳು, ಸಾಧಕನ ಜನನೇಂದ್ರಿಯ ಹಾಗೂ ಗುದ ಇವುಗಳ ಮಧ್ಯವಿರುವ ಒಂಭತ್ತು ಇಂಚು ಉದ್ದ ಹಾಗೂ ನಾಲ್ಕು ಅಂಗುಲ ಅಗಲವಿರುವ ಕೊಳ್ಳ ಪ್ರದೇಶದಲ್ಲಿ ಸುಪ್ತವಾಗಿರುವ ಕುಂಡಲಿನಿ ಎಂಬ ಶಕ್ತಿಯನ್ನು ಜಾಗೃತಗೊಳಿಸಲು ನೇರವಾಗಿ ಸಹಾಯವನ್ನು ಮಾಡುವವು.

ಅನಂತರ ಸಾಧಕನು ನಾದಾನುಸಂಧಾನವೆಂಬ ಅವಸ್ಥೆಯಲ್ಲಿ ಲಯವಾಗುವನು. ಒಂದು ಕೋಟಿ ಇಪ್ಪತ್ತೈದುಲಕ್ಷ ಲಯಾವಸ್ಥೆಗಳಿದ್ದು, ಅವುಗಳಲ್ಲಿ ಅತಿ ಶ್ರೇಷ್ಠವಾದ ಈ ನಾದಾನುಸಂಧಾನವೆಂಬ ಅವಸ್ಥೆಯಲ್ಲಿ ಲೀನನಾದ ಯೋಗಿಯು ಸಮಾಧಿಯನ್ನು ಹೊಂದುವನು.

ನಾದಾನುಸಂಧಾನವೆಂಬುದು ಆರಂಭಾವಸ್ಥೆ, ಘಟಾವಸ್ಥೆ, ಪರಿಚಯಾವಸ್ಥೆ ಹಾಗೂ ನಿಷ್ಪತ್ತ್ಯಾವಸ್ಥೆಯೆಂದು ನಾಲ್ಕು ಬಗೆಯಾಗಿದೆ. ನಾದಾನುಸಂಧಾನವೆಂಬುದೇ ರಾಜಯೋಗವಾಗಿದೆ. ಆಸನ, ಪ್ರಾಣಾಯಾಮ ಮತ್ತು ಮುದ್ರೆಗಳ ವಿಷಯವಾಗಿ ತಿಳಿದುಕೊಂಡ ಮೇಲೆ ಅವುಗಳ ಫಲಸ್ವರೂಪವಾದ ರಾಜಯೋಗವೇ ನಾದಾನುಸಂಧಾನವಾಗಿದೆಯೆಂದು ಹೇಳಬಹುದು. ಜೀವನ್ಮುಕ್ತಿ ಸ್ವರೂಪವೇ ನಾದಾನುಸಂಧಾನವಾಗಿದೆಯೆಂತಲೂ ಹೇಳುವುದುಂಟು.

ರಾಜಯೋಗ, ಸಮಾಧಿ, ಉನ್ಮನೀ, ಮನೋನ್ಮನೀ, ಅಮರತ್ವ, ಲಯ, ತತ್ತ್ವ, ಶೂನ್ಯಾಶೂನ್ಯ, ಪರಮಪದ, ಅಮನಸ್ಕ, ಅದ್ವೈತ ನಿರಾಲಂಬ, ನಿರಂಜನ, ಜೀವನ್ಮುಕ್ತಿ, ಸಹಜಾವಸ್ಥೆ, ತುರ್ಯಾವಸ್ಥೆ ಎಂಬೆಲ್ಲವೂ ಏಕವಾಚಕ ಪದಗಳಾಗಿವೆಯೆಂಬುದನ್ನು ನಾವು ಮರೆಯುವಂತಿಲ್ಲ.

ನೀರಿನಲ್ಲಿ ಉಪ್ಪು ಬೆರೆಯುವಂತೆ ಆತ್ಮ ಮತ್ತು ಮನಸ್ಸು ಬೆರೆತಾಗ ಸಮಾಧಿಯೆನಿಸುತ್ತದೆ. ಜೀವಾತ್ಮ ಪರಮಾತ್ಮರ ಐಕ್ಯಕ್ಕೆ ಸಮಾಧಿಯೆನ್ನುವರು. ಮನಸ್ಸಿನ ವ್ಯಾಪಾರಗಳೆಲ್ಲ ಅಂದರೆ ಸಂಕಲ್ಪಗಳೆಲ್ಲ ನಾಶವಾಗುವ ಸ್ಥಿತಿಗೆ ಸಮಾಧಿಯೆಂದೆನ್ನುವರು.

ಮನೋ ಯತ್ರ ವಿಲೀಯತೇ ಪವನಸ್ತತ್ರ ಲೀಯತೆ।
ಪವನೋ ಲೀಯತೇ ಯತ್ರ ಮನಸ್‌ತತ್ರ ವಿಲೀಯತೆ॥

ಮನಸ್ಸು ಲೀನವಾಗುವಲ್ಲಿಯೇ ವಾಯು ಲೀನವಾಗುತ್ತದೆ. ಪ್ರಾಣ ಲೀನವಾಗುವಲ್ಲಿ ಮನಸ್ಸೂ ಲೀನವಾಗುತ್ತದೆ. ವಾಯುಕ್ರಿಯೆ ನಡೆಯುತ್ತಿರುವಾಗ ಮನೋವ್ಯಾಪಾರವೂ ನಡೆಯುತ್ತದೆ. ಮನೋವ್ಯಾಪಾರ ನಡೆಯುತ್ತಿರುವಾಗ ವಾಯುಪ್ರವೃತ್ತಿ ನಡೆಯುತ್ತದೆ. ಇದರಿಂದ ಇಂದ್ರಿಯಗಳು ಕಾರ್ಯಪ್ರವೃತ್ತವಾಗುತ್ತವೆ. ಅವುಗಳ ನಿರೋಧವೇ ಮೋಕ್ಷಸಿದ್ಧಿ (ಸೋಪಾನ)ಯಾಗಿದೆ.

ಜಾಗೃತ, ಸ್ವಪ್ನ ಹಾಗೂ ಸುಷುಪ್ತಿ ಎಂಬ ಮೂರು ಅವಸ್ಥೆಗಳು ಶ್ರೀಸಾಮಾನ್ಯನಿಗೂ ಸಮಾನವಾಗಿದ್ದು ಯೋಗಿ ಮೊದಲಾದ ಸತ್ಪುರುಷರಿಗೆ ಮಾತ್ರ ನಾಲ್ಕನೇ ಅವಸ್ಥೆಯಿದೆ. ಅದಕ್ಕೆ ತೂರ್ಯ ಅಥವಾ ತುರೀಯ ಅವಸ್ಥೆಯೆಂದು ಕರೆಯಲಾಗಿದೆ. ಇಲ್ಲಿ ಯೋಗಿಯು ಪರಬ್ರಹ್ಮದಲ್ಲಿ ಆತ್ಮವನ್ನು ಲೀನಗೊಳಿಸಬೇಕು ಮತ್ತು ಆತ್ಮನಲ್ಲಿ ಪರಬ್ರಹ್ಮನನ್ನು ಸಮರಸಗೊಳಿಸಬೇಕು. ಹೀಗೆ ಎಲ್ಲೆಡೆಯಲ್ಲಿಯೂ ಆತ್ಮದರ್ಶನ ಮಾಡುತ್ತ ಬೇರೆ ಏನನ್ನೂ ಚಿಂತಿಸಬಾರದು. ಇದಕ್ಕೆ `Constant remembrance' ಎಂದು ಕರೆದಿದ್ದಾರೆ.

ನಾದಾನುಸಂಧಾನದಲ್ಲಿ `ನಾದ' ವೆಂದರೆ ಅನಾಹತನಾದವೆಂದು ಅರ್ಥ. ಅಂದರೆ ಮುಕ್ತಾಸನದಲ್ಲಿ ಕುಳಿತು ಯೋಗಿಯು ಶಾಂಭವೀ ಮುದ್ರೆಯ ಅಭ್ಯಾಸ ಮಾಡುತ್ತಿರುವಾಗ ಬಲಗಿವಿಯಲ್ಲಿ ಕೇಳಿಸುವ ಆಂತರಿಕ (ಅನಾಹತ) ನಾದವೆಂದು ಅರ್ಥ. ಎರಡೂ, ಕಿವಿ, ಎರಡೂ ಕಣ್ಣು, ಮೂಗಿನ ಹೊರಳೆ ಹಾಗೂ ಬಾಯಿಯನ್ನು ಮುಚ್ಚಿದಾಗ ಕೇಳಿಬರುವ ಪರಿಶುದ್ಧವಾದ ಸುಷುಮ್ನಾ ನಾಡಿನಲ್ಲಿಯ ನಿರ್ಮಲವಾದ ನಾದವು ಕೇಳುವುದು. ಅದುವೇ ಅನಾಹತನಾದವೆಂದು ವರ್ಣಿತವಾಗಿದೆ.

ನಾದಾನುಸಂಧಾನದ ಮೊದಲ ಅವಸ್ಥೆಯಾದ `ಆರಂಭಾವಸ್ಥೆ'ಯಲ್ಲಿ ಹೃದಯದಲ್ಲಿರುವ ಅನಾಹತಚಕ್ರದಲ್ಲಿಯ 'ಬ್ರಹ್ಮಗ್ರಂಥಿ' ಯ ಭೇದವಾಗುವುದು. ಆಗ ಶೂನ್ಯ ಸಂಭವವಾದ ಆನಂದ ಉಂಟಾಗುವುದು. ಅಂದರೆ ಜಣಜಣ ಶಬ್ದಗೈಯುವ ವಿಚಿತ್ರವಾದ ಅನಾಹತನಾದವು ಕೇಳಿಬರುತ್ತದೆ. ಆಗ ಯೋಗಿಯು ದಿವ್ಯ ದೇಹ ಅಥವಾ ಪ್ರಕಾಶಮಾನವಾದ ದೇಹವುಳ್ಳವನೂ, ರೋಗರಹಿತನೂ ಮತ್ತು ಪರಿಪೂರ್ಣ ಹೃದಯವುಳ್ಳವನೂ ಆಗುತ್ತಾನೆ. ಅಲ್ಲದೇ ವಾಯುವು ಶೂನ್ಯಪದವಿಯೆಂಬಲ್ಲಿ ಲೀನವಾಗುವುದು.

ನಾದಾನುಸಂಧಾನದ ಎರಡನೆಯ ಅವಸ್ಥೆಯಾದ `ಘಟಾವಸ್ಥೆ' ಯಲ್ಲಿ ಶುದ್ಧವಾದ ವಾಯುವು ಮಧ್ಯದ ಸುಷುಮ್ನಾ ನಾಡಿಯಲ್ಲಿ ಸಂಚರಿಸುತ್ತದೆ. ದೃಢವಾದ ಆಸನವುಳ್ಳ ಯೋಗಿಯು ಜ್ಞಾನಿಯೂ, ದೇವಸಮಾನ ಕಾಂತಿಯುತವೂ ಆಗುತ್ತಾನೆ. ಕಂಠದಲ್ಲಿಯ ವಿಶುದ್ಧ

ಚಕ್ರದಲ್ಲಿರುವ ವಿಷ್ಣುಗ್ರಂಥಿಯ ಭೇದದಿಂದಾಗಿ ಪರಮಾನಂದ ಸೂಚಕವಾದ ಭೇರಿ ಶಬ್ದವು ಅತಿ ಶೂನ್ಯದಲ್ಲಿ ಕೇಳಿಬರುತ್ತದೆ.

ನಾದಾನುಸಂಧಾನದ ಮೂರನೆಯ ಅವಸ್ಥೆಯಾದ `ಪರಿಚಯಾವಸ್ಥೆ'ಯಲ್ಲಿ ಮದ್ದಳೆಯ ಧ್ವನಿ ಆಕಾಶದಲ್ಲಿ ಕೇಳಿಬರುತ್ತದೆ. ಆಗ ಪ್ರಾಣವು ಸರ್ವಸಿದ್ಧಿಗಳ ಆಶ್ರಯುವಾದ ಮಹಾಶೂನ್ಯ ಅಂದರೆ ಭ್ರೂಮಧ್ಯವನ್ನು ಹೊಂದುತ್ತದೆ. ಚಿತ್ತಾನಂದವನ್ನು ಮೀರಿ ಯೋಗಿಯು ಸಹಜಾನಂದವನ್ನು ಪಡೆಯುತ್ತಾನೆ. ಆಗ ದೋಷ, ದುಃಖ, ಮುಪ್ಪು, ರೋಗ, ಹಸಿವು ಮತ್ತು ನಿದ್ರೆಗಳಿಂದ ಮುಕ್ತನಾಗುತ್ತಾನೆ.

ನಾದಾನುಸಂಧಾನದ ನಾಲ್ಕನೆಯ ಅವಸ್ಥೆಯಾದ `ನಿಷ್ಪತ್ಯಾವಸ್ಥೆ' ಯಲ್ಲಿ ಭ್ರೂಮಧ್ಯದ ಆಜ್ಞಾಚಕ್ರದಲ್ಲಿರುವ ರುದ್ರಗ್ರಂಥಿಯನ್ನು ಭೇದಿಸಿ ವಾಯು ಶಿವಸ್ಥಾನವನ್ನು ಮುಟ್ಟಿ ಅಲ್ಲಿ ಲೀನವಾಗುತ್ತದೆ. ಈ ನಿಷ್ಪತ್ತಿ ಅವಸ್ಥೆಯಲ್ಲಿ ಶ್ರುತಿ ಮಾಡಿದ ವೀಣೆಯ ಧ್ವನಿ ಕೇಳಿಬರುತ್ತದೆ.

ಈ ಅವಸ್ಥೆಯಲ್ಲಿ ಯೋಗಿಯು ಸೃಷ್ಟಿ, ಸಂಹಾರಕರ್ತೃವಾದ ಈಶ್ವರನಿಗೆ ಸಮನಾಗುತ್ತಾನೆ. ಸಕಲ ಯೋಗಾಭ್ಯಾಸಗಳ ಫಲಸ್ವರೂಪವಾದ ಈ ಅವಸ್ಥೆಯಲ್ಲಿ ಯೋಗಿಗೆ ಮಾಡಬೇಕಾದದ್ದು ಏನೂ ಉಳಿದಿರುವುದಿಲ್ಲ. ಆದ್ದರಿಂದಲೇ ಈಶ್ವರನಂತೆ ಸೃಷ್ಟಿ ಸಂಹಾರ ಕಾರ್ಯದಲ್ಲಿ ಶಕ್ತನಾಗುತ್ತಾನೆಂದು ಹೇಳಲಾಗಿದೆ. ಅಲ್ಲದೇ ಈ ಅವಸ್ಥೆಯಲ್ಲಿ ಮುಕ್ತಿ ಇದ್ದರೂ ಅಥವಾ ಇಲ್ಲದಿದ್ದರೂ ಅಖಂಡವೂ ನಿರ್ವಿಘ್ನವೂ ಆದ ಸುಖವಿರುತ್ತದೆ. ಲಯದಿಂದ ಉದ್ಭವಿಸಿದ ಈ ಸೌಖ್ಯವನ್ನು ರಾಜಯೋಗದಿಂದ ಪಡೆಯಲು ಸಾಧ್ಯವಿದೆ. ಇದರ ತಾತ್ಪರ್ಯವಿಷ್ಟೆ: ಅಖಂಡಿತ ಹಾಗೂ ನಿರ್ವಿಘ್ನವಾದ ಆನಂದವನ್ನೇ ರಾಜಯೋಗವೆಂದು ಕರೆಯಬಹುದು.

ಈ ರೀತಿ ನಾದಾನುಸಂಧಾನದಲ್ಲಿ ಕಿವಿಗಳನ್ನು ಕೈಗಳಿಂದ ಮುಚ್ಚಿಕೊಂಡು ಕೇಳಿಬರುವ ಧ್ವನಿಯಲ್ಲಿಯೇ ಮುನಿಯು ಚಿತ್ತವನ್ನು ಸ್ಥಿರಗೊಳಿಸಬೇಕು. ಅದು ಅಲ್ಲಿ ಸ್ಥಿರವಾಗುವಂತೆ ಮಾಡಬೇಕು.

ಬಾಹ್ಯ ಧ್ವನಿಶ್ರವಣ ಜ್ಞಾನವುಂಟಾಗುವವರೆಗೂ ಅಂತರಂಗದಲ್ಲಿಯ ಅನಾಹತನಾದ ಶ್ರವಣ ಅಸಾಧ್ಯವೆಂಬುದು ವ್ಯಾವಹಾರಿಕ ಸತ್ಯ. ಆದ್ದರಿಂದ ಕಿವಿಗಳನ್ನು ಮೊದಲು ಮುಚ್ಚಿಕೊಂಡು ಹೊರಗಿನ ನಾದ ಶ್ರವಣ ನಿಲ್ಲುವಂತೆ ಮಾಡುವುದೇ ಮೊದಲ ಹೆಜ್ಜೆಯಾಗಿದೆ. ಹೊರ ಜಗತ್ತಿಗಿಂತಲೂ ಒಳಜಗತ್ತು ಹೆಚ್ಚು ಸುಂದರ ಹಾಗೂ ಶ್ರೇಷ್ಠವಾಗಿದೆಯೆಂದು ಸಿದ್ಧಿಯೋಗದ ಕರ್ತೃ ಮುಕ್ತಾನಂದರ ಅಭಿಪ್ರಾಯವನ್ನಿಲ್ಲಿ ಸ್ಮರಿಸಬಹುದು.

ಬಾಹ್ಯ ಧ್ವನಿಯೇ ಮುಂತಾದ ವಿಷಯಗಳ ಅನುಭವ ಹೊಂದುವಾಗ ಚಿತ್ತ ಚಂಚಲವಾಗುತ್ತದೆ. ಆದರೆ ಅನಾಹತನಾದ ಶ್ರವಣದಿಂದ ಏಕಾಗ್ರಚಿತ್ತವೂ, ಯೋಗಿಗೆ ಅಲೌಕಿಕ ಆನಂದವನ್ನೂ ನೀಡುತ್ತದೆ.

ಪ್ರಾರಂಭದ ಅವಸ್ಥೆಯಲ್ಲಿ ನಾನಾ ಬಗೆಯ ದೊಡ್ಡ ಶಬ್ದ ಕೇಳಿಬರುತ್ತದೆ. ಆಮೇಲೆ ಅಭ್ಯಾಸವು ವೃದ್ಧಿ ಹೊಂದಲು ಅತಿ ಸೂಕ್ಷ್ಮ ಧ್ವನಿಯು ಕೇಳುತ್ತದೆ. ಅಂದರೆ ಪ್ರಾರಂಭಿಕ ಹಂತದಲ್ಲಿ ಸಮುದ್ರ, ಮೋಡ. ಭೇರಿ ಮತ್ತು ಚಕ್ರತಾಳಗಳ ಧ್ವನಿಯು, ಮಧ್ಯದ ಹಂತದಲ್ಲಿ ಮದ್ದಳೆ, ಶಂಖ, ಗಂಟೆ ಮತ್ತು ಜಾಗಟೆ (ಕಂಸಾಳ) ಗಳನ್ನು ಹೋಲುವ ಧ್ವನಿಯೂ ಮತ್ತು ಕೊನೆಯ ಹಂತದಲ್ಲಿ ಗೆಜ್ಜೆ, ಕೊಳಲು, ವೀಣೆ ಹಾಗೂ ಭ್ರಮರಗಳನ್ನು ಹೋಲುವ ಧ್ವನಿಯೂ ಕೇಳಿಬರುತ್ತದೆ. ಈ ರೀತಿ ನಾನಾಬಗೆಯ ನಾದಗಳು ದೇಹದಲ್ಲಿಯೇ ಕೇಳಿಬರುತ್ತವೆ.

ಮೊದಲು ಕೇಳಿಬರುವ ಸಮುದ್ರದ ಹಾಗೂ ಮೋಡದ ಗರ್ಜನೆಯನ್ನು ಹೋಲುವ ಧ್ವನಿಯನ್ನು ಕೇಳಿದಾಗ ಸಾಧಕನು ಹೆದರುವ ಸಂಭವವಿದ್ದು, ಅವನು ಹೆದರದೇ ನಾದಾನುಸಂಧಾನವನ್ನು ಮುಂದುವರೆಸಿಕೊಂಡು ಹೋಗಬೇಕು. ಯಾಕೆಂದರೆ ನಾದಾಸಕ್ತವಾದ ಮನಸ್ಸೇ ಸಮಾಧಿ ಸ್ಥಿತಿಯನ್ನು ಹೊಂದಲು ಸಮರ್ಥವಾಗಿದೆ.

ಕಟ್ಟಿಗೆಗೆ ಹತ್ತಿದ ಬೆಂಕಿ ಕಟ್ಟಿಗೆಯ ಜೊತೆ ಶಾಂತವಾಗುತ್ತದೆ. ಅದೇ ರೀತಿ ನಾದದಲ್ಲಿ ಪ್ರವರ್ತಿತವಾದ ಚಿತ್ತವು ನಾದದಲ್ಲಿಯೇ ಲೀನವಾಗುತ್ತದೆ. ನಾದರೂಪದಿಂದ ಕೇಳಿಬರುವುದೇ ಶಕ್ತಿಯಾಗಿದೆ. ತತ್ತ್ವವನ್ನು ಮೀರಿದ ನಿರಾಕಾರವಾದುದೇ ಪರಮಾತ್ಮವಾಗಿದೆ.

ಸದಾ ನಾದಾನುಸಂಧಾನದಿಂದ ಪಾಪವೆಲ್ಲ ನಾಶಹೊಂದುವುದು. ಆಗ ನಿಶ್ಚಿತವಾಗಿ ಚಿತ್ತವು ಮತ್ತು ವಾಯುವು ಚೈತನ್ಯದಲ್ಲಿ ನಿರಂಜನ ಬ್ರಹ್ಮದಲ್ಲಿ ಲೀನವಾಗುತ್ತದೆ. ಆಗ ಶಂಖ ದುಂದುಭಿಗಳ ನಾದವು ಕೇಳುವುದಿಲ್ಲ. ಏಕೆಂದರೆ ಉನ್ಮನೀ ಅವಸ್ಥೆಯಿಂದ ಸಾಧಕನ ಶರೀರ ನಿಜವಾಗಿಯೂ ಕಟ್ಟಿಗೆಯಂತಾಗುವುದು. ಸರ್ವಾವಸ್ಥೆಗಳಿಂದ ಮುಕ್ತನೂ, ಸರ್ವ ಚಿಂತೆಗಳಿಂದ ದೂರನೂ ಆದ ಯೋಗಿಯು ಸತ್ತವನಂತೆ ಉಳಿಯುತ್ತಾನೆ. ಅವನೇ ಮುಕ್ತನೆಂಬಲ್ಲಿ ಸಂಶಯವಿಲ್ಲ. ಅಂದರೆ ತುರೀಯಾವಸ್ಥೆಯಲ್ಲಿರುವ ಸಕಲ ಚಿಂತೆಗಳಿಂದ ಮುಕ್ತನಾದ ಯೋಗಿಯು ಸಮಾಧಿಸ್ಥಿತಿಯಲ್ಲಿರುತ್ತಾನೆ.

ಗೀತೆಯಲ್ಲಿ ನಿರೂಪಿತ ಸ್ಥಿತಪ್ರಜ್ಞನ ಲಕ್ಷಣವನ್ನು ಇದು ಸ್ಮರಣೆಗೆ ತರುತ್ತದೆ. ಯೋಗಿಯು ಜಾಗೃದವಸ್ಥೆಯಲ್ಲಿ ಸುಪ್ತನಂತೆ ಸ್ವಸ್ಥನಾಗಿರುತ್ತಾನೆ ಮತ್ತು ಶ್ವಾಸ ನಿಃಶ್ವಾಸ ಹೀನನಾಗಿ ಮುಕ್ತನಾಗಿರುತ್ತಾನೆ.

ಈ ರೀತಿ ಹಠಯೋಗವು ಆತ್ಮೋನ್ನತಿಯ ಮಾರ್ಗವಾಗಿದೆ. ಲಿಂಗಭೇದ, ವಯೋಭೇದ ಇಲ್ಲಿ ಇಲ್ಲ. ಅಷ್ಟೇ ಅಲ್ಲ, ಜಾತಿಭೇದವೂ ಇಲ್ಲಿ ಇರುವುದಿಲ್ಲ.

●●

ಪಾಶ್ಚಾತ್ಯರ "ಮಾದರಿ" ಪರಿಕಲ್ಪನೆಗೊಂದು ಸೈದ್ಧಾಂತಿಕ ಚೌಕಟ್ಟು

-ಡಾ. ವೀರಣ್ಣ ದಂಡೆ

`ಮಾದರಿ' (Type) ಕಥೆಗಳನ್ನು ಕ್ರಮಬದ್ಧವಾಗಿ ವಿಂಗಡಿಸಿಕೊಳ್ಳಲು ಅಳವಡಿಸಿಕೊಂಡ ಒಂದು ಹೊಸ ತಂತ್ರವಾಗಿದೆ. ಈ ಪರಿಕಲ್ಪನೆ ಕಥೆಯ ಸ್ಥೂಲವಾದ ರಚನಾ ಕ್ರಮವನ್ನು ಅನುಸರಿಸಿದೆ. ಒಂದು ಕಥೆಯ ಸ್ಥೂಲವಾದ ರಚನಾ ಕ್ರಮ ಯಾವುದು? ಇದು ಯಾವ ಜಾತಿಗೆ ಸೇರಿದುದು? ಇದರ ಗೊತ್ತುಗುರಿಗಳೇನು? ಎಂಬುದನ್ನು ಮಾದರಿ ಸೂಚಿಸುತ್ತದೆ. ಇದಕ್ಕೆ ಉತ್ತರವಾಗಿ ಮಾದರಿಯ ಹಣೆಪಟ್ಟಿ (ಹೆಸರು) ಕಟ್ಟಲಾಗುತ್ತದೆ. ಆದರೆ `ಮಾದರಿ' ಕಥೆಯ ರಚನಾಕ್ರಮವನ್ನು ವಿವರವಾಗಿ ಅಭ್ಯಸಿಸದೆ, ಸ್ಥೂಲವಾಗಿ ಅದರ ವಸ್ತುವನ್ನೊಳಗೊಂಡ ರೂಪದ ಕಲ್ಪನೆಯಾಗಿರುತ್ತದೆ. ಅದು ತಂತ್ರವನ್ನು ಕುರಿತ ಶಾಸ್ತ್ರೀಯವಾದ ಅಧ್ಯಯನವಾಗಿರದೆ, ತಂತ್ರಕ್ಕೊಳಪಟ್ಟ ವಿಷಯದ ವಿವರಣೆಯನ್ನು ಕೊಡುವುದಾಗಿದೆ.

ಈ ಮೇಲಿನ ಮಾತುಗಳು `ಮಾದರಿ' ಪರಿಕಲ್ಪನೆಯ ಕೆಲ ಸಾಮಾನ್ಯ ಲಕ್ಷಣಗಳನ್ನು ಗಮನಿಸಿ ಹೇಳಿದವುಗಳು. ಯಾವುದೇ ಒಂದು ಕಥೆಯನ್ನು `ಮಾದರಿ' ಯೆಂದು ಕರೆಯಬಹುದೆಂದು ಸ್ಟಿಥ್ ಥಾಮ್ಸನ್ನರು ಹೇಳಿದ್ದರೂ ಮಾದರಿಯ ಬಗೆಗಿನ ಎಲ್ಲ ಸಂಗತಿಗಳನ್ನು ಅರಿವಿಗೆ ತೆಗೆದುಕೊಂಡಾಗ ಆರ್ನೆ ಥಾಮ್ಸನ್ನರು ಹೇಳುವ ಮಾತುಗಳನ್ನು ಹಾಗೂ ಮಾದರಿಗಳ ಅಭ್ಯಾಸದಿಂದ ನಮ್ಮ ಅನುಭವಕ್ಕೆ ಬರುವ ತಿಳುವಳಿಕೆಗಳನ್ನು ಗಮನಿಸಿ ಇಲ್ಲಿ ಮಾದರಿಯ ಪರಿಕಲ್ಪನೆಯ ಒಂದು ಸಾಧಾರಣವಾದ ವಿವರಣೆಯನ್ನು ಕೊಡಲು ಪ್ರಯತ್ನಿಸಿದ್ದೇನೆ. ಈ ನಿಟ್ಟಿನಲ್ಲಿ ನನ್ನ ಪ್ರಯತ್ನಕ್ಕೆ ಹೊಳೆದುದು ಇಷ್ಟು : ಮಾದರಿಯ ಕಲ್ಪನೆಯಲ್ಲಿ ಮೂರು ಹಂತಗಳು ಮತ್ತು ಮೂರು ಅಂಶಗಳು ಗಮನಾರ್ಹವೆನಿಸುತ್ತದೆ.

`ಮಾದರಿ' ಯ ಮೂರು ಹಂತಗಳು:

೧. ಕಥಾ ಮಾದರಿ (Tale type) : ಒಂದು ಪ್ರತ್ಯೇಕವಾದ ಕಥೆಯನ್ನು ಹೀಗೆ ಗುರುತಿಸಲಾಗುತ್ತದೆ.

೨. ಮೂಲ ಮಾದರಿ (Arch type): ಒಂದು ಕಥೆಯ ಹಲವು ಭಿನ್ನ ಪಾಠಗಳಿಂದ ತಯಾರಿಸಿಕೊಂಡ ಕಥೆಯ ಮೂಲ ರೂಪ - Basic form ವನ್ನು ಹೀಗೆ ಗುರುತಿಸಲಾಗುತ್ತದೆ.

೩. ರಚನಾ ಮಾದರಿ (Structural type). 'ಒಂದು ಕಥೆಯ (ಸಂಕ್ಷಿಪ್ತ) ರಚನಾ ರೂಪ' ಇಲ್ಲವೆ 'ಒಂದು ಕಥೆಯ ಮೂಲ ರೂಪದ (ಸಂಕ್ಷಿಪ್ತ) ರಚನಾ ರೂಪ' ಅಥವಾ `ರಚನಾ ಮಾದರಿ' ಎನ್ನಬಹುದು.

ಮಾದರಿಯ ಮೂರು ಅಂಶಗಳು:

೧. ಮಾದರಿಯ ತಲೆಬರಹ

೨. ಮಾದರಿಯ ಸಂಖ್ಯೆ

೩. ಮಾದರಿಯ ವರ್ಗ (ಗುಂಪು)

ಮಾದರಿಯ ಸ್ವರೂಪ ಲಕ್ಷಣಗಳನ್ನು ಪುನಾರಚಿಸಿಕೊಳ್ಳುವಲ್ಲಿ ಈ ಆರೂ ಸಂಗತಿಗಳೂ ಸಮನ್ವಯಗೊಂಡಿರುತ್ತವೆ. ಇದರಲ್ಲಿ ಪ್ರಮುಖವಾದವು ಮಾದರಿಯ ಹಂತಗಳು. ಅದರಲ್ಲೂ ಮೂರನೆಯದಾದ `ರಚನಾ ಮಾದರಿ' ಮುಖ್ಯವಾದುದು. ಸಂಕ್ಷಿಪ್ತವಾಗಿ ಇದನ್ನೇ `ಮಾದರಿ' ಎಂದು ಕರೆಯಲಾಗುತ್ತದೆ.` ಮಾದರಿ' ಯ ಬಗೆಗಿನ ಯಾವುದೇ ಮಾತು ಇದನ್ನು ಎದುರಿಗೆ ಇಟ್ಟುಕೊಂಡೇ ಹೇಳಲಾಗುತ್ತದೆ. ಕಥೆಗಳ ವರ್ಗೀಕರಣದ ಕಲ್ಪನೆಯ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಈ ರೂಪಗಳಿಂದಲೇ, ಮಾದರಿ ಸೂಚಿಗಳು ತಯಾರಾಗುತ್ತವೆ.

ಈ ಸಂಗತಿಯ ಒಟ್ಟಾರೆ ಇತಿಹಾಸವನ್ನು ಹಂತಹಂತವಾಗಿ ಹೇಳಲಿರುವುದ ರಿಂದ, ಸಧ್ಯಕ್ಕೆ ಇಷ್ಟು ವಿವರಣೆ ಸಾಕು. ಇನ್ನು ಈ ಆರನ್ನೂ ಒಂದೊಂದಾಗಿ ಅರಿಯೋಣ.

ಮಾದರಿಯ ಮೂರು ಹಂತಗಳು

೧. ಕಥಾಮಾದರಿ (Tale type):

``ತಲೆಮಾರುಗಳಿಂದ ಹೇಳುತ್ತ ಬಂದ ಒಂದು ಕಥೆ ಅದು ಸಂಕೀರ್ಣವಾಗಿರಬಹುದು, ಸರಳವಾಗಿರಬಹುದು, ಅಥವಾ ಒಂದು ಕಥೆಯಲ್ಲಿ ಉಪ ಕಥೆಯಾಗಿ ಬಳಕೆಯಾಗಿರಬಹುದು. ಅದು ತನ್ನಷ್ಟಕ್ಕೆ ತಾನು ಸ್ವತಂತ್ರ ಎನ್ನುವಷ್ಟು ಪರಿಪೂರ್ಣವಾಗಿದ್ದು, ಒಂದು ಅರ್ಥವನ್ನು ಕೊಡುತ್ತಿದ್ದರೆ, ಅದಕ್ಕೆ 'ಮಾದರಿ' ಎಂದು ಕರೆಯಬಹುದು ಎಂದು ಥಾಮ್ಸನ್ನರು ಅಭಿಪ್ರಾಯಪಡುತ್ತಾರೆ.

``A type is a traditional tale that has an independent existance. It may be told as a complete narrative and doesnot depend for its meaning on any other tale. It may indeed happen to be told with another tale. but the fact that it may appear alone attests its independence"*

ಉದಾ:`ನೀರಡಿಸಿದ ಕಾಗೆ ಕಥೆ:` ನೀರಡಿಸಿದ ಒಂದು ಕಾಗೆ, ನೀರು ಹುಡುಕುತ್ತ ಒಂದು ಧರ್ಮಶಾಲೆಗೆ ಹೋಯಿತು. ಅಲ್ಲಿ ಅರ್ಧ ನೀರಿರುವ ಹರಿವೆ ಕಂಡಿತು. ಕಾಗೆ ತನಗೆ ನೀರು ಕುಡಿಯಲು ಬರುವಂತೆ ಅದರಲ್ಲಿ ಸಣ್ಣಸಣ್ಣ ಹರಳುಗಳನ್ನು ಹಾಕಿ, ನೀರು ಮೇಲಕ್ಕೆ ಬರಲು, ಕುಡಿದು ಹಾರಿ ಹೋಯಿತು.

ನಾನಿಲ್ಲಿ ಕೊಟ್ಟದು ಕಥೆಯ ಸಾರಾಂಶ ಮಾತ್ರ. ಒಬ್ಬ ವಕ್ತಾರ ಈ ಕಥೆಯನ್ನು ಹೇಳಿದಾಗ ನಮಗೆ ದೊರೆಯುವ ಈ ಕಥೆಯ ಪೂರ್ಣ ಪಾಠವನ್ನು `ಮಾದರಿ' ಎಂದು ಕರೆಯಲಾಗುತ್ತದೆ. ಒಟ್ಟಾರೆಯಾಗಿ ಹೀಗೆ ಒಂದು ಕಥೆಯನ್ನು `ಮಾದರಿ' ಎನ್ನಬಹುದು. ಆದರೆ ಕೇವಲ ಒಂದು ಕಥೆಯೇ ಮಾದರಿಯ ಸಂಪೂರ್ಣ ಪರಿಕಲ್ಪನೆಯನ್ನು ಕೊಡಲಾರದು. ಒಂದು `ಕಥಾ ಮಾದರಿ' ಪರಿಕಲ್ಪನೆ ಮಾದರಿಯ ಮೊದಲ ರೂಪ ಮಾತ್ರ. ಅದಕ್ಕಾಗಿ ನಾನಿದನ್ನು `ಕಥಾ ಮಾದರಿ' (Tale type) ಎಂದು ಕರೆಯುತ್ತೇನೆ. ಮಾದರಿಯ ಪರಿಕಲ್ಪನೆ ರಚನಾ ವಿಧಾನದ ಹಿನ್ನೆಲೆಯಲ್ಲಿ ಮೂಡಿಬಂದುದಾಗಿರುವುದರಿಂದ ಒಂದು ಜನಪದ ಕಥೆಯಸ್ವರೂಪ, ಮತ್ತು ಮಾದರಿಗೆ ಸಂಬಂಧಿಸಿದಂತೆ ಒಂದು ಕಥೆ (ಕಥಾ ಮಾದರಿ)ಯ ಸ್ವರೂಪ ಭಿನ್ನವಾಗಿರುತ್ತದೆ. ಏಕೆಂದರೆ ಕೇವಲ ಒಂದು ಕಥೆಯನ್ನು ತೆಗೆದುಕೊಂಡಾಗ ಒಟ್ಟಾರೆ ಅದರ ಸ್ವರೂಪವನ್ನು ಹೇಳುತ್ತೇವೆ. ಮಾದರಿಯ ಹಿನ್ನೆಲೆಯಲ್ಲಿ ಒಂದು ಕಥೆಯನ್ನು ವರ್ಗೀಕರಣದ ಹಿನ್ನೆಲೆಯಲ್ಲಿ - ಸ್ಥೂಲವಾದ ಅದರ ರಚನಾಕ್ರಮ ಮತ್ತು ತಿರುಳನ್ನು ಗಮನಿಸುತ್ತೇವೆ.

ವರ್ಗೀಕರಣದ ಹಿನ್ನೆಲೆಯಲ್ಲಿ ಒಂದು ಕಥೆಯನ್ನು ಪ್ರತ್ಯೇಕವಾಗಿ ಎತ್ತಿಕೊಂಡಾಗ, ಅದು ಒಂದು ಮಾದರಿ (ಕಥಾಮಾದರಿ) ಎನಿಸಿಕೊಳ್ಳುತ್ತದೆ. ಆದರೆ ಆ ಕಥೆಯನ್ನು ಬೇರೆ ಬೇರೆ ಭಾಗಗಳಿಂದ ಬೇರೆ ಬೇರೆ ವಕ್ತಾರರುಗಳಿಂದ ಸಂಗ್ರಹಿಸಿದಾಗ. ಅನೇಕ ಭಿನ್ನ ಪಾಠಗಳು ದೊರೆಯುತ್ತವೆ. ಆಗ ಕಲೆ ಹಾಕಿದ ಪಾಠಗಳಲ್ಲಿ ಅಥವಾ ಒಂದೇ ಬಗೆಯ ಹಲವು ಕಥೆಗಳ ಗುಂಪಿನಲ್ಲಿ -ಯಾವುದೇ ಒಂದು ಕಥೆಯನ್ನು `ಮಾದರಿ' ಎಂದು ಹೇಳಬಹುದು. ಅಲ್ಲದೆ ಮಾದರಿ ಎನ್ನಿಸಿಕೊಳ್ಳುವ ಕಥೆ, ಆ ಗುಂಪಿನದೇ ಆದುದರಿಂದ ಅದರಲ್ಲಿಯ ಬೇರೆ ಕಥೆಯನ್ನು ಕೂಡ ಮಾದರಿಗೆ ನಿದರ್ಶನ ಕೊಡಬಹುದು. ಇಂತಹ `ಕಥಾ ಮಾದರಿ' ನಮ್ಮೆದುರಿಗೆ ಒಂದು

---

* Stith Thompson, Folktale, p-415.

ಗುಂಪಿನ ಪ್ರತೀಕವಾಗಿ ನಿಲ್ಲುತ್ತದೆ. ಅದು ಆ ಗುಂಪಿನ ಸ್ಥೂಲ ಸ್ವರೂಪವನ್ನು ನಿರ್ದೇಶಿಸಿರುತ್ತದೆ. ಇಲ್ಲವೆ ತನ್ನ ಗುಂಪಿನ ಸ್ಯಾಂಪಲ್ ಆದಾಗಿರುತ್ತದೆ.

ಒಂದೇ ಅಂತಸ್ತಿನ ಹಲವು ವಿಷಯಗಳ ಒಂದು ಗುಂಪಿಗೆ ಅದರಲ್ಲಿಯ ಯಾವುದಾದರೂ ಒಂದು ವಸ್ತುವು ಉಳಿದವುಗಳಿಗೆ ನಿದರ್ಶನವಾಗಿ ನಿಲ್ಲಬಹುದು. ಅಂತಹ ಗುಂಪಿಗೆ ಆದರ್ಶವಾದ ಗುರುತಿನ ಸಂಕೇತವೇ `ಮಾದರಿ' ಎನ್ನಿಸಿಕೊಳ್ಳುತ್ತದೆ. ಅಥವಾ ಸಮಾನವಾದ ಗುಣಗಳಿಂದ ಕೂಡಿದ ಒಂದು ಗುಂಪು, ಯಾವುದರಿಂದ ಸಂಜ್ಞಿಸಲ್ಪಡುವುದೋ ಆ ಸಂಜ್ಞೆ ಅದೇ ಆದರ್ಶಗಳನ್ನು ಹೊಂದಿರುತ್ತದೆ. ಅದಕ್ಕಾಗಿ ಅದೇ ಮಾದರಿ ಎನ್ನಿಸಿ ಕೊಳ್ಳುತ್ತದೆ.

ಒಂದು ಕಥೆಯಲ್ಲಿ ಹಲವಾರು ಆಶಯಗಳಿರುವುದು ಸಹಜ. ಒಬ್ಬ ಕಥೆಗಾರನಿಂದ ಅನೇಕ ಕಥೆಗಾರರ ನಡುವೆ ಒಂದು ಜನಪದ ಕಥೆ ಪರ್ಯಟನ ಮಾಡುವಾಗ, ಆಯಾ ಕಥೆಗಾರನ ಸಾಮರ್ಥ್ಯದ ಮೇರೆಗೆ ಆತನ ಸ್ಮರಣಶಕ್ತಿ, ವಾಕ್‌ಚಾತುರ್ಯ ಇತ್ಯಾದಿಗಳಲ್ಲದೆ ಬದಲಾದ ಪರಿಸರಗಳ ಪ್ರಭಾವಗಳಿಂದ ಕಥೆಗಳಲ್ಲಿ ಅಲ್ಪಸ್ವಲ್ಪ ಬದಲಾವಣೆ, ರೂಪಾಂತರ, ಪಾಠಾಂತರವಾಗುವುದು ಸ್ವಾಭಾವಿಕ. ಇದು ಒಂದು ಕಥೆ ಬದುಕಿಕೊಳ್ಳುವುದಕ್ಕೆ ಅವಶ್ಯಕವಾಗಿ ನಡೆಯಬೇಕಾದ ಕ್ರಿಯೆ, ಕಥೆಯ ಜೀವಂತಿಕೆಯ ಲಕ್ಷಣ. ಹೀಗೆ ಬದಲಾವಣೆ ಹೊಂದುವಾಗ ಒಂದು ಕಥೆಯ ಗೊತ್ತಾದ ಕೆಲವು ಆಶಯಗಳು ಜಾರಿಕೊಂಡು ಹೋಗಬಹುದು. ಬದಲಿಗೆ ಅದೇ ಮನೋಧರ್ಮದ ಹೊಸ ಆಶಯಗಳು ಬಂದು ಸೇರಬಹುದು. ಒಮ್ಮೊಮ್ಮೆ ಹಲವು ಆಶಯಗಳು ಹೊಸದಾಗಿ ಬರಬಹುದು. ಇಲ್ಲವೆ ಇದ್ದ ಆಶಯಗಳೇ ಮೇಲೆ ಕೆಳಗೆ ಸ್ಥಳಾಂತರಿಸಬಹುದು. ಆದರೆ, ಈ ಎಲ್ಲಾ ಕ್ರಿಯೆಗಳಿಂದ ಕಥೆಯ `ಮೂಲ ಉದ್ದೇಶ' ಕ್ಕೆ ಮಾತ್ರ ಯಾವ ಧಕ್ಕೆಯೂ ಬರುವುದಿಲ್ಲ. `ಕೇಂದ್ರ ಆಶಯ' ವು ಅದನ್ನು ಕಾಯ್ದುಕೊಂಡೇ ಇರುತ್ತದೆ. ಹೀಗಾಗಿ `ಕಥೆಯ ಚೌಕಟ್ಟು' ಕೆಡದೆ, ಅದು ನಿರಂತರವಾಗಿ ಉಳಿದುಕೊಂಡು ಬಂದಿರುತ್ತದೆ. ಈ ರೀತಿ ಕಥೆಯ ಧ್ಯೇಯವನ್ನು ಬದಲಿಸಿಕೊಳ್ಳದೆ, ಸ್ಥಿರವಾಗಿ ಉಳಿದುಕೊಂಡು ಬರುವ `ಕಥೆಯ ಚೌಕಟ್ಟು' ಅಥವಾ `ಕಥಾಶಿಲ್ಪ' ವನ್ನೇ `ಕಥಾ ಮಾದರಿ' ಎಂದು ಕರೆಯಲಾಗುತ್ತದೆ. ಹೀಗೆ ಕಥೆಯು ವಸ್ತುವಿಗೆ ಸಂಬಂಧಿಸಿದ ಆಶಯವು ಕಥಾನಕದ ತಿರುಳನ್ನು ಬದುಕಿಸಿದರೆ, ಕಥೆಯ ತಾಂತ್ರಿಕ ಸ್ವರೂಪವಾಗಿರುವ `ಮಾದರಿ' ಅದರ `ರೂಪ' ವನ್ನು ಕಾಪಾಡಿಕೊಂಡು ಬರುತ್ತದೆ.

೨. ಮೂಲ ಮಾದರಿ (Arch type):

`ಮೂಲ ಮಾದರಿ'ಯ ಕಲ್ಪನೆ ಎರಡನೇ ಹಂತದಲ್ಲಿ ಬರುತ್ತದೆ. ಕಥನಕಾವ್ಯಗಳ ಸಂಪಾದನಾ ಕಾಲಕ್ಕೆ-ಬಳಕೆಗೆ ಬಂದುದು `ಚಾರಿತ್ರಿಕ ಭೌಗೋಳಿಕ ವಿಧಾನ' ನಂತರ ಅದನ್ನು

ಕಾರ್ಲ್‌ಕ್ರಾಷ್ನ ಅವರು ಜನಪದ ಕಥೆಗಳಿಗೆ ಅಳವಡಿಸಿದರು. `ಚಾರಿತ್ರಿಕ ಭೌಗೋಳಿಕ ವಿಧಾನ'ದಲ್ಲಿ ಎರಡು ರೀತಿಯ ಕೆಲಸ ನಡೆಯುತ್ತದೆ. ಮೊದಲನೇ ಪ್ರಯತ್ನ 'ಚಾರಿತ್ರಿಕ' ಅಂಶಗಳನ್ನು ಗುರುತಿಸುವುದು ಅಂದರೆ ಕಥೆಯಲ್ಲಿಯ ಕೆಲ ವಿಶಿಷ್ಟ ಅಂಶಗಳ ಹಳಮೆಯನ್ನು ಗುರುತಿಸುವುದು. ಇದು ನಮ್ಮ ಗ್ರಂಥ ಸಂಪಾದನೆಯ ಕಲ್ಪನೆಯಂತಹದು. ಎರಡನೆಯದು ಕಥೆಯ ಭೌಗೋಳಿಕ ಪ್ರಮಾಣವನ್ನು ಗುರುತಿಸುವುದು. `ಕಥೆಯ ಸಂಪಾದಿತ ಪಾಠ' ಅಂದರೆ ಒಂದು ಕಥೆಯ ಅನೇಕ ಅವತಾರಗಳನ್ನು ಐತಿಹಾಸಿಕ ಭೌಗೋಳಿಕ ವಿಧಾನಕ್ಕೆ ಒಳಪಡಿಸಿ, ಭಿನ್ನಾಂಶಗಳನ್ನೆಲ್ಲ ಒಡೆದು ಹಾಕಿ, ಸಮಗ್ರ ವಿವರಗಳನ್ನೊಳಗೊಂಡ, ನೈಜವಾದ ಒಂದು `ಮೂಲ ರೂಪ' (Basic form)ವನ್ನು ತಯಾರಿಸಿಕೊಳ್ಳಲಾಗುತ್ತದೆ. ಮೂಲಕ್ಕೆ ಹೆಚ್ಚು ಹತ್ತಿರವೆಂದು ಗಣಿಸುವ ಈ ವಿಶ್ವಾಸಾರ್ಹ ಪಾಠ `ಮೂಲ ಮಾದರಿ' (Arch type) ಎಂದು ಹೇಳಲಾಗುತ್ತದೆ.

ಮೇಲೆ ಉದಾಹರಿಸಿದ `ನೀರಡಿಸಿದ ಕಾಗೆ'ಯ ಕೆಲ ಭಿನ್ನ ಪಾಠಗಳನ್ನು ಗಮನಿಸಿದರೆ, ಅಲ್ಲಿಯ ಸಮಾನ ಮತ್ತು ಭಿನ್ನಾಂಶಗಳು ಹೀಗೆ ಕಾಣಿಸಿಕೊಳ್ಳುತ್ತವೆ;

ಅ. ಈ ಕಥೆಯಲ್ಲಿ ಬರುವ ಪಾತ್ರ ಕಾಗೆ ಎಲ್ಲ ಪಾಠಗಳಲ್ಲೂ ಬರುತ್ತದೆ.

ಬ. ಅದು ನೀರಿಗಾಗಿ ಹುಡುಕಾಟ ನಡೆಸಿ, ಪ್ರಯಾಣ ಬೆಳೆಸುವ ಪ್ರದೇಶಗಳು ಭಿನ್ನವಾದಂತೆ, ಅಲ್ಲಿಯ ಪಾತ್ರೆಗಳೂ ಕೂಡ ಭಿನ್ನವಾಗಿರುತ್ತವೆ. (ಆದರೆ ನೀರು ಎಲ್ಲ ಕಡೆ ಅರ್ಧ ತುಂಬಿರುತ್ತದೆ):

- i) ಕಾಗೆ -ಧರ್ಮಶಾಲೆಗೆ ಹೋದರೆ, ಅಲ್ಲಿ ಅರ್ಧ ನೀರಿರುವ ಹರವಿ ಇರುತ್ತದೆ.
- ii) ಕಾಗೆ -ಶಾಲೆಗೆ ಹೋದರೆ, ಅಲ್ಲಿ ಅರ್ಧ ನೀರಿರುವ ಹೂಜಿ ಇರುತ್ತದೆ.
- iii) ಕಾಗೆ- ಬಾವಿಗೆ ಹೋದರೆ, ಅಲ್ಲಿ ಅರ್ಧ ನೀರಿರುವ ಕೊಡ ಇರುತ್ತದೆ.

ಕ. ಕಥೆಯ ಮುಂದಿನ ವಿವರಣೆ ಎಲ್ಲ ಅವತಾರಗಳಲ್ಲಿ ಒಂದೇ ತೆರನಾಗಿರುತ್ತದೆ: ಹರಳು ಹಾಕಿ, ನೀರು ಮೇಲಕ್ಕೆ ಬರಲು, ಕುಡಿದು ಹಾರಿಹೋಗುತ್ತದೆ.

`ಚಾರಿತ್ರಿಕ ಭೌಗೋಳಿಕ ವಿಧಾನ' ವನ್ನು ಅನುಸರಿಸಿ ಭಿನ್ನ ಪಾಠಗಳನ್ನು ಗಮನಿಸಿ, ವಿಶ್ವಾಸಾರ್ಹ ಪದಗಳನ್ನು ಆಯ್ಕೆ ಮಾಡಿಕೊಂಡು, ಉಳಿದ ಭಿನ್ನಾಂಶಗಳನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟು, ಒಂದು ಪಾಠ ತಯಾರಿಸಿಕೊಂಡು, ಅದನ್ನೇ ಪ್ರಕಟಿಸುವ ಪದ್ಧತಿ ಶಿಷ್ಟ ಸಾಹಿತ್ಯದಲ್ಲಿ ಮತ್ತು ಜನಪದ ಕಥನ ಕಾವ್ಯದಲ್ಲಿ* ಕಾಣುತ್ತೇವೆ. ಆದರೆ ಜನಪದ

---

* ಕಲೆವಾಲ ಕಥಾನಕಗಳನ್ನು ಜೂಲಿಯಸ್ ಕ್ರಾಷ್ನ ತಯಾರಿಸಿಕೊಂಡುದನ್ನು ಇಲ್ಲಿ ಸ್ಮರಿಸಬಹುದು.

ಕಥೆಯಲ್ಲಿ ಇಂತಹ ಪಾಠವನ್ನು ಪ್ರಕಟಿಸುವ ಪದ್ಧತಿಯಿಲ್ಲ. ಆದರೆ ಈ ಮೂಲಪಾಠ ತಯಾರಿಸಿಕೊಳ್ಳುವ ಕೆಲಸವು ಒಂದು ಹಂತದಲ್ಲಿ ಇಲ್ಲೂ ನಡೆಯುತ್ತದೆ.

ಇಲ್ಲಿ ದೊರೆಯುವ ಆ ಪಾಠ Basic form ಅಥವಾ Arch type ಎನಿಸಿಕೊಳ್ಳುತ್ತದೆ. Arch type ಎಂದರೆ `ಚಾರಿತ್ರಿಕ ಭೌಗೋಳಿಕ ವಿಧಾನ'ದಿಂದ ತಯಾರಿಸಿಕೊಂಡ ಒಂದು ಪಾಠ - 'ಮೂಲ ಮಾದರಿ' ಎಂದು ಇಟ್ಟುಕೊಳ್ಳಬಹುದು. ಇದನ್ನು Basic form ಅಥವಾ Original form (ur - form)` ಮೂಲ ರೂಪ' ಎಂದೂ ಕರೆಯಲಾಗುತ್ತದೆ.

೩. ರಚನಾ ಮಾದರಿ:(Structural type):

ಈ ಮೇಲೆ ವಿವರಿಸಿದ ಎರಡು ಸಂಗತಿಗಳ ಕಡೆ ನಿಮ್ಮ ಲಕ್ಷ್ಯ ಸೆಳೆಯಲು ಬಯಸುತ್ತೇನೆ: 1) ಕಥಾ ಮಾದರಿ Tale type ಮತ್ತು ೨. ಮೂಲ ಮಾದರಿ (Arch type) ಕೇವಲ ಒಂದೇ ಕಥೆ ನಿದರ್ಶನಕ್ಕೆ ತೆಗೆದುಕೊಂಡಾಗ ಅದು `ಕಥಾ ಮಾದರಿ'. ಒಂದು ಕಥೆಯ ಹಲವು ಅವತಾರಗಳ ಕ್ರೋಢೀಕರಣಗೊಂಡ ರೂಪ `ಮೂಲ ಮಾದರಿ'. ಈಗ ಮೂರನೆಯ ಹಂತದ ಕಲ್ಪನೆಯೆಂದರೆ - 'ಒಂದು ಕಥೆಯ ಸಂಕ್ಷಿಪ್ತ ರೂಪ' ಮತ್ತು `ಮೂಲ ಮಾದರಿ'ಯ ಸಂಕ್ಷಿಪ್ತ ರೂಪ ಇವನ್ನು 'ಮಾದರಿಯ ರಚನಾ ರೂಪ' ಎಂದು ಕರೆಯಬಹುದು. ಇಲ್ಲಿ ರಚನೆಯ ತಂತ್ರ ವಿಶಿಷ್ಟವಾಗಿದ್ದು, ಈ ರಚನಾ ರೂಪಗಳಲ್ಲಿ `ಕಥಾ ಮಾದರಿ' ಯ ಇಲ್ಲವೆ `ಮೂಲ ಮಾದರಿ' ಯ ಮುಖ್ಯತಿರುಳು ಸೇರಿರುತ್ತದೆ. ಮತ್ತು ಹೆಚ್ಚು ತಾಂತ್ರಿಕವಾಗಿ ರಚಿಸಲ್ಪಡುತ್ತದೆ.

೧. ಕಥಾ ಮಾದರಿ

↓

ರಚನೆ ಮಾದರಿ
(ಸರಳವಾಗಿರುತ್ತದೆ)

೨. ಕಥಾ ಮಾದರಿ

↓

ಮೂಲ ಮಾದರಿ
.(ಭಿನ್ನ ಪಾಠಗಳಿಂದ ತಯಾರಿಸಿದ್ದು)

↓

ರಚನಾ ಮಾದರಿ
ಹೆಚ್ಚು ತಾಂತ್ರಿಕವಾಗಿರುತ್ತದೆ.

ಈ ಮೇಲೆ ನೀರಡಿಸಿದ ಕಾಗೆಯ `ಮೂಲ ಮಾದರಿ' ಯಲ್ಲಿ ಸೇರಿಕೊಳ್ಳಬೇಕಾದ ಅಂಶಗಳನ್ನು ನಾವು ಗಮನಿಸಿದ್ದೇವೆ. ಅಲ್ಲಿ ಎರಡನೇ ಹಂತದಲ್ಲಿ ದೊರೆಯುವ ಭಿನ್ನಾಂಶಗಳಲ್ಲಿ ಹೆಚ್ಚು ಚಾರಿತ್ರಿಕವೆನಿಸುವಂತಹದು `ಧರ್ಮಶಾಲೆ-ಹರವಿ' ನಂತರದ ಸ್ಥಾನ `ಬಾವಿ-ಕೊಡ'ಕ್ಕೆ

ಕೊಡಬೇಕಾಗುತ್ತದೆ. 'ಶಾಲೆ -ಹೂಜಿ' ತೀರ ಇತ್ತೀಚಿನ ವಿವರಣೆ ಎನಿಸುತ್ತದೆ. ಈ ಭಿನ್ನಾಂಶಗಳ ಚರಿತ್ರೆಯನ್ನು ಗಮನಿಸಿ ಮೂಡಿಬಂದ 'ಮೂಲ ಮಾದರಿ' ಯನ್ನು ಸಂಕ್ಷಿಪ್ತವಾಗಿ ಹೀಗೆ ರಚಿಸಿಕೊಳ್ಳಬಹುದಾಗಿದೆ.

`ನೀರಡಿಸಿದ ಕಾಗೆ' ನೀರು ಹುಡುಕುತ್ತ ಧರ್ಮಶಾಲೆ (ಬಾವಿ ಶಾಲೆ) ಗೆ ಬಂದು, ಅರ್ಧ ನೀರಿರುವ ಹರವಿ (ಕೊಡ, ಹೂಜಿ) ಕಂಡಿತು. ತನಗೆ ನೀರು ಕುಡಿಯಲು ಬರುವಂತೆ ಹರಳುಗಳನ್ನು ಅರ್ಧ ನೀರಿರುವ ಪಾತ್ರೆಯಲ್ಲಿ ಹಾಕಿ. ನೀರು ಮೇಲಕ್ಕೆ ಬರುವಂತೆ ಮಾಡಿ, ಕುಡಿದು ಹಾರಿಹೋಯಿತು."

ಇದು `ಮೂಲ ಮಾದರಿ'ಯಿಂದ ಪಡೆದ `ರಚನಾ ರೂಪ'. ಇದನ್ನು ಕಥೆಯ ಒಂದೇ ಪಾಠ ಇದ್ದಾಗಲೂ (ಅಂದರೆ ಒಂದು `ಕಥಾ ಮಾದರಿ'ಯಿಂದಲೂ) ತಯಾರಿಸಿಕೊಳ್ಳಬಹುದು. ಆಗ ರಚನಾ ರೂಪದಲ್ಲಿ ಭಿನ್ನಾಂಶಗಳನ್ನು ತೋರಿಸಲು ಆಗುವುದಿಲ್ಲ. ನೀರಡಿಸಿದ ಕಾಗೆ ನೀರಿಗಾಗಿ ಧರ್ಮಶಾಲೆಗೆ ಹಾರಿಹೋಗುವ ಪಾಠ ಇಟ್ಟುಕೊಂಡು `ಕಥಾ ಮಾದರಿ' ಯ `ರಚನಾ ರೂಪ'ವನ್ನು ಹೀಗೆ ರಚಿಸಿಕೊಳ್ಳಬಹುದು;

`ನೀರಡಿಸಿದ ಕಾಗೆ ನೀರು ಹುಡುಕುತ್ತ ಧರ್ಮಶಾಲೆಗೆ ಬಂದು, ಅರ್ಧ ನೀರಿರುವ ಹರವಿ ಕಂಡಿತು. ತನಗೆ ಕುಡಿಯಲು ಬರುವಂತೆ ಹರಳುಗಳನ್ನು ಅರ್ಧ ನೀರಿರುವ ಹರವಿಯಲ್ಲಿ ಹಾಕಿ, ನೀರು ಮೇಲಕ್ಕೆ ಬರುವಂತೆ ಮಾಡಿ, ಕುಡಿದು ಹಾರಿ ಹೋಯಿತು".

ಇದು ಒಂದು ಸರಳ ಕಥೆಯ ವಿಷಯವನ್ನು ತೀರ ಸರಾಗವಾಗಿ, ಎಲ್ಲರಿಗೂ ತಿಳಿಯುವಂತೆ ವಿವರಿಸಲು ಆಯ್ದುಕೊಂಡ ಉದಾಹರಣೆ. ಒಂದು ಸಂಕೀರ್ಣ ಕಥೆ ಇದ್ದಾಗ ಮತ್ತು ಹಲವಾರು ಭಿನ್ನ ಪಾಠಗಳು ದೊರೆತಾಗ `ರಚನಾ ಮಾದರಿ' ಯನ್ನು ರಚಿಸಿಕೊಳ್ಳುವುದು ಪ್ರಯಾಸದ ಮತ್ತು ಜಾಣಾಕ್ಷತನದ ಕೆಲಸವಾಗುತ್ತದೆ. ಇಲ್ಲಿ ಮಾದರಿಯ ರಚನೆಯ ಕೌಶಲ್ಯ ಕಾಣಿಸಿಕೊಳ್ಳುತ್ತದೆ. ಅದಕ್ಕಾಗಿಯೇ ಈ ಮೂರನೇ ಹಂತದ ಕಾರ್ಯ ತಾಂತ್ರಿಕವಾಗಿ ಕಷ್ಟದ್ದೆನಿಸುತ್ತದೆ.

`ನೀರಡಿಸಿದ ಕಾಗೆ' ಕಥೆಯ `ಮೂಲ ಮಾದರಿ' ಯಿಂದ - ಮೇಲೆ ರಚಿಸಿಕೊಂಡ `ರಚನಾ ಮಾದರಿ' ಗಿಂತ ಹೆಚ್ಚು ತಾಂತ್ರಿಕವಾದ ರೀತಿಯಲ್ಲೂ ಅದನ್ನು ರಚಿಸಬಹುದಾಗಿದೆ. ವಿಷಯವನ್ನು ಸ್ಪಷ್ಟಪಡಿಸಲು ಪುನಃ ಅದೇ ಉದಾಹರಣೆಯನ್ನು ಎತ್ತಿ ಕೊಳ್ಳಲಾಗುತ್ತಿದೆ. `ರಚನಾ ಮಾದರಿ' ಯ ಎಲ್ಲ ಅಂಗಗಳೊಂದಿಗೆ ಅದನ್ನು ಹೀಗೆ ರೂಪಿಸ ಬಹುದು:

೨೩೨ಡಿ' ಕಾಗೆ ತನಗೆ ನೀರು ಕುಡಿಯಲು ಸಾಧ್ಯವಾಗುವಂತಾಗಲು, ನೀರಿರುವ ಹರವಿ (ಕೊಡ, ಜಗ್ಗು) ಯಲ್ಲಿ ಹರಳುಗಳನ್ನು ಹಾಕಿತು (ಜೆ. ೧೦೧).

i) ನೀರಡಿಸಿದ ಕಾಗೆ (ಜಿ ೯೧೦) ನೀರು ಹುಡುಕುತ್ತ ಬಂದು, ಧರ್ಮಶಾಲೆ (ಬಾವಿ, ಶಾಲೆ) ಯಲ್ಲಿ ಅರ್ಧ ನೀರು ತುಂಬಿದ ಹರವಿ (ಕೊಡ, ಹೂಜಿ) ಕಂಡಿತು. (ಎಫ್ ೮೪೯.೧)

ii) ಹರವಿ (ಕೊಡ, ಹೂಜಿ) ಯಲ್ಲಿಯ ಅರ್ಧ ನೀರನ್ನು, ಹರಳು ಹಾಕುವ ಮೂಲಕವಾಗಿ ಮೇಲೆ ಬರುವಂತೆ ಮಾಡಿ, ಕುಡಿಯಿತು. (ಜೆ. ೧೧೧೮.೨, ಜೆ. ೧೦೧)

ಇದು ಒಂದು ಸರಳ ಕಥೆಯಿಂದ ರಚಿಸಿಕೊಂಡ ಮಾದರಿ. ಇದನ್ನು ಲಕ್ಷ್ಯದಲ್ಲಿಟ್ಟುಕೊಂಡು ಒಂದು ಸಂಕೀರ್ಣ ಕಥೆಯ, ಅನೇಕ ಭಿನ್ನ ಪಾಠಗಳಿಂದ ತಯಾರಿಸಿಕೊಂಡ `ರಚನಾ ಮಾದರಿ'ಯಲ್ಲಿ ಕಾಣಿಸುವ ತಾಂತ್ರಿಕ ಅಂಶಗಳನ್ನು ಹೀಗೆ ಕ್ರೋಢಿಕರಿಸಬಹುದು.

೧. ಒಂದು ಕಥೆಯ ಅನೇಕ ಅವತಾರಗಳು ದೊರೆತಾಗ `ಮೂಲ ರೂಪ' ಅಥವಾ `ಮೂಲ ಮಾದರಿ' ತಯಾರಿಸಿಕೊಳ್ಳಲು ವಿಷಯಗಳನ್ನು ಒಡೆದು ಹಾಕುವ ಕೆಲಸ ಮೊದಲು ಆಗಿ, ಬಹು ಪ್ರಯಾಸದ ಕೆಲಸ ಮುಗಿಯಬೇಕು.

೨. ಒಂದೇ ಕಥೆಯಲ್ಲಿ ದೊರೆಯುವ ಭಿನ್ನ ಪಾಠಗಳಲ್ಲಿ ಒಂದಕ್ಕಿಂತ ಹೆಚ್ಚಿನ ಕಥಾ ಸಂಪ್ರದಾಯಗಳು ದೊರೆಯಬಹುದು. ಅಂದರೆ ಕಥೆಯ ಭಿನ್ನಾಂಶಗಳಲ್ಲಿ ಹೆಚ್ಚಿನ ಸಾಮ್ಯ ಕಂಡುಬರುವ ಎರಡು ಮೂರು ಗುಂಪುಗಳಾಗಬಹುದು. ಆಗ ಅವುಗಳನ್ನು ಎ. ಬಿ. ಸಿ. ಎಂದು ಗುರುತಿಸಿಕೊಳ್ಳಲಾಗುತ್ತದೆ. ಮಾದರಿ ರಚನಾ ರೂಪದಲ್ಲೂ ಇವು ಕಾಣಿಸಿಕೊಳ್ಳುತ್ತವೆ.

೩. ಭಿನ್ನ ಪಾಠಗಳ ಗುಂಪಿನಲ್ಲಿ ಎ. ಬಿ.ಸಿ. ಗಳೆಂದು ಗುರುತಿಸಿಕೊಂಡವುಗಳಲ್ಲಿ ಮತ್ತೆ ಭಿನ್ನತೆ ಇದ್ದರೆ ಎ', ಎ'' ಎಂದೂ ಬಿ', ಬಿ'' ಎಂದೂ ಗುರುತಿಸಬಹುದು. ಅವುಗಳನ್ನು ಮಾದರಿಯ ರಚನಾ ರೂಪದಲ್ಲೂ ಕಾಣಿಸಬಹುದು.

೪. ಸಣ್ಣ ಸಣ್ಣ ಭಿನ್ನಾಂಶಗಳನ್ನು ಹೇಳಲು 'ಅಥವಾ', 'ಇಲ್ಲವೆ' ಮುಂತಾದ ಪದಗಳನ್ನೂ `ಕಂಸ' ಗಳನ್ನೂ ಬಳಸಿಕೊಳ್ಳಬೇಕಾಗುತ್ತದೆ.

೫. ಮಾದರಿ ರಚನೆಯಲ್ಲಿ ಕಥೆಯ ತಿರುಳು ಅಡಕವಾಗಿರಬೇಕು.

೬. `ರಚನಾ ಮಾದರಿ'ಯನ್ನು ಲಕ್ಷದಲ್ಲಿಟ್ಟುಕೊಂಡು ಕಥೆಯ ಬೆಳವಣಿಗೆಯ ಮುಖ್ಯ ಹಂತಗಳನ್ನು ಗುರುತಿಸಿಕೊಳ್ಳಬೇಕು. ಅವನ್ನು, i, ii, iii ಮುಂತಾಗಿ ಗುರುತಿಸಿಕೊಳ್ಳಬೇಕು.

೭. `ರಚನಾ ರೂಪ' ಅನೇಕ ಭಿನ್ನಪಾಠಗಳನ್ನು ಕ್ರೋಢೀಕರಿಸಿ ತಯಾರಿಸುವುದರಿಂದ, ಅಲ್ಲಿ ಆಶಯಗಳ ವಿವರಣೆಗಳೇ ಮುಖ್ಯವಾಗಿ ಬರುತ್ತವೆ. ಹೀಗಾಗಿ ನಡುನಡುವೆ ಆಶಯಗಳ ಸಂಖ್ಯೆಗಳನ್ನು ಹಾಕಬಹುದು.

೮. ಕಥೆಯ ತಿರುಳಿನಲ್ಲಿಯ ಮುಖ್ಯ ಘಟನೆ, ಪಾತ್ರ ಇತ್ಯಾದಿ ಆಕರ್ಷಕ ಅಂಶಗಳನ್ನು ಗಮನಿಸಿ ಮಾದರಿಗೆ ಒಂದು ಹೆಸರನ್ನು ಕೊಡಲಾಗುತ್ತದೆ.

೯. ಒಂದು ಮಾದರಿಯಲ್ಲಿ ಬೇರೆ ಮಾದರಿಯ ವಿವರಣೆಗಳು ಸೇರುತ್ತಿದ್ದರೆ, ಆ ಮಾದರಿಯ ಸಂಖ್ಯೆಯನ್ನು ಇದರ ಹೆಸರಿನ ಮುಂದೆ ಅಥವಾ ಒಂದೆ ಕಂಸಿನಲ್ಲಿ ಕೊಡಬೇಕು. ಅಥವಾ ಮಾದರಿಯ ವಿವರಣೆಯಲ್ಲೇ ಗೊತ್ತಾದ ಸ್ಥಳದಲ್ಲಿ ಕೊಡಬಹುದು.

೧೦. ಮಾದರಿಯ ವರ್ಗೀಕರಣಕ್ಕೆ ಸಂಬಂಧಿಸಿದಂತೆ, ಅದರ ಸ್ಥಾನವನ್ನು ಗುರುತಿಸಲು ಒಂದು ಸಂಖ್ಯೆಯನ್ನು ಕೊಡಲಾಗುತ್ತದೆ. ಒಂದು ಮಾದರಿಯ ವರ್ಗೀಕರಣದ ಗುಂಪಿನಲ್ಲಿಯ ಬೇರೆ ಬೇರೆ ಕಥೆಗಳನ್ನು ಗುರುತಿಸಲು ಸಂಖ್ಯೆಯ ಮುಂದೆ ಎ, ಬಿ, ಸಿ. ಎಂದೂ ೧, ೨, ೩ ಎಂದೂ ಅಥವಾ ಚುಕ್ಕೆಗಳ ಮೂಲಕ ಗುರುತಿಸಬಹುದು. ಉದಾ. ೫೧೬ಎ, ೫೧೬ಬಿ, ೫೧೬ಎˆ, ೫೧೬ಎ¸, ೫೧೬ಬಿ¸, ೫೧೬", ೫೧೬ಎ* (ಚುಕ್ಕೆಗಳನ್ನು ಇನ್ನೂ ಬೆಳೆಸಬಹುದು) ಇತ್ಯಾದಿ.

ಈ ಅಂಶಗಳನ್ನೊಳಗೊಂಡ `ರಚನಾ ಮಾದರಿ' ರೂಪವು ಮೂರನೆಯ ಹಂತದಲ್ಲಿ ತಯಾರಿಸಿಕೊಂಡುದಾಗಿರುತ್ತದೆ. (ಉದಾಹರಣೆಗಾಗಿ ಮಾದರಿ ಸೂಚಿಯನ್ನು ಗಮನಿಸಿ) ಒಟ್ಟಾರೆಯಾಗಿ ಈ ರೂಪವನ್ನೇ ಉದ್ದೇಶಿಸಿ ಸಂಕ್ಷಿಪ್ತವಾಗಿ `ಮಾದರಿ' ಎಂದು ಕರೆಯಲಾಗುತ್ತದೆ. ಹೀಗಾಗಿ ಒಂದು ಕಥೆಯಿಂದ ರಚನಾ ಮಾದರಿ ರೂಪ ತಾಳುವಲ್ಲಿವರೆಗೆ ಕಾಣುವ ಪ್ರಕ್ರಿಯೆಯನ್ನು ಗಮನಿಸಿ `ಮಾದರಿ' ಯ ಲಕ್ಷಣಗಳನ್ನು ಹೇಳಲಾಗುತ್ತದೆ.

ಪ್ರಕಟನೆಯನ್ನು ಗಮನದಲ್ಲಿಟ್ಟುಕೊಂಡು ಈ ಕೆಳಗಿನ ಅಂಶಗಳನ್ನು ಗಮನಿಸಬೇಕು.

೧. ಪ್ರಥಮ ಹಂತದಲ್ಲಿ -ಕಥೆಯ ಒಂದು ಸಂಗ್ರಹಿತ ಪೂರ್ಣಪಾಠ ಕಥಾ ಮಾದರಿ ಎನಿಸುತ್ತದೆ. ಇದು ಪ್ರಕಾಶಪಡಿಸುವ ರೂಪ.

೨. ಎರಡನೆಯ ಹಂತದಲ್ಲಿ - ಒಂದು ಕಥೆಯ ಹಲವಾರು ಪಾಠಗಳನ್ನು ಗಮನಿಸಿ, ಚಾರಿತ್ರಿಕ ಭೌಗೋಳಿಕ ವಿಧಾನದಡಿ, ಭಿನ್ನಾಂಶಗಳನ್ನು ತೂಗಿ ನೋಡುವ ಕೆಲಸ ನಡೆಯುತ್ತದೆ. ಇಲ್ಲಿ ತಯಾರಾಗುವ ಕಥೆಯ ಪಾಠವನ್ನು Arch type - ಮೂಲ ಮಾದರಿ ಎಂದು ಕರೆಯಲಾಗುತ್ತದೆ. ಆದರೆ ಕಥೆಗಳ ಪ್ರಕಟಣಾ ವಿಷಯದಲ್ಲಿ ಈ ಪಾಠಕ್ಕೆ ಅವಕಾಶವಿಲ್ಲ.

೩. ಮೂರನೆಯ ಹಂತದಲ್ಲಿ - `ರಚನಾ ತಂತ್ರವೆ' ಮುಖ್ಯ ಅಂಶವೆನಿಸುತ್ತದೆ. ಕಥೆಯ ಒಂದೇ ಪಾಠ ದೊರೆತಾಗಲೂ ಅದರಲ್ಲಿಯ ಮುಖ್ಯ ಅಂಶಗಳನ್ನು ಗಮನಿಸಿ, ವಿಶಿಷ್ಟ ರಚನಾ ಕೌಶಲದಲ್ಲಿ ಹಿಡಿದಿಡಲಾಗುತ್ತದೆ. ಈ ರಚನಾ ವೈಶಿಷ್ಟ್ಯತೆಗೆ ಮಾದರಿ ಸೂಚಿಯನ್ನು ಗಮನಿಸಬಹುದು. ಇದನ್ನು `ರಚನಾ ಮಾದರಿ' ಎನ್ನಬಹುದು. ಪ್ರಕಟನಾ ವಿಷಯದಲ್ಲಿ ಇದು ಪ್ರಮುಖವಾದುದು.

ಕಥೆಯ ಒಂದೇ ಪಾಠ ದೊರೆತಾಗ ಅದು ಒಂದು ಪ್ರತ್ಯೇಕ `ಕಥಾ ಮಾದರಿ' ಯೂ ಹೌದು `ಮೂಲ ಮಾದರಿ' ಯೂ ಹೌದು. ಆದರೆ ಒಂದು ಕಥೆಯ ಅನೇಕ ಪಾಠಗಳು ದೊರೆತಾಗ `ಮೂಲ ಮಾದರಿ' ತಯಾರಿಸಿಕೊಳ್ಳಬೇಕಾಗುತ್ತದೆ. ಇದು ಎರಡನೆಯ ಹಂತದಲ್ಲಿ ನಡೆಯುವ ಮಹತ್ವದ ಪ್ರಕ್ರಿಯೆ. ಈಗ ಮೂರನೆಯ ಹಂತದಲ್ಲಿ - ಕಥಾ ಮಾದರಿ ಅಥವಾ ಮೂಲ ಮಾದರಿಯ ಸಂಕ್ಷಿಪ್ತ ರೂಪ ತಯಾರಿಸಿಕೊಳ್ಳುವ ಕೆಲಸ ನಡೆಯುತ್ತದೆ. ಈ ಹಂತದಲ್ಲಿ ತಯಾರಿಸಿಕೊಂಡ `ರಚನಾ ಮಾದರಿ'ಯ ರೂಪವನ್ನೇ ರೂಢಿಯಲ್ಲಿ ಮಾದರಿ (type) ಎಂದು ಕರೆಯಲಾಗುತ್ತದೆ. Type Index ಮಾದರಿ ಸೂಚಿಗಳು ಹುಟ್ಟಿಕೊಂಡಿದ್ದೆ ಈ `ರಚನಾ ಮಾದರಿ' ಗಳಿಂದಲೇ. ಈ 'ರಚನಾರೂಪ' ವರ್ಗೀಕರಣದ ಸೌಲಭ್ಯಕ್ಕಾಗಿ ಮಾತ್ರ ಹುಟ್ಟಿಕೊಂಡಿದ್ದು. ಹೀಗಾಗಿ ಇದಕ್ಕೆ ಪ್ರತ್ಯೇಕವಾಗಿ ತನ್ನಷ್ಟಕ್ಕೆ ತಾನೇ ಯಾವ ಮಹತ್ವವೂ ಇಲ್ಲ. ಮುಖ್ಯವಾಗಿ ಅದೊಂದು ಕಥೆಯ ಸಂಕ್ಷಿಪ್ತರೂಪ ಮಾತ್ರ. ಅದಕ್ಕಾಗಿ `ಮಾದರಿ' ನಿಜವಾದ ಅರ್ಥದಲ್ಲಿ ಒಂದು ಕಥೆಯೇ ಸರಿ. `ಮೂಲ ಮಾದರಿ' ವಿಸ್ತೃತ ರೂಪವಾಗಿದ್ದು ಪ್ರಕಟನೆಯಲ್ಲಿ ಯಾವ ಮಹತ್ವವೂ ಇಲ್ಲದ್ದು. `ರಚನಾ ಮಾದರಿ' ತಾಂತ್ರಿಕವಾಗಿ ಕಥೆಯ ತಿರುಳನ್ನು ಹೇಳುವಂತಹದು. ಪ್ರಕಟನೆಯಲ್ಲಿ ಮಹತ್ವ ಪಡೆದರೂ ಇದರ ಉದ್ದೇಶ- ಒಂದು ಕಥೆ ಮೂಲಭೂತವಾಗಿ ವರ್ಗೀಕರಣದಲ್ಲಿ ಯಾವ ಸ್ಥಾನದಲ್ಲಿ ಇರಬೇಕು ಎಂಬುದನ್ನು ಸೂಚಿಸುವುದು, ಮತ್ತು ಅದರ ತಿರುಳನ್ನು ಹೇಳಿಕೊಡುವುದು. ಮಾದರಿ ಸೂಚಿಯಲ್ಲಿ ಕೊಡುವ ಸಂಖ್ಯೆ ಕಥೆಯ ಸ್ಥಾನದ ನಿಶ್ಚಿತ ಸ್ಥಳವನ್ನು ಹೇಳಿ ಕೊಡುತ್ತದೆ.

ತನ್ನ ದೇಶದ ಎಲ್ಲ ಕಥೆಗಳನ್ನು ಕೆಲವೇ ಪುಟಗಳಲ್ಲಿ ಹಿಡಿದಿಡಬೇಕು ಮತ್ತು ಯಶಸ್ವಿಯಾಗಿ ತೋರ್ಪಡಿಸಬೇಕೆಂಬ ಮಹದಾಸೆಯ ಹಿನ್ನೆಲೆಯಲ್ಲಿ ಅರ್ನೆ ಮಾಡಿದ ಪ್ರಯತ್ನವದು. ಇವತ್ತು ಇಡೀ ಜಗತ್ತಿನ ಕಥೆಗಳನ್ನು ಕೆಲವೇ ಪುಟಗಳ ಒಂದು ಪುಸ್ತಕದಲ್ಲಿ ಕಾಣಲು ಸಹಾಯವಾದ ತಂತ್ರವಿದು. ಈ ರಚನಾ ರೂಪದಿಂದಲೇ ವಿಶ್ವದ ಜನಪದ ಕಥೆಗಳನ್ನು ಕೆಲವೇ ಪುಟಗಳಲ್ಲಿ ಕಾಣಲು ಸಾಧ್ಯವಾದುದು. ಅದಕ್ಕಾಗಿ ಈ ಸಂಕ್ಷಿಪ್ತ ರಚನಾರೂಪವೂ ಅತ್ಯಂತ ಆಕರ್ಷಕ ರೂಪವೆನಿಸಿ, ಇವತ್ತು ವಿಶಿಷ್ಟ ತಂತ್ರ ವೆನಿಸುತ್ತಿದೆ.

ಒಂದು ಕಥೆಯ ಒಂದೇ ಪಾಠವಿದ್ದಾಗ, ಮಾದರಿಯ ರಚನೆ ಸರಳವೆನಿಸಬಹುದು. ಆದರೆ ಒಂದು ಕಥೆಯ ಹೆಚ್ಚೆಚ್ಚು ಪಾಠಗಳು ದೊರೆಯುತ್ತ ಹೋದಂತೆ, ಮಾದರಿ ರಚನಾ ತಂತ್ರದಲ್ಲಿ ವೈವಿಧ್ಯತೆ ಕಾಣಿಸಿಕೊಳ್ಳಲು ತೊಡಗುತ್ತದೆ ಮತ್ತು ಅದೊಂದು ಸಿಷ್ಯಾಪೂರ್ಣ ಅಭ್ಯಾಸದಿಂದಲೇ ರೂಢಿಗೊಳ್ಳುವ ತಂತ್ರವೆನಿಸುತ್ತದೆ.

ಆದರೆ `ಮಾದರಿ ಸೂಚಿ' ತಯಾರಿಸಿಕೊಳ್ಳಲು ಪ್ರತಿ ಮಾದರಿಯ ರಚನೆಯನ್ನು ಇಷ್ಟೊಂದು ಪರಿಶ್ರಮಪಟ್ಟು ರಚಿಸಿಕೊಳ್ಳುವ ಅವಶ್ಯಕತೆ ಇದೆಯೇ ? ಎಂಬ ಪ್ರಶ್ನೆ- ಉದ್ದೇಶದ ಸೀಮಿತತೆ ಮತ್ತು ಪರಿಶ್ರಮದ ಅಪಾರತೆಯನ್ನು ಗಮನಿಸಿ ಏಳುವ ಪ್ರಶ್ನೆಯಾಗಿದೆ. ಇಲ್ಲಿ ಅತಿಯಾದ ಪರಿಶ್ರಮಕ್ಕೆ ತಕ್ಕ ಫಲ ಏನೂ ಇಲ್ಲ. ಇದನ್ನು ಕಾರ್ಲಿಕ್ರಾಹ್ನ ಅವರೇ ಒಪ್ಪಿಕೊಂಡಿದ್ದರು. ಒಂದು ಕಥೆಯ ವ್ಯಾಪಕವಾದ ಅಧ್ಯಯನದಲ್ಲಿ ಅನೇಕ ಭಿನ್ನ ಪಾಠಗಳನ್ನು ಅಳವಡಿಸಿಕೊಳ್ಳಲು ಅಡ್ಡಿಯಿಲ್ಲ. ವರ್ಗೀಕರಣದ ಸೌಲಭ್ಯಕ್ಕೆ ರಚಿಸಿಕೊಳ್ಳುವ ಮಾದರಿಗಾಗಿ ಐದರಿಂದ ಹತ್ತು ಪಾಠಗಳು ಸಾಕೆನಿಸುತ್ತವೆ. ಈ ಮಾತನ್ನು ಒಂದು ಮಾದರಿ ಸೂಚಿ ತಯಾರಿಸಿದ ಅನುಭವದಿಂದ ಹೇಳುತ್ತಿದ್ದೇನೆ. ಏಕೆಂದರೆ ನಾವು ಒಂದು ಕಥೆಯ ವೈವಿಧ್ಯಮಯವಾದ ಪಾಠಗಳ ಒಂದು ವಿಶಿಷ್ಟರೂಪವನ್ನು ಮಾದರಿ ರಚನೆಯಲ್ಲಿ ಕೊಡಬೇಕಾಗಿರುತ್ತದೆ. ಕೇವಲ ಮಾದರಿ ರಚನೆಯೇ ಒಂದು ಮಹತ್ವದ ಫಲಿತಾಂಶ ಕೊಡಲು ಸಾಧ್ಯವಿಲ್ಲ.

ಮಾದರಿಯ ಪರಿಕಲ್ಪನೆಯ ಸ್ವರೂಪ ಲಕ್ಷಣಗಳನ್ನು ಹೇಳುವಾಗ ಮುಖ್ಯವಾಗಿ ವರ್ಗೀಕರಣದ ಕಲ್ಪನೆಯ ಹಿನ್ನೆಲೆಯಲ್ಲಿಯೇ ವಿವರಗಳು ಅಡಕವಾಗಿರುತ್ತವೆ. ಈ ವರ್ಗೀಕರಣದ ಕಲ್ಪನೆಯ ಹಿನ್ನೆಲೆಯಲ್ಲಿ `ಮಾದರಿ' ಎಂದಾಗ ಅದರ ಒಳಗಡೆ ಒಂದು ಪ್ರತ್ಯೇಕ ಕಥೆ, ಅದರ ಮೂಲ ಮಾದರಿಯ ಕಲ್ಪನೆ ಹಾಗೂ ಅದರ ಸಂಕ್ಷಿಪ್ತ ರಚನಾ ರೂಪ- ಈ ಮೂರು ಸಂಗತಿಗಳು ಅದರಲ್ಲಿ ಸೇರಿರುತ್ತವೆ. ಆದರೆ ನಮ್ಮ ಎದುರಿಗೆ ಇರುವುದು- `ಮಾದರಿಯ ರಚನಾ ರೂಪ'; ಈ ರೂಪವನ್ನು ಮುಂದಿಟ್ಟುಕೊಂಡು- ಇದರ ಒಳಗಡೆ ಹುದುಗಿಕೊಂಡಿರುವ `ಮೂಲ ಮಾದರಿ' ಹಾಗೂ ಕಥಾ ಮಾದರಿ (ಮಾದರಿ > ಮೂಲ ಮಾದರಿ > ಕಥಾ ಮಾದರಿ)ಇವುಗಳ ಅಡಕವಾಗಿರುವಿಕೆಯನ್ನೂ ಗಮನಕ್ಕೆ ತೆಗೆದು ಕೊಳ್ಳಬೇಕಾಗುತ್ತದೆ. ಈಗ `ಕಥಾ ಮಾದರಿ > ಮೂಲ ಮಾದರಿ > ರಚನಾ ಮಾದರಿ = ಮಾದರಿ' ಎಂಬ ಕಲ್ಪನೆ ಹೊಳೆಯುತ್ತದೆ. ಆದರೆ ಮಾದರಿ ಎಂದಾಗ ಅದರ `ರಚನಾ ರೂಪ' ತೋರಿಸುತ್ತೇವೆ. ಅದರ ಸ್ವರೂಪದಲ್ಲಿ ಮೇಲಿನ ಎರಡೂ ಪರಿಕಲ್ಪನೆಗಳು ಸೇರಿಕೊಂಡಿರುತ್ತವೆ. ಹೀಗೆ `ಮಾದರಿಯ ' ಲಕ್ಷಣ ಹೇಳುವಾಗ ಸಂಗ್ರಹಿತ ಕಥೆಯೂ ಸೇರುತ್ತದೆ. ಹಾಗಾದರೆ ಕಥೆಯ ಸ್ವರೂಪ ಮತ್ತು ಮಾದರಿಯ ಸ್ವರೂಪ ಒಂದೇ ಎಂದು ಭಾವಿಸಬಾರದು ಎಂಬುದನ್ನು ಹಿಂದೆಯೇ ಎಚ್ಚರಿಸಲಾಗಿದೆ. ಮಾದರಿಯ ಸ್ವರೂಪ ಹೇಳುವಾಗ, ಕೇವಲ

ಕಥೆಯ ರಚನಾಕಲ್ಪನೆ ಹಾಗೂ ಅದು ವಿಂಗಡಣೆಯಲ್ಲಿ ಯಾವ ಗುಂಪಿಗೆ ಸೇರಿರುತ್ತದೆ - ಎಂಬ ಸಂಗತಿಗಳು ಮಾತ್ರ ಮುಖ್ಯವಾಗಿರುತ್ತದೆ.

ಮಾದರಿಯ ಮುಖ್ಯ ಅಂಶಗಳು

೧. ಮಾದರಿಯ ತಲೆಬರಹ :

ಮಾದರಿಯ ರಚನಾ ರೂಪ(ರಚನಾ ಮಾದರಿ) ತಯಾರಾದ ಮೇಲೆ ವರ್ಗೀಕರಣಕ್ಕೆ ಸಂಬಂಧಿಸಿದಂತೆ, ನಮಗೆ ಈ ರೂಪವೇ ಅತ್ಯಂತ ಮಹತ್ವದ್ದು. ಈ ರಚನಾರೂಪದ ತಿರುಳು ಕಥಾ ಮಾದರಿ ಅಥವಾ ಮೂಲ ಮಾದರಿಯಿಂದ ಪಡೆದುದಾಗಿರುತ್ತದೆ. ಆದರೆ `ಮಾದರಿ' ಗೆ ಕೊಡುವ ತಲೆಬರಹದ ತಂತ್ರ ಮಾತ್ರ ಕಥೆಯಿಂದಲೇ ಪಡೆದುದಾಗಿರುತ್ತದೆ.

ಕಥೆಗೆ ಸಂಬಂಧಿಸಿದಂತೆ ಮಾದರಿಯು ಮುಖ್ಯವಾಗಿ ನಾಲ್ಕು ಬಗೆಯಲ್ಲಿ ವರ್ತಿಸುತ್ತದೆಂದು ಥಾಮ್ಸನ್ನರು ಬರೆಯುತ್ತಾರೆ* ಬಹುಶಃ ಈ ಮಾತು ಮಾದರಿಯ ತಲೆಬರಹವನ್ನು ಕುರಿತದ್ದಾಗಿದೆ ಎಂದು ತೋರುತ್ತದೆ. `ಏಕೆಂದರೆ ಅವರು ಕೊಟ್ಟ ನಾಲ್ಕು ಅಂಶಗಳಲ್ಲೂ `ಒಂದು ಮಾದರಿಗೆ ತಲೆಬರಹವನ್ನು, ಕಥೆಗೆ ಸಂಬಂಧಿಸಿ ಹೇಗೆ ಕೊಡಲಾಗುತ್ತದೆ' ಎಂಬುದೇ ಮುಖ್ಯ ವಿಷಯವಾಗಿದೆ.

೧. `ಪ್ರಾಣಿ ಕಥೆಗಳಲ್ಲಿ. ಹಾಸ್ಯ ಹಾಗೂ ಉಪಕಥೆಗಳಲ್ಲಿ ಒಂದೇ ಆಶಯವಿದ್ದು, ಅದೇ ಮಾದರಿಯ ತಲೆಬರಹ ಕೂಡ ಆಗುತ್ತದೆ.'

ಕಥೆಗಳಲ್ಲಿ ಒಂದೇ ಆಶಯವಿರುತ್ತದೆಂಬ ಮಾತು ನನ್ನ ಮಟ್ಟಿಗೆ ಒಪ್ಪತಕ್ಕದ್ದಲ್ಲ. ಅದರ ಬಗ್ಗೆ ಮುಂದೆ ವಿವೇಚಿಸಲಿದ್ದೇನೆ. ಆದರೆ ಪ್ರಮುಖ ಆಶಯವೊಂದು ಮಾದರಿಯ ತಲೆಬರಹವಿರುತ್ತದೆಂಬ ಮಾತು ಒಪ್ಪಲೇಬೇಕು. ಉದಾ : ನೇಣಿಗೆ ತಕ್ಕ ಮನುಷ್ಯನನ್ನು ಆರಿಸಲಾಯಿತು. (ಮಾದರಿ :೧೫೩೪ಎ, ಆಶಯ ೧೭೮.೨) ತಾನು ಕುಳಿತ ಟೊಂಗೆಯನ್ನು ಕಡಿದವನು (ಮಾದರಿ. ೧೨೪೦, ಆಶಯ. ಜೆ. ೨೧೩೩.೪) ಆಘಾತಕ್ಕೊಳಗಾದ ಹಕ್ಕಿ (ಮಾದರಿ. ೨೦೪೧, ಆಶಯ. ಝಡ್ ೪೯.೩) ಜಾಣ ಪ್ರಾಣಿ ಹಾಗೂ ಭಾಗ್ಯಶಾಲಿ ಬದಲಾವಣೆಗಳು (ಮಾದರಿ :೧೭೦ಎ, ಆಶಯ. ಝಡ್ ೩೯.೯)

ii. ಕಥೆಯ ತಲೆಬರಹವೇ ಮಾದರಿಯ ಹೆಸರಾಗಿರಬಹುದು. ಅದುದರಿಂದ ಒಮ್ಮೊಮ್ಮೆ ಕಥೆಯ ಹೆಸರನ್ನೇ ಮಾದರಿಯ ತಲೆಬರಹವಾಗಿ ಕೊಡಲಾಗುತ್ತದೆ. `ಚೋಟು ಹುಡುಗ' (ಚೋಟೆಪ್ಪ, ೭೦೦), ಸೇಸಮ್‌ತೆರೆ, ಅಲಿಬಾಬಾ ಮತ್ತು ನಲ್ವತ್ತು ಜನ ಕಳ್ಳರು' (ಮಾದರಿ ೬೭೬) ಹತ್ತೊಂಡ್ಯೊ ಬಿಟ್ಟೊಂಡ್ಯೊ (ಮಾದರಿ ೫೬೧) ಮಾಟದ ಉಂಗುರ (೫೬೦).

---

o ಉಲ್ಲೇಖ ಎಲ್. ಆರ್. ಹೆಗಡೆ, ಜಾನಪದ ಸಾಹಿತ್ಯದರ್ಶನ -೧ ಪುಟ. ೨೦ -೨೧

iii. ಕಥೆಯ `ಕೇಂದ್ರ ಆಶಯ' ವು ಕಥೆಯ ತಲೆಬರಹವಾಗಿದ್ದು ಅದನ್ನೇ ಮಾದರಿಯ ಹೆಸರಾಗಿಯೂ ಸ್ವೀಕರಿಸಬಹುದು. ಉದಾ: ಅಘಾತಕ್ಕೊಳಗಾಗದ ಹಕ್ಕಿ (ಮಾದರಿ: ೨೦೪೧, ಆಶಯ. ಝಡ್, ೪೯.೩)

iv. ಕೆಲವು ಕಥೆಗಳ ತಲೆಬರಹಗಳು-ಉಪಮಾದರಿಯ ಹೆಸರಾಗಿರಬಹುದು. ಇದು ಗೊತ್ತಾದ ಕಥೆಯೊಂದು ಉಪಮಾದರಿಯಾಗಿದ್ದರೆ ಮಾತ್ರ ಅದರ ಹೆಸರು ಆ ಮಾದರಿಗೆ ಕೊಡಲಾಗುತ್ತದೆ.

ಥಾಮ್ಸನ್ನರು ಹೇಳುವ ಈ ನಾಲ್ಕು ಅಂಶಗಳಲ್ಲದೆ ಇನ್ನೂ ಕೆಲವು ಅಂಶಗಳು ಮಾದರಿಯ ತಲೆಬರಹದಲ್ಲಿ ಕಾಣಿಸಿಕೊಳ್ಳುತ್ತವೆ :

i) ಕಥೆಯ ಪ್ರಮುಖ ಪಾತ್ರ ಅಥವಾ ಪಾತ್ರಗಳ ಹೆಸರುಗಳು. ಉದಾ: ಕಳ್ಳ ಮತ್ತು ಹುಲಿ (ಮಾದರಿ. ೧೭೭), ಸಿಂಡ್ರೆಲ್ಲಾ (ಮಾದರಿ ೫೧೦ಎ), ಬ್ರಾಹ್ಮಣನೂ ಮತ್ತು ಮುಂಗುಲಿಯೂ ಮಾದರಿ (೧೯೮ ಎ), ಮಂತ್ರವಾದಿ ಮತ್ತು ಅವನ ಶಿಷ್ಯರು (ಮಾದರಿ ೩೨೫), ಅಲ್ಲಾವುದ್ದಿನ್ (೫೬೧).

ii) ಕ್ರಿಯಾರೂಪದ ಆಶಯ ಮಾದರಿಯ ಹೆಸರಾಗಿರಬಹುದು. ಉದಾ: ರಾಜಕುಮಾರಿಯ ಪ್ರತಿಮೆ ಕಂಡು ಮೋಹಗೊಂಡ ರಾಜಕುಮಾರ (೫೧೬ಬಿ), ಸನ್ಯಾಸಿಯ ಸಂಗ ಬೆಳೆಸಿ, ರಾಜನನ್ನು ನಾಯಿಯಾಗಿಸಿದ ರಾಣಿ (೪೪೯). ದೇವರ ಭೇಟಿಗಾಗಿ ಪ್ರಯಾಣ (೪೬೧ಎ), ತಂದೆಯ ಅದ್ಭುತ ಉಪಶಮನಕ್ಕಾಗಿ ಶೋಧ ನಡೆಸಿದ್ದು (೫೫೧)- ಮುಂತಾದವುಗಳು.

ಮಾದರಿ ಸೂಚಿ ನೋಡಿದರೆ- ಕಥೆಯ ತಲೆಬರಹಗಳು ಪ್ರಮುಖ ಆಶಯಗಳು, ಕ್ರಿಯೆಗಳು, ಪಾತ್ರಗಳು ಇವುಗಳ ಹೆಸರೇ ಮಾದರಿಗಳ ತಲೆಬರಹಗಳಾಗಿರುವುದು ಸ್ಪಷ್ಟವಾಗುತ್ತದೆ.

೨. ಮಾದರಿಯ ಸಂಖ್ಯೆ :

ಮಾದರಿಯ ರಚನೆ ತಲೆಬರಹದೊಂದಿಗೇ ಆಗುವಂತಹದು. ಕಥೆಗಳು ಹೇಗೆ ತಲೆಬರಹಗಳೊಂದಿಗೆ ಗುರುತಿಸಲ್ಪಡುತ್ತವೆಯೋ, ಮತ್ತು ಆ ತಲೆಬರಹ ಕಥೆಯ ರೂಪದ ಜೊತೆಗಿನ ಸಂಗತಿ ಎನಿಸುತ್ತದೆಯೋ ಹಾಗೆಯೇ ಮಾದರಿಯ ತಲೆಬರಹವೂ ಕೂಡ ಮಾದರಿಯ ಜೊತೆಗಿನ ಸಂಗತಿಯಾಗಿದೆ ಮತ್ತು ಅದು ಅದರ ತಿರುಳನ್ನು ಅವಲಂಬಿಸಿದ್ದು, ಇಡೀ ಕಥೆಯ ಸಂಗತಿಯ ಹಿನ್ನೆಲೆಯಲ್ಲಿ ಮೂಡಿಬಂದಿರುತ್ತದೆ.

ಆದರೆ ಮಾದರಿಯ ಸಂಖ್ಯೆ ರಚನಾರೂಪದ ಭಾಗವಾಗಿರದೇ ವರ್ಗೀಕರಣದ ಭಾಗವಾಗಿದೆ. ಮಾದರಿಯ ರಚನಾರೂಪದ ತಯಾರಿಕೆಯ ಒಟ್ಟು ಉದ್ದೇಶವೇ

ವರ್ಗೀಕರಣವಾಗಿರುವುದರಿಂದ, ವಿಭಾಗೀಕರಣದಲ್ಲಿ ಆ ಮಾದರಿಯ ಸ್ಥಾನವನ್ನು ಗುರುತಿಸುವ ಸಂಖ್ಯೆಯೂ ಅತ್ಯಂತ ಮಹತ್ವದ್ದೆನಿಸುತ್ತದೆ. ಎಷ್ಟೋ ಸಲ ಮಾದರಿಯನ್ನು ಅದರ ತಲೆಬರಹ ದಿಂದ ಕರೆಯುವಂತೆ ಅದರ ಸಂಖ್ಯೆಯಿಂದಲೂ ಕರೆಯಲಾಗುತ್ತದೆ.

ಅರ್ನೆ ಥಾಮ್ಸನ್ ಮಾದರಿ ಸೂಚಿಯಲ್ಲಿ ಐದು ಭಾಗಗಳಿವೆ. ಅವನ್ನು ಸಂಖ್ಯಾನುಸಾರವಾಗಿ ಹೀಗೆ ವಿಭಾಗಿಸಲಾಗಿದೆ :

i) ೧. ೨೯೯ ಪ್ರಾಣಿಕಥೆಗಳು
ii) ೩೦೦. ೧೧೯೯ ಸಾಮಾನ್ಯ ಜನಪದ ಕಥೆಗಳು
iii) ೧೨೦೦.೧೯೯೯ ಹಾಸ್ಯ ಮತ್ತು ಅಡ್ಡಕಥೆಗಳು
iv) ೨೦೦೦. ೨೩೯೯ ಸೂತ್ರಬದ್ಧ ಕಥೆಗಳು
v) ೨೪೦೦. ೨೪೯೯ ವಿಭಾಗೀಕರಿಸಿದ ಕಥೆಗಳು

ಇವುಗಳ ಒಳಗಡೆ ಮತ್ತೆ ವಿಷಯಾನುಸಾರ ವಿಂಗಡನೆ ಇರುತ್ತದೆ :

ಭಾಗ-೧, ೧, ೨೯೯: ಪ್ರಾಣಿ ಕಥೆಗಳು ಎಂಬುದರ ಕೆಲ ಮುಖ್ಯ ವಿಂಗಡನೆಗಳು ಹೀಗಿವೆ :

೧.೯೯ ಕಾಡು ಪ್ರಾಣಿಗಳು
೧೦೦ .೧೪೯ ಕಾಡು ಪ್ರಾಣಿಗಳು ಹಾಗೂ ಸಾಕು ಪ್ರಾಣಿಗಳು
೧೫೦.೧೯೯ ಮಾನವ ಮತ್ತು ಕಾಡು ಪ್ರಾಣಿಗಳು
೨೦೦-೨೧೯ ಸಾಕು ಪ್ರಾಣಿಗಳು
೨೨೦ -೨೧೯ ಪಕ್ಷಿಗಳು
೨೭೫-೨೯೯ ಇತರ ಪ್ರಾಣಿಗಳು ಮತ್ತು ವಸ್ತುಗಳು

ಈ ಒಂದೊಂದು ವಿಂಗಡಣೆಯಲ್ಲೂ ಮತ್ತೆ ಪ್ರಮುಖ ಸಂಗತಿಗಳನ್ನು ಗಮನಿಸಿ ಒಳ ವಿಂಗಡನೆಗಳನ್ನು ಗುರುತಿಸಿಕೊಳ್ಳಲಾಗುತ್ತದೆ :

೧-೯೯ ಕಾಡು ಪ್ರಾಣಿಗಳು ಎಂಬುದರಲ್ಲಿ
೧-೬೯ ನರಿ ಜಾಣ ಪ್ರಾಣಿ
೩೦ -೩೫ ತಗ್ಗಿನಿಂದ ಕಾಪಾಡುವುದು

ಹೀಗೆ ನಮಗೆ ಕಥೆಗಳ ಮೊತ್ತ ದೊರಕಿದಂತೆ ಅವುಗಳ ವಸ್ತುವಿನ ಸಾಮಿಪ್ಯವನ್ನು ಗಮನಿಸಿ ಕಥೆಗಳನ್ನು ಸಂಖ್ಯೆಯಿಂದ ಸಂಜ್ಞಿಸಲಾಗುತ್ತದೆ ಮತ್ತು ವಿಭಾಗೀಕರಣದಲ್ಲಿ ಒಡಿದಿಡಲಾಗುತ್ತದೆ.

೩. ಮಾದರಿಯ ವರ್ಗ(ಗುಂಪು):

ಕರ್ನಾಟಕದಲ್ಲಿ ಇಂಗ್ಲೀಷಿನ type ಎಂಬುದಕ್ಕೆ ಕೆಲವರು `ವರ್ಗ'ವೆಂದು ಬಳಸುತ್ತಿದ್ದು ಅದು ಸರಿಯಾದ ಪ್ರಯೋಗವೆನಿಸದು. `ವರ್ಗ' ಎನ್ನುವುದು ಇಡೀ `ಮಾದರಿ'ಯ ವ್ಯವಸ್ಥೆಯಲ್ಲಿ ಕಂಡುಬರುವ ಒಂದು ಅಂಶ ಮಾತ್ರ. ವರ್ಗ ಇದು Class ಎಂಬುದಕ್ಕೆ ಸಂವಾದಿ. ಸರಳವಾಗಿ ಒಂದು ಗುಂಪು ಮತ್ತು ಗುಂಪಿನ ಸ್ಥಾನಮಾನವನ್ನು `ವರ್ಗ' (Class)ಕಲ್ಪನೆ ಹೊಂದಿದೆ.

ಜನಪದ ಕಥೆಗಳ ವರ್ಗೀಕರಣ ಅತ್ಯಂತ ಕಠಿಣವಾದುದು. ಏಕೆಂದರೆ ಅವುಗಳಲ್ಲಿ ಸಾಮ್ಯತೆ ಅತಿ ಹೆಚ್ಚು. ವಿಶಿಷ್ಟವಾಗಿ ಬೆಳವಣಿಗೆ ಹೊಂದಿದ ಒಂದು ಕಥೆಯನ್ನು ಸಂಖ್ಯೆಕೊಟ್ಟು ಸ್ಥಾನ ನಿರ್ದೇಶಿಸುವಲ್ಲಿ -ಈ ವರ್ಗ (ಗುಂಪು) ಕಲ್ಪನೆ ಕಾಣಿಸಿಕೊಳ್ಳುತ್ತದೆ. ಮುಖ್ಯಕಥೆಗೆ ಒಂದು ಸಂಖ್ಯೆ ಕೊಟ್ಟು : ಉದಾ: ನಂಬಿಗಸ್ತ ಸೇವಕ -ಇದರ ಸಂಖ್ಯೆ ೫೧೬, ಇದು ಅತ್ಯಂತ ವ್ಯಾಪಕವಾಗಿ ಪ್ರಸರಣಗೊಂಡ ಕಥೆ. ಇಲ್ಲಿಯ ಮುಖ್ಯ ಸಂಗತಿಗಳೆಂದರೆ : ಒಬ್ಬ ಸೇವಕ- ಅವನ ನಿಷ್ಠೆ- ನಂಬುಗೆ, ಮತ್ತು ಜಾಣಾಕ್ಷತನಗಳು ಮಾಲೀಕನನ್ನು ಕಾಪಾಡುವಲ್ಲಿ, ಮೆಚ್ಚಿಸುವಲ್ಲಿ ವ್ಯಕ್ತವಾಗುವುದು. ಈ ಬಗೆಯ ಕಥೆಗಳನ್ನು ೫೧೬ ಸಂಖ್ಯೆ ಮುಖ್ಯವಾಗಿಟ್ಟುಕೊಂಡು, ಉಳಿದವುಗಳನ್ನು (ಇವು ಹೆಚ್ಚಾಗಿ ಪ್ರಾದೇಶಿಕ ವಾಗಿರುವಂತಹವು, ಕಡಿಮೆ ಪ್ರಸರಣ ಹೊಂದಿರುವಂತಹವು ಆಗಿರುತ್ತವೆ) - ಇವನ್ನು ೫೧೬ ಎ, ೫೧೬ಬಿ, ೫೧೬ಸಿ ಎಂದೂ, ಇನ್ನೂ ಅಪ್ರಮುಖವೆನಿಸುವಂತಹವು ಆದರೆ ಸಾಮ್ಯದಲ್ಲಿ ಸೂಕ್ಷ್ಮವಾಗಿ ಹೋಲಿಸುವಂತಹವುಗಳನ್ನು ೫೧೬ಎ*, ೫೧೬ಬಿ*, ೫೧೬ಸಿ* ಎಂದೂ, ಮತ್ತೆ ೫೧೬*, ಮತ್ತೆ ೫೧೬**, ೫೧೬***. ಹೀಗೆಯೇ ಗುರುತಿಸುತ್ತ ಹೋಗಬಹುದು. ಇಲ್ಲಿ ವರ್ಗೀಕರಣದ ಸೌಲಭ್ಯ ಹೆಚ್ಚಿಸುವ ತಂತ್ರ ಕಾಣಿಸುತ್ತದೆ. ಈ ತಂತ್ರದಿಂದಾಗಿ ಇಲ್ಲಿ ೫೧೬ರ ಸಂಖ್ಯೆಯ ಕೆಳಗಡೆ ಇವೆಲ್ಲ ಬಂದು, ೫೧೬ರ ಒಂದು ಗುಂಪು ತಯಾರಾಗುತ್ತದೆ. ಇಲ್ಲಿಯೇ ನಾವು ಒಂದು ವರ್ಗ ಕಲ್ಪನೆಯನ್ನು ಕಾಣುತ್ತೇವೆ. ಇಂಥ ಒಂದು ವರ್ಗ ತಯಾರಾಗಲು ಇಲ್ಲಿಯ ಮುಖ್ಯ ಮಾದರಿಯ (೫೧೬) ಸಾಮಾನ್ಯ ಅಂಶಗಳು (ನಂಬಿಗೆ, ಚಾಣಾಕ್ಷತೆ) ಕಾರಣವಾಗುತ್ತವೆ. ಅದಕ್ಕಾಗಿ ೫೧೬ ನಂಬಿಗಸ್ತ ಸೇವಕ ಮುಖ್ಯ ಮಾದರಿ ಎನಿಸಿ, ಉಳಿದವೆಲ್ಲ ಆ ವರ್ಗಕ್ಕೆ ಸೇರಿದ ಉಪಮಾದರಿ (Subtype) ಗಳಾಗಿ ಕರೆಸಿಕೊಳ್ಳುತ್ತವೆ.

ನಾವು ಒಂದು ಕಲಾಗಾರವನ್ನು ನೋಡೋಣ. ಅಲ್ಲಿ ಒಬ್ಬ ಕಲಾಕಾರನು ತನಗೆ ಹೊಳೆದ ವಿಚಾರಗಳನ್ನೆಲ್ಲ ರೇಖೆಗಳನ್ನೆಳೆದು ಇಟ್ಟಿರುತ್ತಾನೆ. ಕೆಲವನ್ನು ಪೂರ್ಣ ಚಿತ್ರಗಳಾಗಿಯೂ ಬರೆದಿರುತ್ತಾನೆ. ಅವನು ಈಗಾಗಲೇ ತಯಾರಿಸಿದ, ಮುಂದೆ ತಯಾರಿಸಬೇಕಾದ ಒಂದೇ ನಮೂನೆಯ ಹಲವಾರು ಚಿತ್ರಗಳಿಗೆ ಆತ ಮೊದಲು ಹಾಕಿ ಕೊಂಡ ಕಲ್ಪನೆಯ ಮೂಲ ರೇಖಾಚಿತ್ರಗಳೇ `ಮಾದರಿ'ಯಾಗಿರುತ್ತವೆ. ಒಮ್ಮೆ ಹಾಕಿಕೊಂಡ

ಒಂದು ಕಲ್ಪನೆಯ ರೇಖಾಚಿತ್ರ. ಅದರಿಂದ ಅತ ಹಲವಾರು ಚಿತ್ರಗಳನ್ನು ಒಂದೇ ಬಗೆಯಾಗಿ ಚಿತ್ರಿಸಬಹುದು. ಇದಕ್ಕೆಲ್ಲ ಆ ಮೂಲ ರೂಪ' 'ರೇಖಾಚಿತ್ರ'ವೇ ಕಾರಣವಾಗಿರುತ್ತದೆ. ಮುಂದೆ ಬರುವ ಕಲಾಕಾರರಿಗೆಲ್ಲ ಆದರ್ಶವಾಗುವ `ವಸ್ತುಕಲ್ಪನೆ' ಅಥವಾ 'ಕೃತಿ' ಅದಾಗಿರುವುದರಿಂದ ಅದೊಂದು `ಮಾದರಿ' ಎನಿಸಿಕೊಳ್ಳುತ್ತದೆ.

`ಮಾದರಿ' ಹೇಗಿರುತ್ತದೆಂದರೆ, ಅದು ಇತರ ಗುಂಪುಗಳಿಂದ ತನ್ನ ಗುಂಪನ್ನು ಹಲವು ವಿಶಿಷ್ಟತೆಗಳಲ್ಲಿ ಬೇರ್ಪಡಿಸಿ ಹಿಡಿದಿರುತ್ತದೆ. ಇದೊಂದು ಸಾಮಾನ್ಯ ನಿದರ್ಶನ ಇಲ್ಲವೆ ಆದರ್ಶವಾಗಿದ್ದು, ತಾನೊಂದು ಗುಂಪನ್ನೇ ನಿರ್ಮಿಸಿಕೊಂಡಿರುತ್ತದೆ. ಆ ಗುಂಪಿಗೆ ತಾನೇ ವಿಶಿಷ್ಟ ಸಂಜ್ಞೆಯಂತೆ ವರ್ತಿಸುತ್ತದೆ. ತನ್ನ ಹೆಸರಿನಿಂದಲೇ ಆ ಗುಂಪಿಗೆಲ್ಲ ಅದೇ ಹೆಸರು ತರಿಸುವಂತಹದಾಗಿರುತ್ತದೆ. ಇಲ್ಲವೇ ಆ ಗುಂಪಿನ ಹೆಸರನ್ನು ತಾನು ಹೊಂದಿರುತ್ತದೆ. ಹೀಗೆ ತಾನು ಸೇರಿರುವ ಕುಲಕ್ಕೆ ಇಲ್ಲವೆ ತನ್ನಂತೆ ನಿರ್ಮಾಣವಾಗಲಿರುವ ಕುಲಕ್ಕೆ ತನ್ನ ಜಾತಿ ನಾಮವನ್ನು ಕೊಡುವ ವಿಶಿಷ್ಟ ಅಂಶವೇ ಮಾದರಿ ಎನಿಸುತ್ತದೆ.

ನಮಗೆ ಗೊತ್ತಿಲ್ಲದ, ನಾವು ಎಂದೂ ಕಾಣದ ಒಂದು ಪ್ರಾಣಿಯನ್ನು ನೋಡುತ್ತೇವೆ. ಅದರ ಪರಿಚಯವಿಲ್ಲದ ನಾವು ಬಹುಶಃ ನಮಗೆ ಪರಿಚಿತವಿರುವ `ಜೀವಜಾತಿ' ಒಂದಕ್ಕೆ ಹೋಲಿಸುವ ಕಾಲ್ಪನಿಕ ವಿಚಾರ ಮಾಡುತ್ತೇವೆ. ಆಗ ಈ ಜೀವಿಯನ್ನು ನಮಗೆ ಗೊತ್ತಿರುವ ಜೀವಿಯೊಂದರ ಗುಂಪಿಗೆ ಅದರ ಆಕಾರ, ಬಣ್ಣ ಮುಂತಾದವುಗಳ ಹೋಲಿಕೆಯನ್ನು ಗಮನಿಸಿ ಇದು ಇಂಥ `ಪ್ರಾಣಿವರ್ಗ' ಕ್ಕೆ ಸೇರಿದುದು ಎಂದು ಗಣಿಸುತ್ತೇವೆ. ಇಲ್ಲಿ ಈ ಮೊದಲೇ ನಮಗಿರುವ ಒಂದು ಪರಿಚಿತವಾದ ಜೀವಿಯ `ಮೂಲ ಆದರ್ಶ' ವೇ (ಐಡಿಯಾ)` ಮಾದರಿ' ಯ ಕಲ್ಪನೆಯಾಗಿ ನಿಲ್ಲುತ್ತದೆ. ಅದು ನಾವು ನೋಡಿದ ಜೀವಿಯನ್ನು ಒಂದು ನಿರ್ದಿಷ್ಟ ವರ್ಗಕ್ಕೆ ಸೇರಿಸಲು ಕಾರಣವಾಗುತ್ತದೆ.

ಪ್ರತಿಯೊಂದು ಮಾದರಿಯೂ ತನ್ನಷ್ಟಕ್ಕೆ ತಾನು ಸ್ವತಂತ್ರವಾಗಿರುತ್ತದೆ. ಆದರೆ ವಿಭಾಗೀಕರಣದ ಸಮಯದಲ್ಲಿ ತನ್ನಂತಹ ಇತರ ಮಾದರಿಗಳೊಂದಿಗೆ ಒಂದು ಸಂಬಂಧದಲ್ಲಿ ನಿಲ್ಲುತ್ತದೆ. ಹೀಗೆ ಒಂದು ಮಾದರಿಯ ಉದ್ದೇಶವನ್ನೇ ಹೊತ್ತು ಅಥವಾ ಸಂಬಂಧ ಹೊಂದಿದ್ದು, ನಿರೂಪಣೆಯಲ್ಲಿ ಅಲ್ಪಮಟ್ಟಿನ ಸಾಮ್ಯ ಇಲ್ಲವೆ ವೈವಿಧ್ಯಮಯವಾದವುಗಳನ್ನು ಅದೇ ಮಾದರಿಯ `ಉಪಮಾದರಿ'ಗಳಾಗಿ ಅ. ಬ. ಕ ಇತ್ಯಾದಿಯಾಗಿ ಗುರುತಿಸಲಾಗುತ್ತದೆ. ಈ ರೀತಿ ವರ್ಗ ಕಲ್ಪನೆ ಕಾಣಿಸುವುದರಿಂದ, Typeಗೆ ಮಾದರಿಯೆಂದು ಕರೆಯುವುದೇ ಹೆಚ್ಚು ಸಮಂಜಸವಾಗಿದೆ.

ಶ್ರವಣಬೆಳ್ಗೊಳದ ಮಹತ್ವ–ಅದನ್ನು ಕುರಿತು ಆಗಿರುವ, ಆಗಬೇಕಾದ ಶೋಧಗಳು*

-ಡಾ. ಬಿ. ವಿ. ಶಿರೂರ

ಕರ್ನಾಟಕದ ಪ್ರಮುಖ ಧರ್ಮಗಳಲ್ಲಿ ಜೈನ ಧರ್ಮವೂ ಒಂದು. ಪ್ರಾಚೀನಕಾಲದಿಂದ ಆ ಧರ್ಮದ ಕೇಂದ್ರ ಸ್ಥಳವಾಗಿದ್ದ ಶ್ರವಣಬೆಳ್ಗೊಳ ತನ್ನ ಧಾರ್ಮಿಕ ಚುಂಬಕಶಕ್ತಿಯಿಂದ ಹಲವಾರು ಅರಸರನ್ನು ಅವರ ಪರಿವಾರದವರನ್ನೂ, ಮಂತ್ರಿ ಮಾಂಡಲೀಕರನ್ನೂ, ಜನಸಾಮಾನ್ಯರನ್ನೂ ತನ್ನೆಡೆಗೆ ಆಕರ್ಷಿಸಿತು. ತನ್ನ ಪ್ರಭಾವದಿಂದ ರಾಜಕೀಯದಲ್ಲಿ ನೊಂದವರಿಗೆ, ಬೆಂದವರಿಗೆ ಮನಶ್ಯಾಂತಿಯ ತಾಣವಾಗಿ ಪರಿಣಮಿಸಿತು. ಹಾಗೆ ಶಾಂತಿಯನ್ನರಸಿ ಬಂದ ಮೊಟ್ಟ ಮೊದಲನೆಯ ಅರಸು ಚಂದ್ರಗುಪ್ತ ಮೌರ್ಯ. ಇವನು ತನ್ನ ಗುರು ಭದ್ರಬಾಹುವಿನೊಂದಿಗೆ ಈ ಸ್ಥಳಕ್ಕೆ ಬಂದು ನೆಲೆಯೂರಿ ನಿಂತುದು ಉತ್ತರ ಮತ್ತು ದಕ್ಷಿಣ ಹಿಂದುಸ್ತಾನಗಳ ನಡುವಿನ ಜೈನಧರ್ಮದ ಸೇತುವೆಯಾಯಿತು. ಇದೇ ರೀತಿ ಚಾಲುಕ್ಯ ತುಳಿತಕ್ಕೆ ತುತ್ತಾದ ರಾಷ್ಟ್ರಕೂಟ ೪ನೆಯ ಇಂದ್ರನು ಶ್ರವಣಬೆಳ್ಗೊಳಕ್ಕೆ ಬಂದು ಸಲ್ಲೇಖನವಿಧಿಯಿಂದ ಮಡಿದುದು ಇನ್ನೊಂದು ಮಹತ್ವಪೂರ್ಣ ಘಟನೆ. ಗಂಗರಾಜನ ಹೆಂಡತಿ ಲಕ್ಕಲೆ, ಶಾಂತಲೆಯ ತಾಯಿ ಮಾಚಿಕಬ್ಬೆಯರೂ ಮರಣವಪ್ಪಲು ಇದೇ ಸ್ಥಳವನ್ನಾಯ್ದುಕೊಂಡರು.

ಯುದ್ಧ ಮೊದಲಾದ ಸಾವು ಬದುಕಿನ ಪ್ರಸಂಗದಲ್ಲಿಯೂ ಈ ಸ್ಥಳ ತಮ್ಮ ಬೆಂಗಾವಲಿಗಿದೆಯೆಂದು ಭಾವಿಸಿ ಕೃತಜ್ಞತೆ ಸಲ್ಲಿಸಿದವರೂ ಹಲವರುಂಟು. ಅವರಲ್ಲಿ ಗಂಗ ಅರಸು ೨ನೆಯ ಮಾರಸಿಂಹ, ಮಂತ್ರಿ ಗಂಗರಾಜ, ಹೊಯ್ಸಳ ವೀರನಾರಸಿಂಹ, ನಗಿರೆಯ ಅಸರು ಭೈರವದೇವ ಒಡೆಯ ಮೊದಲಾದವರನ್ನು ಇಲ್ಲಿ ಉಲ್ಲೇಖಿಸಬಹುದು. ಗಂಗ ಅರಸು ಸತ್ಯವಾಕ್ಯ ೨ನೆಯ ರಾಚಮಲ್ಲ, ಹೊಯ್ಸಳ ಅರಸು ೨ನೆಯ ವೀರಬಲ್ಲಾಳ, ಮೈಸೂರರಸರಲ್ಲಿ ಚಾಮರಾಜ ವೊಡೆಯ, ೧ನೆಯ ಕೃಷ್ಣರಾಜವೊಡೆಯ, ಖಾಸಾ ಚಾಮರಾಜ

---

* ದಿನಾಂಕ ೬.೧.೯೫ರಂದು ಬೆಂಗಳೂರಿನ ಶಂ.ಬಾ. ವಿಚಾರವೇದಿಕೆಯು ಮಿಥಿಕ್ ಸೊಸೈಟಿಯಲ್ಲಿ ಏರ್ಪಡಿಸಿದ `ಸಂಶೋಧನ ದಿನ' ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.

ವೊಡೆಯ ಮೊದಲಾದವರು ಈ ಸ್ಥಳಕ್ಕೆ ಆಗಮಿಸಿ ತಮ್ಮ ಸೇವೆಸಲ್ಲಿಸಿದರೆ ಇನ್ನು ಕೆಲವರು ತಾವಿರುವಲ್ಲಿಂದಲೆ ತಮ್ಮ ಕಾಣಿಕೆಯನ್ನು ಸಲ್ಲಿಸಿ ಕೃತಾರ್ಥರಾಗಿರುವರು. ಚಾವುಂಡರಾಯ, ಶಾಂತಲೆ, ಗಂಗರಾಜ, ಹುಳ್ಳ ಮೊದಲಾದವರಂತೂ ಈ ಸ್ಥಳಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡವರಾಗಿದ್ದರು.

ಅರಸರಿಗೆ ಅನುವು ಆಪತ್ತುಗಳುಂಟಾದಾಗ ಅವುಗಳನ್ನು ನಿವಾರಣೆ ಮಾಡಿದ ಮುನಿಗಳೂ ಇಲ್ಲಿದ್ದಾರೆ. ಹೊಯ್ಸಳ ಅರಸು ವೀರಬಲ್ಲಾಳನ ಮಹಾರೋಗವನ್ನೂ ಗುಣಪಡಿಸಿ, 'ಬಲ್ಲಾಳಜೀವ ರಕ್ಷಾಪಾಲ' ಎಂಬ ಬಿರುದನ್ನು ಅಡಗೂರಿನ ಬಳಿ ಭೂಮಿ ಬಾಯಿ ಬಿಟ್ಟಾಗ ಅದನ್ನು ನಿವಾರಿಸಿ ವಿಷ್ಣುವರ್ಧನನಿಂದ 'ಚಾರುಕೀರ್ತಿ ಪಂಡಿತಾಚಾರ್ಯ' ಎಂಬ ಬಿರುದನ್ನು ಇವರು ಪಡೆದರು. ಅದೇ ರೀತಿ ಮೈಸೂರಿನ ೧ನೆಯ ಕೃಷ್ಣದೇವರಾಯ ವೊಡೆಯನ ಹೆಂಡತಿ ಚೌಮಮ್ಮಣ್ಣಿಗೆ ಉಂಟಾದ ಭವಾಂತರ ರೋಗವನ್ನು ಈ ಸ್ಥಳದ ಮುನಿ ನಿವಾರಿಸಿದರಂತೆ.

ಮೈಸೂರರಸರ ಕಾಲದಲ್ಲಿ ಈ ಕ್ಷೇತ್ರ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿದಾಗ ಅದನ್ನು ಚಾಮರಾಜ ವೊಡೆಯರು ನಿವಾರಿಸಿದರಂತೆ. ಶ್ರವಣಬೆಳ್ಗೊಳದ ಮಠಾಧಿಪತಿಯ ಬಗ್ಗೆ ವಾದ - ವಿವಾದವೆದ್ದಾಗ ಚಿಕದೇವರಾಯವೊಡೆಯರು ಮಧ್ಯೆ ಪ್ರವೇಶಿಸಿ ಚಿದಾನಂದನನ್ನು ಅದರ ಅಧಿಪತಿಯನ್ನಾಗಿಸಿದರಂತೆ. ಹೀಗೆ ಶ್ರವಣಬೆಳ್ಗೊಳದ ಚರಿತ್ರೆ ಕರ್ನಾಟಕದ ಪ್ರಮುಖ ಅರಸುಮನೆತನಗಳ ಚರಿತ್ರೆಯೊಂದಿಗೆ ಹಾಸುಹೊಕ್ಕಾಗಿರುವುದನ್ನು ಕಾಣುತ್ತೇವೆ.

ಈ ಸ್ಥಳದ ಗೊಮ್ಮಟಮೂರ್ತಿ ಹಲವು ಹತ್ತು ಕವಿಗಳ ಸ್ಫೂರ್ತಿಯ ಸೆಲೆ. ಬೊಪ್ಪಣಪಂಡಿತ, ಮಧುರ, ಅನಂತಕವಿ, ಪಂಚಬಾಣ, ಸ್ಥಳಪುರಾಣದಕರ್ತೃ, ಚಂದ್ರಸಾಗರವರ್ಣಿ, ಚಿಕ್ಕಣ್ಣಪಂಡಿತ, ಪದ್ಮರಾಜಪಂಡಿತ, ಚಂದ್ರಯ್ಯ ಅಲ್ಲದೆ ಇನ್ನೂ ಹಲವು ಅನಾಮಧೇಯರು ಸೇರಿ ಸುಮಾರು ೨೫ ಜನ ಪ್ರಾಚೀನ ಕವಿಗಳು ಗೊಮ್ಮಟನ ಚರಿತ್ರೆಯೊಂದಿಗೆ ಈ ಸ್ಥಳದ ಮಹಾತ್ಮೆಯನ್ನು ಹಾಡಿ ಹೊಗಳಿದ್ದಾರೆ. ಒಂದು ಸ್ಥಳವನ್ನು ಕುರಿತು ಇಷ್ಟು ಜನ ಕಾವ್ಯರಚಿಸಿರುವುದು ಅಪರೂಪವೆಂದೇ ಹೇಳಬೇಕು. ಹೊಸಗನ್ನಡದಲ್ಲಿ ಗೊಮ್ಮಟನನ್ನು ಕುರಿತು ಬರೆಯದ ಕವಿಯೇ ಇಲ್ಲವೆಂದರೂ ತಪ್ಪಾಗದು. ಇಲ್ಲಿಯ ಮುನಿಗಳನ್ನು ಕುರಿತು ಚಿದಾನಂದ ಕವಿ, ಜ್ಞಾನ ಚಂದ್ರನನ್ನು ಕುರಿತು ಪಾಯಣವರ್ಣಿ ಕಾವ್ಯ ಬರೆದಿದ್ದಾರೆ. ಇತ್ತೀಚೆಗೆ ಈ ಸ್ಥಳದ ಪಾಯಣ್ಣ ಎಂಬುವನು ಬರೆದ ಸತ್ಯಂಧರ ಮಹಾರಾಜರ ನಾಟಕವು ದೊರೆತಿದೆ. ಇನ್ನು ಶ್ರವಣಬೆಳ್ಗೊಳದ ಪ್ರಭಾವದಿಂದ ತಮ್ಮ ವ್ಯಕ್ತಿತ್ವ ರೂಪಿಸಿಕೊಂಡವರಲ್ಲಿ ಚಾವುಂಡರಾಯ, ರನ್ನ, ನಾಗವರ್ಮ, ಅಗ್ಗಳ, ಕೋಟೇಶ್ವರ, ಸಾಳ್ವ, ಭಟ್ಟಾಕಳಂಕ ಮೊದಲಾದವರು ಪ್ರಮುಖರು.

ಶ್ರವಣಬೆಳ್ಗೊಳದಲ್ಲಿ ದೊರೆಯುವಷ್ಟು ಶಾಸನಗಳು ದೇಶದ ಇನ್ನಾವ ಭಾಗದಲ್ಲಿಯೂ ದೊರೆಯವು. ಈ ಸ್ಥಳದ ಇತಿಹಾಸವೆಂದರೆ ಕರ್ನಾಟಕ ಇತಿಹಾಸ ಎನ್ನುವಷ್ಟರ ಮಟ್ಟಿಗೆ ಈ ದಾಖಲೆಗಳು ವಿಪುಲವಾಗಿವೆ. ಆದ್ದರಿಂದ ಇದನ್ನು ಅಜಿತಪ್ರಸಾದ ಜೈನ ಅವರು ``Every inch of this place is paved with history and romance" [೧] ಎಂದೂ, Workman ಎಂಬ ಪಾಶ್ಚಾತ್ಯ ಪಂಡಿತನು ``In the whole beautiful State of Mysore it would be hard to find a Spot. where the historic and the pictures que clasp hands so firmly as here" [೨] ಎಂದೂ ಬಣ್ಣಿಸಿದ್ದಾರೆ. ಕ್ರಿ. ಶ. ಸು. ೬೦೦ ರಿಂದ ೧೯ನೆಯ ಶತಮಾನದ ವರೆಗಿನ ಇಲ್ಲಿಯ ೫೭೩ ಶಾಸನಗಳಲ್ಲಿ `ಶ್ರೀಕವಿರತ್ನಂ' ಎಂಬ ಒಂದು ಸಾಲಿನ ಶಾಸನದಿಂದ ೨೨೩ ಸಾಲಿನ ಮಲ್ಲಿಷೇಣಮುನಿಯ, ೨೨೪ಸಾಲಿನ ಮಾಚಿಕಬ್ಬೆಯ ಶಾಸನಗಳಿವೆ. ಇವುಗಳಲ್ಲಿ ಕೆಲವು ಸಾಹಿತ್ಯದ ಸೊಗಸಿನಿಂದ ಕೂಡಿದ್ದರೆ ಇನ್ನು ಕೆಲವು ಜೈನ ಸಾಹಿತ್ಯ ಚರಿತ್ರೆಯ ಸಂಪುಟದಂತಿವೆ.

ಇಲ್ಲಿಯ ಶಾಸನ ಮತ್ತು ಸಾಹಿತ್ಯ ಕೃತಿಗಳ ಆಧಾರದಿಂದ ಅಂದಿನ ಸಾಮಾಜಿಕ ಜೀವನದ ಪರಿಚಯವಾಗುತ್ತದೆ. ಅಂದಿನ ಜನರ ಜೀವನದ ಮೌಲ್ಯಗಳು, ಸ್ತ್ರೀಯರ ಸ್ಥಾನಮಾನ, ಆರ್ಥಿಕ -ಸ್ಥಿತಿಗತಿ, ಗ್ರಾಮಾಡಳಿತ ಪದ್ಧತಿ, ಯುದ್ಧನೀತಿ, ಮುನಿಗಳ ಆದರ್ಶ, ಸಮಾಧಿ-ಸಲ್ಲೇಖನ, ಧಾರ್ಮಿಕ ಚಟುವಟಿಕೆಗಳು ಇವೇ ಮೊದಲಾದವು ಇಲ್ಲಿಯ ಶಾಸನ ಮತ್ತು ಸಾಹಿತ್ಯ ಕೃತಿಗಳಲ್ಲಿ ಮಡುಗಟ್ಟಿ ನಿಂತಿವೆ.

ಕಲಾ ಪ್ರಪಂಚದಲ್ಲಿ ಶ್ರವಣಬೆಳ್ಗೊಳದ ಸ್ಥಾನ ಅತ್ಯುನ್ನತವಾದುದು. ಇಲ್ಲಿಯ ಉನ್ನತ, ಭವ್ಯ, ಸುಂದರ ಗೊಮ್ಮಟಮೂರ್ತಿ ಈ ಸ್ಥಳ ಕೊಟ್ಟಿರುವ ಅತ್ಯದ್ಭುತ ಕೊಡುಗೆಯಾಗಿದೆ. ಜೊತೆಗೆ ಇಲ್ಲಿಯ ಚಿಕ್ಕಬೆಟ್ಟ, ದೊಡ್ಡ ಬೆಟ್ಟ, ನಗರಪ್ರದೇಶ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿರುವ ಜಿನಾಲಯಗಳು, ಭವ್ಯಮಂಟಪಗಳು, ಮಾನಸ್ತಂಭಗಳು, ಕೆರೆಕಟ್ಟೆಗಳು, ಚಿತ್ರಕಲೆಗಳು ಕಲಾಪ್ರಪಂಚದ ಮಹಾಕೊಡುಗೆಗಳಾಗಿವೆ. ಇವೆಲ್ಲವುಗಳಿಂದ ಈ ಸ್ಥಳ ಸಹಜವಾಗಿಯೇ ನಾಡಿನ ಇತಿಹಾಸ ತಜ್ಞರ, ಸಂಶೋಧಕರ ಗಮನವನ್ನು ತನ್ನೆಡೆಗೆ ಸೆಳೆದುಕೊಂಡಿದೆ.

ಈ ಸ್ಥಳದ ಇತಿಹಾಸ ವಿವೇಚನೆ ಮೊಟ್ಟ ಮೊದಲು ಕಂಡು ಬರುವುದು ಇಲ್ಲಿಯ ಹಲವಾರು ಪ್ರಾಚೀನ ಕೃತಿಗಳಲ್ಲಿ . ಇವುಗಳಲ್ಲಿ ದೊಪ್ಪಣ ಪಂಡಿತ ಮೊದಲಾದವರ ಕೃತಿಗಳು

---

೧. ಜೈನ ಸಿದ್ಧಾಂತ ಭಾಸ್ಕರ ಪತ್ರಿಕೆ ೨೪.೯.

೨. Through Town and jungle ಪು.೬೦ Ref. (E.C. II. R.N.) ಪು. ೨

ಗೊಮ್ಮಟ ಸ್ತುತಿಯನ್ನು ಮಾತ್ರ ಗುರಿಯಾಗಿಟ್ಟುಕೊಂಡು ರಚನೆಯಾಗಿದ್ದರೆ, ಇನ್ನು ಕೆಲವು ಗೊಮ್ಮಟನ ಚರಿತ್ರೆಯೊಂದಿಗೆ ಈ ನಾಡಿನ ಇತಿಹಾಸವನ್ನೂ ತೆರೆದು ತೋರುತ್ತಿವೆ. ಅವುಗಳಲ್ಲಿ ಪಂಚಬಾಣಕವಿ (೧೬೧೪) ಯ `ಭುಜಬಲಿ ಚರಿತ್ರೆ' ಪ್ರಮುಖವಾದುದು. ಇದು ಭುಜಬಲಿ ಚರಿತ್ರೆಯೊಂದಿಗೆ ಚಾವುಂಡರಾಯ ಶ್ರವಣಬೆಳ್ಗೊಳದಲ್ಲಿ ಗೊಮ್ಮಟಮೂರ್ತಿ ನಿಲ್ಲಿಸಿದುದನ್ನೂ, ಮಸ್ತಕಾಭಿಷೇಕ ನೆರವೇರಿಸಿದುದನ್ನೂ, ಬೆಳ್ಗುಳವೆಂಬ ಪುರವನ್ನು ನಿರ್ಮಿಸಿ ಅನೇಕ ಗ್ರಾಮಗಳನ್ನು ದಾನವಾಗಿ ಇತ್ತುದನ್ನೂ ಒಳ್ಳೆಯ ಶ್ರದ್ಧೆಯಿಂದ ಬಣ್ಣಿಸುತ್ತಿದೆ. ಅಲ್ಲದೆ ತನ್ನ ಕಾಲದಲ್ಲಿ ನೆರವೇರಿದ ಒಂದು ಮಸ್ತಕಾಭಿಷೇಕವನ್ನೂ ಹೇಳಿದೆ. ಇವೆಲ್ಲವುಗಳಿಂದ ಈ ಕೃತಿ ಅಂದಿನ ಎಲ್ಲ ಐತಿಹಾಸಿಕ ಘಟನೆಗಳಿಗೆ ಒಳ್ಳೆಯ ದಾಖಲೆಯಾಗಿ ನಿಲ್ಲುತ್ತದೆ.

ಈ ಕ್ಷೇತ್ರದ 'ಸ್ಥಳಪುರಾಣ'ವು ಜೈನ ಕ್ಷತ್ರಿಯ ಪಾಂಡುಕುಲದವನಾದ ಚಾವುಂಡರಾಯನು ದಕ್ಷಿಣ ಮಧುರೆಯನ್ನಾಳುತ್ತಿದ್ದನು ಎಂದಿದೆ. ಅವನು ತನ್ನ ತಾಯಿಯ ಇಚ್ಛೆಯ ಮೇರೆಗೆ ಪೌದನಪುರದ ಗೊಮ್ಮಟನನ್ನು ನೋಡಲು ಹೊರಟು, ಹಾದಿಮಧ್ಯದ ಶ್ರವಣಬೆಳ್ಗೊಳದಲ್ಲಿ ತಂಗಿ, ಗೊಮ್ಮಟನ ದರ್ಶನ ಪಡೆದು, ಮಸ್ತಕಾಭಿಷೇಕ ನೆರವೇರಿಸಿ ದಾನವಿತ್ತುದನ್ನು ಹೇಳಿದೆ. ಮುಂದೆ ಪ್ರಜಾಪತಿ ಪಾಂಡುರಾಯ, ಬೆಟ್ಟವರ್ಧನ, ವಿಜಯ ನಗರದರಸು, ಮೈಸೂರೊಡೆಯರು ಈ ಸ್ಥಳದೊಂದಿಗೆ ಹೊಂದಿದ್ದ ಸಂಬಂಧವನ್ನು ವಿವರಿಸಿದೆ. ಅದೇ ರೀತಿ ಅನಂತಕವಿ ತನ್ನ `ಗೊಮ್ಮಟೇಶ್ವರ ಚರಿತ್ರೆ' ಯನ್ನು ಚಾವುಂಡರಾಯನ ಪ್ರಸಂಗದೊಂದಿಗೆ ಮೊದಲು ಮಾಡಿ, ಭರತ ಬಾಹುಬಲಿಯರ ಕಥೆಯನ್ನೂ, ಚಾವುಂಡರಾಯನಿಗಾದ ಗೊಮ್ಮಟನ ದರ್ಶನವನ್ನೂ, ಅವನು ಮಸ್ತಕಾಭಿಷೇಕ ನೆರವೇರಿಸಿ ಶ್ರವಣಬೆಳ್ಗೊಳದಲ್ಲಿ ಕಟ್ಟಿಸಿದ ಕಟ್ಟಡಗಳನ್ನೂ ವಿವರವಾಗಿ ಬಣ್ಣಿಸಿದ್ದಾನೆ. ಮುಂದುವರಿದು ಜೈನ ಋಷಿಮೂಲವನ್ನೂ, ಅಡಗೂರಿನ ಬಳಿ ಭೂಮಿ ಬಾಯಿ ಬಿಟ್ಟ ಪ್ರಸಂಗವನ್ನೂ, ಶಾಂತವರ್ಣಿ ವಿಶಾಲಾಕ್ಷಪಂಡಿತ ಅಣ್ಣಯ್ಯ-ಪುಟ್ಟಯ್ಯರ ಚರಿತ್ರೆಯನ್ನೂ, ಅವರು ನೆರವೇರಿಸಿದ ಮಸ್ತಕಾಭಿಷೇಕಗಳನ್ನೂ, ಶ್ರವಣಬೆಳ್ಗೊಳದ ಗುರುಪರಂಪರೆಯನ್ನೂ, ಶ್ವೇತಾಂಬರಿ ಹೇಮಾಚಾರ್ಯನ ಪ್ರಸಂಗವನ್ನೂ, ಪಾಂಡುವಂಶ ಹೊಯ್ಸಳವಂಶಗಳಲ್ಲಿ ನಡೆದ ಘಟನೆಗಳನ್ನೂ, ಡಿಳ್ಳೀಶ ದೇವರಾಜೇಂದ್ರರ ನಡುವೆ ನಡೆದ ಹೋರಾಟವನ್ನೂ ವಿಸ್ತಾರವಾಗಿ ಬಣ್ಣಿಸಿದ್ದಾನೆ. ಮುಖ್ಯವಾಗಿ ಅಂದಿನ ಜನಜೀವನವು ಈ ಕೃತಿಯಲ್ಲಿ ಸೊಗಸಾಗಿ ಮೂಡಿ ಬಂದಿದೆ. ಈ ಘಟನೆಗಳಲ್ಲಿ ಕೆಲವನ್ನು ದೇವಚಂದ್ರ ತನ್ನ ರಾಜಾವಳಿಕಥೆಯಲ್ಲಿಯೂ ಹೇಳಿದ್ದಾನೆ.

ಈ ನಾಡಿನ ಇತಿಹಾಸವನ್ನು ಹೇಳುವಲ್ಲಿ ಬಹುಮುಖ್ಯ ಪಾತ್ರವಹಿಸಿದ ಕೃತಿ ಚಿದಾನಂದ ಕವಿ (ಸು. ೧೬೮೦) ಯ ಮುನಿವಂಶಾಭ್ಯುದಯ. ಸಾಂಗತ್ಯದಲ್ಲಿ ರಚನೆಗೊಂಡ

ಈ ಕೃತಿ ಪ್ರಾರಂಭದಲ್ಲಿ ಚಿಕದೇವನೃಪನಿಗೂ ಕವಿಯ ವಂಶದ ಮುನೀಶ್ವರರಿಗೂ ಮಿತ್ರತ್ವವುಂಟಾದ ನಂಬಿಕೆಯನ್ನು ಹೇಳಿದೆ. ಮೊದಲ ಎರಡು ಸಂಧಿಯಲ್ಲಿ ಚಿಕದೇವರಾಯನ ವಂಶಾವಳಿಯಿದ್ದು ಇದರಿಂದ ಮೈಸೂರು ಅರಸರ ಚರಿತ್ರೆ ತಿಳಿಯಲು ಸಹಾಯವಾಗುತ್ತದೆ. ಮುಂದಿನ ಮೂರು ಸಂಧಿಯಲ್ಲಿ ಶ್ರವಣಬೆಳ್ಗೊಳದ ಮುನಿವಂಶಾವಳಿಯನ್ನು ಹೇಳಿದ್ದಾನೆ. ಚಿದಾನಂದ ಕವಿ ಶ್ರವಣಬೆಳ್ಗೊಳದ ಮುನಿ ಸಮುದಾಯದಲ್ಲಿ ಒಬ್ಬನಾದ್ದರಿಂದ ಇವನ ಈ ಕೃತಿಗೆ ಹೆಚ್ಚಿನ ಬೆಲೆಯಿದೆ. ಆದರೆ ಇದು ಈ ವರೆಗೆ ಸಮಗ್ರವಾಗಿ ದೊರೆತಿಲ್ಲ. ಇವನ ಇನ್ನೊಂದು ಕೃತಿ `ನೀತಿ ನಿರ್ಣಯ'ದಲ್ಲಿಯೂ ಶ್ರವಣಬೆಳ್ಗೊಳದ ಮುನಿವಂಶಾವಳಿ, ಮೈಸೂರರಸರ ಇತಿಹಾಸ, ಎಳಂದೂರ ಬೊಮ್ಮರಸನು ನೆರವೇರಿಸಿದ ಮಸ್ತಕಾಭಿಷೇಕ ಮೊದಲಾದವು ವರ್ಣಿತವಾಗಿವೆ. ಅದೇ ರೀತಿ ಚಿಕ್ಕಣ್ಣ ಪಂಡಿತ (ಬಾಹುಬಲಿಚರಿತೆ, ೧೬ನೆಯ ಶ.) ಪದ್ಮರಾಜಪಂಡಿತ (ಭುಜಬಲಿ ಕಥಾ, ೧೮೮೯), ಪದ್ಮರಸ (ಭುಜಬಲಿಚರಿತೆ ೧೬೧೪) ಅನಾಮಧೇಯ (ಶಾಂತವರ್ಣಿಚರಿತೆ) ಮೊದಲಾದ ಸು. ೨೫ಜನ ಪ್ರಾಚೀನ ಕವಿಗಳು ಈ ಸ್ಥಳವನ್ನು ಕುರಿತು ಕೃತಿ ರಚಿಸಿದ್ದಾರೆ.

ಹಲವು ಬಿಡಿ ಹಾಡುಗಳೂ ದೊರೆಯುತ್ತಿದ್ದು ಅವುಗಳಲ್ಲಿ ಕೆಲವು ಶ್ರವಣಬೆಳ್ಗೊಳದ ಶ್ರೀಗಳವರನ್ನು ಬಣ್ಣಿಸುತ್ತಿವೆ. ಇಲ್ಲಿ ಅಡಗೂರ ಬಳಿ ಭೂಮಿ ಬಾಯಿ ಬಿಟ್ಟ ಪ್ರಸಂಗ. ಬಲ್ಲಾಳರಾಯನ ಜೀವ ಉಳಿಸಿದ ಪ್ರಸಂಗ ಮೊದಲಾದವು ಉಲ್ಲೇಖವಾಗಿವೆ.

ಆಧುನಿಕರಲ್ಲಿ ಹಲವರು ಈ ಕ್ಷೇತ್ರದ ಶಾಸನ-ಸ್ಥಳಗಳನ್ನು ಶೋಧಿಸುವ ಮೂಲಕ, ಚರಿತ್ರೆ-ಸಂಸ್ಕೃತಿ-ಶಿಲ್ಪಗಳನ್ನು ವಿಶ್ಲೇಷಿಸುವ ಮೂಲಕ ಅಮೋಘ ಸೇವೆಯನ್ನು ಸಲ್ಲಿಸಿದ್ದಾರೆ. ಅದರ ವಿವರವನ್ನೀಗ ನೋಡಬಹುದು.

ಶ್ರವಣಬೆಳ್ಗೊಳ ಶಾಸನ ಶೋಧದ ಕಾರ್ಯ ಪ್ರಪ್ರಥಮವಾಗಿ ಪ್ರಾರಂಭವಾದುದು ಕವೆಲ್ಲಿ ಬೋರಯ್ಯನಿಂದ. ಇವನು ೧೮೦೯ರಲ್ಲಿ ಬೆಳ್ಗೊಳದ ಗೊಮ್ಮಟ ವಿಗ್ರಹದ ಎದುರಿಗಿರುವ ಬುಕ್ಕರಾಯನ ಶಾಸನವನ್ನು ಏಷಿಯಾಟಿಕ್ ರಿಸರ್ಚಸ್ ಪತ್ರಿಕೆಯಲ್ಲಿ ಪ್ರಕಟಿಸಿ ಇಲ್ಲಿಯ ಶಾಸನಗಳ ಶೋಧನೆಗೆ ನಾಂದಿ ಹಾಡಿದನು. ೧೮೮೯ರಲ್ಲಿ ಬಿ. ಎಲ್. ರೈಸ್ ಅವರು ಇಲ್ಲಿಯ ೧೪೪ ಶಾಸನಗಳನ್ನು ಶೋಧಿಸಿ ಎಪಿಗ್ರಾಫಿಯಾ ಕರ್ನಾಟಕ ಎರಡನೆಯ ಸಂಪುಟವನ್ನು ಪ್ರಕಟಿಸಿದರು. ಪ್ರಸ್ತಾವನೆಯ ರೂಪದಲ್ಲಿ ದೊರೆತ ಶಾಸನಗಳನ್ನವಲಂಬಿಸಿ ಆ ಸ್ಥಳದ ಚರಿತ್ರೆಯನ್ನು ಕಟ್ಟಿಕೊಡಲು ಪ್ರಯತ್ನಿಸಿದರು. ಈ ಕಾರ್ಯವನ್ನು ಮುಂದುವರಿಸಿ ಆರ್. ನರಸಿಂಹಾಚಾರ್ ಅವರು ಈ ಕ್ಷೇತ್ರಕ್ಕೆ ಸಂಬಂಧಿಸಿದ ಒಟ್ಟು ೫೦೦ ಶಾಸನಗಳನ್ನು ಎಪಿಗ್ರಾಫಿಯಾ ಕರ್ನಾಟಕದ ಪರಿಷ್ಕೃತ ಆವೃತ್ತಿಯಲ್ಲಿ ಪ್ರಕಟಿಸಿದರು. ಇದರಲ್ಲಿ ಮೊದಲನೆಯ

ಆವೃತ್ತಿಯಲ್ಲಿಯ ೭೬ನೆಯ ಶಾಸನ -೧೭೫, ೧೭೬ ಮತ್ತು ೧೭೭ನೆಯ ಶಾಸನಗಳಾಗಿ ೧೩೭ನೆಯ ಶಾಸನ ೩೪೫, ೩೪೬ ಮತ್ತು ೩೪೭ನೆಯ ಶಾಸನಗಳಾಗಿ, ೭೫ನೆಯ ಶಾಸನ ೧೭೯ ಮತ್ತು ೧೮೦ನೆಯ ಶಾಸನಗಳಾಗಿ ಪ್ರಕಟವಾಗಿವೆ. ಅದರಂತೆಯೇ ೧೭ ಮತ್ತು ೧೮ನೆಯ ಶಾಸನ ಸೇರಿ ೩೧ನೆಯ ಶಾಸನವಾಗಿ ಪ್ರಕಟವಾಗಿವೆ. ಈ ಸಂಕಲನ ವ್ಯವಕಲನದ ಪರಿಣಾಮವಾಗಿ ಮೊದಲನೆಯ ಆವೃತ್ತಿಯಲ್ಲಿದ್ದ ೧೪೪ ಶಾಸನ ೧೪೮ ಆಗಿವೆ. ಇವುಗಳಿಗೆ ಹೊಸದಾಗಿ ೩೫೨ ಶಾಸನಗಳನ್ನು ಸೇರಿಸಿ ಎರಡನೆಯ ಆವೃತ್ತಿಯಲ್ಲಿ ಒಟ್ಟು ೫೦೦[೧] * ಶಾಸನ ಸಿಗುತ್ತವೆ.

ಆರ್. ನರಸಿಂಹಾಚಾರ್ ಅವರು ಎಪಿಗ್ರಾಫಿಯಾ ಕರ್ನಾಟಕಕ್ಕೆ ಬರೆದ ೯೦ ಪುಟದ ಸುದೀರ್ಘ ಮುನ್ನುಡಿ ಶ್ರವಣಬೆಳ್ಗೊಳದ ಚರಿತ್ರೆಗೆ ಸಂಬಂಧಿಸಿದ ಮೊದಲ ಪ್ರೌಢ ಪ್ರಬಂಧ. ಅದನ್ನು ಅವರು ರೈಸ್ ಅವರ ಮುನ್ನುಡಿಯನ್ನವಲಂಬಿಸಿಯೇ ರಚಿಸಿರುವುದಾಗಿ `` The introduction is partly based on that of the previous edition and on some notes kindly furnished by Mr. Rice in 1909" ಎಂದು ಹೇಳಿ, ತಮ್ಮ ಸಂಪುಟದ ವೈಶಿಷ್ಟ್ಯವನ್ನು ಈ ರೀತಿ ಗುರುತಿಸಿದ್ದಾರೆ`` The first dealing with the architecture and sculputure and the second with the inscriptions. Many details are given about the colossal statue of Gommateshwara and the tradition about Bhadrabahus visit to Sravanabelgola is fully discussed"[೨] ಇಲ್ಲಿಯ ಪ್ರಸ್ತಾವನೆ ಶ್ರವಣಬೆಳ್ಗೊಳದ ಹೆಸರು, ಚಿಕ್ಕಬೆಟ್ಟ, ದೊಡ್ಡಬೆಟ್ಟ ಶ್ರವಣಬೆಳ್ಗೊಳ ಮತ್ತು ಅದಕ್ಕೆ ಸಂಬಂಧಿಸಿದ ಹಳ್ಳಿಗಳ ಜಿನಾಲಯಗಳ ಸವಿಸ್ತಾರವಾದ ವಿವರಣೆ ಯನ್ನೊಳಗೊಂಡಿದೆ. ಶಾಸನಗಳು ಎಂಬ ಭಾಗದಲ್ಲಿ ಭದ್ರಬಾಹು ಚಂದ್ರಗುಪ್ತರು ಶ್ರವಣಬೆಳ್ಗೊಳಕ್ಕೆ ಬಂದುದನ್ನು ಬೃಹತ್ಕಥಾಕೋಶ, ಭದ್ರಬಾಹುಚರಿತೆ, ಮುನಿವಂಶಾಭ್ಯುದಯ ಮೊದಲಾದ ಕೃತಿಗಳು, ಶಾಸನಗಳು, ಪಾಶ್ಚಾತ್ಯ ಪಂಡಿತರ ಅಭಿಪ್ರಾಯಗಳು ಈ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಈ ಶಾಸನಗಳು ಉಲ್ಲೇಖಿಸುವ ಗಂಗ, ಹೊಯ್ಸಳ ಮೊದಲಾದ ಅರಸು ಮನೆತನಗಳ ಸುದೀರ್ಘವಾದ ವಿವೇಚನೆ ಇಲ್ಲಿದೆ. ನಿಶಧಿ ಶಾಸನಗಳನ್ನು ಪ್ರತ್ಯೇಕವಾಗಿ ವಿವರಿಸಲಾಗಿದೆ. ಅಲ್ಲದೆ ಶ್ರವಣಬೆಳ್ಗೊಳಕ್ಕೆ ಬಂದ ಯಾತ್ರಾರ್ಥಿಗಳು, ವ್ಯಕ್ತಿಗಳಿಂದ ಕೊಡಲ್ಪಟ್ಟ ದಾನ ದತ್ತಿಗಳು, ಜೈನ ಮುನಿವಂಶಾವಳಿ ಮೊದಲಾದವುಗಳ ಸವಿಸ್ತಾರವಾದ ವಿಶ್ಲೇಷಣೆಯಿದೆ.

---

೧. E.C. II (ಮೈ. ವಿ. ವಿ. ಆವೃತ್ತಿ) ಪೀಠಿಕೆ xxxix

೨. E.C.ii (ಆರ್. ನ. ಆವೃತ್ತಿ) Preface to the revised Edition ii.

೧೯೪೧ರ ಸುಮಾರಿಗೆ ಡಾ. ಸಾಂಕಲಿಯಾ ಅವರು `` Jaina monuments from Deogarh" ಎಂಬ ತಮ್ಮೊಂದು ಲೇಖನದಲ್ಲಿ ಶ್ರವಣಬೆಳ್ಗೊಳದ ಜಿನಾಲಯಗಳ ಅಭ್ಯಾಸದ ಅಗತ್ಯತೆಯನ್ನು ಕುರಿತು ಹೇಳಿದ್ದರು. (JISOA IX. p. 102) ಅಲ್ಲದೆ "ಈ ಕಾಲಾವಧಿಯಲ್ಲಿ ಕರ್ನಾಟಕದ ಕೆಲವು ವಿದ್ವಾಂಸರು ಬೆಳ್ಗೊಳಕ್ಷೇತ್ರ, ಅದರ ಹೆಸರು, ಗೊಮ್ಮಟಪದ ಹಾಗೂ ಮೂರ್ತಿಯ ಬಗ್ಗೆ ಅತ್ಯಂತ ಆಸಕ್ತಿಯಿಂದ ಚರ್ಚೆ ಮಾಡುತ್ತಿದ್ದರು. ಆದರೆ ಇಲ್ಲಿಯ ದೇವಾಲಯಗಳ ಬಗ್ಗೆ ಅವರಾರೂ ಆಸಕ್ತರಾಗಿರಲಿಲ್ಲ. ಶಾಸನ ಶಾಸ್ತ್ರ, ಕನ್ನಡ ಸಾಹಿತ್ಯ ಹಾಗೂ ವೈಷ್ಣವ ಧರ್ಮದಲ್ಲಿ ಅಗಾಧ ಪಾಂಡಿತ್ಯವನ್ನು ಗಳಿಸಿದ ನರಸಿಂಹಾಚಾರ್ಯರಿಗೆ ಜಿನವಿಗ್ರಹ ಹಾಗೂ ಚೈತ್ಯಾಲಯಗಳ ಅಭ್ಯಾಸದ ಬಗ್ಗೆ ಹೆಚ್ಚಿನ ಒಲವು ತೋರಲು ಸಾಧ್ಯವಾಗಲಿಲ್ಲ. ಅವರ ಕಾಲದಲ್ಲಿ ಜೈನ ಕಲೆಯ ಬಗ್ಗೆ ಹೆಚ್ಚಿನ ವಿವರಗಳೂ, ಗ್ರಂಥಗಳೂ ಪ್ರಕಟಗೊಂಡಿರಲಿಲ್ಲ. ಕಾರಣ ಅವರು ಎಪಿಗ್ರಾಫಿಯಾ ಕರ್ನಾಟಕದಲ್ಲಿ ಕೊಟ್ಟ ವಿವರಗಳೆಲ್ಲ ಸರಿಯಾಗಿರುವವೆಂದು ಹೇಳಲು ಸಾಧ್ಯವಿಲ್ಲ. ಅವರು ಮೂರ್ತಿಗಳ ಲಕ್ಷಣಗಳನ್ನು ಅದರಲ್ಲೂ ಯಕ್ಷ ಯಕ್ಷಿಯರ ಮೂರ್ತಿಗಳನ್ನು ಗುರುತಿಸುವಲ್ಲಿ, ಹಲವು ಶಾಸನಗಳ ಕಾಲವನ್ನು ನಿರ್ಧರಿಸುವಲ್ಲಿ (ಪ್ರಮುಖವಾಗಿ ಚಾವುಂಡರಾಯ ಬಸದಿಯ ಹೊರಮೈಯಲ್ಲಿರುವ ಶಾಸನ ಹಾಗೂ ಗೊಮ್ಮಟವಿಗ್ರಹದ ಹುತ್ತದ ಮೇಲೆ ಕೊರೆದಿರುವ ಶಾಸನಗಳೂ, ಶಾಸನಗಳು ಹಲವು ದೇವಾಲಯಗಳಿಗೂ ಶಾಸನಗಳಿಗೆ ಸಂಬಂಧ (ಶಿವಮಾರನ ಬಸದಿಯೆಂಬ ಶಾಸನದಿಂದ ಚಂದ್ರಪ್ರಭ ಬಸ್ತಿಯನ್ನು ಗುರುತಿಸಿದುದು) ಕಲ್ಪಿಸುವಲ್ಲಿ, ಹಲವು ಶಾಸನಗಳಿಗೂ ವಿಗ್ರಹಗಳಿಗೂ (ಸುತ್ತಾಲಯ ವಿಗ್ರಹ) ತಾಳೆ ಹಾಕುವಲ್ಲಿ ತೊಂದರೆಗೊಳಗಾಗಿದ್ದರೆಂಬುದು ಕಂಡುಬರುವುದು"[೧] ಈ ಹಿನ್ನೆಲೆಯಲ್ಲಿ ಶ್ರವಣಬೆಳ್ಗೊಳದ ವಾಸ್ತುಶಿಲ್ಪದ ಅಧ್ಯಯನವನ್ನು ಕೈಗೊಂಡು "ಜೈನರಿಗೆ ಪ್ರತ್ಯೇಕವಾದ ವಾಸ್ತುವಿಲ್ಲ. ಆದರೆ ಅದಕ್ಕೆ ಬ್ರಹ್ಮಸ್ತಂಭ, ಮಾನಸ್ತಂಭದಂತಹ ಕೆಲವು ವಿಶೇಷತೆಗಳಿವೆ" ಎಂಬ ನಿರ್ಧಾರಕ್ಕೆ ಎಸ್. ಶೆಟ್ಟರ್ ಅವರು ಬಂದುದರ ಫಲವೇ ಅವರ ``ಶ್ರವಣಬೆಳ್ಗೊಳ ಮಾನುಮೆಂಟ್ಸ" ಎಂಬ ಮಹಾಪ್ರಬಂಧ. ಚಾವುಂಡರಾಯನ ಬಸ್ತಿ, ಜಿನನಾಥಪುರ ದೇವಾಲಯ ಈ ಕೆಲವನ್ನು ಬಿಟ್ಟರೆ ಉಳಿದ ಎಲ್ಲ ಜಿನಾಲಯಗಳು ಸರಳವಾಗಿರಲು ಕಾರಣವೇನು ಎಂಬುದನ್ನು ಅವರು ಅಲ್ಲಿ ಚರ್ಚಿಸಿದ್ದಾರೆ. ಅಲ್ಲದೆ ಜೈನ ಯಕ್ಷ ಯಕ್ಷಿಯರ ಗುಣ ಲಕ್ಷಣಗಳನ್ನೂ ಸವಿಸ್ತಾರವಾಗಿ ವಿವೇಚಿಸಿದ್ದಾರೆ. ತಮಗೆ ದೊರೆತ ೩೬ ಹೊಸ ಶಾಸನಗಳ ಆಧಾರದ ಮೇಲೆ ಹಲವಾರು ಜಿನಾಲಯಗಳ ಕಾಲ ಮೊದಲಾದವನ್ನು ಖಚಿತವಾಗಿ ಗುರುತಿಸಿದ್ದಾರೆ.

---

೧ ಷ. ಶೆಟ್ಟರ್: ಶ್ರವಣಬೆಳ್ಗೊಳ ಪು. ೪ -೫

ರೈಸ್, ನರಸಿಂಹಾಚಾರ್, ಶೆಟ್ಟರ್ ಅವರ ಶಾಸನ ಸಂಗ್ರಹಕ್ಕೆ ತಾವು ಶೋಧಿಸಿದ ಕೆಲವು ಶಾಸನಗಳನ್ನು ಸೇರಿಸಿ ಮೈಸೂರು ವಿಶ್ವವಿದ್ಯಾಲಯದವರು ೧೯೭೩ರಲ್ಲಿ ೫೭೩ ಶಾಸನಗಳುಳ್ಳ ಎಪಿಗ್ರಾಫಿಯಾ ಕರ್ನಾಟಕದ ಪರಿಷ್ಕೃತ ಆವೃತ್ತಿಯನ್ನು ಹೊರತಂದಿದ್ದಾರೆ. ಇದರಲ್ಲಿ ಆರ್. ನರಸಿಂಹಾಚಾರ್ ಸಂಪುಟದ ನಾಲ್ಕು ಶಾಸನಗಳನ್ನು ಕೈಬಿಟ್ಟಿದೆ. ಜೊತೆಗೆ ಶ್ರವಣಬೆಳ್ಗೊಳದ ಸಮೀಪದ ಗ್ರಾಮಗಳಲ್ಲಿದ್ದು, ಎಪಿಗ್ರಾಫಿಯಾ ಕರ್ನಾಟಕದ ೫ನೆಯ ಸಂಪುಟದಲ್ಲಿ ಪ್ರಕಟವಾಗಿರುವ ಏಳು, ೧೫ನೆಯ ಸಂಪುಟದಲ್ಲಿ ಪ್ರಕಟವಾಗಿರುವ ಒಂದು ಮತ್ತು ಪುರಾತತ್ವ ಇಲಾಖೆಯ ೧೯೨೭ನೆಯ ವಾರ್ಷಿಕ ವರದಿಯಲ್ಲಿ ಸೇರಿರುವ ಒಂದು ಹೀಗೆ ಬೇರೆಡೆ ಪ್ರಕಟವಾಗಿರುವ ಒಂಭತ್ತು ಶಾಸನಗಳು, ಮತ್ತು ಪರಿವೀಕ್ಷಣಾ ಪ್ರವಾಸದ ಕಾಲದಲ್ಲಿ ದೊರೆತ ೬೭ ಹೊಸ ಶಾಸನಗಳೂ ಈ ಮುದ್ರಣದಲ್ಲಿ ಸೇರಿವೆ. ಈ ಹೊಸ ಶಾಸನಗಳಲ್ಲಿ ಸು. ೩೦ ಶಾಸನಗಳಿರುವ ಸ್ಥಳಗಳನ್ನು ಗುರುತಿಸುವಲ್ಲಿ ಡಾ. ಎಸ್. ಶೆಟ್ಟರ್ ಅವರು ಅಪ್ರಕಟಿತ ಪ್ರೌಢ ಪ್ರಬಂಧದಿಂದ ನೆರವು ಪಡೆದಿದೆ ಮತ್ತು ಈ ಎಲ್ಲ ಶಾಸನಗಳನ್ನೂ ಮೂಲದಲ್ಲಿಯೇ ಓದಿ ಪ್ರತಿಮಾಡಿಕೊಂಡಿದೆ.[1] ಹೀಗೆ ಬೇರೆ ಬೇರೆ ಸಂಪುಟಗಳಲ್ಲಿ ಚೆದುರಿ ಹೋಗಿದ್ದ ಶ್ರವಣ ಬೆಳ್ಗೊಳದ, ಸುತ್ತಮುತ್ತಲ ಹಳ್ಳಿಗಳ ಶಾಸನಗಳನ್ನು ಸೇರಿಸಿ ಈ ಸಂಪುಟಕ್ಕೆ ಹೊಸದೊಂದು ರೂಪಕೊಡಲಾಗಿದೆ.

ಇದರ ಸಂಪಾದಕರು, ಆರ್. ನರಸಿಂಹಾಚಾರ್ ಅವರು ಬರೆದ ರಾಜಕೀಯ ಇತಿಹಾಸಕ್ಕೆ ಸಂಬಂಧಿಸಿದ ವಿವರಗಳನ್ನು ಮಾತ್ರ ಉಳಿಸಿಕೊಂಡಿದ್ದಾರೆ. ಅಲ್ಲಿಯ ಜಿನಾಲಯ, ಮುನಿವಂಶಾವಳಿ ಮೊದಲಾದವನ್ನು ಕುರಿತ ಬಹುಮಹತ್ವದ ವಿವರಗಳನ್ನು ಇಲ್ಲಿ ಕೈಬಿಟ್ಟಿದ್ದಾರೆ. ಶಾಸನಗಳ ಛಂದಸ್ಸಿಗೆ ಸಂಬಂಧಿಸಿದ ಭಾಗವನ್ನು ಹೆಚ್ಚಿಗೆ ಸೇರಿಸಿದ್ದಾರೆ. ಜೊತೆಗೆ ಅನಿರ್ದಿಷ್ಟ ವಿಷಯಗಳು ಎಂಬ ಭಾಗದಲ್ಲಿ ಕೆಲವೊಂದು ಹೊಸ ಅರಸರ, ಶ್ರವಣಬೆಳ್ಗೊಳದ ಜೈನ ಯತಿಗಳು ತಮಿಳುನಾಡಿನ ಕೀಟ್ಟಿಯಿಲ್ಕುಡಿಯೊಂದಿಗೆ ಹೊಂದಿದ್ದ ಸಂಬಂಧದ ವಿಚಾರ ಮಾಡಿದ್ದಾರೆ. ಪ್ರಾರಂಭದಲ್ಲಿ ಕಟ್ಟಪ್ಪು, ಕಟವಪ್ರ ಶಬ್ದಗಳ ಸ್ಪಷ್ಟ ಅರ್ಥ ವಿವರಣೆಯಿದೆ.

ಈ ತರುವಾಯ ಈ ಕ್ಷೇತ್ರದ ಮೂರು ನಾಲ್ಕು ಶಾಸನಗಳು ಮಾತ್ರ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ಬಿಟ್ಟರೆ ವಿಶೇಷವಾದ ಕೆಲಸವೇನೂ ಆಗಿಲ್ಲ. ೧೯೮೨ರಲ್ಲಿ ಬಿ. ವಿ. ಕೃಷ್ಣಮೂರ್ತಿ ಅವರು ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ (೬೭. ೨) ಪ್ರಕಟಿಸಿದ ಚೈಂಗಾಳ್ವ ನಂಜುಂಡೊಡೆಯನ ಶಾಸನ, ೧೯೬೪ರಲ್ಲಿ ಶ್ರೀಮತಿ ಕೋ. ವಸಂತಲಕ್ಷ್ಮಿ ಅವರು ಇತಿಹಾಸದ ದರ್ಶನ (ಸಂ. ೯. ಪು. ೨೧) ರಲ್ಲಿ ಪ್ರಕಟಿಸಿದ ಶ್ರವಣಬೆಳ್ಗೊಳದ ಮತ್ತು

---

೧. ಎಂ. ಚಿದಾನಂದಮೂರ್ತಿ: ಸಾಹಿತ್ಯ ವಾರ್ಷಿಕ ೧೯೭೬ ಪು. ೧೭೪

ಸಮೀಪದ ಗ್ರಾಮಗಳ ಅಪ್ರಕಟಿತ ಶಾಸನಗಳು, ಜಿ. ಬ್ರಹ್ಮಪ್ಪ ಅವರು ಜೀವನ ಪತ್ರಿಕೆಯಲ್ಲಿ ಪ್ರಕಟಿಸಿದ ಹೊಸಳ್ಳಿ ಕೆರೆಯ ಶಾಸನ, `ದಿವ್ಯ ಧ್ವನಿ' ಯಲ್ಲಿ ಉಲ್ಲೇಖಿಗೊಂಡ ಸಾತನಹಳ್ಳಿ ಹೋಬಳಿ ಗೌತಮ ಕ್ಷೇತ್ರದ ಶಾಸನ (ಪು. ೩೬೨) ಮೊದಲಾದವು ಪ್ರಮುಖವಾದವು. ಆದರೆ ಈ ಕೆಲಸ ಅಷ್ಟು ತೃಪ್ತಿಕರವಾದುದು ಎಂದೆನಿಸದು.

ಶ್ರವಣಬೆಳ್ಗೊಳವನ್ನು ಸಮಗ್ರವಾಗಿ ರಾಜಕೀಯ, ಸಾಹಿತ್ಯಿಕ, ಸಾಂಸ್ಕೃತಿಕ ದೃಷ್ಟಿಯಿಂದ ನೋಡಿದ ಮೊತ್ತ ಮೊದಲ ಕೃತಿ ಡಾ. ಬಿ. ವ್ಹಿ. ಶಿರೂರ ಅವರ ಮಹಾಪ್ರಬಂಧ "ಒಂದು ಸಾಂಸ್ಕೃತಿಕ ಕೇಂದ್ರವನ್ನು ಮೂಲವಸ್ತುವಾಗಿಟ್ಟಕೊಂಡು ಆಗಿರುವ ಕೆಲಸಗಳಲ್ಲಿ ಇದೇ ಮೊದಲನೆಯದು ಮತ್ತು ಇದೊಂದು ಯಶಸ್ವೀ ಪ್ರಯತ್ನವೂ ಕೂಡ" ಎಂಬ ಪ್ರಶಂಸೆಗೆ ಪಾತ್ರವಾಗಿರುವ ಈ ಕೃತಿಯಲ್ಲಿ ಶ್ರವಣಬೆಳ್ಗೊಳ ಬೇರೆ ಬೇರೆ ಅರಸರ ಕಾಲದಲ್ಲಿ ಹೇಗೆ ಚೈತನ್ಯಸ್ವರೂಪಿಯಾಗಿದ್ದಿತು, ಬೇರೆ ಬೇರೆ ಕವಿಗಳಿಗೆ ಹೇಗೆ ಸ್ಫೂರ್ತಿಯನ್ನಿತ್ತಿತು ಎಂಬುದನ್ನು ಸಾಧಾರವಾಗಿ ವಿವರಿಸಲಾಗಿದೆ. ಸಾಹಿತ್ಯಿಕ ವಿಭಾಗವನ್ನು ಶ್ರವಣಬೆಳ್ಗೊಳದ ಕವಿ ಸಾಹಿತ್ಯ ಶ್ರವಣಬೆಳ್ಗೊಳದ ಪ್ರಭಾವಲಯದಲ್ಲಿ ಬೆಳಗಿದ ಕವಿ ಸಾಹಿತ್ಯ, ಶ್ರವಣಬೆಳ್ಗೊಳದ ಶಾಸನ ಸಾಹಿತ್ಯ, ಶ್ರವಣಬೆಳ್ಗೊಳದ ಶಾಸನೋಕ್ತ ಕವಿ ಸಾಹಿತ್ಯ ಎಂದು ವಿಭಜಿಸಿ ಈವರೆಗೆ ಕತ್ತಲೆಯಲ್ಲಿದ್ದ ಹಲವಾರು ಕವಿ ಕೃತಿಗಳ ಮೇಲೆ ಬೆಳಕು ಚೆಲ್ಲಲಾಗಿದೆ. ಕೊನೆಯ ಸಾಂಸ್ಕೃತಿಕ ವಿಭಾಗದಲ್ಲಿ ಇಲ್ಲಿಯ ಶಾಸನ, ಸಾಹಿತ್ಯಕೃತಿಗಳಲ್ಲಿ ಮಡುಗಟ್ಟಿ ನಿಂತಿರುವ ಅಂದಿನ ಜನಜೀವನದ ಎಳೆ, ಎಳೆಗಳನ್ನು ಬಿಡಿಸಿ ತೋರಲಾಗಿದೆ. ಹೀಗೆ ``ಶ್ರವಣಬೆಳ್ಗೊಳದ ಮಹತ್ವವನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ನೋಡಿ ಹಿಡಿದಿಟ್ಟಿರುವ ಈ ಕೃತಿ ಇಂತಹ ಅಧ್ಯಯನಗಳಿಗೆ ಮಾರ್ಗದರ್ಶನವನ್ನು ಮಾಡಲು ಸಮರ್ಥವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ."[೧]

ಶ್ರವಣಬೆಳ್ಗೊಳದ ಶಾಸನಗಳನ್ನೂ ಕೃತಿಗಳನ್ನೂ ಅವಲಂಬಿಸಿ ಅಲ್ಲಿಯ ಸಾಂಸ್ಕೃತಿಕ ಅಧ್ಯಯನ ಮಾಡಿದ ಹಲವು ಲೇಖನಗಳೂ ದೊರೆಯುತ್ತವೆ. ಅವುಗಳಲ್ಲಿ ಡಾ. ಎಂ. ಚಿದಾನಂದಮೂರ್ತಿಯವರು ಈ ಸ್ಥಳವನ್ನು ಕುರಿತು ತಮ್ಮ ಮಹಾಪ್ರಬಂಧದಲ್ಲಿ ಮಾತ್ರವಲ್ಲ, ಪ್ರತ್ಯೇಕವಾಗಿಯೂ ಹಲವು ಲೇಖನ ಬರೆದಿದ್ದಾರೆ. ಅವುಗಳ ಮುಖಾಂತರ ಶ್ರವಣಬೆಳ್ಗೊಳದ ಹೆಸರು, ಹಳೆಯ ಬೆಳ್ಗೊಳ, ಶ್ರವಣಬೆಳ್ಗೊಳದ ಸಂಘ -ಗಚ್ಛ, ಮುನಿಗಳ ವಿದ್ವತ್ತು, ಕಠೋರ ತಪಸ್ಸು, ಸಮಾಧಿ ಮರಣ, ಯಕ್ಷಿಯ ಆರಾಧನೆ, ಅಂದಿನ ಯುದ್ಧೋಪಕರಣಗಳು, ಆಡಳಿತ ವ್ಯವಸ್ಥೆ, ವಿದ್ಯಾಭ್ಯಾಸ, ಸಾಮಾಜಿಕ ವ್ಯವಸ್ಥೆ, ಕಲೆ ಮೊದಲಾದವನ್ನು ಆಧಾರ ಸಹಿತ ವಿವೇಚಿಸಿದ್ದಾರೆ. ಹಳೆಯ ಬೆಳ್ಗೊಳವೇ ಮೂಲ

---

೧. ಎಂ. ಚಿದಾನಂದಮೂರ್ತಿ : ಸಾಹಿತ್ಯ ವಾರ್ಷಿಕ ೧೯೭೬ ಪು. ೧೭೫

ಬೆಳ್ಗೊಳವಾಗಿದ್ದು ಮುಂದೆ ೧೦ನೆಯ ಶತಮಾನದ ಅಂತ್ಯದಲ್ಲಿ ದೊಡ್ಡ ಬೆಟ್ಟದ ಮೇಲೆ ಗೊಮ್ಮಟದ ವಿಗ್ರಹ ನಿರ್ಮಾಣವಾಗಿ. ಆ ಬಳಿಕ ಆ ಬೆಟ್ಟದ ಬುಡದಲ್ಲಿ ಈಗಿನ ಶ್ರವಣಬೆಳ್ಗೊಳವಾಯಿತು. ಗೊಮ್ಮಟ ವಿಗ್ರಹ ನಿರ್ಮಾಣವಾದಾಗ ಈಗಿನ ಶ್ರವಣ ಬೆಳ್ಗೊಳವಿರಲಿಲ್ಲ. ಹಳೆಯ ಬೆಳ್ಗೊಳ ಇತ್ತು.[2] ಎಂಬ ಅವರ ನಿರ್ಧಾರ ಹಲವು ಆಧಾರಗಳಿಂದ ಸಿದ್ಧವಾಗಿದೆ. ಶ್ರೀಕಾಮತ್ ಪ್ರಸಾದ ಜೈನ್ ಅವರು `ಶ್ರವಣಬೆಳ್ಗೊಳಕೆ ಶಿಲಾಲೇಖ' ಎಂಬ ಲೇಖನ (I.A. Vol. v iv)ದಲ್ಲಿ ಅಲ್ಲಿಯ ಶಾಸನಗಳಲ್ಲಿ ಉಕ್ತವಾದ ಸೈದ್ಧಾಂತಿಕ ಮೊದಲಾದವನ್ನು ವಿವೇಚಿಸಿದ್ದಾರೆ. ಅದೇ ರೀತಿ ಬಿ. ಎ. ಸಾಲೆತೊರೆ ಅವರು `Sravanabelgola its secular importance' ಎಂಬ ಲೇಖನ (J. A. Vol. v-iv) ದಲ್ಲಿ ಶತ ಶತಮಾನಗಳಿಂದ ಶ್ರವಣಬೆಳ್ಗೊಳ ಧಾರ್ಮಿಕ ಕ್ಷೇತ್ರವಾಗಿ ಬೆಳೆದು ಬಂದ ಬಗೆಯನ್ನೂ, ಆರ್ಥಿಕ ದೃಷ್ಟಿಯಿಂದ ಅದು ಹೊಂದಿದ್ದ ಮಹತ್ವದ ಸ್ಥಾನವನ್ನೂ ವಿವೇಚಿಸಿದ್ದಾರೆ. ಶ್ರೀಮತಿ ಜಿ. ಕೆ.ಜೈನ್ ಅವರು `ಶ್ರವಣಬೆಳ್ಗೊಳ ಶಿಲಾಲೇಖೋಮೆ ಮಹಿಳಾಓಯೋ ಕಾ ನಾಮ' (J.A. Vol. XXII-I), ಇನ್ನೊಬ್ಬರು 'ಶ್ರವಣಬೆಳ್ಗೊಳ ಶಿಲಾಲೇಖೋಮೆ ಭೌಗೋಲಿಕ ನಾಮ' (J. A. Vol. VIII-i), ಹಿರಾಲಾಲ ಜೈನ ಅವರು `ಜೈನ ಶಿಲಾಲೇಖ ಸಂಗ್ರಹ' ದಲ್ಲಿ 'ಶ್ರವಣಬೆಳ್ಗೊಳ ಶಾಸನಗಳಲ್ಲಿ ಉಕ್ತವಾದ ತತ್ಕಾಲೀನ ಧಾರಣೆಗಳ ಅಂದಾಜು' ಎಂಬ ಲೇಖನಗಳನ್ನು ಬರೆದಿದ್ದಾರೆ. ಶ್ರವಣಬೆಳ್ಗೊಳದ ಜೈನರಲ್ಲೂ ಯಾಪನೀಯ ಸಂಘದ ಪ್ರಭಾವವಿತ್ತೆಂದು ಸೀತಾರಾಮ್ ಜಾಗೀರದಾರ ಅವರು ನಿರ್ಧಾರಕ್ಕೆ ಬಂದಿದ್ದಾರೆ. (ಕ. ಸು. ಸಂ. ೫೧-೨೩೦).

ಶ್ರವಣಬೆಳ್ಗೊಳದ ಸಾಂಸ್ಕೃತಿಕ ಇತಿಹಾಸಕ್ಕೆ ಸಂಬಂಧಿಸಿದ ಇತ್ತೀಚೆಗೆ ಬಂದ ಎರಡು ಮಹತ್ವದ ಕೃತಿಗಳು ಡಾ. ಎಸ್. ಶೆಟ್ಟರ್ ಅವರ Inviting Death ಮತ್ತು Persuing Death. ಈ ಎರಡೂ ಕೃತಿಗಳು ಈ ಹಿಂದಿನ ಕೃತಿಗಳಿಗಿಂತ ಭಿನ್ನ ನೆಲೆಯಲ್ಲಿ ನಿಂತು ಇಲ್ಲಿಯ ಚರಿತ್ರೆಯನ್ನು ನಿರೂಪಿಸಲು ಪ್ರಯತ್ನಿಸುತ್ತವೆ. ಇವುಗಳಲ್ಲಿ Inviting Death (1986) ಶ್ರವಣಬೆಳ್ಗೊಳದ ಬೆಳವಣಿಗೆಯಲ್ಲಿ ಧರ್ಮಕ್ಕೆ ಪ್ರಾಧಾನ್ಯವಿದ್ದುದನ್ನೂ, ಆ ಹಿನ್ನೆಲೆಯಲ್ಲಿ ಮುನಿಗಳು ಇಲ್ಲಿಗೆ ಬರುತ್ತಿದ್ದುದನ್ನೂ ಗುರುತಿಸಿದೆ. ಶ್ರವಣಬೆಳ್ಗೊಳದಲ್ಲಿ ಸಂಘ ರೂಪುಗೊಂಡು ಅದು ಶ್ರಾವಕರನ್ನೂ, ಅರಸರನ್ನೂ ಬೇರೆ ಬೇರೆ ದೃಷ್ಟಿಗಳಿಂದ

೨. i. ಶ್ರವಣಬೆಳ್ಗೊಳಕ್ಕೆ ಮೂಲ ಹಳೆಯ ಬೆಳ್ಗೊಳ
ii. ಶ್ರವಣಬೆಳ್ಗೊಳ ಒಂದು ಸಾಂಸ್ಕೃತಿಕ ಕೇಂದ್ರವಾಗಿ (ಹೊಸತು ಹೊಸತು)
iii. ಶ್ರವಣಬೆಳ್ಗೊಳ ಬೇರೆ ಬೇರೆ ಯುಗಗಳಲ್ಲಿ (ಸಂವೇದನೆ ತರಂಗ)

೩. ಶ್ರವಣ ಬೆಳ್ಗೊಳ ಒಂದು ಸಾಂಸ್ಕೃತಿಕ ಕೇಂದ್ರವಾಗಿ.

ಆಕರ್ಷಿಸತೊಡಗಲು ಮುನಿಗಳ ಏಕಾಂತಕ್ಕೆ ಭಂಗ ಬರತೊಡಗಿ ಅವರ ಬರುವಿಕೆಯಿಂದ ಇದು ದೂರಾಯಿತು ಎಂಬುದನ್ನು ನಿಶಧಿ ಶಾಸನಗಳ ಸಂಖ್ಯೆಯ ಆಧಾರದ ಮೇಲೆ ನಿರೂಪಿಸಿದೆ. ತತ್ತ್ವವೇ ಬೇರೆ, ಆಚರಣೆಯೇ ಬೇರೆ ಎಂಬುದನ್ನು ಮಾಚಿಕಬ್ಬೆಯ ಶಾಸನ ಮೊದಲಾದವುಗಳಿಂದ ಸ್ಪಷ್ಟಪಡಿಸಿದೆ. ಬರುಬರುತ್ತ ಧರ್ಮ ಹೇಗೆ ಸಾಮಂತರ, ವಡ್ಡ ವ್ಯವಹಾರಿಗಳ ವಶವಾಯಿತು ಎಂಬುದನ್ನೂ ವಿವೇಚಿಸಿದೆ. ಇನ್ನು ೧೯೯೦ರಲ್ಲಿ ಪ್ರಕಟವಾದ Persuing Death ದಲ್ಲಿ ಶ್ರವಣಬೆಳ್ಗೊಳದ ಶಾಸನಗಳನ್ನೊಳಗೊಂಡು ಜೈನ ಧರ್ಮಕ್ಕೆ ಸಂಬಂಧಿಸಿದ ಪ್ರಾಕೃತ, ಸಂಸ್ಕೃತ, ಕನ್ನಡ ಕಾವ್ಯ, ವಾಸ್ತು ಮತ್ತು ಶಿಲ್ಪ ಈ ಐದೂ ಆಕರಗಳ ಹಿನ್ನೆಲೆಯಲ್ಲಿ ಸಮಾಧಿ ಮರಣದ ಸಮಗ್ರ ವಿವೇಚನೆ ಮಾಡಲಾಗಿದೆ. ಸಮಾಧಿ -ಪಂಚಪಾದ -ಸಲ್ಲೇಖನ-ಆರಾಧನ-ಸನ್ಯಸನ-ಸಮಾಧಿ ಸನ್ಯಸನ ಮೊದಲಾದವುಗಳಲ್ಲಿ ಇರುವ ಅಂತರವನ್ನು ಬಹು ಸೂಕ್ಷ್ಮವಾಗಿ ಇಲ್ಲಿ ಗಮನಿಸಲಾಗಿದೆ.

ಈ ಸ್ಥಳದ ಚರಿತ್ರೆಯನ್ನೂ ಶಿಲ್ಪವನ್ನೂ ಪರಿಚಯಿಸುವ ಹಲವು ಕೃತಿಗಳೂ ಬಂದಿವೆ. ಅವುಗಳಲ್ಲಿ ಮೈಸೂರು ಪುರಾತತ್ತ್ವ ಮತ್ತು ವಸ್ತುಸಂಗ್ರಹಾಲಯ ಶಾಖೆ ೧೯೪೦ರಲ್ಲಿ ಡಾ. ಎಂ. ಎಚ್. ಕೃಷ್ಣ ಅವರು ಬರೆದ ಮತ್ತು ೧೯೫೭ರಲ್ಲಿ ಕೆ. ಎ. ನೀಲಕಂಠಶಾಸ್ತ್ರಿಗಳು ಪರಿಷ್ಕರಿಸಿದ `ಶ್ರವಣ ಬೆಳ್ಗೊಳ' ಎಂಬ ಇಂಗ್ಲೀಷ ಕೃತಿಯನ್ನು ಪ್ರಕಟಿಸಿದ್ದೆ. ಇದೇ ಇಲಾಖೆ ೧೯೫೭ರಲ್ಲಿ ಡಾ. ಶೇಷಾದ್ರಿ ಅವರು ಬರೆದ ಕನ್ನಡ ಗ್ರಂಥವನ್ನು ಪ್ರಕಟಿಸಿದೆ. ಆದರೆ ಇವೆಲ್ಲ ಆರ್.ನರಸಿಂಹಾಚಾರ್ ಅವರು ಎಪಿಗ್ರಾಫಿಯಾ ಕರ್ನಾಟಕಕ್ಕೆ ಬರೆದ ಮುನ್ನುಡಿಗಿಂತ ಮುಂದೆ ಹೋಗಿಲ್ಲ. ಜಿ. ಪಿ. ರಾಜರತ್ನಂ ಅವರು ಚಾವುಂಡರಾಯ ಮಾಡಿಸಿದ ಮೂರ್ತಿಯ ಸುತ್ತ ಹೆಣೆದು ಕೊಂಡಿರುವ ಕಥೆಗಳನ್ನು `ಶ್ರೀಗೋಮಟೇಶ್ವರ' ಎಂಬ ಕೃತಿಯಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದಾರೆ. ೧೯೮೩ ಫೆಬ್ರುವರಿಯಲ್ಲಿ ಪ್ರಕಟವಾದ ಮಾರ್ಗ ವಿಶೇಷ ಸಂಚಿಕೆ `ಹೋಮೇಜ ಟು ಶ್ರವಣಬೆಳ್ಗೊಳ' ಸುಂದರ ಚಿತ್ರಗಳನ್ನೊಳಗೊಂಡು ಈ ಸ್ಥಳದ ಶಿಲ್ಪಕಲೆಯ ಪರಿಚಯ ಮಾಡಿಕೊಡುತ್ತದೆ. ಅದೇ ವರ್ಷ ಕರ್ನಾಟಕ ಪ್ರವಾಸ ಇಲಾಖೆ ಡಾ. ಎಸ್. ಶೆಟ್ಟರ್ ಅವರಿಂದ ರೂಪಿಸಲ್ಪಟ್ಟ `ಶ್ರವಣಬೆಳ್ಗೊಳ' ಎಂಬ ಪುಸ್ತಕವನ್ನು ಪ್ರಕಟಿಸಿದೆ. `ದೇಶದ ಯಾವ ಕ್ಷೇತ್ರದ ಬಗ್ಗೆಯೂ ಈ ಬಗೆಯ ಪರಿಚಯ ಗ್ರಂಥ ಜನಸಾಮಾನ್ಯರಿಗೆ ಅಲಭ್ಯ. ಈ ದಿಸೆಯಲ್ಲಿ ಇದೊಂದು ಪ್ರಾಯೋಗಿಕ ಪ್ರಥಮ ಹೆಜ್ಜೆ'[೧] ಎಂದು ಸಂಪಾದಕರು ಹೇಳಿಕೊಂಡಿದ್ದಾರೆ. ಇಲ್ಲಿ ಜಿನಾಲಯಗಳ ಚಿತ್ರವನ್ನು ಅತ್ಯಂತ ಸಮೀಪದಿಂದ ತೆಗೆದಿರುವುದು, ಅವುಗಳಿಗೆ ಸಂಬಂಧಿಸಿದ ಮತ್ತು ವಿಶೇಷವಾದ ವಿಷಯವನ್ನು ಪೆಟ್ಟಿಗೆಯಲ್ಲಿ ಕೊಟ್ಟಿರುವುದು ವಿಶೇಷವಾದುದು. ಆ ಕ್ಷೇತ್ರದ ಬಗೆಗಿನ ಆಳವಾದ ಅಧ್ಯಯನ ಸಂಕ್ಷೇಪಗೊಂಡು

---

೧. ಎಸ್. ಶೆಟ್ಟರ್ : ಶ್ರವಣಬೆಳ್ಗೊಳ, ಬೆನ್ನುಡಿ.

ಜನಸಾಮಾನ್ಯರಿಗೆ ಅರ್ಥವಾಗುವ ಪರಿಣಾಮ ಬೀರುವ ರೀತಿಯಲ್ಲಿ ಈ ಕೃತಿ ರಚನೆಗೊಂಡಿದೆ. ಕಿರಿಯ ಕನ್ನಡಿಯಲ್ಲಿಡಗಿರುವಂತೆ ಶ್ರವಣಬೆಳ್ಗೊಳದ ಗತವೈಭವವೆಲ್ಲ ಇಲ್ಲಿ ಸಂಕ್ಷೇಪವಾಗಿ ಸೊಗಸಾಗಿ ನಿರೂಪಿತವಾಗಿದೆ.

ಗೊಮ್ಮಟನನ್ನು ಕೆತ್ತಿದ ಶಿಲ್ಪಿ ಯಾರೆಂಬುದು ಈ ವರೆಗೆ ತಿಳಿದು ಬಂದಿಲ್ಲ. ಅದನ್ನು ಮೈಸೂರು ಗೆಜೆಟಿಯರ್ ಬರೆದ ಲೂಯಿಸ್‌ರೈಸ್ ಅವರು `ಅರಿಷ್ಟನೇಮಿ ' ಎಂದಿದ್ದಾರೆ. ಜಾನಪದ ಸಾಹಿತ್ಯದಲ್ಲಿ ಈ ಹೆಸರು ಬಂದಿರುವುದನ್ನು ಬಿಟ್ಟರೆ ಬೇರೆಲ್ಲಿಯೂ ಈ ಉಲ್ಲೇಖ ಸಿಗದು. ಈ ಮೂರ್ತಿಯ ಸೌಂದರ್ಯವನ್ನು ಅಪ್ರತಿಮ ಕಲಾವೈಭವವನ್ನೂ ಶಿಲ್ಪ ಕಲಾತಜ್ಞ ವರ್ಘಮನ್ (Through Town and Jungle P. 82.4), ಫರ್ಗ್ಯೂಸನ್ (History of Indian and Eastern Architecture vol. II P. 72), ಶ್ರೀಮತಿ ಸಿಂಕ್ಲೆಯರ್ (Heart of Jainism), ಎ. ಎಲ್. ಬಾಷ್ಯಾಮರ್(The wonder that was India), ಜಾಕ್ ಫಿನೆಗಾನ್ (The Archaeology of world religion), ರಿಘೀಮರ್ (Archaeology of Asia) ಮೊದಲಾದವರು ಮನದುಂಬಿ ಬಣ್ಣಿಸಿದ್ದಾರೆ.

ಹಲವರು ಗೊಮ್ಮಟನ ಅಳತೆಗೆ ತೊಡಗಿ ತಮ್ಮ ಆಶ್ಚರ್ಯವನ್ನು ವ್ಯಕ್ತಗೊಳಿಸಿದ್ದಾರೆ. ಈ ಪ್ರಯತ್ನ ನೂರಾರು ವರ್ಷದಿಂದ ನಡೆದು ಬಂದುದಾಗಿ ತಿಳಿಯುತ್ತಿದೆ. ಮೂರ್ತಿಯ ಪಾದ ಪೀಠದ ಕಮಲ ವಿನ್ಯಾಸದ ಎಡಕಾಲಬಳಿ ಮೂರಡಿ ನಾಲ್ಕಂಗುಲದ ಒಂದು ಅಳತೆಗೋಲಿದ್ದು ಇದನ್ನು ೧೮ರಿಂದ ಗುಣಿಸಿದರೆ ಮೂರ್ತಿಯ ಪ್ರಮಾಣ ಅರವತ್ತು ಅಡಿ ಆಗುತ್ತದೆಯಂತೆ. ಈ ಅಳತೆಗೋಲನ್ನು ಶಿಲ್ಪಿಯೇ ರಚಿಸಿದನೋ, ತರುವಾಯ ರಚನೆಗೊಂಡಿತೋ ತಿಳಿಯದು. ಮೈಸೂರರಸು ಒನೆಯ ಕೃಷ್ಣರಾಜ ಒಡೆಯರ ಆಜ್ಞೆಯ ಮೇರೆಗೆ ಅಳತೆ ಮಾಡಿದ ಶಾಂತಿರಾಜ ಪಂಡಿತ ೧೬ ಪದ್ಯಗಳಲ್ಲಿ ಮೊಳಗಳ ಲೆಕ್ಕದಲ್ಲಿ ಇದರ ಪ್ರಮಾಣವನ್ನು ಹಿಡಿದಿಟ್ಟಿದ್ದಾನೆ. ಅಲ್ಲದೆ ಪಾಶ್ಚಾತ್ಯ ಪಂಡಿತರಲ್ಲಿ ಬೂಚನನ್ ೭೦ ಅಡಿ ೩ ಅಂಗುಲ, ಆರ್ಥರ್ ವೆಲ್ಲೆಸ್ಲಿ ೬೦ಅಡಿ ೩ ಅಂಗುಲ, ಜೆ. ಟಿ. ಲೀಗ್ ೭೦ಅಡಿ, ಬ್ರ್ಯಾಸಿಂಗ್‌ನ ಅಜ್ಞೆಯ ಮೇರೆಗೆ ಅಳತೆ ಮಾಡಿದ ಅಮಲ್ದಾರ್ ೫೭ಅಡಿ ಎಂದು ಗುರುತಿಸಿದ್ದಾರೆ. ೧೮೫೭ರಲ್ಲಿ ಪಬ್ಲಿಕ್ ವರ್ಕ್ಸ್‌ದವರು ಅಳತೆಮಾಡಿ ೫೮ಅಡಿ ಎಂದು ನಿರ್ಧರಿಸಿದರು. ಮುಂದೆ ಆರ್. ನರಸಿಂಹಾಚಾರ್ ಅವರು ಈ ಮೂರ್ತಿಯ ಎತ್ತರ ೫೭ ಅಡಿ ಎಂಬ ನಿರ್ಧಾರಕ್ಕೆ ಬಂದರು. ೧೯೫೭ರಲ್ಲಿ ಮೈಸೂರ ಪುರಾತತ್ತ್ವ ಇಲಾಖೆ ಇದರ ಪುನರ್‌ಮಾಪನ ಮಾಡಿ ೫೮ಅಡಿ ಎಂದು ಹೇಳಿತು. ೧೯೮೦ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಭಾರತೀಯ ಕಲಾ ಇತಿಹಾಸ ಸಂಸ್ಥೆಯ ಅತ್ಯಾಧುನಿಕ ಯಂತ್ರೋಪಕರಣ ಉಪಯೋಗಿಸಿ ಇದರ ಪ್ರಮಾಣ ೫೮ ಅಡಿ ೫ ಅಂಗುಲ ಎಂಬ ನಿರ್ಧಾರಕ್ಕೆ ಬಂದಿದೆ.

'ಗೊಮ್ಮಟ' ಶಬ್ದದ ಉತ್ಪತ್ತಿ ಕುರಿತು ಆರ್. ನರಸಿಂಹಾಚಾರ್ (E.C. Vol. I) ಗೋವಿಂದ ಪೈ, (ವಿವೇಕಾಭ್ಯುದಯ ೧೯೫೧), ಕುಂದಣಗಾರ್ (ಕ. ಸಾ. ಪ. ಪ. ೨೩ ೨೧,) ಎ. ಎನ್. ಉಪಾಧ್ಯೆ (ಕ. ಸಾ.ಪ.ಪ. ೨೫.೨) ಮತ್ತು Indian Historical quarterly (ಸಂ. iv. vi. xvii) ಸಂಪುಟಗಳು ಚರ್ಚೆ ನಡೆಸಿ, ಕೆಲವರು ಮನ್ಮಥ ಕನ್ನಡಕ್ಕೆ ತದ್ಭವಗೊಂಡು ಗೊಮ್ಮಟವಾಗಿದೆಯೆಂದರೆ, ಮತ್ತೆ ಕೆಲವರು ಕೂಷ್ಮಾಂಡಿನಿ, ಗುಮ್ಮಡಿ, ಗೊಮ್ಮಟವಾಗಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಚರ್ಚೆಯಲ್ಲಿ ಶಂ. ಭಾ. ಜೋಶಿ ಅವರೂ ಭಾಗವಹಿಸಿ "ಗುಮ್ಮ ಪದಕ್ಕಿರುವ ಸಂಸ್ಕೃತ ಯಕ್ಷಿಪಂತಹ ಧನ್ಯರ್ಥವು ಇಂದಿಗೂ ಉಳಿದು ಬಂದಿದೆ. ಚಿಕ್ಕಮಕ್ಕಳ ಪಾಲಿಗೆ ಗೂಢ ಮತ್ತು ಗುಮ್ಮ ಎರಡೂ ಬೇರೆಯಲ್ಲ"[1] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಈ ವಿಗ್ರಹದ ಪ್ರತಿಷ್ಠಾಪನೆಯ ಕಾಲವಾವುದು ಎಂಬುದೂ ಹಲವು ಪಂಡಿತರ ಚರ್ಚೆಗೆ ಗ್ರಾಸವಾಗಿದೆ. ರೈಸ್ ಅವರು ೯೮೩ ಎಂದೂ, ಆರ್. ನರಸಿಂಹಾಚಾರ್ ಅವರು ೯೭೪-೮೪ ಎಂದೂ, ಡಾ. ಶಾಮಾಶಾಸ್ತ್ರಿ ೧೦೨೮ ಎಂದೂ, (ಮೈಸೂರು ಶಾಸನ ಇಲಾಖೆಯ ವರದಿ, ೧೯೨೩) ಹಿರಾಲಾಲ್ ಜೈನ ೧೦೨೮ ಎಂದೂ, ಗೋವಿಂದ ಪೈ ೯೮೧ ಎಂದೂ (ವಿವೇಕಾಭ್ಯುದಯ ೧೯೫೧) ಅಭಿಪ್ರಾಯ ಪಟ್ಟಿದ್ದಾರೆ. ಈಗ ರೈಸ್ ಅವರ ಅಭಿಪ್ರಾಯವೇ ಸ್ವೀಕೃತವಾಗಿದೆ.

ಇಲ್ಲಿಯ ಇತರ ಶಿಲ್ಪವನ್ನು ಕುರಿತು ಅಲ್ಪಸ್ವಲ್ಪ ಅಭ್ಯಾಸ ನಡೆದಿದೆ. ಎಚ್. ಎಸ್.ಗೋಪಾಲರಾವ್ ಅವರು ಜೈನ ಬಸದಿಗಳಲ್ಲಿ ನೃತ್ಯಗೇಹದ ನಿರ್ಮಾಣವಾಗಿ, ರಂಗಭೋಗ ಸಲ್ಲಿಸುತ್ತಿದ್ದುದನ್ನು ಹುಳ್ಳನಬಸದಿಯ ಶಾಸನ ಮತ್ತು ಪಾರ್ಶ್ವಬಸದಿಯ ಶಾಸನಗಳಿಂದ ಸಿದ್ಧಪಡಿಸಿದ್ದಾರೆ. (ಇ. ದ. ಸಂ ೬ ಪು. ೭೮) . ಶ್ರವಣಬೆಳ್ಗೊಳದ ಶಿವಮಾರನ ಬಸದಿಯು ಮೊದಲು ಮಹಾವೀರನ ಬಸದಿಯಾಗಿದ್ದು ಕಾಲಾನಂತರದಲ್ಲಿ ಚಂದ್ರಪ್ರಭನ ಬಸದಿಯಾಗಿರಬೇಕೆಂದು ಅಲ್ಲಿಯ ಯಕ್ಷ ಯಕ್ಷಿಯರ ಸಹಾಯದಿಂದ ಕೆ. ವಸಂತಲಕ್ಷ್ಮಿ ಅವರು ನಿರ್ಧರಿಸಿದ್ದಾರೆ. (ಇ. ದ ಸಂ. ೩ ಪು. ೧೧೦ -೩)

ಶ್ರವಣಬೆಳ್ಗೊಳದ ಹಸ್ತ ಪ್ರತಿಭಂಡಾರದಲ್ಲಿರುವ ೧೫-೧೬ನೆಯ ಶತಮಾನದಲ್ಲಿ ರಚನೆಗೊಂಡಿರಬಹುದಾದ, 'ತ್ರಿಲೋಕಸಾರ' ದ ಮೇಲಿರುವ ಜೈನ ಬಸದಿಗಳ ಮುಂಭಾಗದಲ್ಲಿ ಕಂಗೊಳಿಸುವ ಮಾನಸ್ತಂಭಗಳ ಚಿತ್ರಗಳನ್ನು ಡಾ. ಬಿ. ಕೆ. ಹಿರೇಮಠ ಅವರು ತಮ್ಮ ಮಹಾಪ್ರಬಂಧ(ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ ಪು. ೧೬೩-೪)ದಲ್ಲಿ ವಿವರಿಸಿದ್ದಾರೆ.

---

೧. ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ, ಪು. ೧೬೫.೬

ಅದೇ ರೀತಿ ಶ್ರವಣಬೆಳ್ಗೊಳ ಶಾಸನದಲ್ಲಿ ಉಲ್ಲೇಖಗೊಂಡ ಧವಲ, ಜಯಧವಲಗಳ ಮೇಲಿರುವ ಚಿತ್ರಗಳನ್ನು ಶಿವರಾಮಮೂರ್ತಿ (ಹೊಯ್ಸಳರ ಚಿತ್ರಶೈಲಿ), ಶಿವರಾಮ ಕಾರಂತ (ಕರ್ನಾಟಕದಲ್ಲಿ ಚಿತ್ರಕಲೆ ಪು. ೪೫.-೬)ರು ಗುರುತಿಸಿದ್ದಾರೆ. ಶ್ರವಣಬೆಳ್ಗೊಳದ ಶ್ರೀಮಠದಲ್ಲಿರುವ ಭಿತ್ತಿ ಚಿತ್ರವೊಂದರ ಮೇಲಿಂದ ಡಾ. ಜ್ಯೋತ್ಸ್ನಾ ಕಾಮತ್ ಅವರು ಊರ ಜಾತ್ರೆಯ ಸೀರೆಯ ಮಳಿಗೆಯಲ್ಲಿ ಅಂಗಡಿಯವನು ತೋರಿಸಿದ ಸೀರೆಯನ್ನು ಪುರುಷನೊಬ್ಬನು ಮೊಳ ಹಾಕಿ ಅಳೆಯುತ್ತಿದ್ದಾನೆ. ಬಟ್ಟೆಯ ಉದ್ದಗಲಳತೆ ಕುರಿತು ಅಂದಿನ ಅಂಗಡಿಯವರೂ ಗಿರಾಕಿಗಳಿಗೆ ಮೋಸ ಮಾಡುತ್ತಿರಬೇಕು." (ಇ. ದ. ಸಂ. ೯ ಪು. ೨೪೩) ಎಂದಿದ್ದಾರೆ.

ಕೆಲವೊಂದು ಹಸ್ತಪ್ರತಿ ಪ್ರಶಸ್ತಿಗಳೂ ಶ್ರವಣಬೆಳ್ಗೊಳದ ಇತಿಹಾಸದ ಮೇಲೆ ಬೆಳಕು ಚೆಲ್ಲುವುದನ್ನು ಡಾ. ಬಿ. ವ್ಹಿ. ಶಿರೂರ ತಮ್ಮೊಂದು ಲೇಖನ (ಕ. ಭಾ ೧೯.೩) ದಲ್ಲಿ ವಿವರಿಸಿದ್ದಾರೆ. ಕ್ರಿ. ಶ.೧೪೪೫ರಲ್ಲಿ ದ್ವಾದಶಾನುಪ್ರೇಕ್ಷೆಯನ್ನು ಪ್ರತಿ ಮಾಡಿದ ವಿಜಯಣ್ಣೋಪಾಧ್ಯಾಯನು ತನ್ನನ್ನು ಶ್ರೀ ಬೆಳ್ಗೊಳದ ಇಂದ್ರ ವರ್ಗದ ವಿಶಿಷ್ಟ, ಗೋತ್ರಜ್ಞನಾದ ವಿಜಯಣ್ಣೋಪಾಧ್ಯಾಯ ಎಂದು ಕರೆದುಕೊಂಡಿದ್ದಾನೆ. ಈ ಪ್ರತಿಯನ್ನು ಬೆಳ್ಗೊಳದ ಚಾರುಕೀರ್ತಿ ಪಂಡಿತಾಚಾರ್ಯ ಸ್ವಾಮಿಯವರ ಪಾದಪದ್ಮಗಳಿಗೆ ಭೃಂಗೋಪಸಮಾನಿಗಳಾದ ಶ್ರೀ ಅರಮನೆ ಬಸಮ್ಮನವರು ಜ್ಞಾನೋಪಕರುಣಾಭ್ಯುದಯ ನಿಮಿತ್ತವಾಗಿ ಬರೆಸಿದಳಂತೆ. ಇಲ್ಲಿ ಒಂದು ಅರಸು ಮನೆತನದ ಒಬ್ಬ ಸ್ತ್ರೀ ಉಕ್ತಳಾಗಿರುವುದರೊಂದಿಗೆ ಒಂದು ಕೃತಿಯನ್ನು ಪ್ರತಿ ಮಾಡಿಸಿದುದರ ಉದ್ದೇಶವೂ ಹೇಳಲ್ಪಟ್ಟಿದೆ. ಅದೇ ರೀತಿ ಪ್ರಶ್ನೋತ್ತರೋಪಾಸಕಾಚಾರವನ್ನು ಪ್ರತಿ ಮಾಡಿದ ಅನಂತರಾಜ್ಯೆಯನು ಚಾಮುಂಡರಾಯನ ವಂಶಸ್ಥನೆಂಬುದು ಅಲ್ಲಿಯ ಪ್ರಶಸ್ತಿಯಿಂದ ತಿಳಿದು ಬರುತ್ತದೆ. ಬಿಳುಕೆರೆಯ ಅರಸುಮನೆತನದ ಪ್ರಸ್ತಾಪ ಇನ್ನೂ ಹಲವು ಪ್ರತಿಗಳಲ್ಲಿ ಬರುತ್ತಿದೆ.

ಕರ್ನಾಟಕಕ್ಕೆ ಜೈನಧರ್ಮ ಆಗಮಿಸಿದುದು ಯಾವಾಗ ಎಂಬುದನ್ನೂ ಹಲವರು ಚರ್ಚಿಸಿದ್ದಾರೆ. ಪಂ. ನೇಮಿಚಂದ್ರಶಾಸ್ತ್ರಿ ಅವರು 'ದಕ್ಷಿಣ ಭಾರತಮೆ ಜೈನ ಧರ್ಮಕೆ ಪ್ರವೇಶ ಔರ ವಿಸ್ತಾರ' ಎಂಬ ಲೇಖನದಲ್ಲಿ (j. A. Vol. XIV -I) ಕ್ರಿ. ಪೂ. ೩೦೦ಕ್ಕಿಂತ ಮೊದಲೆ ಜೈನ ಧರ್ಮ ದಕ್ಷಿಣ ಭಾರತದಲ್ಲಿತ್ತು ಎಂಬುದನ್ನು ಮಹಾಪುರಾಣ, ಹರಿವಂಶಪುರಾಣ, ಜಾತಕಕಥೆ, ಕುರುಳ್, ಶ್ರವಣಬೆಳ್ಗೊಳ ಶಾಸನ ಮೊದಲಾದವುಗಳ ಆಧಾರದಿಂದ ನಿರ್ಧರಿಸಿದ್ದಾರೆ. ಇದೇ ಅಭಿಪ್ರಾಯವನ್ನು ಶಂ. ಭಾ. ಜೋಶಿ (ಕನ್ನಡ ಸಂಸ್ಕೃತಿಯ ಪೂರ್ವ ಪೀಠಿಕೆ ಪು. ೨೦೧), ದ.ರಾ. ಬೇಂದ್ರೆ (ಜ.ಕ. ೧೯೪೬, ೧೧-೩), ಭುಜಬಲಿಶಾಸ್ತ್ರಿ (ಶ. ಸಾ. ೩.೯) ಮೊದಲಾದವರು ಪ್ರತಿಪಾದಿಸಿದ್ದಾರೆ.

ಭದ್ರಬಾಹುವಿನೊಂದಿಗೆ ಬಂದ ಚಂದ್ರಗುಪ್ತ -ಮೌರ್ಯನೇ ಸಂಪ್ರತಿಯೇ ಎಂಬುದೂ ವಾದವಿವಾದಕ್ಕೆಡೆ ಮಾಡಿದೆ. ಈ ವಾದದಲ್ಲಿ ಅತ್ಯಂತ ಉತ್ಸಾಹದಿಂದ ಭಾಗವಹಿಸಿದವರು ರೈಸ್ (EC Vol. II) ಫ್ಲೀಟ್ (I.A. XXI. P. 156) ಫ್ಲಿ. ಸ್ಮಿಥ್ (The Early Histrory of India), ಗೋವಿಂದ ಪೈ (ಕ. ಸಾ. ಪ.ಪ. ೨೬ ೧.೨), ದೀರೇಂದ್ರನಾಥ ಮುಖರ್ಜಿ (Journal of Indian History XX.P. III) ಮೊದಲಾದವರು ಪ್ರಮುಖರು. ಆದರೆ ಈಗ ಶ್ರವಣಬೆಳ್ಗೊಳಕ್ಕೆ ಬಂದವನು ಮೌರ್ಯ ಚಂದ್ರಗುಪ್ತನೇ ಎಂಬ ಅಭಿಪ್ರಾಯ ಸ್ವೀಕೃತವಾಗಿದೆ.

ಇಲ್ಲಿಯ ಚಿಕ್ಕಬೆಟ್ಟಕ್ಕಿದ್ದ `ಕಟ್ವಿಪ್ಪ' ಎಂಬ ಹೆಸರಿಗೆ ಅಲ್ಲಿಯ ನೀರಿನ ಬಣ್ಣವೇ ಕಾರಣವೆಂದು ಎಚ್.ದೇವೀರಪ್ಪ ಅವರು ಅಭಿಪ್ರಾಯ ಪಟ್ಟಿದ್ದಾರೆ.( ಪ್ರ. ಕ. ೫೧. ೨) ಕೆಲವರು ಇದನ್ನು ಬೆಟ್ಟದ ಮಗ್ಗಲು ಪ್ರದೇಶ, ಸಾನುಪ್ರದೇಶ ಎಂದೂ ಅರ್ಥೈಸಿದ್ದಾರೆ. ಆದರೆ ಇದಕ್ಕೆ ಮೈಸೂರು ವಿಶ್ವವಿದ್ಯಾಲಯದ ಎಪಿಗ್ರಾಫಿಯಾ ಕರ್ನಾಟಕ ಸಂಪಾದಕರು ಹೇಳಿರುವ `ಸಮಾಧಿಗುಡ್ಡ' ಎಂಬರ್ಥವೇ ಸಮಂಜಸವಾದುದಾಗಿದೆ.

ಗೊಮ್ಮಟಮೂರ್ತಿಯ ಮೇಲಿನ ಮರಾಠಿ ಶಾಸನವನ್ನು ಕುರಿತು ಶಂ. ಬಾ. ಜೋಶಿ ಅವರು `ದಕ್ಷಿಣದ ಪಥದೊಳಗೆ ಪುರಾತನಕಾಲದಿಂದ ಜೈನ್ ಪ್ರಾಕೃತದ ಮಹಾನ್ ಕೇಂದ್ರ ಶ್ರವಣಬೆಳ್ಗೊಳ. ಈ ಜೈನ ಪ್ರಾಕೃತದ ಮುಂದಿನ ಘಟ್ಟವೇ ಅಪಭ್ರಂಶ . ಜೈನ ಅಪಭ್ರಂಶ ಮತ್ತು ಮರಾಠಿಯ ಉಗಮ ಇವೆರಡರಲ್ಲಿರುವ ಅನ್ಯೋನ್ಯ ಸಂಬಂಧದ ಹಿನ್ನೆಲೆಯಲ್ಲಿ ಶ್ರವಣಬೆಳ್ಗೊಳದಲ್ಲಿ ಮರಾಠಿಯ ಆದಿಶಾಸನವು ತಲೆಯೆತ್ತಿರುವ ಕಾರ್ಯಕಾರಣ ಭಾವವು ಸ್ಪಷ್ಟವಾಗುತ್ತದೆ ಎಂದಿದ್ದಾರೆ.[೧]

ಶ್ರವಣ ಬೆಳ್ಗೊಳವನ್ನು ಪ್ರಾಸ್ತಾವಿಕವಾಗಿ ಪ್ರಸ್ತಾಪಿಸುವ ಹಲವು ಕೃತಿಗಳೂ ಇವೆ. ಅವುಗಳಲ್ಲಿ ಪಿ. ಬಿ. ದೇಸಾಯಿ ಅವರ Jainism in south India and some Jaina Epigraphs (1957). ಡಾ. ಬಿ. ಎ. ಸಾಲೆತೊರೆ ಅವರ (Mediaeval Jainism ಮತ್ತು Ancient Karnataka, ಎಸ್. ಆರ್. ಶರ್ಮಾ ಅವರ Jainism and Karnataka Culture, ಎಂ. ಎಸ್. ರಾಮಸ್ವಾಮಿ ಅಯ್ಯಂಗಾರ್ ಮತ್ತು ಶೇಷಗಿರಿರಾವ್ ಅವರ Studies in South Indian Jainism. ಆರ್. ತಾತಾಚಾರ್ಯ ಅವರ ಜೈನ ವಾಙ್ಮಯ, ಶ್ರೀ ಹಿರಾಲಾಲ್ ಜೈನ ಅವರ ಜೈನ ಶಿಲಾಲೇಖ ಸಂಗ್ರಹ, ನಾಥುಲಾಲ ಪ್ರೇಮಿ ಅವರ ಜೈನ ಸಾಹಿತ್ಯ ಔರ ಇತಿಹಾಸ, ಮಿರ್ಜಿ ಅಣ್ಣಾರಾಯರ ಜೈನ ಧರ್ಮ. ಭುಜಬಲಿ ಶಾಸ್ತ್ರಿಗಳ ಜೈನ ವಾಙ್ಮಯ, ಸಂಸ್ಕೃತ ವಾಙ್ಮಯಕ್ಕೆ ಜೈನ ಕವಿಗಳ ಕೊಡುಗೆ ಮೊದಲಾದ ಕೃತಿಗಳು

---

೧. ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ ಪು. ೧೬೫. ೬

ಬೇರೆ ಬೇರೆ ಅರಸರ ಕಾಲದಲ್ಲಿ ಜೈನ ಧರ್ಮ ಹೊಂದಿದ್ದ ಪ್ರಾಬಲ್ಯವನ್ನೂ, ಆಯಾ ಕಾಲದಲ್ಲಿ ಬಾಳಿಹೋದ ಮುನಿಗಳ ಚರಿತ್ರೆಯನ್ನೂ ವಿವೇಚಿಸಿವೆ. ಅದರಲ್ಲಿ ಜೆ.ಪಿ. ಜೈನ್ ಅವರ Jaina Sources of the History of India ಎಂಬ ಗ್ರಂಥ ಶ್ರವಣಬೆಳ್ಗೊಳದ ಶಾಸನದಲ್ಲಿ ಉಲ್ಲೇಖಗೊಂಡ ಹಲವಾರು ಮುನಿಗಳ ಚರಿತ್ರೆಯನ್ನು ತಿಳಿಯಲು ಒಳ್ಳೆಯ ಸಹಾಯವಾಗುತ್ತಿದೆ. ಈ ದಿಸೆಯಲ್ಲಿ ಗೋವಿಂದ ಪೈ ಅವರ A Note on Desi Gana' ಎಂಬ ಲೇಖನವೂ (J.A. Vol. I- iii) ಬಹು ಮಹತ್ವಪೂರ್ಣವಾದುದು.

ಒಂದೊಂದು ಅರಸುಮನೆತನದ ಕಾಲದಲ್ಲಿದ್ದ ಜೈನ ಧರ್ಮದ ಸ್ಥಿತಿಗತಿಯನ್ನೂ ಅದಕ್ಕೆ ಸಂಬಂಧಿಸಿ ಶ್ರವಣಬೆಳ್ಗೊಳದ ಉಲ್ಲೇಖವನ್ನೂ ಹಲವರು ಮಾಡಿದ್ದಾರೆ. ಅವರಲ್ಲಿ ಎ.ಎಸ್.ಅಲ್ತೇಕರ್ ಅವರು Rastrakuta and their times ಎಂಬ ಮಹಾಪ್ರಬಂಧವನ್ನೂ Jainism in the Deccan under the Rostrakutas (J.A. Vol. XV.- ii) ಎಂಬ ಲೇಖನವನ್ನೂ ಬರೆದಿದ್ದಾರೆ. ಅದೇ ರೀತಿ ಎಂ. ವ್ಹಿ. ಕೃಷ್ಣರಾವ್ ಅವರು The Gangas of Talakad ಎಂಬ ಮಹಾಪ್ರಬಂಧವನ್ನೂ Jainism in Gangavadi (The Mythic Society Journal XXIV-i) ಎಂಬ ಲೇಖನವನ್ನೂ ಬರೆದಿದ್ದಾರೆ. ಅಲ್ಲದೆ ಕರ್ನಾಟಕ ಅರಸುಮನೆತನಗಳು (ಲಕ್ಷ್ಮೀನಾರಾಯಣರಾವ್ ಮತ್ತು ಪಂಚಮುಖಿ ಎಸ್. ಆರ್.), ಕರ್ನಾಟಕ ಇತಿಹಾಸ (ಎಸ್.ಆರ್. ಪಂಚಮುಖಿ), ಕರ್ನಾಟಕ ಇತಿಹಾಸ ದರ್ಶನ (ಎಂ. ವ್ಹಿ. ಕೃಷ್ಣರಾವ್ ಮತ್ತು ಕೇಶವ ಭಟ್ಟ), ಕರ್ನಾಟಕ ಪರಂಪರೆ ಸಂ. ೧. ೨ (ಸಂ. ರಂಗನಾಥ ದಿವಾಕರ ಮತ್ತಿತರರು) ಮೊದಲಾದ ಕೃತಿಗಳಲ್ಲಿ ಆಯಾ ಅರಸರ ಕಾಲದಲ್ಲಿಯ ಜೈನ ಧರ್ಮದ ವಿವೇಚನೆಯಿದೆ, ಅರಸರು ಮಂತ್ರಿ ಮಾನ್ಯರು ಕಟ್ಟಿಸಿದ ಜಿನಾಲಯ, ಇತ್ತ ದಾನ ಮೊದಲಾದವುಗಳ ವಿವರವಿದೆ. ಡಿ.ಎಸ್. ಅಚ್ಯುತರಾವ್ ಅವರು (Jainism in Mysore (1578-1760) ಎಂಬ ಲೇಖನ ಬರೆದು (Journal of Mysore University XXI - ii) ಒಡೆಯರ ಕಾಲದಲ್ಲಿ ಜೈನ ಧರ್ಮ, ಶ್ರವಣಬೆಳ್ಗೊಳ ಹೊಂದಿದ್ದ ಸ್ಥಿತಿಗತಿಯನ್ನು ಶಾಸನ, ಮುನಿವಂಶಾಭ್ಯುದಯ, ಗೊಮ್ಮಟೇಶ್ವರ ಚರಿತೆ ಮೊದಲಾದ ಕೃತಿಗಳನ್ನವಲಂಬಿಸಿ ವಿವರಿಸಿದ್ದಾರೆ. ಟಿ. ವ್ಹಿ. ಮಹಾಲಿಂಗಮ್ ಅವರು ತಮ್ಮ The Banas in the South Indian History ಎಂಬ ಲೇಖನ (Journal of Indian History XXIX.P.153)ದಲ್ಲಿ ಕಟ್ಟುಪ್ಪುವನ್ನಾಳುತ್ತಿದ್ದ ದಿಂಡಿಗ ರಾಜನು ಬಾಣ ಅರಸನಾಗಿರಬೇಕು ಎಂದಿದ್ದಾರೆ. ಇಷ್ಟು, ಈ ಕ್ಷೇತ್ರವನ್ನು ಕುರಿತು ಈವರೆಗೆ ನಡೆದಿರುವ ಕಾರ್ಯ.

ಇನ್ನು ಈ ಸ್ಥಳವನ್ನು ಕುರಿತು ನಡೆಯಬೇಕಾದ ಕಾರ್ಯದ ಬಗ್ಗೆ ಕೆಲವು ಸೂಚನೆಗಳು:

೧. ಶ್ರವಣಬೆಳ್ಗೊಳದ ಸಮಗ್ರ ಶಾಸನಗಳ ಶೋಧನಕಾರ್ಯ ಇನ್ನೂ ವ್ಯಾಪಕವಾಗಿ ನಡೆಯಬೇಕು. ಅಲ್ಲಿಯ ಮೂರ್ತಿಗಳ ಮೇಲಿನ ಶಾಸನಗಳ ಅಧ್ಯಯನದಿಂದ ಈ

ನಾಡು ಹೊರ ರಾಜ್ಯಗಳೊಂದಿಗೆ ಹೊಂದಿದ್ದ ಸಂಬಂಧ ತಿಳಿದು ಬರುತ್ತಿದೆ. ಅದರ ಅಭ್ಯಾಸವೂ ಆಗಬೇಕು.

೨. ಶ್ರವಣಬೆಳ್ಗೊಳಕ್ಕೆ ಸಂಬಂಧಿಸಿದ ಹೊರನಾಡುಗಳ ಶಾಸನಗಳ ಶೋಧ, ಅಧ್ಯಯನ ಅತ್ಯವಶ್ಯವಾಗಿ ಆಗಬೇಕಿದೆ.

೩. ಶ್ರವಣಬೆಳ್ಗೊಳಕ್ಕೆ ಸಂಬಂಧಿಸಿದ ಎಲ್ಲ ಗ್ರಂಥಗಳನ್ನೂ ಹುಡುಕಬೇಕಿದೆ ಮತ್ತು ಪ್ರಕಟಗೊಳಿಸಬೇಕಿದೆ. ಈ ಸ್ಥಳಕ್ಕೆ ಸಂಬಂಧಿಸಿದ ಹಲವಾರು ಹಾಡುಗಳು ಪ್ರಾಚೀನ ಹಸ್ತಪ್ರತಿಗಳಲ್ಲಿ ಹುಡುಕಿದ ಹಾಗೆ ಇನ್ನೂ ಸಿಗುತ್ತಿವೆ.

೪. ಶ್ರವಣಬೆಳ್ಗೊಳಕ್ಕೆ ಸಂಬಂಧಿಸಿದ ಎಲ್ಲ ಹಸ್ತಪ್ರತಿ ಪ್ರಶಸ್ತಿಗಳನ್ನು ಒಂದೆಡೆ ಸೇರಿಸಿ ಅಭ್ಯಾಸ ಮಾಡಿದರೆ ಸುಮಾರು ೩-೪ನೂರು ವರ್ಷಗಳ ಅಂದಿನ ಸಾಮಾಜಿಕ ಜೀವನದ ಪರಿಚಯವಾಗುತ್ತದೆ.

೫. ಶ್ರವಣಬೆಳ್ಗೊಳಕ್ಕೆ ಸಂಬಂಧಿಸಿದ ಎಲ್ಲ ಲೇಖನಗಳನ್ನು ಒಂದೆಡೆ ತಂದರೆ ಅಭ್ಯಾಸಿಗಳಿಗೆ ಅನುಕೂಲವಾಗುತ್ತದೆ.

●●

ಮಾಸ್ತಿಯವರ ಕೆಲವು ನಾಟಕಗಳು

-ಡಾ. ಜಯಪ್ರಕಾಶ ಮಾವಿನಕುಳಿ

ಪೀಠಿಕೆ

ಮಾಸ್ತಿಯವರು (ಜೂನ ೬, ೧೮೯೧ ಜೂನ್ ೬, ೧೯೮೬) ತಮ್ಮ ಜೀವಿತಕಾಲದಲ್ಲಿ ವಿಪುಲ ಸಾಹಿತ್ಯವನ್ನು ಸೃಷ್ಟಿ ಮಾಡಿದವರು. ಮಾಸ್ತಿಯವರು ತಮ್ಮ ೩೨ನೇ ವಯಸ್ಸಿನಲ್ಲಿ ನಾಟಕಗಳನ್ನು ಬರೆಯಲು ಆರಂಭಿಸಿದವರು.

ಶಾಂತಾ (೧೯೨೩) ಸಾವಿತ್ರಿ (೧೯೨೩) , ಉಷಾ (೧೯೨೭) , ತಾಳೀಕೋಟೆ (೧೯೨೯), ಮಂಜುಳಾ (೧೯೩೦), ಶಿವಛತ್ರಪತಿ (೧೯೩೨) , ಯಶೋಧರಾ (೧೯೩೩) , ಕಾಕನಕೋಟೆ (೧೯೩೮), ಮಾಸತಿ (೧೯೫೩) , ಅನಾರ್ಕಲಿ (೧೯೫೫) , ಪುರಂದರದಾಸ (೧೯೬೪), ಕನಕಣ್ಣ (೧೯೬೫) , ನಾಟಕಗಳನ್ನೂ, ತಿರುಪಾಣಿ (೧೯೩೭) ಎಂಬ ಕಾವ್ಯ ನಾಟಕವನ್ನು ಭಟ್ಟರ ಮಗಳು (೧೯೬೯). ಎಂಬ ಗೀತನಾಟಕವನ್ನು ಮಾಸ್ತಿಯವರು ಕನ್ನಡಲೋಕಕ್ಕೆ ನೀಡಿದ್ದಾರೆ.

ಮಾಸ್ತಿಯವರು ಬೇರೆ ಭಾಷೆಯಿಂದಲೂ ನಾಟಕಗಳನ್ನು ಅನುವಾದ ಮಾಡಿದ್ದಾರೆ. ಠಾಗೂರ್‌ರವರ ಚಿತ್ರಾಂಗದಾ (೧೯[illegible]) , ಷೇಕ್ಸ್‌ಪಿಯರ್‌ನ ಹ್ಯಾಮಲೆಟ್ (೧೯೫೮), ಚಂಡಮಾರುತ (೧೯೫೮) , ಲಿಯರ್ ಮಹಾರಾಜ (೧೯೫೯) , ದ್ವಾದಶ ರಾತ್ರಿ (೧೯೫೯) ಹೀಗೇ...

ವ್ಯಾಪ್ತಿ:

ಈ ಎಲ್ಲಾ ನಾಟಕಗಳನ್ನೂ, ಕಾವ್ಯ ನಾಟಕಗಳನ್ನು ಮತ್ತು ಅನುವಾದಗಳನ್ನು ವಿಸ್ತರಿಸಿ ಹೇಳುವುದು ಈ ಪ್ರಬಂಧದ ಉದ್ದೇಶವಲ್ಲ. ಅನುವಾದಿತ ನಾಟಕಗಳ ಬಗ್ಗೆ ನಾನು ಏನೂ ಹೇಳುವುದಿಲ್ಲ. ಒಬ್ಬ ಸೃಜನಶೀಲ ನಾಟಕಕಾರ ತನ್ನ ಸ್ವಂತ ನಾಟಕದಲ್ಲಿ ಸತ್ಯ ಆದಷ್ಟು ಬೇರೆ ಅನುವಾದಿತ ಕೃತಿಗಳಲ್ಲಿ ಆಗಲಾರ ಎಂಬುದು ನನ್ನ ಅಭಿಮತ. ಈ ಕಾರಣದಿಂದಾಗೆ ಅವರು ಬರೆದ ನಾಟಕಗಳನ್ನು ಮಾತ್ರ ಇಲ್ಲಿ ಚರ್ಚಿಸಲು ತೊಡಗಿದ್ದೇನೆ.

ಶ್ರೀ ನಿವಾಸರ ಪೌರಾಣಿಕ ನಾಟಕಗಳಲ್ಲಿ ಹೊಸ ವಿಷಯವೇನೂ ಇಲ್ಲ. ಎಲ್ಲವೂ ಪುರಾಣಸಿದ್ಧ ವಾದುವು. ಒಂದು ದೃಷ್ಟಿಯಲ್ಲಿ ಶಾಂತಾ, ಸಾವಿತ್ರಿ, ಉಷಾ, ತಿರುಪಾಣಿ

ನಾಟಕಗಳನ್ನು ಏಕಾಂಕ ದೃಶ್ಯಗಳೆಂದು ಕರೆಯಬಹುದು. (ಮಾಸ್ತಿಯವರೇ ತಮ್ಮ ಈ ಪುಸ್ತಕಗಳಲ್ಲಿ ಇದನ್ನು ಸಣ್ಣ ದೃಶ್ಯಗಳೆಂದು ಕರೆದುಕೊಂಡಿದ್ದಾರೆ)

`ಶಾನ್ತಾ' ನಾಟಕದ ವಸ್ತು ವಾಲ್ಮೀಕಿ ರಾಮಾಯಣದ ಋಷ್ಯಶೃಂಗೋಪಾಖ್ಯಾನದಿಂದ ಎತ್ತಿಕೊಂಡಿದ್ದು. ಮೂಲ ಕಥೆ ಸಾಮಾನ್ಯವಾಗಿ ಎಲ್ಲರಿಗೂ ಚಿರಪರಿಚಿತವಾದುದು. ಅಂಗರಾಜ್ಯದಲ್ಲಿ ಭಯಂಕರವಾದ ಕ್ಷಾಮ ತಲೆದೋರಿದೆ. ಅದರ ನಿವಾರಣೆಯಾಗಬೇಕಾದರೆ ಋಷ್ಯಾಶ್ರಮದಲ್ಲಿರುವ ವಿಭಾಂಡಕ ಮುನಿಯ ಮಗ ಋಷ್ಯಶೃಂಗವನ್ನು ಅಂಗ ರಾಜ್ಯಕ್ಕೆ ಕರೆತರಬೇಕು. ಆತನಿದ್ದ ಕಡೆ ಮಳೆ, ಬೆಳೆಗಳು, ಸಮೃದ್ಧಿಯಾಗಿ ಇರುತ್ತವೆ. ಆದರೆ ಋಷ್ಯಾಶ್ರಮವನ್ನು ಬಿಟ್ಟು ಹೋಗಕೂಡದೆಂದು ಆತನ ತಂದೆಯ ಕಟ್ಟಾಜ್ಞೆ. ಪಿತೃಭಕ್ತನಾದ ಆತನನ್ನು, ಆತನ ತಂದೆಯಿಲ್ಲದ ವೇಳೆಯಲ್ಲಿ ಉಪಾಯದಿಂದ ಕರೆತರಬೇಕು. ಹೆಣ್ಣಿನ ಪರಿಚಯವೇ ಇಲ್ಲದಿದ್ದ ಆತನನ್ನೂ, ಆತನ ತಂದೆಯಿಲ್ಲದ ವೇಳೆಯಲ್ಲಿ ವೇಶ್ಯೆಯರ ಚಾತುರ್ಯಕ್ಕೆ ವಶವರ್ತಿಯಾಗಿ ಮಾಡಿಕೊಂಡು ಅಂಗದೇಶಕ್ಕೆ ಕರೆತರುತ್ತಾರೆ. ಇದರಿಂದ ದೇಶದ ಕ್ಷಾಮ ನಿವಾರಣೆಯಾಗುತ್ತದೆ. ಅಂಗ ರಾಜನು ತನ್ನ ಮಗಳಾದ ಶಾನ್ತೆಯನ್ನು ಋಷ್ಯಶೃಂಗನಿಗೆ ಕೊಟ್ಟು ಮದುವೆ ಮಾಡುತ್ತಾನೆ. ಇದು ಮೂಲದ ಕಥೆ.

ಮೇಲಿನ ಕಥೆಯನ್ನು ಶ್ರೀನಿವಾಸರು ಅಲ್ಪಸ್ವಲ್ಪ ಬದಲಾವಣೆಗಳೊಡನೆ ನಾಟಕರೂಪಕ್ಕೆ ಪರಿವರ್ತಿಸಿದ್ದಾರೆ. ಮೂಲದಲ್ಲಿ ಬರುವ ಅಂಗರಾಜ್ಯಕ್ಕೆ ಬದಲಾಗಿ ನಾಟಕದಲ್ಲಿ ಕೇರಳ ರಾಜ್ಯ ಕ್ಷಾಮಕ್ಕೆ ತುತ್ತಾಗಿದೆ. ಈ ಪುಟ್ಟ ವ್ಯತ್ಯಾಸಕ್ಕೆ ಕಾರಣ ನಾಟಕಕಾರರ ಮಾತಿನಲ್ಲಿ ಹೇಳುವುದಾದರೆ ``ಕೇರಳ ಸುತೆಯರ ಚೆಲ್ವಿಂ ಮಾರನ ಸತಿಯೊಂದು ಚೆಲ್ವು ಪಡೆದುದು ನಾಣಂ"[9] ಕೇರಳದ ಹೆಣ್ಣುಗಳ ಸೌಂದರ್ಯ ರತಿಯನ್ನು ನಾಚಿಸುವಂತಹುದು. ಋಷಿಕುಮಾರನನ್ನು ಒಲಿಸಲು ಹೀಗೆ ಮಾಡಿರುವುದು ಒಂದು ರೀತಿಯಲ್ಲಿ ಉಚಿತವೇ ಆಗಿದೆ.

ಋಷ್ಯಶೃಂಗನನ್ನು ರಾಜಧಾನಿಗೆ ತರಲು ಮೂಲದಲ್ಲಿ ವೇಶ್ಯೆಯರು ನಿಯೋಜಿತರಾಗಿದ್ದರೆ, ನಾಟಕದಲ್ಲಿ ಸ್ವಯಂ ರಾಜಪುತ್ರಿಯೇ ತನ್ನ ಸಖಿಯರೊಡನೆ ಹೋಗುತ್ತಾಳೆ. ಏಕೆ ಈ ಬದಲಾವಣೆಯನ್ನು ತಂದಿರಬಹುದು? ಸಾತ್ವಿಕ ಮನಸ್ಸಿನ ಮಾಸ್ತಿಯವರಿಗೆ ಋಷಿಕುಮಾರನನ್ನು ತರಲು ವೇಶ್ಯೆಯರನ್ನು ಅಟ್ಟುವುದು ಅಷ್ಟಾಗಿ ಹಿಡಿಸಲಿಲ್ಲವಿರಬೇಕು. ಇದರ ಜೊತೆಯಲ್ಲಿ ನಾಡಿನ ಜನರಲ್ಲಿ ``ಈ ರಾಜಕುಮಾರಿ ಹುಟ್ಟಿದ ಐದನೇ ವರುಷ ಯೋಗಕೆಟ್ಟಿದು... ಇದಕ್ಕೆ ಏನಾದರೂ ಶಾಂತಿಯನ್ನು ಮಾಡಬೇಕು."[2] ಎಂದು ಹೇಳುತ್ತಿದ್ದರಂತೆ. ಅವಳ ದೆಸೆಯಿಂದ ಬಂದ ಕ್ಷಾಮವನ್ನು ಅವಳೇ ನಿವಾರಿಸಬೇಕು ಎಂಬ ಬಯಕೆಯೂ ಒಂದು ಕಾರಣವಿರಬಹುದು. ರಾಜಕುಮಾರಿಯ ಹೆಸರೂ ಸಹ `ಚಂಪಲೆ' ಎಂದು ಕರೆದಿರುವುದೂ ವಿಚಿತ್ರಪೂರ್ಣವಾಗಿದೆ. `ಶಾನ್ತೆ' ಎಂಬ ಹೆಸರು ನಾಟಕದ ಕೊನೆಯಲ್ಲಿ ವಿಭಂಡಕ ಮುನಿಯಿಂದ ಆಕೆಗೆ ಬಂದ ಅನ್ವರ್ಥನಾಮ.

ನಾಲ್ಕು ಸ್ಥಾನಗಳಲ್ಲಿ ಪ್ರಸರಿಸುವ ಈ ಪುಟ್ಟನಾಟಕದ ಸಂವಿಧಾನ ಕೌಶಲ ಹೃದಯಂಗಮವಾಗಿದೆ. ಸೂತ್ರಧಾರನ ಬದಲಿಗೆ ರಾಜಗುರುವು ನಾಟಕದ ಆರಂಭದಲ್ಲಿ ಕಾಣಿಸಿಕೊಂಡು ನಾಂದಿಯನ್ನು ಹಾಡುತ್ತಾನೆ. ಕ್ಷಾಮದ ವಿಚಾರ, ಋಷ್ಯಶೃಂಗನ ವಿಚಾರ, ಚಂಪಲೆಯ ಪ್ರವೇಶ ಮತ್ತು ನಿರ್ಧಾರ.

ಎರಡನೇ ಸ್ಥಾನದಲ್ಲಿ ಋಷ್ಯಶೃಂಗನ ಬಳಿ ಚಂಪಲೆಯ ಪ್ರವೇಶ. ನಾಯಕ ನಾಯಿಕೆಯರಲ್ಲಿ ಪ್ರಣಯಾಗಮನ. ಚಂಪಲ ಕುಮಾರಿಯ ಸೌಂದರ್ಯ ಪರವಸ್ತುವಿನ ಸೌಂದರ್ಯವೆಂದುಕೊಳ್ಳುತ್ತಾನೆ. ಆತ ``ಸಂದೇಹವಿಲ್ಲ ದೇವ ವೃಂದವುದೊಂದಿಲ್ಲಿ ವಿಹರಿಸತಕ್ಕುಂ'' ಎಂದುಕೊಳ್ಳುತ್ತಾನೆ. ಮೂರನೇ ದೃಶ್ಯದಲ್ಲಿ ನಾಯಕ-ನಾಯಿಕೆಯರು ಪರಸ್ಪರ ಸಂಧಿಸಿ, ಸಂಭಾಷಣೆ ಮಾಡುತ್ತಾರೆ. ನಾಲ್ಕನೇ ಸ್ಥಾನ ರಾಜಧಾನಿಯಲ್ಲಿ ನಡೆಯುವ ದೃಶ್ಯ. ಋಷ್ಯಶೃಂಗ ಹೋಗಿದ್ದಾನೆ. -ಕ್ಷಾಮ ಹೋಗಿದೆ-ಕೊನೆಗೆ ಅವರಿಗೆ ಮದುವೆಯಾಗುತ್ತದೆ. ವಿಭಾಂಡಕ ಮುನಿ ಸ್ವಲ್ಪ ಕುಪಿತನಾದರೂ ಚಂಪಲೆಯನ್ನು ಕಂಡ ಮೇಲೆ ಕೋಪ ಶಮನವಾಗಿ ``ರಾಜ್ಯದ ಕ್ಷೋಭೆಗೆ ಶಾಂತಿಯನ್ನು ತಂದವಳಾದ್ದರಿಂದ'' ಆಕೆಯನ್ನು `ಶಾಂತಾ' ಎಂದು ಕರೆಯುವುದು ಎಂದು ಹೇಳಿ ನೂತನ ವಧೂವರರಿಗೆ ಶುಭ ಹಾರೈಸುವುದರೊಂದಿಗೆ ನಾಟಕ ಮುಗಿಯುತ್ತದೆ.

`ಸಾವಿತ್ರಿ' ಚಿಕ್ಕ ನಾಟಕ. ಸಾವಿತ್ರಿಯ ಚರಿತ್ರೆ ಅತ್ಯಂತ ಪ್ರಖ್ಯಾತವಾದದ್ದು. ಸಾಮಾನ್ಯವಾಗಿ ಸಾವಿತ್ರಿ ಸತ್ಯವಾನರ ಕಥೆ ಎಲ್ಲರಿಗೂ ತಿಳಿದದ್ದೆ. ಶ್ರೀನಿವಾಸರು ಈ ನಾಟಕ ಬರೆಯುವಾಗ ಅನೇಕ ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ. ಶ್ರೀ ಟಿ. ಎಸ್. ವೆಂಕಣ್ಣಯ್ಯನವರು ಪ್ರಬುದ್ಧ ಕರ್ನಾಟಕ ಪತ್ರಿಕೆಯಲ್ಲಿ ವಿಮರ್ಶೆ ಬರೆದಂತೆ.

೧. ಇತಿಹಾಸದ ಕಥೆಯಲ್ಲಿ ನಾರದರ ಪ್ರಸ್ತಾಪವಿಲ್ಲ. - ಇಲ್ಲಿ ನಾಟಕದ ಎಳೆಯಾಗೆ ನಾರದ ಮೂಡಿಬರುತ್ತಾನೆ.

೨. ಇತಿಹಾಸದಲ್ಲಿ ಸಾವಿತ್ರಿ-ಸತ್ಯವಾನರ ಕಾಡಿನ ಕಥೆ ಅವರ ತಂದೆ-ತಾಯಿಂದರಿಗೆ ನಂತರ ತಿಳಿಯುತ್ತದೆ. ನಾಟಕದಲ್ಲಿ ಅವರೆಲ್ಲರೂ ಸಾವಿತ್ರಿ ಸತ್ಯವಾನರನ್ನು ಹುಡುಕಿಕೊಂಡು ಅವರಿದ್ದ ಅಡವಿಗೆ ಹೋಗುತ್ತಾರೆ.

೩. ಇತಿಹಾಸದಲ್ಲಿ ಯಮನು ಸಾವಿತ್ರಿಗೆ ಪ್ರತ್ಯಕ್ಷನಾಗಿ ವರಗಳನ್ನು ಕೊಟ್ಟನೆಂದು ಹೇಳಿದರೆ ಈ ನಾಟಕದಲ್ಲಿ ಯಮನು ಸಾವಿತ್ರಿಗೆ ಮಾತ್ರವಲ್ಲದೆ ಎಲ್ಲರಿಗೂ ಪ್ರತ್ಯಕ್ಷನಾಗಿ ಕಾಣುತ್ತಾನೆ.

ಇಷ್ಟು ಬದಲಾವಣೆಗಳೂ ಸಹ ನಾಟಕದ ಪ್ರದರ್ಶನ ದೃಷ್ಟಿಯಿಂದ ಅಗತ್ಯವಾಗಿದೆ. ಸಾವಿತ್ರಿಯು ಧರ್ಮವೀರಳು. ಆದುದರಿಂದ ನಾಟಕದ ಪ್ರಧಾನ ರಸ ಧರ್ಮವೀರವಾಗಬೇಕು.

ಧರ್ಮವೀರವನ್ನು ತೆರೆದು ತೋರಿಸಲು ಮುಖ್ಯ ಸಾಧನ ಕರುಣಾರಸ. ಆದುದರಿಂದ ಯಮನನ್ನು ಪ್ರತ್ಯಕ್ಷವಾಗಿ ಎಲ್ಲರಿಗೂ ತೋರಿಸುವುದು ಮತ್ತು ಆ ಕಲ್ಪನೆ ತುಂಬಾ ಜಾಣತನದ್ದು ಎಂದು ನನ್ನ ಭಾವನೆ. ನಾಟಕದ ಮಾತುಗಳು ಸಂಕ್ಷೇಪವಾಗಿ ಅರ್ಥವತ್ತಾಗಿ ಮೂಡಿ ಬಂದಿದೆ. ಸಂದರ್ಭಗಳ ಸೃಷ್ಟಿ ಮತ್ತು ವೈರುಧ್ಯತೆ ಚೆನ್ನಾಗಿ ಮೂಡಿದೆ. ಉದಾ: ವಸಂತಋತುವಿನ ವರ್ಣನೆ ಒಂದು ಕಡೆ ಮತ್ತೊಂದು ಕಡೆ ಕಾದುಕುಳಿತಿರುವ ಮೃತ್ಯು. ಹೀಗೆ ನಾಟಕದ ಕೊನೆಯಲ್ಲಿ ಜೀವನ ವಿಮರ್ಶೆಯನ್ನು ನೋಡಬಹುದು. (ಬಹುಶಃ ಈ ಮಾತು ಅವರ ಒಟ್ಟು ಸಾಹಿತ್ಯಕ್ಕೂ ಅನ್ವಯಿಸಬಹುದೇನೋ) ನಾಟಕದ ಸಂಭಾಷಣೆ ಹೀಗೆದೆ:

ಸಾವಿತ್ರಿ: (ಮುಂದಕ್ಕೆ ಬಂದು ನಮಸ್ಕಾರ ಮಾಡುತ್ತಾ) ದೇವ ದೇವ ಎಲ್ಲವೂ ನೀನೇ ಆಗಿರುವಲ್ಲಿ ವಿಧಿ ಎಂದು ಅಧಿಕಾರವೆಂದು ಹೇಳುತ್ತಾ ವೈಧವ್ಯದ ದುಃಖವನ್ನು ಲೋಕದಲ್ಲಿ ಏತಕ್ಕೆ ಇರಿಸುವೆ ? (ದೇವರು ಮರೆಯಾಗುವನು)[೬] ಈ ಪ್ರಶ್ನೆ ಒಟ್ಟಾರೆ ಎಂದೂ ಮುಗಿಯದ ದುಃಖದ ಬಗ್ಗೆ ಇರುವ ಪ್ರಶ್ನೆಯಾಗಿದೆ. ಇದೇ ಪ್ರಶ್ನೆ ಕಾರ್ನಾಡರ ಯಯಾತಿಯ ಕೊನೆಯಲ್ಲಿ ಪುರು ಕೇಳುವ `ದೇವರೆ ಇದೆಲ್ಲರ ಅರ್ಥವೇನು?[೭] ಎಂಬಷ್ಟೇ ಪ್ರಖರವಾಗೆ ನಮಗೆ ಕಾಣುತ್ತದೆ. `ಸಾವಿತ್ರಿ' ಯ ಮೂಲಕ ಈ ಪ್ರಶ್ನೆಯನ್ನು ಕೇಳಿಸಿದ ಮಾಸ್ತಿಯವರು ತುಂಬಾ ಒಳ್ಳೆಯ ಸಂದೇಶವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇಂಥ ಪ್ರಶ್ನೆಯನ್ನು ಪ್ರೇಮಚಂದ್ರರ ಕಥೆಗಳಲ್ಲೂ ನೋಡಬಹುದು. ಅವರು ಕೇಳುವಂತೆ "ದೇವರಿಗಿಂತ ನಿರ್ದಯಿ ಯಾರೂ ಇಲ್ಲ. ತಾನೇ ಸೃಷ್ಟಿಸಿದ ಆಟದ ಗೊಂಬೆಗಳನ್ನು ಅವುಗಳ ತಪ್ಪು ಹಾಗೂ ತಿಳಿಗೇಡಿತನಕ್ಕಾಗಿ ಅಗ್ನಿಕುಂಡಕ್ಕೆ ತಳ್ಳಿ ಬಿಡುವ ಅವನು ದಯಾಳುವೆನಿಸಲಾರ. ದೇವರಲ್ಲಿರುವ ಅಸಂಖ್ಯ ಗುಣದಲ್ಲಿ ನಿರ್ದಯೆಯೇ ಅಧಿಕವಾಗಿದೆ..."[೮]. ಈ ನಾಟಕದ ಒಂದು ಸಣ್ಣ ದೋಷವನ್ನು ಟಿ. ಎಸ್. ವೆಂಕಣ್ಣಯ್ಯನವರು ಹೇಳುತ್ತಾರೆ. ``ನಮ್ಮ ಕನ್ನಡ ಕವಿಗಳಿಗೆ ಅದರಲ್ಲಿಯೂ ನಮ್ಮ ಪ್ರಾಚೀನ ಕವಿಗಳಿಗೆ ಇನ್ನಾವ ಕವಿತಾಶಕ್ತಿ ಎಷ್ಟಾದರೂ ಇರಲಿ, ಪದ್ಯ ರಚನೆಯಲ್ಲಿ ಮಾತ್ರ ಅಪೂರ್ವವಾದ ಶಕ್ತಿ ಇರುತ್ತದೆ. ಚಂಪೂ ಕಾವ್ಯಗಳನ್ನು ಓದಿದವರಿಗೆ ಈ ನಾಟಕದ ವೃತ್ತಗಳಲ್ಲಿಯೂ ಕಂದಗಳಲ್ಲಿಯೂ ಶೈಥಿಲ್ಯಾದಿ ದೋಷಗಳು ಕಂಡು ಬರುವವು.."[೯]

`ಉಷಾ' ನಾಟಕದಲ್ಲಿ ಉಷಾ ಪ್ರದ್ಯುಮ್ನರ ಸಂಭಾಷಣೆ ರಸಲೇಪದಿಂದ ಹೊಳೆಯುತ್ತದೆ. ಕನಸಿನಲ್ಲಿ ಕಂಡು ವರಿಸಿದ ಪತಿಯ ಪ್ರೇಮಲೀಲೆಯಲ್ಲಿ ಮುಳುಗಿ ಏಳುವ ಉಷೆಯ ಸೂಕ್ಷ್ಮ ಮನಸ್ಸಿನ ಚಿತ್ರ ಅಮೋಘವಾಗಿ ಬಂದಿದೆ.

ಮಾಸ್ತಿಯವರ `ಪುರಂದರದಾಸ' ಮತ್ತು `ಕನಕದಾಸ' ಒಂದು ರೀತಿಯ ಹೊಸ ಪ್ರಯೋಗಗಳು. ಪವಾಡಗಳಿಗೆ ವಿಶೇಷ ಮಹತ್ವ ನೀಡದೆ ಇವರುಗಳ ಹಿರಿಮೆಯನ್ನು

ಚಿತ್ರಿಸಿದ್ದಾರೆ. ಪುರಂದರದಾಸ ನಾಟಕದಲ್ಲಿ ಅತಿ ಸರಳವಾದ ಭಾಷೆಯಲ್ಲಿ ಒಂದು ತತ್ವದ ಹಲವು ಸ್ತರಗಳನ್ನು ಮಿಂಚಿಸಬಲ್ಲ `ಶ್ರೀನಿವಾಸ' ರ ಶಕ್ತಿಯನ್ನು ಮೆಚ್ಚಲೇಬೇಕು. ಈ ಸಂದರ್ಭದಲ್ಲಿ ಪ್ರೊಫೆಸರ್ ಎಲ್.ಎಸ್.ಶೇಷಗಿರಿರಾವ್ ಅವರು ಹೇಳಿದ ಮಾತನ್ನು ನೆನಪಿಸಿಕೊಳ್ಳಬಹುದು. -"ಶ್ರೀನಿವಾಸರ ನಾಟಕದಲ್ಲಿ ಗಹನತೆ ಇಲ್ಲದಿದ್ದರೂ ಸಾಂಕೇತಿಕತೆ ಕಣ್ಣಿಗೆ ಕಟ್ಟುವ ಹಾಗೆ ನಾಟಕ ಮಾಧ್ಯಮವನ್ನು ಬಳಸಿಕೊಂಡರು. `ಪರ್ವತವಾಣಿ' ತಮ್ಮ `ಮುಕುತಿ ಮೂಗುತಿ' ನಾಟಕದಲ್ಲಿ `ಡ್ರಾಮೆಟಿಕ್ ಐರನಿ' ಯನ್ನು ದುರಂತಕ್ಕೆ ಮಾತ್ರವೇ ಬಹುಮಂದಿ ಬಳಸುವ ಈ ಸಾಧನವನ್ನು ನಾಟಕೀಯವಾಗಿ ಬಳಸಿದ್ದಾರೆ. ಪರ್ವತವಾಣಿ ಶ್ರೀರಂಗರ `ಸಿರಿ ಪುರಂದರ' ದಲ್ಲಿ ಮಾನವ ಸ್ವಭಾವದಲ್ಲಿನ ಕುತೂಹಲ ಕೇಂದ್ರವಾಗಿದೆ. ಇವು ನಾಟಕದಲ್ಲಿ ಉಳಿದರೂ ಅವುಗಳ ಸ್ವರೂಪವನ್ನು ಕೆದಕಿ ನೋಡುವ ಪ್ರಯತ್ನವಿಲ್ಲ. ನಾಟಕದ ವ್ಯಕ್ತಿತ್ವ ಸುತ್ತಲಿನ ಪ್ರಪಂಚಕ್ಕೆ ಪ್ರತಿಕ್ರಿಯೆ ತೋರುತ್ತಾ ತುಂಬಿಕೊಳ್ಳುತ್ತಾ ಹೋಗುತ್ತದೆ. `ಶ್ರೀನಿವಾಸ'ರ ಪುರಂದರದಾಸರು -ಉಂಗುರದ ಪ್ರಸಂಗದ ನಂತರ - ಸಮಚಿತ್ತದ ಸ್ಥಿತಪ್ರಜ್ಞೆಯ ಮೂರ್ತಿ; ಶ್ರೀರಂಗರ ಪುರಂದರದಾಸರು ಬೆಳೆಯುತ್ತಾ ಹೋಗುವ ವ್ಯಕ್ತಿ... "[೧೦]

ಪೌರಾಣಿಕ ಮತ್ತು ಐತಿಹಾಸಿಕ ಸಾಮಗ್ರಿಯನ್ನು ಆರಿಸಿಕೊಳ್ಳುವ ಯಾವುದೇ ನಾಟಕಕಾರನಿಗೆ ಅನುಕೂಲ ಮತ್ತುಅನಾನುಕೂಲ ಎರಡು ಉಂಟು. ಸಫೋಕ್ಲಿಸ್, ಯೂರಿಪಿಡೀಸ್, ಕಾಳಿದಾಸ, ಷೇಕ್ಸ್‌ಪಿಯರ್‌ರಿಂದ ಹಿಡಿದು ಜಗತ್ತಿನ ಪ್ರತಿಭಾವಂತ ನಾಟಕಕಾರರೆಲ್ಲರೂ ಈ ಮೂಲ ಸಾಮಗ್ರಿಯನ್ನು ಬಳಸಿಕೊಂಡಿದ್ದಾರೆ. ಕನ್ನಡದಲ್ಲೂ ಈ ಥರದ ಸಾಮಗ್ರಿಯನ್ನು ಬಳಸಿಕೊಂಡು ನಾಟಕ ಬರೆದವರಲ್ಲಿ ಮಾಸ್ತಿ ಮೊದಲನೆ ಯವರಲ್ಲ ಆಧುನಿಕ ಕನ್ನಡನಾಟಕದ ಪ್ರಾರಂಭ ದಿನಗಳಲ್ಲಿ ಶಾಂತಕವಿಗಳು, ಬೆಳ್ಳಾವೆ ನರಹರಿಶಾಸ್ತ್ರಿಗಳು, ನಂಜನಗೂಡು ಶ್ರೀಕಂಠಶಾಸ್ತ್ರಿಗಳು ಮತ್ತಿತರರು ಈ ಸಾಮಾಗ್ರಿಯನ್ನು ಉಪಯೋಗಿಸಿ ಬರೆಯಲು ಆರಂಭಿಸಿದರು. `ಸಂಸ'ರು` ಶ್ರೀ'ಯವರು. `ಕುವೆಂಪು' ಅವರು ನಂತರ ಇತಿಹಾಸದ ಸಾಮಗ್ರಿಗಳನ್ನು ಬಳಸಿ ಅತ್ಯುತ್ತಮ ನಾಟಕಗಳನ್ನು ಬರೆದಿದ್ದಾರೆ.

ಐತಿಹಾಸಿಕ ಸಾಮಗ್ರಿಯ ಬಳಕೆ ಒಂದು ರೀತಿಯಲ್ಲಿ ಪೌರಾಣಿಕ ಸಾಮಗ್ರಿಯ ಬಳಕೆಗಿಂತ ಕ್ಲಿಷ್ಟಕರವಾದುದು. ಯಾಕೆಂದರೆ ಐತಿಹಾಸಿಕ ಪಾತ್ರಗಳಲ್ಲಿ ಜೀವನದ ಆವರಣದಲ್ಲಿ ಖಚಿತತೆ ಉಂಟು. ಆದುದರಿಂದ ಎರಡೂ ಯುಗಗಳ ಮೌಲ್ಯಗಳ ಅರಿವನ್ನು ಹೊಂದಿ ನಾಟಕಕಾರ ನಾಟಕ ರಚಿಸಬೇಕಾಗುತ್ತದೆ. ಹಾಗಾದರೆ ಮೌಲ್ಯ ಎಂದರೇನು? ಕೀರ್ತಿನಾಥ ಕುರ್ತಕೋಟಿ ಬರೆಯುತ್ತಾರೆ " ವ್ಯಕ್ತಿಯ ಒಂದು ಜನಾಂಗದ ರೀತಿ, ನೀತಿ, ನಂಬಿಕೆ ಮತ್ತು ಒಟ್ಟು ನಡವಳಿಕೆಯ ಅರ್ಥವನ್ನು ಈ ಶಬ್ದ ನಿರೂಪಿಸುತ್ತದೆ. ಸತ್ಯ ತಾನಾಗಿಯೇ ಒಂದು ಮೌಲ್ಯವಾಗುವುದಿಲ್ಲ. ಸತ್ಯದ ಬಗ್ಗೆ ನಿಷ್ಠೆ, ಅದನ್ನು ಪಡೆದುಕೊಳ್ಳದೆ

ಬಿಡಲಾರನೆನ್ನುವ ಛಲ. ಆದುದರಿಂದಲೇ ಒಳ್ಳೆಯದಾಗುತ್ತದೆಂಬ ನಂಬಿಕೆ ಮತ್ತು ಅನುಭವದ ಪದರುಗಳಲ್ಲಿ ಅದನ್ನು ಮೂಡಿಸುವ ಪ್ರಜ್ಞೆ. ಇಷ್ಟೆಲ್ಲ ಕೂಡಿ ಬಂದರೆ ಸತ್ಯ ಒಂದು ಮೌಲ್ಯವಾಗುತ್ತದೆ. ಇಂಥ ಪ್ರಜ್ಞೆಗೆ ಆಕೃತಿಯನ್ನು ಕೊಟ್ಟು, ಶಬ್ದಗಳಲ್ಲಿ ಮೂಡಿಸುವ ಕೆಲಸ ಸಾಹಿತ್ಯದ್ದು."[೧೧]

ಇನ್ನು ಅವರ ಐತಿಹಾಸಿಕ ನಾಟಕಗಳ ಕಡೆಗೆ ಗಮನಹರಿಸೋಣ. `ಯಶೋಧರಾ' ನಾಟಕದಲ್ಲಿ ಭಗವಾನ್ ಬುದ್ಧ ಮತ್ತು ಮಾನವೀಯಳಾದ ಯಶೋಧರಾ ನಡುವಿನ ತುಮುಲವನ್ನು ನೋಡಬಹುದು. ಸಿದ್ಧಾರ್ಥ ಬುದ್ಧನಾಗಲು ಹೊರಟು ಹೋಗಿ ಹತ್ತು ವರುಷಗಳೇ ಕಳೆದಿವೆ. ಯಶೋಧರ ಹಿಂದಿನ ದಿನ ರಾತ್ರಿ ಕಂಡ ಕನಸಿನಿಂದ ಆ ಹತ್ತು ವರುಷಗಳ ಕಷ್ಟ ಕಾರ್ಪಣ್ಯಗಳನ್ನು ಒಮ್ಮೆಯೇ ಅನುಭವಿಸುವಂತಹ ಮರ್ಮ ಯಾತನೆಯಲ್ಲಿ ಮುಳುಗಿದ್ದಾಳೆ. ಯಶೋಧರೆಯ ಅಳಲು ನೋಡಿ;

ಅಂಬಿಕೆ, ಅಂಬಿಕೆ
ಈ ಒಂದು ಹಳೆಯ ನೋಟನು ತಡೆಯುವೆನೆ ನನಗೆ
ತ್ರಾಣವಿಲ್ಲ. ನಾನು ಸೋತನೇ ಅಮ್ಮಾ
....
....ಹಳದಾದಾ
ಈ ನನ್ನ ನೋವು ದಿನ ದಿನಕೆ ಹೊಸತಾಗಿ,
ಉಪವನದ ಅಶ್ವತ್ಥ ನೆಲೆಯ ಕಟ್ಟೆಯ ಕೆದರಿ
ಬೇರೂರಿ ಬೆಳೆದಂತೆ, ನನ್ನ ಜೀವನ ನೀಳಿ
ಬೆಳೆಯುವುತ್ತಿರುವುದು ತಾಯಿ, ತಡೆಯಲಾರನು ನಾನು
ತಡೆಯಲಾರೆ; ನಾನು ತಡೆಯಲಾರೆ[೧೨]

`ಅಮ್ಮ' ಎಂಬ ಆರ್ತ ನುಡಿಯು `ತಡೆಯಲಾರೆನು ನಾನು' ಎಂಬ ನುಡಿಯ ಪುನರಾವರ್ತನೆಯೂ ಅತ್ಯಂತ ಪರಿಣಾಮಕಾರಿಯಾಗಿದೆ. ಈ ನಾಟಕದಲ್ಲಿ ಗಿಡಮರಗಳ ಪ್ರತಿಮೆ ಅದೆಷ್ಟು ಬಾರಿ ಬರುತ್ತದೆ ಎಂಬುದು ಗಮನಾರ್ಹವಾದ ಸಂಗತಿ. ಬುದ್ಧನ ಮಾತಿನಲ್ಲಿಯೂ ಗಿಡಮರಗಳ ಪ್ರತಿಮೆ ಅದೆಷ್ಟು ಬಾರಿ ಬರುತ್ತದೆ ಎಂಬುದು ಗಮನಾರ್ಹವಾದ ಸಂಗತಿ.

ಬುದ್ಧನ ಮಾತಿನಲ್ಲಿಯೂ ಗಿಡಮರಗಳ ಪ್ರತಿಮೆ ಕಾಣಬಹುದು.
``...............ತಾನು ಎನ್ನುವುದು.
ವಿಶ್ವಜೀವನದ ವಟವೃಕ್ಷದಾಮತ್ಯದಲಿ
ವನೊಂದು ಕಣವಾಗಿ ಬೇರಿನಲಿ, ತಾಳಿನಲಿ

ಶಾಖೆ, ಉಪಶಾಖೆಯಲಿ, ಕಾಂಡದಲಿ ಎಲೆಗಳಲಿ
ಎಲ್ಲಿಯೋ ಅಲ್ಲಿ ಬೆರೆತಿರುವುದು "[೧೩]

ಇಂಥ ಅನೇಕ ಗೀತಗಳು ಅತ್ಯಂತ ಸಮರ್ಥವಾಗಿ ಬಂದಿವೆ. ಅದರ ಹಿಂದಿನ ಆಲೋಚನೆ, ಜೀವನ ಶ್ರದ್ಧೆ ಬಹಳ ಮುಖ್ಯವಾದುದು.

``............................. ಎಲ್ಲಾ ಸುಖದೀ
ಜೊತೆಗೆ ಕರೆದವರು ಮುಕ್ತಿಯ ಸುಖಕೆ ಒಬ್ಬರೇ
ನಡೆದರಮ್ಮಾ ; ನನ್ನ ಬಿಟ್ಟು ಮರೆಯಾದರು ...[೧೪]

`ಯಶೋಧರೆಯ ಮೂಕ ಸಂಕಟವನ್ನೆಲ್ಲ ಈ ಒಂದೇ ನುಡಿಯಲ್ಲಿ ಮಾಸ್ತಿಯವರು ಸೂಸಿ ಹರಿಸಿದ್ದಾರೆ'.[೧೫] ಯಶೋಧರೆಯ ಒಂದು ವ್ಯಥೆಯೇ ನಾನಾ ಮುಖವಾಗಿ ಒಮ್ಮೆ ಸ್ವಾಭಿಮಾನವಾಗಿ, ಮತ್ತೊಮ್ಮೆ ಹಟವಾಗಿ, ಇನ್ನೊಮ್ಮೆ ಕೊಂಕು ನುಡಿಯಾಗಿ, ಅಣಕವಾಗಿ, ಕೊನೆಗೆ ನಿಟ್ಟುಸಿರಾಗಿ ಹೊರಹೊಮ್ಮುತ್ತದೆ. -

`ಆಣ್ಮ ನನ್ನನು ಬಿಟ್ಟು ಹೊರಟು ಹೋದದು ತಿಳಿದೆ
ಕ್ಷಣದಲಿ ನನ್ನ ಮುಖದಲಿ ಹುಟ್ಟಿದಾಬೇನೆ
ಕಾವು ನೋವುಗಳು ಮನೆಯನು ಮೊದಲು ತುಂಬಿದವು ;
ತುಂಬಿದವು ನಗರವನು, ಉಪವನೋದ್ಯಾನವನು;
ತುಂಬಿದವು ಸಾಗರದ ಕೂಪವನು ; ಆಗಸದ
ಆಳವರಿಯದ ಅಂತರಾಳವನು ತುಂಬಿದವು ;
ಸೂರ್ಯ ಮಂಡಳದಿಂದ ಹೊರಹೊಮ್ಮಿ ಬರುತಿರುವ
ಹೊನ್ನ ಕಿರಣದ ನಡುವೆ ಉಕ್ಕಾಗಿ ಸೇರಿದವು ;
ಲೋಕಕ್ಕೆ ಶಾಂತಿಯನು ತರುವ ಚಂದ್ರನ ಕಾಂತಿ
ನನ್ನೊಳಗೆ ಬೆಳಗದವೊಲೆನ್ನ ಹೃದಯದ ಮಧ್ಯೆ
ಕತ್ತಲೆಯ ಕೋಟೆಯನು ಕಟ್ಟಿದವು...[೧೬]

"ವ್ಯಕ್ತಿತ್ವದಲ್ಲಿಯೊಂದು ಸಮಸ್ಯೆಯನ್ನು ಕಾಣುವುದು ತಾತ್ವಿಕ ದೃಷ್ಟಿಯಾದರೆ, ಒಂದೊಂದು ಸಮಸ್ಯೆಯಲ್ಲೂ ಒಂದೊಂದು ವ್ಯಕ್ತಿಯ ಮುಖವನ್ನರಸುವುದು ಕಾವ್ಯ ದೃಷ್ಟಿ."[೧೭] ಈ ಎಲ್ಲಾ ಸಮಸ್ಯೆಗಳಲ್ಲಿ ಒಬ್ಬ ನಿಜವಾದ ಹೆಂಗಸಿನ ಮನೋವೇದನೆ, ಅಂತಃಕರಣ ನೋವು-ನಲಿವುಗಳು, ಸೂಕ್ಷ್ಮ ಭಾವನೆಗಳ ಏರಿಳಿತ, ಈ ಮಾನಸಿಕ ಕ್ಷೋಭೆಗಳನ್ನು ಮಾಸ್ತಿಯವರು ತುಂಬಾ ಧ್ವನಿಪೂರ್ಣವಾಗಿ ಚಿತ್ರಿಸಿದ್ದಾರೆ. ಯಶೋಧರೆ ಹೆಂಡತಿಯಾಗಿ, ತಾಯಿಯಾಗಿ, ರಾಜನ ಸೊಸೆಯಾಗಿ ತನ್ನಲ್ಲಿ ಭಾವನೆಗಳನ್ನು ಬಿಚ್ಚಿ ಇಟ್ಟಿದ್ದಾಳೆ.

ಆಕೆ ಬುದ್ಧದೇವನನ್ನು ಪ್ರತ್ಯಕ್ಷವಾಗಿ ಕಂಡು ಸಂಭಾಷಿಸುವ ಭಾಗವಂತೂ ಒಂದು ರಸ ಘಟ್ಟ, ಸ್ತ್ರೀಯರಿಗೆ ದೀಕ್ಷೆ ಕೊಡಬೇಕೇ, ಬೇಡವೇ ಎಂಬ ಜಟಿಲ ಪ್ರಶ್ನೆ ನಮ್ಮೆದುರಿಗೆ ಇದು ಬುದ್ಧನ ಮನಸ್ಸಿನೊಳಗೇ ಎದ್ದಿರಬಹುದಾದ ಗೊಂದಲದ ಪ್ರತೀಕ ಸಹ ಇರಬಹುದು. ಹೀಗಾಗಿ ಯಶೋಧರೆ ಬುದ್ಧನ ಮತ್ತೊಂದು ಮನಸ್ಸಿನ ಮುಖವಾಣಿಯಾಗಿ ಕಾಣುತ್ತಾಳೆ.

> ``ಸ್ತ್ರೀಯರಿಗೆ ದೀಕ್ಷೆ ಕೊಡುವೊಡೆ ನಾನು ಪೋಳೆಯಿಟ್ಟ
> ಧರ್ಮದಾಯುಷ್ಯದಲಿ ಅರ್ಧ ಅಳಿವುದು "[೧೮]

ಎನ್ನುತ್ತಾನೆ. ಅದಕ್ಕೆ ಯಶೋಧರೆಯ ಉತ್ತರ ತುಂಬಾ ಮಾರ್ಮಿಕವಾಗಿದೆ.

> ``ಪುರುಷರನು ಮಾತ್ರ ಸಲಹುವುದಾಗೆ ಒಂದು ಯುಗ;
> ಸ್ತ್ರೀ ಪುರುಷರನು ಸಲಹೆ ಅರ್ಧಯುಗ, ಇರ್ವರೂ
> ಮುಕ್ತರಾಗಲಿ, ಅರ್ಧಯುಗವೇ ಸಾಕೆಂಬನು"[೧೯]

ಈ ಮಾತುಗಳು ಸಂವಾದದ ರೂಪದಲ್ಲಿವೆ; ಸಂಘರ್ಷದ ರೂಪದಲ್ಲಿಲ್ಲ. ಅದು ಮಾಸ್ತಿಯವರ ಮನಸ್ಸಲ್ಲ. ಮಾಸ್ತಿಯವರ ಮನಸ್ಸು ಒಂದು ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಕೆಲಸ ಮಾಡುತ್ತದೆ. ಆದುದರಿಂದ ಸಂಘರ್ಷಕ್ಕೆ ಅವರ ಮಾತು ಹಾತೊರೆಯುವುದಿಲ್ಲ. ಟಿ. ಪಿ. ಅಶೋಕ ಹೇಳುವಂತೆ `` ಮಾಸ್ತಿಯವರು ಒಂದು ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಬದುಕಿನ ಬಗ್ಗೆ ಇರುವ ಒಂದು ರೀತಿಯ ಗಾಢವಾದ ಧಾರ್ಮಿಕ ಪ್ರಜ್ಞೆಯಲ್ಲಿ ಎಲ್ಲವನ್ನೂ ಅವಲೋಕಿಸುತ್ತಾರೆ."[೨೦] ಆದುದರಿಂದ ಯಶೋಧರೆ ಧಿಕ್ಕರಿಸುವುದಿಲ್ಲ; ಬಾಗುತ್ತಾಳೆ. ರಾಜಿಸೂತ್ರವನ್ನು ಪಠಿಸುತ್ತಾಳೆ. ಸಂಘರ್ಷಕ್ಕೆ ಅಲ್ಲಿ ಎಡೆಯಿಲ್ಲ. ಪ್ರೇಮಚಂದ್ರರು ಬರೆಯುತ್ತಾರೆ. ``ಬಾಳಿನಲ್ಲಿ ಸಹಯೋಗಕ್ಕೆ ಎಷ್ಟು ಮಹತ್ವವಿದೆಯೋ ಸಂಘರ್ಷಕ್ಕೂ ಅಷ್ಟೇ ಮಹತ್ವವಿದೆ. ಎಷ್ಟೋ ಸಂದರ್ಭಗಳಲ್ಲಿ ಸಹಯೋಗಕ್ಕಿಂತ ಸಂಘರ್ಷವೇ ಹೆಚ್ಚು ಫಲಕಾರಿಯಾಗುತ್ತದೆ. ಆದರೆ ನಾವು ಪರಿಶೀಲಿಸಬೇಕಾಗಿರುವುದು, ಮಾನವತೆಗೆ ಯಾವ ನೀತಿ ಅನುಕೂಲಕರವಾಗಿದೆ, ಯಾವುದು ಪ್ರತಿಕೂಲವಾಗಿದೆ ಎಂಬುದನ್ನು"[೨೧] ಅದೇ ಇಬ್ಸನ್ ನಾಟಕಗಳನ್ನು ನೋಡಿದರೆ ಈ ಮಾತು ಹೆಚ್ಚು ಅರ್ಥವಾಗುತ್ತದೆ. ಇಬ್ಸನ್‌ಗೆ ಸಹಯೋಗ ಮುಖ್ಯ ಅಲ್ಲ ; ಸಂಘರ್ಷ ಮುಖ್ಯ. ಆದುದರಿಂದ ಅವನ ನಾಟಕಗಳಲ್ಲಿ ಎದ್ದು ಕಾಣುವ ಮುಖ್ಯ ಅಂಶವೆಂದರೆ ಬಂಡಾಯ ಪ್ರವೃತ್ತಿ (ಉದಾ: A Dall's House ನ ನೋರಾಳ ಪಾತ್ರ).

ಸ್ವಭಾವ ನಿರೂಪಣೆಯಲ್ಲಿ, ವಸ್ತು ಯೋಜನೆಯಲ್ಲಿ, ಸರಳ ಕಾವ್ಯ ಸಂಭಾಷಣೆಗಳಲ್ಲಿ, ಪ್ರತಿಮೆಗಳನ್ನು ರೂಪಿಸುವಲ್ಲಿನ ಗುಣಗಳನ್ನು ಕಂಡಾಗ ಒಂದು ಒಳ್ಳೆಯ ನಾಟಕವಾಗಿ `ಯಶೋಧರಾ' ನಿಲ್ಲುತ್ತದೆ.

`ಕಾಕನಕೋಟೆ'ಯ ಬಗ್ಗೆ ದೀರ್ಘವಾಗಿ ಬರೆದ ಗಿರೀಶ ಕಾರ್ನಾಡರು ಹೀಗೆ ಹೇಳುತ್ತಾರೆ"- ಕಾಕನಕೋಟೆ ಕನ್ನಡದ ಅತ್ಯುತ್ತಮ ನಾಟಕಗಳೊಲ್ಲಂದಾಗಿದೆ. ಇಂದಾದರೂ ಹೊಸ ನಾಟಕಕಾರರು ವಿಷಯ ನಿರೂಪಣೆ, ಭಾಷೆಯ ಉಪಯೋಗ ಮತ್ತು ತಾಂತ್ರಿಕ ರಚನೆ ಇವುಗಳ ಬಗ್ಗೆ ಹಲವಾರು ಮಹತ್ವದ ಸಂಗತಿಗಳನ್ನು ಈ ನಾಟಕದ ಅಭ್ಯಾಸದಿಂದ ಕಲಿಯಬಹುದಾಗಿದೆ."[೨೩] 'ಕಾಕನ ಕೋಟೆ'ನಾಟಕದ ಕಥಾ ಹಂದರ ಹೀಗಿದೆ: ಕಾಚ ನಾಟಕದ ನಾಯಕ, ಕಾಡ ಕುರುಬರ, ಬೂಡಿನ (ಹಳ್ಳಿಯ) ಬುದ್ಧಿವಂತ. ಅವನ ಬೂಡು ಒಬ್ಬ ಹೆಗ್ಗಡೆಯ ಪಾಳ್ಯದಲ್ಲಿದೆ. ಬೂಡಿನವರಿಂದ ಕಾಣಿಕೆ ಗಳಿಸಿ ಅದನ್ನು ಮೈಸೂರಿನ ಅರಸನಿಗೆ ಕಳುಹಿಸುವುದು ಹೆಗ್ಗಡೆಯ ಕೆಲಸ. ಆದರೆ ಈಗ ಒಮ್ಮೆಲೆ ಈ ಹೆಗ್ಗಡೆ ತನಗಾಗಿ ಒಂದಕ್ಕೆರಡು ಪಟ್ಟು ಕಾಣಿಕೆ ಕೇಳುತ್ತಿದ್ದಾನೆ. ಮೈಸೂರು ಅರಸನಿಗೆ ಮುಟ್ಟಬೇಕಾದ ಕಾಣಿಕೆಗಿಂತ ಹೆಚ್ಚು ತನಗೆ ಮೊದಲು ತಲುಪಬೇಕೆಂದು ಎನುತ್ತಿದ್ದಾನೆ. ದುರ್ಬಲ ಕಾಡ ಕುರುಬರ ಪೇಚಿನಲ್ಲಿ ಬಿದ್ದಿದ್ದಾರೆ.

ಈ ಪೇಚಿನಿಂದ ಪಾರಾಗಲಿಕ್ಕೆ ಕಾಚ ಒಂದು ಉಪಾಯ ಹೂಡುತ್ತಾನೆ. ಅವನು ಮೈಸೂರಿನಲ್ಲಿದ್ದಾಗ ಒಮ್ಮೆ ಅರಸನ ಪ್ರಾಣ ಉಳಿಸಿದ್ದ. ಅದಕ್ಕೆ ಬದಲಾಗಿ ತಾನು ಕರೆಕಳುಹಿಸಿದಾಗ ಬರಬೇಕು ಎಂದು ಅರಸನಲ್ಲಿ ಕೇಳಿಕೊಂಡಿದ್ದ. ಈಗ ಅದನ್ನು ನೆನೆದು, ತನ್ನ ಬೂಡನ್ನು ಈ ಸಂಕಟದಿಂದ ಪಾರು ಮಾಡಬೇಕೆಂದು ಅರಸನಿಗೆ ಹೇಳಿಕಳಿಸುತ್ತಾನೆ ಮತ್ತು ಅರಸ ಬರುವವರೆಗೆ ಹೆಗ್ಗಡೆಯನ್ನು ಸುಮ್ಮನಿರಸಲಿಕ್ಕೆಂದು `ಕಾಕ' ಎಂಬ ವ್ಯಕ್ತಿ ಯಾಗಿದ್ದಾನೆ. ಹೆಗ್ಗಡೆಗೆ ಹೋದಷ್ಟೇ ಕಾಣಿಕೆ ತನಗೂ ಬರಬೇಕು ಎಂದು ಕೇಳುತ್ತಿದ್ದಾನೆ.- ಎಂದು ಹೆಗ್ಗಡೆಗೆ ತಿಳಿಸುತ್ತಾನೆ.

ಕಾಚನೇ 'ಕಾಕ' ಎಂಬ ಮಾತು ಹೆಗ್ಗಡೆಗೆ ಗೊತ್ತಿಲ್ಲ. ಆದರೆ ಬೂಡಿನ ಮಾದಯ್ಯ ಕಾಕನ ಮೇಲೆ ಮತ್ಸರ ತಳೆದು ಕಾಚನೇ ಕಾಕ ಎಂಬ ಮಾತನ್ನು ತಿಳಿಸುತ್ತಾನೆ. ರೊಚ್ಚಿಗೆದ್ದ ಹೆಗ್ಗಡೆ ತನ್ನ ಭೇಟಿಗೆ ಬಂದ ಕಾಚನನ್ನು ಹಿಡಿಯಲು ಯತ್ನಿಸುತ್ತಾನೆ. ಆದರೆ ಮೋದ ಎಂಬ ತರುಣನ ಸಹಾಯದಿಂದ ಕಾಕ ಪಾರಾಗುತ್ತಾನೆ. ಪಾರಾಗುವಾಗ ಹೆಗ್ಗಡೆಯ ಮಗ ಚಿಕ್ಕಯ್ಯನನ್ನು ಮತ್ತು ಹೆಗ್ಗಡೆಯ ಕರಣಿಕರನ್ನು ಸೆರೆಹಿಡಿದು ಒಯ್ಯುತ್ತಾನೆ. ಅವರು ಬೂಡಿನಲ್ಲಿ ಬಂಧಿಗಳಾಗಿರುವವರೆಗೆ ಹೆಗ್ಗಡೆಗೆ ಬೂಡಿನ ಮೇಲೆ ದಾಳಿ ಮಾಡುವ ಧೈರ್ಯವಿಲ್ಲ.

ಅರಸರ ಆಗಮನದಿಂದ ಎಲ್ಲ ಸಂಕಟಗಳ ನಿವಾರಣೆಯಾಗುತ್ತದೆ. ಹೆಗ್ಗಡೆಯ ಮಗ ಚಿಕ್ಕಯ್ಯ ಕಾಕನ ಮಗಳಾದ ಮೊಲ್ಲೆಯನ್ನು ವರಿಸುತ್ತಾನೆ. ಅರಸ ರಣಧೀರ ಈ ಬೂಡನ್ನು ಹೆಗಡೆಯ ಪಾಳ್ಯದಿಂದ ಬೇರ್ಪಡಿಸಿ, ಸ್ವತಂತ್ರ ಪಾಳ್ಯವನ್ನಾಗಿ ಮಾಡುತ್ತಾನೆ. ಬೂಡಿಗೆ

`ಕಾಕನ ಕೋಟೆ' ಎಂಬ ಹೆಸರಿಟ್ಟು ಚಿಕ್ಕಯ್ಯನನ್ನು ಅದರ ಹೆಗ್ಗಡೆಯಾಗಿ ನೇಮಿಸುತ್ತಾನೆ. ಆದರೆ ಬೂಡಿಗೊಂದು ಕೋಟೆ ಕಟ್ಟಿಸಬೇಕು ಎಂದಾಗ ಮಾತ್ರ ಕಾಡಕುರುಬರೆಲ್ಲ ``ಕೋಟೆ ಬೇಡ ನಿಸರ್ಗದಲ್ಲಿ ರಮಿಸುವ ಬೂಡೇ ಇರಲಿ" ಎಂದು ಬೇಡಿ ಕೊಳ್ಳುತ್ತಾರೆ ಜಿ. ಎಚ್. ನಾಯಕರು ಹೇಳುವಂತೆ " ಒಂದು ಸಂಸ್ಕೃತಿಯಲ್ಲಿ ಆಳವಾಗಿ ಬೇರು ಬಿಟ್ಟ ಮನಸ್ಸಿನ ಹಿನ್ನೆಲೆಯುಳ್ಳ ಜನತೆಯ ಒಂದು ಸಮೂಹವಾಗಿ ಕಾಡು ಕುರುಬರು ನಾಟಕದಲ್ಲಿ ಚಿತ್ರಿತವಾಗಿರುವುದರಿಂದ ಅವರಿಗೆ ಎದುರಾದ ಸಮಸ್ಯೆ, ಅವರು ಅದರಿಂದ ಪಡೆಯುತ್ತಿರುವ ಕಷ್ಟ ಅದರ ಪರಿಹಾರಕ್ಕಾಗಿ ಅವರು ನಡೆಸಿದ ಹೋರಾಟ, ಪಡೆದ ಪರಿಹಾರ ಎಲ್ಲವನ್ನೂ ಅವರ ಸಂಸ್ಕೃತಿಯ ಸಂದರ್ಭದಲ್ಲಿಟ್ಟು ಅರ್ಥೈಸಬೇಕಾಗುತ್ತದೆ "[೨೩] ಈ ಸಂದರ್ಭದಲ್ಲಿ ಪ್ರಸನ್ನ ಹೇಳುವ ಮಾತನ್ನು ಗಮನಿಸುವುದು ಒಳ್ಳೆಯದು ``ಮಾಸ್ತಿ ವಾಸ್ತವವಾದವನ್ನು ಸಣ್ಣಕಥೆಗಳ ಮೂಲಕ ಗ್ರಹಿಸಿ ನಾಟಕ ರಚನೆಗೆ ತೊಡಗಿದರು. ಈ ಕಾರಣದಿಂದಲೋ ಏನೋ ತುಂಬಾ ಸರಾಗವಾಗಿ ನಾಟಕದ ಭಾಷೆಯನ್ನು ಕರಗತಮಾಡಿ ಕೊಂಡಿರುವುದನ್ನು ನಾವು ಕಾಕನಕೋಟೆಯಲ್ಲಿ ಕಾಣುತ್ತೇವೆ." [೨೪] ಅವರು ಕಥನ ತಂತ್ರವನ್ನು ಜಾನಪದ ಬಳಕೆಯಲ್ಲಿ ಪ್ರಾರಂಭಮಾಡಿದರು ಎಂಬುವುದು ಐತಿಹಾಸಿಕ ಮಹತ್ವದಾಗುತ್ತದೆ. ೧೯೩೮ರ ವೇಳೆಗೆ ಮಾಸ್ತಿಯವರು ಕಾಕನಕೋಟೆ ಕಥೆಯನ್ನುವರು `ಕರಿಹೈದ' ನ ಬಗ್ಗೆ ಕಥನ ಕಾವ್ಯವಾಗಿ ಬರೆಯಬೇಕೆಂದು ಮೊದಲು ಯೋಚಿಸಿದ್ದರಂತೆ. ಆ ಮೇಲೆ ಅದನ್ನೊಂದು ನಾಟಕವಾಗಿ ಬರೆದಾಗಲೂ ಕರಿಹೈದನ ವೀರ ವೃತ್ತಾಂತದ ಲಾವಣಿ ರೂಪದ ಪದ್ಯವನ್ನು ತುಂಬ ಸುಂದರವಾಗಿ ನಾಟಕದುದ್ದಕ್ಕೂ ಬಳಸಿಕೊಂಡಿದ್ದಾರೆ.[೨೫]

ಇಡೀ ನಾಟಕದಲ್ಲಿ ಕಾಣಬರುವುದು ಅರಸರ ಬಗೆಗಿನ ಅಪಾರ ಸ್ವಾಮಿನಿಷ್ಠೆ. ಕಾಕನೂ ಅರಸನಿಗೆ ಸ್ವಾಮಿನಿಷ್ಠನಾಗಿದ್ದಾನೆ. (ಕಾಕ > ಅರಸ). ಹೆಗ್ಗಡೆಯೂ ಅರಸನಿಗೆ ಸ್ವಾಮಿ ನಿಷ್ಠನಾಗಿದ್ದಾನೆ. (ಹೆಗ್ಗಡೆ > ಅರಸ). ಆದರೆ ಭಿನ್ನಾಭಿಪ್ರಾಯಗಳು ಮೂಡಿಬರುವುದು ಹೆಗ್ಗಡೆಯ ಲೋಭಿತನದಿಂದ (ಕಾಕ ><ಹೆಗ್ಗಡೆ). ಅಂದರೆ ಆರ್ಥಿಕ ಉಪಭಾಷೆಯಲ್ಲಿ ಹೇಳುವುದಾದರೆ ಯಾವನು ಉತ್ಪಾದನೆ ಮಾಡುತ್ತಾನೋ ಆತನ ಮೂಲ ಬೆಲೆಗೆ ಚಿಂತಿಸದೇ ಮಧ್ಯದ ಲಾಲಿ ಅಥವಾ ಹೋಲ್‌ಸೇಲ್ ವ್ಯಾಪಾರಿಯ ಲೋಭಿತನಕ್ಕೊಂದು ಸವಾಲು ಹಾಕುತ್ತಿರುವ ಬಳಕೆದಾರನಂತೆ ಕಂಡು ಬರುತ್ತದೆ.

ಹಳೆಯ ಮೈಸೂರಿನ ಬಹಳಷ್ಟು ಲೇಖಕರಲ್ಲಿ ಕಂಡು ಬರುವ ಸಮಾನ ಅಂಶ ಅದು. (`ಸಂಸ'ರ ವಿಗತ ವಿಕ್ರಮರಾಯ, ಕೈಲಾಸಂ ಅವರ `ಪೋಲಿಕಿಟ್ಟು') ಆದರೆ ಮೈಸೂರಿನ ಲೇಖಕರ ಬಗ್ಗೆ ಪ್ರಸನ್ನ ಬರೆಯುತ್ತಾರೆ. - "ಈ ಪ್ರತಿಯೊಬ್ಬ ಲೇಖಕನೂ ವೈಯಕ್ತಿಕ ಸ್ವರದಲ್ಲಿ ಸ್ವಾಮಿನಿಷ್ಠೆಯನ್ನು ಶ್ರೇಷ್ಠಮೌಲ್ಯವೆಂದು ಒಪ್ಪಿಕೊಂಡು ಕೃತಿ ರಚನೆಗೆ ಕೈಹಾಕಿದರೂ, ಕೃತಿಯ ಆಂತರಿಕ ಒತ್ತಾಸೆ ಈ ನಿಷ್ಠೆಯನ್ನು ಮೀರಿ

ಸ್ವಾಮಿತ್ವದ ಬಳಿ ರೇಖೆಯ ಜೊತೆ ಕಂದು ಬಣ್ಣದ ಕಲೆಗಳನ್ನು ಹೊರಹಾಕುತ್ತದೆ. ಅದಕ್ಕೆಂದೇ ಇವರು ಇಂದಿಗೂ ಆಸಕ್ತಿ ಉಳಿಸಿಕೊಂಡು ಬರಬಲ್ಲ ಒಳ್ಳೆಯ ಲೇಖಕರಾಗಿ ಉಳಿದಿರುವುದು"[೨೬].

ಕಾಟ ರಣಧೀರನನ್ನು ಗುರುತಿಸಿ `` ಬಂದಿರಾ ನನ್ನ ಬದಿಕಿಸೋಕ"[೨೭] ಎಂದು ರಣಧೀರನ ಕಾಲಿಗೆ ಬಿದ್ದು ಹೊರಳಾಡುವುದು ಆತನ ಸ್ವಾಮಿನಿಷ್ಠೆಗೆ ಸಾಕ್ಷಿಯಾಗುತ್ತದೆ. ನಾಟಕದ ಮಂಗಳಗೀತೆಯೂ ಮೈಸೂರು ಅರಸನ್ನು ಹಾಡಿ ಹೊಗಳುವ ಸ್ತುತಿಯೇ ಆಗಿದೆ:

"ಗೆಲ್ಲೋ ರಣಧೀರ ಗೆಲ್ಲೋ ಕಂಠೀರವ ;
ಗೆಲ್ಲು ನರಸರಾಜ ಹಗೆಗಳಿಗೆ ಭೈರವ,
ಗೆಲ್ಲು ಮೈಸೂರೊಡೆಯ ಗೆಲ್ಲು ನಮ್ಮರಸ
ಆಳೀ ಬಾಳೀ ನೂರೊಂದು ವರುಸ
ಬಹುಕಾಲ ಆಳಲಿ ನಮ್ಮ ನಾಡೊಡೆಯ
ಹರಡಿ ಹೆಚ್ಚಲಿ ನೆರಳು ಅವನ ಬಿಳಿಕೊಡೆಯ"[೨೮]

ಕಾಕನಕೋಟೆಯು ನಾಟಕದುದ್ದಕ್ಕೂ ಕಾಡ ಕುರುಬರ ಜೀವನದ ಬೇರೆ ಬೇರೆ ಅಂಶಗಳು ವರ್ಣಿತವಾಗಿವೆ. ನಾಟಕದಲ್ಲಿ ಬರುವ ಮುಖ್ಯ ವಿಷಯಗಳನ್ನು ಹೀಗೆ ಪಟ್ಟಿ ಮಾಡಬಹುದು.

೧. ಕಾಡಿನ ಕುರುಬರ ಸಂಸ್ಕೃತಿಯ ಅನಿವಾರ್ಯ ಪಲ್ಲಟ ತನ್ಮೂಲಕ ನಗರೀಕರಣದ ಅನಿವಾರ್ಯತೆ:

ಕಾಟ: ಅರಿವೇ ಅಚ್ಚಡ ಬೇಕು ಅನ್ನೊ ಅರಸರಿಗೆ ಕಾಕನ ಮಾತು ಇರಲಿ ಅಂದರೆ ಆಗದು. ಇವತ್ತು ಅರಿವೆ ಅಚ್ಚಡ ಚಂದ ಆದಹಂಗೆ ನಾಳೆ ಕಾಡು ಬಿಡೋ ಬಾದ ಬಂದಾತು. ಹೆಗ್ಗಡೆ ಬಂದು ಕಾಡಿಗೆ ಬೆಂಕಿ ಇಕ್ಕಿತೀನಿ ಅಂದರೆ ನಿಂತು ಕಾದಬೇಕು, ಸೋತರೆ ಜಡಬೇಕು. ಇದೂ ಇರಲಿ ಅಂತೀರೇ ?[೨೯]

ಮಾವ ಅಪ್ಪ ಬಂದು ಹೆಗ್ಗಡೆಯವರ ಜತೆಗೆ ವಿರಸಬೇಡ ಎಂದಾಗ ಬೂಡಿನ ಜನ ಒಪ್ಪಿದ್ದರೆ ಗುಲಾಮಗಿರಿಯನ್ನು ಅಪ್ಪಿಕೊಂಡಿದ್ದರೆ ನಗರೀಕರಣದ ಪ್ರಶ್ನೆ ಬರುತ್ತಲೇ ಇರಲಿಲ್ಲ. ಆದುದರಿಂದ ಮಾಸ್ತಿಯವರನ್ನು ಸೌಮ್ಯವಾದಿ ಎಂದು ಕರೆಯಬಹುದೇ ಹೊರತು ಪ್ರತಿಗಾಮಿ ಎಂದು ಕರೆಯಲಾಗುವುದಿಲ್ಲ. ಪ್ರಸನ್ನ ಬರೆಯುತ್ತಾರೆ " ಕಾಕನಕೋಟೆ ಸ್ವಾಮಿ ನಿಷ್ಠೆಯ ಪ್ರಚಾರ ಕೃತಿ ಮಾತ್ರವೇ ಆಗದೇ ಇತರ ಸತ್ಯಗಳನ್ನು ಉಳಿಸಿಕೊಂಡು ಬಂದಿದ್ದರೆ.. ಮಾಸ್ತಿಯವರ ಸಂಕೀರ್ಣ ವ್ಯಕ್ತಿತ್ವವೂ ಕಾರಣ. ಅವರ ವ್ಯಕ್ತಿತ್ವದ ಬಹಳ ಮುಖ್ಯ ಗುಣವೆಂದರೆ

ಮಾಸ್ತಿ ಪಕ್ಷಪಾತಿಯಾಗುವುದಿಲ್ಲ. ಸಮಾಜವಾದಿ ಲೇಖಕನಿಗೆ ತನ್ನ ಬದ್ಧ ರಾಜಕೀಯ ನಿಲುವನ್ನು ಹೊಂದಿಯೂ ಸಾಹಿತ್ಯಕೃತಿಯ ಚೌಕಟ್ಟಿನೊಳಗೆ, ವಿವಿಧ ಪಾತ್ರಗಳ ನಡುವೆ ಪಕ್ಷಪಾತಿಯಾಗದೇ ಉಳಿಯುವುದು ಒಂದು ಸವಾಲೆಸದಂತೆ. ಅದನ್ನಾತ ಪ್ರಜ್ಞಾಪೂರ್ವಕವಾಗಿ ರಚಿಸಿಕೊಳ್ಳಬೇಕಾಗುತ್ತದೆ. ಆದರೆ ಹಳೇ ಮೈಸೂರಿನ ಲಿಬರಲ್ ಮನುಷ್ಯ ಮಾಸ್ತಿಗೆ ಅದು `ಸಹಜ ಸ್ಥಿತಿ". [೩೦]

೨. ನಾಟಕದ ಭಾಷೆ:

ಭಾಷೆ ಇಲ್ಲದೇ ಯಾವ ಸಾಹಿತ್ಯ ಪ್ರಕಾರವೂ ಇಲ್ಲ. ಅದು ಸರ್ವಸ್ವ. ಇದು ಲಿಖಿತ ನಾಟಕದವರೆಗೂ ಸತ್ಯ. ಆದರೆ ರಂಗದ ಮೇಲೆ ನಾಟಕ ಬಂದಾಗ ನಾಟಕದ ಭಾಷೆ ಇತರ ಭಾಷೆಗಳಿಂತ ಭಿನ್ನವಾಗಿರುತ್ತದೆ. ಪ್ರಸನ್ನ ಹೇಳುವಂತೆ " ಭಾಷೆ ಕಾದಂಬರಿಯಲ್ಲಿ ಗದ್ಯವಾಗಿರುವಂತೆ ಕಾವ್ಯದಲ್ಲಿ ಪದ್ಯವಾಗಿರುವಂತೆ ನಾಟಕದಲ್ಲಿ ಸಂಭಾಷಣೆಯಾಗಿರುವತ್ತದೆ"[೩೧] ಮೊಲ್ಲೆ - ಕಾಕ, ಮೊಲ್ಲ - ಮೋನಿ, ಮೊಲ್ಲೆ - ಚಿಕ್ಕಯ್ಯ - ಇವರುಗಳ ಸಂಬಂಧಗಳ ಪರಾಮರ್ಶೆಯನ್ನು ಮಾಡುವ ನಾಟಕ ಸಂಭಾಷಣೆಯಿಂದ ಮಾತ್ರವಲ್ಲದೇ ಕೆಲವು ಟಿಪ್ಪಣಿಯಿಂದಲೂ ಸೂಚನೆಯಿಂದಲೂ ಗಮನಿಸಬಹುದು.(ಮೋನನು ಮೊಲ್ಲೆ ಚಿಕ್ಕಯ್ಯನನ್ನು ನೋಡುತ್ತಿರುವ ರೀತಿಯಿಂದ ಖಿನ್ನನಾಗಿ.......... ನಡೆಯುವನು)[೩೨]

ಕರ್ನಾಡ ಹೇಳುತ್ತಾರೆ`ಕೇವಲ ಮನೋರಂಜನೆಯ ಪಾತಳಿಯ ಮೇಲೂ ನಾಟಕ ಅತ್ಯಂತ ಯಶಸ್ವಿಯಾಗಿದೆ. ಒಳ್ಳೆಯ ಹಾಡುಗಳಿವೆ, ನೃತ್ಯಗಳಿವೆ, ನಯನ ಮನೋಹರವಾದ ರಂಗಸಜ್ಜಿಕೆಗೆ ಆಸ್ಪದವಿದೆ, ಕಾಡ ಕುರುಬರು, ಊರ ಕುರುಬರು, ರಾಜಸಭೆಯವರು ಇವರ ವೇಷ ಭೂಷಣಗಳಲ್ಲಿ ವೈವಿಧ್ಯಕ್ಕೆ ಎಡೆಯಿದೆ...... ಆದರೆ`ಮನೋರಂಜನೆ'ಯ ಪಾತಳಿಯಿಂದೆತ್ತಿ ಇದನ್ನು ಶ್ರೇಷ್ಠ ನಾಟಕಗಳ ಸಾಲಿನಲ್ಲಿ ಕೂಡಿಸಲು ಕಾರಣವೆಂದರೆ ಮಾಸ್ತಿಯವರ ಭಾಷೆ. ಕಾಕನಕೋಟೆ ಐತಿಹಾಸಿಕ ನಾಟಕವಾದ್ದರಿಂದ ಅದರಲ್ಲಿ ನಮ್ಮ ಇತಿಹಾಸದ ಪದರುಗಳ ದರ್ಶನವಾಗುತ್ತದೆ. ಇತಿಹಾಸವೆಂದರೇನು ? ಅದರ ಪರಿಣಾಮವೆಂಥಾದ್ದು? ಸಮಕಾಲೀನ ಘಟನೆಗಳೇ ಇತಿಹಾಸವಾಗಿ ಪರಿವರ್ತನೆಗೊಳ್ಳುವಾಗ ಅವು ಜನಾಂಗದ ಸಂಸ್ಕೃತಿಯಲ್ಲಿ ಯಾವ ಸ್ಥಾನ ಪಡೆಯಬಹುದು ? ಮತ್ತು ಅವುಗಳ ಸ್ವರೂಪದಲ್ಲೇ ಯಾವ ಬದಲಾವಣೆಗಳಾಗಬಹುದು? ಇವೆಲ್ಲ ಪ್ರಶ್ನೆಗಳು ಈ ನಾಟಕದಲ್ಲಿ ಏಳುತ್ತವೆ. ಅರ್ಥಾತ್ ಈ ಪ್ರಶ್ನೆಗಳನ್ನು ಯಾವ ಪಾತ್ರಗಳೂ ಬಾಯಿಬಿಟ್ಟು ಚರ್ಚಿಸುವುದಿಲ್ಲ. ಅಂಥ ಬುದ್ಧಿವಂತಿಕೆಯು ಅವರಲ್ಲಿಲ್ಲ. ಆದರೆ ಮಾಸ್ತಿಯವರು ಇವುಗಳನ್ನು ನಾಟಕದ ಕ್ರಿಯೆಯ ಮುಖಾಂತರ ಪರಿಶೀಲಿಸಿದ್ದಾರೆ. "[೩೩] ಜಿ. ಹೆಚ್. ನಾಯಕ ಬರೆಯುವಂತೆ "ನಾಟಕದ ಕಥೆಯ ಬೆಳವಣಿಗೆಯ ಜಾಡನ್ನು ಹಿಡಿದು ಹೋದಾಗ `ಕಾಕನಕೋಟೆ' ನಾಟಕ ಅನೇಕ ಆಕಸ್ಮಿಕ ಘಟನೆಗಳಿಂದ ಕಟ್ಟಿದ ಹಂದರವಾಗಿ ಕಾಣಿಸುತ್ತದೆ. ಒಂದು ಸುಖಾಂತ

ನಾಟಕವೆಂಬಂತೆ ಅನ್ನಿಸುತ್ತದೆ. ಆದರೆ ಅದರ ಜೊತೆಗೆ ಸಂಸ್ಕೃತಿಯೊಂದರ ದುರಂತದ ಕಥೆಯನ್ನೂ ಈ ನಾಟಕ ಹೇಳುತ್ತಿದೆಯೆಂಬಂಥ ಬೋಧೆ ಓದುಗನಲ್ಲಿ ಉಂಟಾಗುವುದು ಈ ನಾಟಕದ ವೈಶಿಷ್ಟ್ಯವಾಗಿದೆ."[೩೪]

ಅಡಿ ಟಿಪ್ಪಣಿಗಳು

೧. ಶಾನ್ತಾ, ಪುಟ ೬, ಜೀವನ ಕಾರ್ಯಾಲಯ (ಮಾರ್ಚ ೧೯೬೧)

೨. ಶಾನ್ತಾ, ಮಾಸ್ತಿ, ಪುಟ ೮

೩. ಅದೇ, ಪುಟ ೨೪

೪. ಅದೇ, ಪುಟ ೪೮

೫. ಸಾವಿತ್ರಿ, ಟಿ. ಎಸ್. ವೆಂಕಣ್ಣಯ್ಯ, ಶ್ರೀನಿವಾಸ (ಮಾಸ್ತಿ ಅಭಿನಂದನಾ ಗ್ರಂಥ) ಪುಟ ೨೨೭, ಮುದ್ರಣ ೧೯೭೨

೬. ಸಾವಿತ್ರಿ, ಮಾಸ್ತಿ, ಪುಟ ೪೮ ಜೀವನ ಕಾರ್ಯಾಲಯ, ಮುದ್ರಣ ೧೯೬೧

೭. ಯಯಾತಿ, ಗಿರೀಶ ಕಾರ್ನಾಡ ಪುಟ ೯೨, ಮುದ್ರಣ ೧೯೭೩

೮. ಅಮೃತ್‌ರಾಯ್: ಕಲಮ್ ಕಾಸಪಾಹೀ, ಪುಟ ೫೨೩, ಮುದ್ರಣ ೧೯೭೬

೯. ಶ್ರೀನಿವಾಸ (ಭಿನಂದನಾಗ್ರಂಥ), ಸಾವಿತ್ರಿ - ಟಿ.ಎಸ್. ವೆಂಕಣ್ಣಯ್ಯ, ಪುಟ ೨೨೬, ಮುದ್ರಣ ೧೯೭೨

೧೦. ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ:ಸಂಪಾದಕ: ಜಿ.ಎಸ್. ಶಿವರುದ್ರಪ್ಪ (ಕನ್ನಡ ನಾಟಕಗಳ ವಸ್ತು : ಐತಿಹಾಸಿಕ ಮತ್ತು ಪೌರಾಣಿಕ, ಎಲ್. ಎಸ್. ಶೇಷಗಿರಿ ರಾವ್) ಪುಟ:೪೩, ಮುದ್ರಣ ೧೯೭೩

೧೧. ಸಂಸ್ಕೃತಿ ಸ್ಪಂದನ -ಕೀರ್ತಿನಾಥ ಕುರ್ತಕೋಟಿ, ಪುಟ ೨೨, ಮುದ್ರಣ ೧೯೮೬ ಪ್ರಕಾಶಕರು: ಮನೋಹರ ಗ್ರಂಥಮಾಲೆ, ಧಾರವಾಡ

೧೨. ಯಶೋಧರಾ (ನಾಟಕ), ಶ್ರೀನಿವಾಸ, ಪುಟ ೭. ಆರನೇ ಮುದ್ರಣ, ೧೯೭೧, ಪ್ರ. ಜೀವನ ಕಾರ್ಯಾಲಯ, ಬೆಂಗಳೂರು

೧೩. ಅದೇ ಪುಟ, ೭೭

೧೪. ಅದೇ ಪುಟ, ೬

೧೫. ಆರ್. ಜಿ. ಕುಲಕರ್ಣಿ, ಸಂಯುಕ್ತ ಕರ್ನಾಟಕ, ದಿನಾಂಕ ೨೦ ಜನವರಿ, ೧೯೬೧

೧೬. ಯಶೋಧರ, ಪುಟ ೪

೧೭. ಆರ್. ಜಿ. ಕುಲಕರ್ಣಿ, ಸಂಯುಕ್ತ ಕರ್ನಾಟಕ ೨೦ ಜನವರಿ, ೧೯೬೧

೧೮. ಯಶೋಧರಾ (ನಾಟಕ), ಸಂಯುಕ್ತ ಕರ್ನಾಟಕ, ಪುಟ ೬೯

೧೯. ಅದೇ ಪುಟ ೭೦

೨೦. ಸಾಹಿತ್ಯ ಸಂಪರ್ಕ, ಟಿ. ಪಿ.ಅಶೋಕ, ಪುಟ ೭, ಅಕ್ಷರ ಪ್ರಕಾಶನ, ಸಾಗರ ಮುದ್ರಣ, ೧೯೮೬

೨೧. ಪ್ರೇಮಚಂದ್, ವಿವಿಧ್ ಪ್ರಸಂಗ್, ಸಂಪುಟ ೭, ಪುಟ ೩೦೨

೨೨. ಮನ್ವಂತರ (ನಾಟಕಾಂಕ) ಗಿರೀಶ್ ಕಾರ್ನಾಡರ ಲೇಖನ, ಪುಟ ೬೭, ಮನೋಹರ ಗ್ರಂಥಮಾಲೆ, ಮುದ್ರಣ ೧೯೬೭

೨೩. ನಿರಪೇಕ್ಷ, ಜಿ. ಎಚ್. ನಾಯಕ,ಪುಟ ೧೧೯, ಅಕ್ಷರ ಪ್ರಕಾಶನ, ಸಾಗರ ಮುದ್ರಣ, ೧೯೮೪.

೨೪. ನಾಟಕ ರಂಗ ಕೃತಿ, ಪ್ರಸನ್ನ, ಪುಟ ೯೭, ಅಕ್ಷರ ಪ್ರಕಾಶನ, ಸಾಗರ ಮುದ್ರಣ, ೧೯೮೫

೨೫. ಅದೇ ಪುಟ, ೯೮

೨೬. ಅದೇ ಪುಟ, ೧೦೪ -೧೦೫

೨೭. ಕಾಕನ ಕೋಟೆ:ಮಾಸ್ತಿ ಪು ೭೨, ೫ನೇ ಮುದ್ರಣ, ೧೯೮೮

೨೮. ಅದೇ ಪುಟ, ೮೦

೨೯. ಅದೇ ಪುಟ, ೨೧

೩೦. ನಾಟಕ ರಂಗಕೃತಿ, ಪ್ರಸನ್ನ, ಪುಟ ೧೧೬,ಅಕ್ಷರ ಪ್ರಕಾಶನ, ಸಾಗರ ಮುದ್ರಣ

೩೧. ಅದೇ ಪುಟ, ೩

೩೨. ಕಾಕನ ಕೋಟೆ, ಪುಟ, ೪೬

೩೩. ಮನ್ವಂತರ (ನಾಟಕಾಂತ) ಕಾರ್ನಾಡ, ಪುಟ ೮೩,

೩೪. ನಿರಪೇಕ್ಷ, ಜಿ. ಎಚ್.ನಾಯಕ,ಪುಟ ೧೨೫, ಅಕ್ಷರ ಪ್ರಕಾಶನ, ಸಾಗರ, ೧೯೮೪

ಭಾರತೀಯ ಸಂಗೀತದಲ್ಲಿ ಮನೋವೈಜ್ಞಾನಿಕ ಹೊಳವುಗಳು

-ಡಾ. ಶಶಿಕಲಾ ವೀ. ಚವಡಿ

ಮನುಷ್ಯ ಮನುಷ್ಯನನ್ನು ಸಂಪರ್ಕಿಸುವ ಮಾಧ್ಯಮ ಭಾಷೆಯಾಗಿದೆ. ಭಾಷೆಯನ್ನು ಸಾಮಾನ್ಯವಾಗಿ ಎರಡು ವಿಧದಲ್ಲಿ ವಿಂಗಡಿಸುತ್ತಾರೆ. ಮಾತನಾಡುವ ಮತ್ತು ಲಿಖಿತ ಭಾಷೆಗಳೆಂದು. ಆದರೆ ಈ ವಿಂಗಡನೆಗಿಂತ ಬಹಳಷ್ಟು ಸಮರ್ಪಕವಾದ ವಿಭಜನೆ ೧. ಶ್ರವಣ ಭಾಷೆ, ೨. ಸಂಜ್ಞಾ ಭಾಷೆ ಮತ್ತು ೩. ಶಾಬ್ದಿಕ ಭಾಷೆ. ಇದರಲ್ಲಿ ಶ್ರವಣ ಭಾಷೆ ನೈಸರ್ಗಿಕವಾಗಿ ಮನುಷ್ಯನಲ್ಲಿ ಮೈಗೂಡಿದೆ. ಹುಟ್ಟಿದ ತಕ್ಷಣ ಮಗುವು ಅಳುತ್ತದೆ. ಮಗುವಿನ ಅಳು ತಾಯಿಯಲ್ಲಿ ಒಂದು ಅಲೌಲಿಕ ಸಂತೋಷವನ್ನುಂಟು ಮಾಡುತ್ತದೆ. ಬಹುತೇಕ ಸಂತೋಷ ಜಗತ್ತಿನ ಯಾವುದೇ ಸಂಗೀತದಿಂದ ಉಂಟಾಗುವ ಸಂತೋಷಕ್ಕೆ ಸಮಾನವಾಗಿರಬಹುದು. ಆದರೆ ಮಗು ಬೆಳೆದಂತೆ ಸಾಹಿತ್ಯಿಕ ಭಾಷೆಯನ್ನು ಕಲಿತು ಸಂಪರ್ಕ ಸಾಧನವನ್ನಾಗಿ ಬಳಿಸಿದರೂ ಮೂಲಪ್ರೇರಣೆಯಿಂದ ಉದ್ಭವಿಸಿದ ಅಳುವು ನಂತರ ಸಂಗೀತ ಕಲೆಯಾಗಿ ರೂಪಾಂತರ ಗೊಳ್ಳುತ್ತದೆ. ಸಂಗೀತವು ವ್ಯಕ್ತಿಯ ಭಾವನೆ ಮತ್ತು ಸಂವೇಗಗಳನ್ನು ಅಭಿವ್ಯಕ್ತಿಗೊಳಿಸುವ ಅನುಪಮ ಸಾಧನವಾಗಬಹುದು. ಸಾಹಿತ್ಯಕ್ಕಿರುವಂತೆ ಸಂಗೀತ ಶಾಸ್ತ್ರಕ್ಕೆ ತನ್ನದೇ ಆದ ಅಕ್ಷರ, ಪದ, ವ್ಯಾಕರಣ ಮತ್ತು ಸಾಹಿತ್ಯವಿದೆ. ಸಂಗೀತ ಕಲೆಗೆ ಮನುಷ್ಯನನ್ನು ಸಂತೋಷಪಡೆಸುವ ಸುಂದರ ಅಂಶಗಳಿವೆ.

ಸಂಗೀತದ ಉಗಮದ ಬಗ್ಗೆ ಏನೇ ಅಭಿಪ್ರಾಯಗಳಿದ್ದರೂ ಇದರ ಅವಿಷ್ಕಾರ ನಿಸರ್ಗದಲ್ಲಾಗಿದೆಯೆಂಬುದನ್ನು ಅಲ್ಲಗಳೆಯಲಾಗದು. ಸಂಗೀತಕ್ಕೆ ಮೂಲವಾದ ಸಪ್ತಸ್ವರಗಳನ್ನು ಮನುಷ್ಯ ನಿಸರ್ಗದಲ್ಲಿ ಪಶು ಪಕ್ಷಿಗಳಿಂದ ತಿಳಿದುಕೊಂಡನೆಂದು `ಸಂಗೀತಸಾರ ಸಂಗ್ರಹ'ದಲ್ಲಿ ಉಲ್ಲೇಖಿಸಲಾಗಿದೆ. `ಷಡ್ಜ ಸ್ವರವು ನವಿಲಿನಿಂದ, ರಿಷಭವು ಚಾತಕ ಪಕ್ಷಿಯಿಂದ, ಗಾಂಧಾರವು ಆಡಿನಿಂದ, ಮಧ್ಯಮವು ಕ್ರೌಂಚಪಕ್ಷಿಯಿಂದ, ಪಂಚಮ ಸ್ವರವು ಕೋಗಿಲೆಯಿಂದ, ಧೈವತವು ಕಪ್ಪೆಯಿಂದ ಮತ್ತು ನಿಷಾದ ಸ್ವರವು ಆನೆಯಿಂದ ಹುಟ್ಟಿದವು. ಇದು ಬ್ರಹ್ಮಾದಿಗಳಿಗೂ ಸಮ್ಮತವಾದದ್ದು." ಅಂದರೆ ಮಾನವ ತನ್ನ ಸುತ್ತಮುತ್ತಲಿನ ಹೊಳೆ-ಹಳ್ಳ- ಕೊಳ್ಳ, ಜಲಪಾತ. ಸಮುದ್ರದ ಘೋರ್ಘರೆತ ಮತ್ತು ಪಶು ಪಕ್ಷಿಗಳಲ್ಲಿನ ಕೂಜನಗಳಲ್ಲಿ ಸಂಗೀತವನ್ನು ಗುರ್ತಿಸಿ ನಿಸರ್ಗದೊಂದಿಗೆ ಧ್ವನಿಗೂಡಿಸಲು ಕಲಿತನು. ತನ್ನ

ಕಲ್ಪನಾ ಶಕ್ತಿಯ ಬೆಳಕಿನಲ್ಲಿ ಬುದ್ಧಿಯ ಬಲದಿಂದ ಸ್ವರ ತಾಲ ಲಯಗಳ ಬಂಧದಿಂದ ಸಂಗೀತಕ್ಕೆ ಹೊಸ ಮೆರಗುಕೊಟ್ಟನು. ಹೀಗೆ ನಿಸರ್ಗದಲ್ಲಿ ಹುಟ್ಟಿಕೊಂಡ ಸಂಗೀತ ಮಾನವನ ದೈಹಿಕ, ಬೌದ್ಧಿಕ, ಮಾನಸಿಕ ಮತ್ತು ಸಾಮಾಜಿಕ ವಿಕಾಸದೊಂದಿಗೆ ಬೆಳೆದು ಒಂದು ಕಲೆಯಾಗಿ ಸಾಂಸ್ಕೃತಿಕ ಸಂಪತ್ತಿನ ಅವಿಭಾಜ್ಯ ಅಂಗವಾಗಿ ಪರಿಣಮಿಸಿತು.

ಸಂಗೀತದ ಸ್ವಭಾವ ಮತ್ತು ಆವಿಷ್ಕಾರವನ್ನು ಅಭ್ಯಸಿಸಲು ಪ್ರಯತ್ನಿಸಿದಾಗ ಕಂಡುಬರುವ ಒಂದು ವಿಶಿಷ್ಟ ಅಂಶವೆಂದರೆ ಮನುಷ್ಯ ತನ್ನ ಭಾವನೆಗಳ ಅಭಿವ್ಯಕ್ತಿಗೊಳಿಸಲು ಬಳಸಿದ ಸುಂದರ ಸುಸಂಸ್ಕೃತ ಮಾಧ್ಯಮವಾಗಿ ಹೊರಹೊಮ್ಮುವಿಕೆ ಎಂದು ಹೇಳ ಬಹುದು. ಮನುಷ್ಯ ಕ್ರಿಯಾಶೀಲ ಮಾತ್ರವಲ್ಲದೆ ಭಾವನಾಶೀಲನಾಗಿದ್ದಾನೆ. ಭಾವನೆಗಳನ್ನು ಅಭಿವ್ಯಕ್ತಿಗೊಳಿಸಲು ಆದಿಕಾಲದಿಂದಲೂ ಅನೇಕ ಮಾಧ್ಯಮಗಳನ್ನು ಆರಿಸುತ್ತ ನಡೆದಿದ್ದಾನೆ. ಅದರಲ್ಲಿ ಸೂಕ್ಷ್ಮ ಭಾವನೆಗಳನ್ನು ಸುಪುಷ್ಟವಾಗಿ ಹೊರಹೊಮ್ಮಿ ಅವೇ ಭಾವನೆಗಳನ್ನು ಕೇಳುಗರಲ್ಲಿ ಹೊಡೆದೆಬ್ಬಿಸಿ ಭಾವನಾತ್ಮಕ ಸನ್ನಿವೇಶ ನಿರ್ಮಿಸುವಲ್ಲಿ ಸಫಲನಾಗಿದ್ದಾನೆ. ಸಂಗೀತ ಮಾಡುವ ಭಾವನಾತ್ಮಕ ಮೋಡಿಯನ್ನು ಸರಿಗಟ್ಟುವ ಮಾಧ್ಯಮ ಇನ್ನೊಂದಿಲ್ಲವೆಂದು ಹೇಳಬಹುದು.

ಸಂಗೀತದ ಕೆಲವು ವೈಶಿಷ್ಟ್ಯಗಳ ಮೊತ್ತವನ್ನು ಶೈಲಿಯೆಂದು ಕರೆಯಬಹುದು. ಕಲೆಗಳಲ್ಲಿ ಶೈಲಿಗಳಿಗೆ ಮಹತ್ತರ ಸ್ಥಾನವಿದೆ. ಪ್ರತಿಯೊಂದು ಸಂಗೀತ ಶೈಲಿಯು ಒಂದು ಚಾರಿತ್ರಿಕ ಸನ್ನಿವೇಶವನ್ನು ನಿರೂಪಿಸುತ್ತದೆ. ಅಂದರೆ ಅದು ಮಾನವಪ್ರಜ್ಞೆಯ ಒಂದು ನಿಲುವನ್ನು ವ್ಯಕ್ತಪಡಿಸಿ, ಒಂದು ಕಾಲದ, ಜನಾಂಗದ ಇಲ್ಲವೆ ಸಮಷ್ಟಿಯ ಆಲೋಚನೆ ಮತ್ತು ಭಾವನೆಗಳನ್ನು ಪ್ರತಿಬಿಂಬಿಸುತ್ತದೆ. ಹೀಗಿದ್ದಾಗ ಶೈಲಿಯು ಮಾನವನ ಅಭಿವ್ಯಕ್ತಿಯಾಗುತ್ತದೆ. ಆಯಾ ಕಾಲದ ಮಾನವನ ಸಾಮಾಜಿಕ ಜೀವನ ಮತ್ತು ಇನ್ನುಳಿದ ಜಗತ್ತಿನ ಅಂಗಗಳೊಡನೆ ಸಂಬಂಧ ಬಹಳ ಮುಖ್ಯವಾದವುಗಳು. ದೇವರ ಕಲ್ಪನೆ, ಪ್ರಕೃತಿಯನ್ನು ಅರ್ಥೈಸುವ ನಿಲುವು ಮತ್ತು ತನ್ನತನದ ಅರಿವು ಇವು ಬಹಳ ಸಮಂಜಸವಾದವುಗಳು. ಇವೆಲ್ಲವುಗಳ ನೆಲೆಗಟ್ಟಿನ ಮೇಲೆ ಯಾವದೇ ಕಲೆಯ ಶೈಲಿ ಬೆಳೆದು ಬಂದಿದೆ. ಸಂಗೀತ ಕಲೆಯೂ ಇದಕ್ಕೆ ಹೊರತಾಗಿಲ್ಲ. ಅಂದರೆ ಮಾನವ ಸ್ವಭಾವವನ್ನು ಅಭಿವ್ಯಕ್ತಿಗೊಳಿಸುವಾಗ ಅವನ ಪ್ರಜ್ಞೆಯ ಪರಿಪೂರ್ಣ ಪರಿಕಲ್ಪನೆ ಅದರಲ್ಲಿ ಅಡಕವಾಗಿರುತ್ತದೆ. ಅಂದರೆ ಸಂಗೀತ ಕಲೆ ಮನೋವೈಜ್ಞಾನಿಕ ರೂಪರೇಷೆಯ ಚೌಕಟ್ಟಿನಲ್ಲಿ ಬಂಧಿಸಲ್ಪಡುತ್ತದೆ. ಮಾನವ ಸ್ವಭಾವ ಅಥವಾ ಅವನ ಪ್ರಜ್ಞೆ ಯಾವದೇ ಸಂಗೀತ ಶೈಲಿಯಲ್ಲಿ ಅಭಿವ್ಯಕ್ತಿ ಗೊಳ್ಳುತ್ತದೆ. ಆದ್ದರಿಂದ ಮಾನವನ ವಿಕಾಸವನ್ನು ಪ್ರತಿಬಿಂಬಿಸಲು ಸಂಗೀತಕಾರರು ಅವಿರತ ಶ್ರಮವಹಿಸಿದ್ದಾರೆ. ಆದ್ದರಿಂದ ಸಂಗೀತಪ್ರಜ್ಞೆಯ ದೃಷ್ಟಿಕೋನದ ಪ್ರತಿಬಿಂಬವಾಗಿ ಚಾರಿತ್ರಿಕ ಸನ್ನಿವೇಶವೊಂದರ ಪ್ರತೀಕವಾಗಿದೆ.

ಮನೋವೈಜ್ಞಾನಿಕವಾಗಿ ಮನುಷ್ಯನ ಮನಸ್ಸನ್ನು ಮೂರು ವಿಧವಾಗಿ ವಿಂಗಡಿಸಲಾಗಿದೆ. ವೈಚಾರಿಕ, ಭಾವನಾತ್ಮಕ ಮತ್ತು ಕ್ರಿಯಾತ್ಮಕವೆಂದು ಈ ಮೂರು ವಿಭಜನೆಗಳು ಒಂದಕ್ಕೊಂದು ಪೂರಕವಾಗಿವೆ. ವೈಚಾರಿಕತೆ ಇಲ್ಲವೆ ಪ್ರತ್ಯಕ್ಷಣದಿಂದ ಭಾವನೆ ಮತ್ತು ಭಾವನೆಯಿಂದ ಕ್ರಿಯೆ ಹೀಗೆ ಅವು ಒಂದನ್ನೊಂದು ಅವಲಂಬಿಸಿವೆ. ಸಂಗೀತ ರಚನೆ ಇಲ್ಲವೆ ಶ್ರವಣ ಮುಖ್ಯವಾಗಿ ವ್ಯಕ್ತಿಯನ್ನು ಭಾವನಾತ್ಮಕವಾಗಿ ಬಂಧಿಸುತ್ತದೆ. ಅಲ್ಲಿ ಭಾವನಾನುಭವ ಆನಂದದಾಯಕ ಇಲ್ಲವೆ ದುಃಖದಾಯಕವಾಗಿರಬಹುದು. ಅಂದರೆ ಮೊದಲು ಇಲ್ಲಿ ಮನೋವೈಜ್ಞಾನಿಕವಾಗಿ ಪ್ರಚೋದನೆಗಳು ಹೇಗೆ ಮನಸ್ಸಿನಲ್ಲಿ ಸಂವೇದನೆಗಳಾಗಿ ಪರಿವರ್ತನೆಗೊಳ್ಳುತ್ತವೆಯೆಂಬುದುರ ಕಲ್ಪನೆ ನಮಗಿರಬೇಕು. ಸಂಗೀತ ಪ್ರಚೋದನೆಗಳು ಶ್ರವಣರ ಮಾಧ್ಯಮದಿಂದ ಕರ್ಣೇಂದ್ರಿಯ ಮೂಲಕ ಮನಸ್ತಿಷ್ಕದ ಸುಸಂಬದ್ಧ ಕ್ಷೇತ್ರದಲ್ಲಿ ಅರಿವನ್ನು ಮೂಡಿಸುತ್ತದೆ. ಆದರೆ ಈ ಅರಿವು ಕೇವಲ ದೈಹಿಕವಾಗಿರುತ್ತದೆ. ಈ ಅರಿವನ್ನು ಅರ್ಥೈಸುವ ಕ್ರಿಯೆ ಮನೋವೈಜ್ಞಾವಿಕವಾಗಿದ್ದು ಅದನ್ನು ಪ್ರತ್ಯಕ್ಷಣವೆಂದು ಕರೆಯುತ್ತಾರೆ. ಪ್ರತ್ಯಕ್ಷಣ ಆ ವ್ಯಕ್ತಿಗತ ಅನುಭವಗಳನ್ನವಲಂಬಿಸಿದೆ. ಸಂಗೀತ ಪರಿಜ್ಞಾನವಿಲ್ಲದ ವ್ಯಕ್ತಿಯ ಎದುರು ಇಂಪಾದ ಸಂಗೀತ ಕೇವಲ ಸಪ್ಪಳವಾಗಬಹುದೇ ಹೊರತಾಗಿ ಅದು ಅವನಿಗೆ ಪ್ರತ್ಯಕ್ಷಣವಾಗಲಾರದು. ಹೀಗಾದ ಮಾತ್ರಕ್ಕೆ ಸಂಗೀತ ಆನಂದ ಸವಿಯಲು ಸಂಗೀತ ಜ್ಞಾನ ಅವಶ್ಯಕವೆಂದಲ್ಲ. ಸಂಗೀತ ಜ್ಞಾನದಿಂದ ಸಂಗೀತದ ಆನಂದಾತಿರೇಕವಾಗಿ ಅದರ ರುಚಿ ಇಮ್ಮಡಿಗೊಳ್ಳುತ್ತದೆ. ಆದರೆ ಸೃಜನಶೀಲನಾದ ಮಾನವನಿಗೆ ಸಂಗೀತ ಒಂದು ವಿಶಿಷ್ಟ ಪ್ರತ್ಯಕ್ಷಣದಲ್ಲಿ ರೂಪಗೊಂಡು ಸಮಂಜಸವಾದ ಭಾವನೆಗಳನ್ನು ಹೊಡೆದೆಬ್ಬಿಸುತ್ತದೆ. ಸಂಗೀತವು ಮನುಷ್ಯನಲ್ಲಿ ವಿವಿಧ ಭಾವನೆಗಳನ್ನು ಹೊಡೆದೆಬ್ಬಿಸುವ ಸಮರ್ಥ ಕೌಶಲವಾಗಿದೆ. ಆದ್ದರಿಂದ ಯಾವದೇ ವ್ಯಕ್ತಿಯ ಪ್ರತ್ಯಕ್ಷಣ ಮತ್ತು ಅವನ ವ್ಯಕ್ತಿತ್ವ ರೂಪರೇಷೆಗಳು ಭಾವಪರವಶ ಮಾಡುವ ಕಾರಕಗಳಾಗಿವೆ. ಈ ಮನೋವೈಜ್ಞಾನಿಕ ಅಂಶಗಳು ಅವನ ಸಂಸ್ಕಾರ ಮತ್ತು ಸಮಾಜೀಕರಣ ಕ್ರಿಯೆಯನ್ನು ಅವಲಂಬಿಸಿವೆ.

ಆದರೆ ಭಾರತೀಯ ಸಂಗೀತದ ರಾಗ ಸಂಯೋಜನೆಗಳು ಮಾನವ ಮನಸ್ಸಿನ ವಿವಿಧ ಭಾವನೆಗಳೊಂದಿಗೆ ಸ್ಪಂದಿಸಿ ಅವುಗಳ ಅಭಿವ್ಯಕ್ತಿಗೆ ಅನುವು ಮಾಡಿಕೊಡುತ್ತವೆ. ಆದ್ದರಿಂದ ಮನೋವಿಜ್ಞಾನದ ಹೊಳುವುಗಳು ವಿವಿಧ ರಾಗಗಳ ಸ್ವರೂಪ ಮತ್ತು ಲಕ್ಷಣಗಳನ್ನು ಬಿಂಬಿಸುತ್ತವೆ. ಅಂದರೆ ಮನುಷ್ಯ ಸನ್ನಿವೇಶದೊಂದಿಗೆ ಸ್ಪಂದಿಸಿ ಅದಕ್ಕನುಗುಣವಾಗಿ ವರ್ತಿಸುತ್ತಾನೆ. ಅದೇ ಬಗೆಯಾಗಿ ಪ್ರತಿಯೊಂದು ರಾಗವು ತನ್ನದೇ ಆದ ವಿಶಿಷ್ಟ ಸನ್ನಿವೇಶವನ್ನು ನಿರ್ಮಿಸಿ ಮನುಷ್ಯ ಪ್ರತಿಕ್ರಿಯೆಸುವಂತೆ ಮಾಡುತ್ತದೆ. ಹೀಗಾಗಿ ಅವನ ಸ್ಪಂದನ ಭಾವನೆಯಾಗಿ ಅಭಿವ್ಯಕ್ತಗೊಂಡು ಆ ಭಾವನೆಯೇ ಆ ರಾಗದ ಲಕ್ಷಣವಾಗಿ ಪ್ರತಿಬಿಂಬಿಸುತ್ತದೆ.

ಅಂದರೆ ರಾಗಗಳು ಮಾನವನಲ್ಲಿ ಹುದುಗಿರುವ ಅದಮ್ಯ ಚೇತನವನ್ನು ಹೊಡೆದೆಬ್ಬಿಸಿ ಸಮಂಜಸ ಭಾವನೆಗಳನ್ನು ಮೂರ್ತೀಕರಿಸುವ ದಿವ್ಯ ಸಾಧನಗಳಾಗಿವೆ. ಹೀಗಿದ್ದಾಗ ರಾಗಗಳನ್ನು ಮನೋವೈಜ್ಞಾನಿಕವಾಗಿ ನಾವು ಹೇಗೆ ವಿಶ್ಲೇಶಿಸಲು ಸಾಧ್ಯವಿದೆಯೆಂಬುದನ್ನು ನೋಡಬೇಕು.

ಸಂಗೀತವು ಸ್ವರ ಮತ್ತು ಲಯ ಈ ಎರಡರ ಮೇಲೆ ಬೆಳೆದುಬಂದಿದೆ. ಸೃಷ್ಟಿಯೊಂದಿಗೆ ಲಯವು ಹುಟ್ಟಿಕೊಂಡು -ಪ್ರತಿಯೊಂದು ವಸ್ತುವಿನ ಗತಿಯಲ್ಲಿ ಲಯವಿದೆ- ಅದು ತಾಲದಲ್ಲಿ ಬಂಧಿಸಲ್ಪಟ್ಟಿರುತ್ತದೆ. ಹೀಗೆ ಸ್ವರ -ತಾಲ- ಲಯಗಳು ಸರಿಯಾಗಿ ಹೊಂದಿಕೊಂಡಾಗ ಮಾತ್ರ ಸಂಗೀತ ಶುಶ್ರಾವ್ಯವಾಗುವದು ಇಲ್ಲದಿದ್ದರೆ ಕರ್ಣ ಕಠೋರವಾಗುವದು. ಅಂದರೆ ಜನರು ನಿರಂತರವಾಗಿ ಹಾಡುವ ಗೀತೆಗಳನ್ನು ವ್ಯವಸ್ಥಿತ ಮತ್ತು ಸುಸಂಬದ್ಧವಾಗಿಸುವ ಕ್ರಿಯೆಗೆ ರಾಗವೆಂದು ಹೇಳಬಹುದು. ಮತಂಗಮುನಿಯ `ಬೃಹದೇಶಿ' ಯ ವರೆಗೆ ನಮಗೆ ರಾಗದ ಸುಸ್ಪಷ್ಟ ಉಲ್ಲೇಖ ಸಿಗುವುದಿಲ್ಲ. ಆದ್ದರಿಂದ ಮತಂಗಮುನಿ ಹೇಳಿದಂತೆ ರಾಗವು ವಿಶಿಷ್ಟ ಸ್ವರ ವರ್ಣಗಳಿಂದ ವಿಭೂಷಿತಗೊಂಡ ಧ್ವನಿವಿಶೇಷವಾಗಿದೆ. ಮನಸ್ಸಿನ ರಂಜನೆಯೇ ಇದರ ಮೂಲ ಉದ್ದೇಶವಾಗಿದೆ. ರಾಗಗಳನ್ನು ಗ್ರಾಮರಾಗ ಅಥವಾ ಭಾಷಾರಾಗ ಮತ್ತು ದೇಶಿ ರಾಗಗಳೆಂದು ವಿಂಗಡಿಸಿ ಅವುಗಳನ್ನು ಏಳು ಗೀತೆಗಳಲ್ಲಿ ಅರುಹಿದ್ದಾರೆ. ಅವುಗಳು ಶುದ್ಧ, ಭಿನ್ನ, ಗೌಡಿ,ರಾಗ, ಸಾಧಾರಣ, ಭಾಷಾ ಮತ್ತು ವಿಭಾಷಾಗಳೆಂದು ಕರೆದಿದ್ದಾರೆ. ಕೃಷ್ಣರಾವರ ಪ್ರಕಾರ ರಾಗವು ಸ್ವರಾಷ್ಟಕದ ಸ್ವರಗಳ ಇಂಥ ಒಂದು ಗೀತಾತ್ಮಕ ವಿಧಾನವೆಂದರೆ ಅದು ಒಂದು ನಿಶ್ಚಿತ ಮನಃಸ್ಥಿತಿಯನ್ನು ವ್ಯಕ್ತಮಾಡಲು ರಚಿಸಲ್ಪಡುತ್ತದೆ. ಸ್ವಾಮಿ ಪ್ರಜ್ಞಾನಂದರ ಪ್ರಕಾರ ರಾಗವು ಮನೋಭೌತಿಕ ವಸ್ತುವು. ಯಾಕೆಂದರೆ ಮನಸ್ಸಿನ ಅಂತರ್ಗತ ಅನುಭವಗಳ ಬಾಹ್ಯ ಪ್ರಕಟನೆಯೇ ಆಗಿದ್ದು ಅದು ಮೊದಲು ಮನುಷ್ಯನ ಸರ್ವಾಂಗೀಣವಾಗಿ ತುಂಬಿಕೊಂಡು, ನಂತರ ಸ್ವರರೂಪದಲ್ಲಿ ಅಭಿವ್ಯಕ್ತಿಗೊಳಿಸಲಾಗುತ್ತದೆ. ಆದ್ದರಿಂದ ರಾಗರಚನೆಯು ಮನಸ್ಸು ಮತ್ತು ಭೌತಿಕತತ್ವಗಳ ಅಮೋಘ ಸಂಗಮವಾಗಿದೆ. ಹೀಗೆ ರಾಗವು ಒಂದು ನಿಶ್ಚಿತವಾದ ಸಂವೇಗವನ್ನು ಪ್ರಕಟಪಡಿಸುವಲ್ಲಿ ಸಾಫಲ್ಯತೆಯನ್ನು ಪಡೆಯುತ್ತದೆ.

ಮನೋವೈಜ್ಞಾನಿಕವಾಗಿ ಹಲವಾರು ಸಂವೇಗಗಳು ಗುರುತಿಸಲ್ಪಟ್ಟಿದ್ದರೂ ಭಾರತೀಯ ಸಾಹಿತ್ಯದಲ್ಲಿ ಒಂಭತ್ತು ಸಂವೇಗಗಳನ್ನು ವರ್ಣಿಸಿದ್ದಾರೆ. ಇವುಗಳನ್ನು ನವರಸಗಳೆಂದು ಕರೆದಿದ್ದಾರೆ. ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ. ಭಯಾನಕ ಭೀಬತ್ಸ, ಅದ್ಭುತ ಮತ್ತು ಶಾಂತ ರಸಗಳೆಂದು ಹೆಸರಿಸಿದ್ದಾರೆ. ಇವುಗಳು ಅನುಕ್ರಮವಾಗಿ ರತಿ, ವಿನೋದ, ಶೋಕ, ಕ್ರೋಧ, ಶೌರ್ಯ, ಭಯ, ಜಿಗುಪ್ಸೆ, ಆಶ್ಚರ್ಯ ಮತ್ತು ಶಾಂತಿ ಭಾವಗಳನ್ನು ಬಿಂಬಿಸುತ್ತವೆ. ಈ ಭಾವಗಳನ್ನು ಅಭಿವ್ಯಕ್ತಿಗೊಳಿಸಲು ಸಮಂಜಸವಾದ ರಾಗರಚನೆ ಇಲ್ಲವೆ

ಶ್ರವಣಗಳ ರಸಾನುಭೂತಿ ಅವಶ್ಯಕವಿದೆ. ಸಂಗೀತದಿಂದ ಇದು ಸಾಧ್ಯವೆ ಎನ್ನುವ ಪ್ರಶ್ನೆ ಉದ್ಭವಿಸಬಹುದು. ಆದರೆ ಇದು ಸಾಧ್ಯವೆಂದು ಹೇಳಬಹುದು. ಯಾಕೆಂದರೆ ಸ್ವರ-ತಾಳ-ಲಯಗಳ ಸಮ್ಮಿಶ್ರಣ ಮತ್ತು ಈ ಸಮ್ಮಿಶ್ರಣ ಭೌತಿಕವಾಗಿದ್ದರೂ ಇದರ ಪರಿಣಾಮ ಮಾನಸಿಕವಾಗಿರುತ್ತದೆ. ಧ್ವನಿ ಕಂಪನಗಳು ಕಿವಿದೆರೆಗೆ ಬಿದ್ದು ಅವು ಸಂವೇದನೆಯ ರೂಪ ಪಡೆಯುವಾಗ ದೇಹದಲ್ಲಿ ಅನೇಕಾನೇಕ ಬದಲಾವಣೆಗಳಾಗುತ್ತವೆ. ಈ ಮೂಲಕ ಮನೋವೈಜ್ಞಾನಿಕವಾಗಿ ಪ್ರತ್ಯಕ್ಷಣದಲ್ಲಿ ಬದಲ್ಗೊಂಡು ವ್ಯಕ್ತಿ ಭಾವಪರವಶನಾಗುತ್ತಾನೆ.

ಇಲ್ಲಿ ಗಮಕಗಳನ್ನು ಉದಾಹರಿಸಬಹುದು. ಗಮಕಗಳಾದ ಕಂಪಿತಮ್, ಹಂಪಿತಮ್, ಅಸಮ್ ಮತ್ತು ಅಂದೋಲಿತಮ್ ಹೇಗೆ ಸಂವೇಗಗಳಿಗೆ ಪೂರಕವಾಗಿವೆಯೆಂಬುದನ್ನು ತೋರಿಸಬಹುದು. ಕಂಪಿತಮ್‌ದಲ್ಲಿ ಧ್ವನಿಯ ಕಂಪನವಿದೆ ಆದ್ದರಿಂದ ಉದ್ರೇಕಿತ ಭಾವನೆಗಳನ್ನು ಹೊರಸೂಸುತ್ತದೆ. ಯಾಕೆಂದರೆ ಉದ್ರೇಕಿತ ಸ್ಥಿತಿಯಲ್ಲಿ ವ್ಯಕ್ತಿಯ ಧ್ವನಿಯಲ್ಲಿ ಕಂಪನವನ್ನು ಸರಾಗವಾಗಿ ಅವಲೋಕಿಸಬಹುದು.

ಹಂಪಿತಮ್ ಒಂದು ಮೆರಗು ಇದು ಶಕ್ತಿ, ಶೌರ್ಯ ಮತ್ತು ವೀರತ್ವವನ್ನು ಪ್ರಕಟಿಸುತ್ತದೆ. ಸಿಂಹ ಗರ್ಜನೆ, ಹೆದೆಯಿಂದ ಬಾಣ ಚಿಮ್ಮಿದಾಗ ಮತ್ತು ತುಪಾಕಿಯಿಂದ ಗುಂಡು ಹಾರಿದಾಗ ಹುಟ್ಟುವ ಧ್ವನಿ ಹಂಪಿತಮ್‌ದಿಂದ ಕೂಡಿರುತ್ತದೆ. ಅಂದೋಲಿತಮ್ ಕರುಣ ರಸವನ್ನು ಹೊರಹೊಮ್ಮುತ್ತದೆ. ಒಂದು ಸ್ವರ ಇನ್ನೊಂದನ್ನು ನಿಧಾನವಾಗಿ ಸೇರಿಕೊಳ್ಳುತ್ತದೆ. ಇದನ್ನು ಉದ್ರಿಕ್ತ ಇಲ್ಲವೆ ಘಾಸಿಗೊಂಡ ಮನಸ್ಸನ್ನು ಹಗುರು ಮಾಡಲು ಸುಸಂಬದ್ಧವಾಗಿ ಉಪಯೋಗಿಸಬಹುದು. ಅಸಮ್ ಕೂಡ ಮನೋರೋಗಿಗಳ ಚಿಕಿತ್ಸೆಯಲ್ಲಿ ಫಲಕಾರಿಯಾಗಿದೆ.

ಸಮಯ ಗತಿ ಕೂಡ ಸಂಗೀತದ ಒಂದು ಅವಿಭಾಜ್ಯ ಅಂಗ. ಹೃದಯದ ಮಿಡಿತ ಮನುಷ್ಯನ ಇನ್ನುಳಿದ ನರಮಂಡಲದ ಮೇಲೆ ವಿಶಿಷ್ಟ ಪ್ರಭಾವ ಬೀರುತ್ತದೆ. ಈ ಕ್ರಿಯೆ ಮಗುವಿನ ಹಂತದಿಂದಲೇ ಬೆಳೆದು ಬಂದಿರುತ್ತದೆ. ಉದ್ರೇಕಿತ ಭಾವನೆಗಳಿಗೆ ತ್ವರಿತಗತಿಯ ಸಂಗೀತ ಅದರಂತೆ. ಕ್ರೋಧಿತ, ವೀರತ್ವದ, ಶೌರ್ಯದ ಮತ್ತು ಸಾಹಸದ ಭಾವನೆಗಳಿಗೆ ತ್ವರಿತಗತಿಯ ಸಂಗೀತ ಪರಿಣಾಮಕಾರಿಯಾಗಿದ್ದು ಕರುಣೆ, ದುಃಖಿತಪ್ತ ಭಾವನೆಗಳಿಗೆ ನಿಧಾನಗತಿಯ ಸಂಗೀತ ಒಂದು ವರದಾನವಾಗಿದೆ. ಪ್ರತಿಯೊಂದು ಮಾನಸಿಕ ಭಾವನೆ ಮತ್ತು ಸಂವೇಗಗಳಿಗೆ ತಮ್ಮದೇ ಆದ ಗುಣಲಕ್ಷಣಗಳಿವೆ. ಆದ್ದರಿಂದ ಇವುಗಳನ್ನು ಅಭಿವ್ಯಕ್ತಿಗೊಳಿಸಲು ರಾಗಗಳು ಸಿದ್ಧಿಯನ್ನು ಪಡೆದಿವೆ.

ಸ್ವರ ಸಮಯದಲ್ಲಿ ಪ್ರತಿಯೊಂದು ರಾಗವು ಒಂದೊಂದು ವಿಶೇಷ ಭಾವರಸವನ್ನು ಪ್ರತಿಪಾದಿಸುತ್ತದೆ. ಈ ಭಾವರಸವು ವಿಶೇಷವಾಗಿ ರಾಗದ ಶುದ್ಧ ಮತ್ತು ವಿಕೃತ ಸ್ವರಗಳನ್ನು ಅವಲಂಬಿಸಿರುತ್ತದೆ. ರಾಗಗಳಲ್ಲಿಯ ಸ್ವರಗಳಿಗೂ ನಿಸರ್ಗದ ಮೂರು ಹೊತ್ತುಗಳಿಗೂ ಹಾಗೂ ಮನುಷ್ಯನ ಮನಸ್ಸಿನ ಸ್ಥಿತಿಗೂ ನಿಕಟವಾದ ಸಂಬಂಧ ಕಂಡುಬರುತ್ತದೆ. ಪ್ರಾತಃಕಾಲದ

ವಾತಾವರಣ ಕೋಮಲವಾಗಿದ್ದು ಶಾಂತಿ ಸಮಾಧಾನವನ್ನು ಸೂಸುತ್ತದೆ. ಸಂಜೆ ದುಡಿದು ಬಂದ ದೇಹಕ್ಕೆ ವಿಶ್ರಾಂತಿಯ ಅಗತ್ಯವಿದ್ದು ಶಾಂತಿಯನ್ನು ಅರಿಸುತ್ತದೆ. ಹೀಗೆ ವಾತಾವರಣಕ್ಕೂ ಮನಸ್ಸಿಗೂ ಒಗ್ಗುವಂತೆ ಕೋಮಲ ಸ್ವರ ಪ್ರಧಾನವಾದ ರಾಗಗಳನ್ನು ಹಾಡಿದಾಗ ಅಥವಾ ಕೇಳಿದಾಗ ಮನಸ್ಸು ಭಾವಪರವಶವಾಗುತ್ತದೆ. ಉದಾಹರಣೆಗೆ ಭಿಲಾವಲ್ ಮತ್ತು ತೋಡಿ ರಾಗಗಳು.

ರಾಗಗಳನ್ನು ದರ್ಶನ ಮಾಧ್ಯಮದಲ್ಲಿ ಅಲಂಕಾರಿಕವಾಗಿ ಮೂರ್ತೀಕರಿಸಿದ್ದಾರೆ. ಭೈರವ, ಸಿಂಧಿ, ಗೌರಿ, ದೀಪಕ, ಲಲಿತ ಮತ್ತು ಮೂಲಕಂಸದಂಥ ರಾಗಗಳನ್ನು ಅತಿ ಸುಂದರ ಮತ್ತುಸುಸ್ಪಷ್ಟವಾಗಿ ಮೂರ್ತೀಕರಿಸಿದ್ದಾರೆ. ಹೀಗಿದ್ದಾಗ್ಯೂ ಕೂಡಾ ಮನೋವೈಜ್ಞಾನಿಕವಾಗಿ ಅವು ಆಯಾ ಸಂವೇಗಗಳನ್ನು ಸಮೂಲಾಗ್ರವಾಗಿ ಪ್ರತಿನಿಧಿಸುತ್ತವೆಯೆಂದು ಹೇಳಲಿಕ್ಕಾಗದು. ಆದರೂ ಕೂಡ ಶಂಕರಾಭರಣ ಇಲ್ಲವೆ ಭಿಲಾವಲ್ ರಾಗಗಳು ಶಾಂತರಸವನ್ನು ಅಭಿವ್ಯಕ್ತಿಗೊಳಿಸುವಲ್ಲಿ ಸಫಲವಾಗಿವೆ. ಮೋಹನ ಇಲ್ಲವೆ ಭೂಪರಾಗ ದುಃಖವನ್ನು ಪ್ರಚೋದಿಸಿ ಉದ್ರೇಕವನ್ನು ಉಂಟುಮಾಡುತ್ತದೆ. ಯಾಕೆಂದರೆ ಈ ರಾಗಗಳು ಗಂಭೀರವಾದ ಆಲಾಪಗಳಿಂದ ಕೂಡಿವೆ. ವರಲಿ ರಾಗವು ದುಃಖದಾಯಕ ಭಾವನೆಗಳನ್ನು ಪ್ರತಿನಿಧಿಸುತ್ತದೆ. ಹೀಗೆ ರಾಗಗಳು ಸ್ವರಗಳ ಸುಸಂಬದ್ಧ ಮಿಶ್ರಣ ಮತ್ತು ಉಪಯೋಗದಿಂದ ವಿವಿಧ ಭಾವನೆಗಳನ್ನು ಹೊರಹೊಮ್ಮಿಸುವಲ್ಲಿ ಸಾಫಲ್ಯತೆಯನ್ನು ಪಡೆದಿವೆ.

ಹೀಗೆ ಸಂಗೀತವನ್ನು ಭಾವನೆಗಳ ಭಾಷೆಯೆಂದು ಕರೆಯಬಹುದು. ಕೆಲವೊಮ್ಮೆ ಭಾವನೆಗಳನ್ನು ಉದ್ದೀಪಿಸುವದರಿಂದ ಇನ್ನು ಕೆಲವೊಮ್ಮೆ ಭಾವನೆಗಳನ್ನು ನಿಯಂತ್ರಿಸುವುದ ರಿಂದ ಸಂಗೀತ ಮನೋರೋಗ ಚಿಕಿತ್ಸೆಯ ಒಂದು ಅಂಗವಾಗಿ ಪರಿಣಮಿಸಿದೆ. ಮಾನವನಿಂದ ಪೋಷಿಸಲ್ಪಟ್ಟ ಈ ಸಂಗೀತಕಲೆ ಮನುಕುಲಕ್ಕೆ ಒಂದು ಅಮೂಲ್ಯ ಕೊಡುಗೆಯಾಗಿ ಪರಿಣಮಿಸಿದೆ.

ಗ್ರಂಥ ಋಣ

1. Krishna Rao, H.P., The Psychology of Music, Indological Book House, New Delhi 1986
2. Sitansu Ray, Stadies in Music Aesthetics Krishna Brothers, Ajmer, 1989
3. Mehta R.C, (Ed) Psychology of Music, Indian Musicalogical Society, Bombay, 1980
4. Seashore C.E Psychology of Music, MC Graw Hill, New York, 1938
5. ಕುಲರಾಯಟರ (ಅನು) ಮೂರು ಸಂಗೀತೋಪನ್ಯಾಸಗಳು, ಮೈಸೂರು

ಜನ ಜಾನಪದ

-ಡಾ. ಮಂಜುನಾಥ ಬೇವಿನಕಟ್ಟಿ

ಜಾನಪದ ಕೇವಲ ಭೂತಕಾಲದ ಅಧ್ಯಯನಕ್ಕೆ ಮಾತ್ರ ಸೀಮಿತವೆನ್ನುವ ಅಭಿಪ್ರಾಯ ಸರಿಯಾದುದಲ್ಲ. ಇಂದಿನ ಜಾನಪದ ಅಧ್ಯಯನ ವರ್ತಮಾನಕ್ಕೂ ಪ್ರಸ್ತುತವಾಗಿದೆ. ಜಾನಪದ ಅಧ್ಯಯನದಲ್ಲಿ ಪಠ್ಯದ ಜೊತೆಗೆ ಸಂದರ್ಭವಿಲ್ಲದಿದ್ದರೆ ಶವದಂತೆ ಆಗುತ್ತದೆ. ಹಾಗೆಯೇ ರೂಪ ಹಾಗೂ ಬದಲಾವಣೆಯ ತತ್ವಗಳಿಗೆ ಉಪಯೋಗ ತತ್ವವನ್ನು ಸೇರಿಸಬೇಕಾಗುತ್ತದೆ. ಇದರಿಂದಾಗಿ ಜಾನಪದ ಅಧ್ಯಯನ ಹೆಚ್ಚು ಉಪಯುಕ್ತವಾಗುತ್ತದೆ. ಈ ರೀತಿಯ ಅಧ್ಯಯನಗಳಲ್ಲಿ ಜಾನಪದದ ಬಗೆಗಿನ ಅರ್ಥವನ್ನು ಜನಪದರಿಂದಲೇ ಸಂಗ್ರಹಿಸುವುದರಿಂದ ಜಾನಪದದ ಮೌಲ್ಯವನ್ನು ವಿಶೇಷವಾಗಿ ತಿಳಿಯಲು ಅನುಕೂಲವಾಗುತ್ತದೆ. ಈ ರೀತಿಯಾಗಿ ಜನಪದರಿಂದ ಜಾನಪದದ ಅರ್ಥವನ್ನು ಸಂಗ್ರಹಿಸುವುದನ್ನು `ಜನ ಜಾನಪದ' ಎಂದು ಕರೆಯಲಾಗಿದೆ.

ಆಂಗ್ಲ ಭಾಷೆಯ 'Meta Folklore' ಎಂಬ ಪದಕ್ಕೆ `ಜನ ಜಾನಪದ' ಎಂದು ಕರೆಯಲಾಗಿದೆ. ಇದಕ್ಕೆ ಮೊದಲು 'Meta Folklore' ಗೆ ಕನ್ನಡದಲ್ಲಿ ಅಧಿಜಾನಪದ ಎಂಬ ಪದವನ್ನು ಡಾ.ತೀ. ನಂ. ಶಂಕರನಾರಾಯಣರು ಬಳಸಿದ್ದಾರೆ. ಆದರೆ ನಾನು ಇಲ್ಲಿ `ಜನ ಜಾನಪದ' ಎಂದು ಕರೆದಿದ್ದೇನೆ. ಈ ಪದವನ್ನು ಕರೆಯಲು ಮುಖ್ಯವಾದ ಕಾರಣವೇನೆಂದರೆ ಜನಪದರೇ ಜಾನಪದದ ಬಗೆಗೆ ಅರ್ಥ ವಿವರಣೆ ಕೊಡುವುದರಿಂದ ಜನಜಾನಪದ ಎಂದು ಕರೆಯಲಾಗಿದೆ. `ಜನ' ಎಂಬ ಪದ ಸೂಕ್ತವಾದುದುದರಿಂದ `ಜನ ಜಾನಪದ' ಎಂದು ಕರೆಯಲಾಗಿದೆ. ಜನ ಜಾನಪದ ಎಂದರೆ ಜಾನಪದದ ಬಗೆಗಿನ ಜಾನಪದ' (ಡಂಡಸ್ ೧೯೬೬:೩೮ -೪೯), ಅಂದರೆ ಜನಪದರು ತಮ್ಮ ಉತ್ಪತ್ತಿಯಾದ ಜಾನಪದ ಮತ್ತು ತಮ್ಮಂತಹದೇ ಆದ ಇನ್ನೊಂದು ಜನಪದದ ಬಗೆಗೆ ಹೊಂದಿರುವ ಮನೋಭಾವವನ್ನು ಜನ ಜಾನಪದ ಎನ್ನುವರು. ಭಾರತದ ಜಾನಪದದಲ್ಲಿ ಜನ ಜಾನಪದಕ್ಕೆ ಸಾಕಷ್ಟು ಉದಾಹರಣೆಗಳು ಸಿಗುತ್ತಿವೆ. 'Indian Folklore, itself, identifie various folkgroups and assigns them sterotypical characteristics.This Phenomenon is an excellent example for metafolklore. In some Indian

languages there are whole genres dedicated largely to caste or regional stereotypes. Proverts and jokes also single out various folk categories for comment' (Claus and Korom 1991:25) . ಜನ ಜಾನಪದದಲ್ಲಿ ಜಾನಪದ ವಿದ್ವಾಂಸ ತಾನು ಅಧ್ಯಯನ ಮಾಡುವ ಜಾನಪದವನ್ನು ಕೇವಲ ತನ್ನ ವಿದ್ವತ್ತಿನ ನಿಲುವಿನಿಂದ ನೋಡದೆ, ಆ ಜಾನಪದದ ಬಗೆಗೆ ಜನಪದರ ಒಳನೋಟವನ್ನು ಸಹ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಈ ರೀತಿಯ ಒಳನೋಟ ಸ್ಥಳೀಯ ಅರ್ಥೈಸುವಿಕೆಯ ಪರಂಪರೆಯನ್ನು ಒಳಗೊಂಡಿರುತ್ತದೆ. ಸ್ಥಳೀಯ ಅರ್ಥೈಸುವಿಕೆಯ ಪರಂಪರೆಯು ಜಾನಪದದ ಪರಂಪರೆ, ಐತಿಹಾಸಿಕತೆ, ಸಾಂದರ್ಭಿಕತೆ, ಕ್ರಿಯಾತ್ಮಕತೆಯಿಂದ ಕೂಡಿರುತ್ತದೆ. ಹಾಗಾಗಿ ಈ ಒಳನೋಟ ಅನೇಕ ಆಯಾಮಗಳಿಂದ ಕೂಡಿ ಶ್ರೀಮಂತ ಮತ್ತು ಅರ್ಥಪೂರ್ಣ ವಾಗಿರುತ್ತದೆ. ಇದರಿಂದಾಗಿ ಜಾನಪದದ ಬಹುತ್ವ ಮತ್ತು ಅರ್ಥೈಸುವಿಕೆಯ ಕ್ರಮಗಳನ್ನು ತಿಳಿದುಕೊಳ್ಳಬಹುದು.

ಜಾಕಬೆಸನ್ ಮತ್ತು ಡಂಡಸ್‌ರವರು ನ್ಯಯಾಯಿಕರು (logicians) ಮತ್ತು ಭಾಷಾವಿಜ್ಞಾನಿಗಳನ್ನು ಅನುಸರಿಸಿ ಜಾನಪದ ಅಧ್ಯಯನಕ್ಕೆ ಜನ ಜಾನಪದ (Meta Folk-lore) ಎಂಬ ಪರಿಕಲ್ಪನೆಯನ್ನು ಚಲಾವಣೆಗೆ ತಂದರು Meta Folklore ನಲ್ಲಿಯ `Mata' ಎಂಬ ಪದವು ಕೇವಲ 'ಮೇಲೆ' 'ಸಹ' ಅನುಸರಿಸುವ `ಅವಲಂಬಿಸುವ' ಎನ್ನುವ ಅರ್ಥವಲ್ಲದೆ ಜಾನಪದದ ಪ್ರತಿಯೊಂದು ಪ್ರಭೇದಕ್ಕೂ ತಕ್ಕ ಪ್ರತ್ಯಯವಾಗಿದೆ. (ಪೀಟರ್ ಜೆ.ಕ್ಲಾಸ್ ಮತ್ತು ಫ್ರಾಂಕ್ ಜೆ. ಕೋರಮ್ ೧೯೯೧: ೧೬)

ಡಾ.ಎ.ಕೆ. ರಾಮಾನುಜನ್‌ರವರು ಗದ್ಯಕಥನಗಳಲ್ಲಿ ಐದು ವಿಧದ ಜನ ಜಾನಪದವನ್ನು ಗುರುತಿಸುತ್ತಾರೆ. (ಎ. ಕೆ. ರಾಮಾನುಜನ್ ೧೯೮೭ : ೮೭- ೮೮) ಅವುಗಳೆಂದರೆ,

Metafeature:

a) Elements in the text: ex:- Opening and Closing formulae; repititions; framing devices; forms like prose, verse, song; identifying devices like names of persons; other textural elements like shifts in tone and register.

b) Elements in performance: Ex:- gestures asides to the audience by which tellers reparate themselves.

c) Elements in context : ex : Festival, puja (Worship) performer signified by caste -marks on his forehead, costume and language.

d) Distinactions and names of genres : ex: myth/ folktale, marriage riddles, mother -in-law tales.

Metaforms:

e) Tales about tales, about their forms and functions.

f) Oral exagesis and evaluation by performer and audience : ex: favorite tale, nations about what makes one tale better than another.

ಜನಜಾನಪದ ಎಂಬುದು ಜಾನಪದದ ಪ್ರಕಾರಣಗಳಾದ ಹಾಡು, ಗಾದೆ, ಕಥೆ, ಆಚರಣೆಗಳಂತೆ ಒಂದು ರೂಪಭೇದ (genre)ವಾಗಿರದೆ, ಈ ಪ್ರಕಾರಗಳ ಗುಣಗಳನ್ನು ಅಳೆಯುವ ವಿಶಿಷ್ಟ ನೋಟವಾಗಿದೆ. ಹಾಗಾಗಿ ಇದನ್ನು ಜಾನಪದ ಒಂದು ಪ್ರಕಾರವೆನ್ನುವ ಬದಲಾಗಿ ವಿವಿಧ ಪ್ರಕಾರಗಳ ಒಟ್ಟಾರೆ ಗುಣವೆಂದು ತಿಳಿಯುವುದು ಹೆಚ್ಚು ಅರ್ಥ ಪೂರ್ಣವಾಗಿರುತ್ತದೆ. ಜನ ಜಾನಪದವು ಒಟ್ಟಾರೆ ಜಾನಪದದ ಸಮಗ್ರ ಗುಣಲಕ್ಷಣವನ್ನು ಒಂದುಗೂಡಿಸಿ ವಿಶೇಷ ಅರ್ಥವನ್ನು ನೀಡುತ್ತದೆ.

ಜನ ಜಾನಪದ ಎಂಬುದು ಜಾನಪದದ ವಿವಿಧ ಪ್ರಕಾರಗಳ ಒಳಗೇ ಇರುವ ವಿಶಿಷ್ಟವಾದ ಗುಣವಾಗಿದೆ. ಹಾಗಾಗಿ ಇದು ವಿದ್ವಾಂಸನ ಅಂತರ್ ದೃಷ್ಟಿಗೆ ಕೆಲಸ ಕೊಡುವಂತಹ ಕೆಲಸವಾಗಿರುತ್ತದೆ. ಇದರಿಂದಾಗಿ ಜನ ಜಾನಪದ ಸಂಗ್ರಹ ಸುಲಭವಲ್ಲ. ಕೆಲವೊಮ್ಮೆ ಇದು ಜಾನಪದದ ಒಳನೋಟಕ್ಕಿಂತ ಮಿಗಿಲಾಗಿ ಅದರ ಮೇಲ್ಮೈ ಲಕ್ಷಣಗಳ ಬಗೆಗೆ ವಿಮರ್ಶಿಸುತ್ತದೆ. ಜಾನಪದದ ಕೆಲವು ಪ್ರಕಾರಗಳಿಗೆ `ಜನ ಜಾನಪದ' ಇದೆ. ಕೆಲವು ಪ್ರಕಾರಗಳಿಗೆ ಇಲ್ಲ. ಪ್ರಾಯೋಜಿತ ಪರೀಕ್ಷೆ ಅರ್ಥ ಪ್ರಾಯೋಜಿತ ಪರ್‍ಯವಾಗಿರಬೇಕು. ಕಥೆಯನ್ನು ಹೇಳುವವನ ಮತ್ತು ಕೇಳುವವನ ಅರ್ಥ ಬೇರೆ ಬೇರೆಯಾಗಿರಬಹುದು. ಕೆಲವೊಮ್ಮೆ ನಿರೂಪಕನ ಅರ್ಥ ಏಕದಾಟಿಯಾದರೂ ಅದರ ಕೇಳುಗನ ಮೌಲ್ಯಮಾಪನ ಬೇರೆಯಾಗಬಹುದು. ಹೀಗಾಗಿ ಜನ ಜಾನಪದವನ್ನು ಸಾರ್ವತ್ರಿಕವಾಗಿ ರೂಪಿಸಲು ಸಾಧ್ಯವಿಲ್ಲ.

ಜನ ಜಾನಪದದಿಂದ ಜನಪದರು ತಮ್ಮ ಜಾನಪದ ಮತ್ತು ಜನಪದದ ಬಗೆಗೆ ಹೊಂದಿರುವ ಜ್ಞಾನವನ್ನು ತಿಳಿದುಕೊಳ್ಳಬಹುದು. ಜನಪದರ ಲೋಕದೃಷ್ಟಿ (World View) ಯ ಬಗೆಗಿನ ಕಲ್ಪನೆಯನ್ನು ತಿಳಿಯಬಹುದು. ಜನಪದರಿಂದ ಜಾನಪದದ ಅರ್ಥವನ್ನು ತಿಳಿಯುವುದರಿಂದ ಮೌಖಿಕ ಪರಂಪರೆಯ ಅನೇಕ ಆಯಾಮಗಳನ್ನು ತಿಳಿದುಕೊಳ್ಳ ಬಹುದು. ಆ ಮೂಲಕ ಜಾನಪದದ ಬಗೆಗಿನ ಬಹುಅರ್ಥಗಳನ್ನು ಹೊಮ್ಮಿಸುವುದು ಸಾಧ್ಯವಾಗುತ್ತದೆ.

ಜನಪದರ ಅನುಭವ ವಾಣಿಯಾದ ಗಾದೆ ಜಾನಪದದ ಜನಪ್ರಿಯ ಪ್ರಕಾರಗಳಲ್ಲೊಂದು. ಆಡು ಮಟ್ಟದ ಸೊಪ್ಪಿಲ್ಲ ಎನ್ನುವಂತೆ ಗಾದೆ ಮೆಟ್ಟದ ಬದುಕಿನ ಭಾಗವಿಲ್ಲ, ಮುಟ್ಟದ ವಸ್ತುವಿಲ್ಲ. ಇಂತಹ ಗಾದೆಗಳ ಬಗೆಗೆ ಜಾನಪದ ಸೃಷ್ಟಿಯಾಗಿರುವುದನ್ನು ನಾವು ಕಾಣಬಹುದು.

* ಗಾದೆ ಎಂದೂ ಸುಳ್ಳು ಹೇಳುವುದಿಲ್ಲ. ಜರ್ಮನ್
* ಗಾದೆಯಲ್ಲಿ ಹುಸಿ ಇದ್ದರೆ ಹಾಲಿನಲ್ಲಿ ಹುಳಿ ಇರುತ್ತದೆ. -ಮಲೆಯಾಳಂ
* ಕೆಲವರು ಹೇಳಿದ್ದು ನಿಜವಿರಬಹುದು, ಎಲ್ಲರೂ ಹೇಳಿದ್ದು ನಿಜವಿರಲೇಬೇಕು ಇಂಗ್ಲೀಷ
* ಗಾದೆಗಳ ಬಗ್ಗೆ ಗಮನವಿಲ್ಲದವನು ತಪ್ಪುಗಳನ್ನು ತಪ್ಪಿಸಲಾರ ತುರ್ಕಿ
* ಗಾದೆ ತಿಳಿದ ವಿವೇಕಿ ಜಗಳ ಬಿಡಿಸುತ್ತಾನೆ.- ಆಫ್ರಿಕನ್
* ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ -ಕನ್ನಡ

ಹೀಗೆ ಗಾದೆಗಳ ಬಗೆಗೆ ಇನ್ನೂ ಮುಂತಾದ ಜಾನಪದವನ್ನು ಕಾಣಬಹುದು. ಅಲ್ಲದೆ ಕಿಳ್ಳೇಕ್ಯಾತರ ಆಟಗಳನ್ನು ಆಡಿಸುವುದರಿಂದ ಮಳೆ ಬೆಳೆಗಳು ಚೆನ್ನಾಗಿ ಬರುತ್ತವೆಂಬ ನಂಬಿಕೆ ಇದೆ. ಕರ್ನಾಟಕ ಜನಪದರಲ್ಲಿ ಕಿಳ್ಳೇಕ್ಯಾತರ ಆಟ ಆಡಿಸಿದರೆ ಮಳೆ ಆಗುತ್ತದೆ ಎಂಬ ನಂಬಿಕೆ ಇದೆ. ಹಾಗೆಯೇ ಜೋಗುಳ ಪದದ ಬಗೆಗೂ ತಮ್ಮದೇ ಆದ ಜಾನಪದವನ್ನು ಹೊಂದಿರುವುದನ್ನೂ ಸಹ ನೋಡಬಹುದು.

'ಜೋಗುಳ ಹಾಡಿದರೆ ಆಗಾಲೆ ಕೇಳ್ಯಾನು
ಹಾಲ ಹಂಬಲವ ಮರೆತಾನು । ಕಂದಯ್ಗ
ಜೋಗುಳದಾಗೆ ಅತಿಮುದ್ದು'

ಯಕ್ಷಗಾನವನ್ನು ನೋಡುವುದರಿಂದ ಕೇಡುಂಟಾಗುತ್ತದೆ ಎಂಬ ಹಿನ್ನೆಲೆಯಲ್ಲಿ (ಮೇಲ್ಜಾತಿಗಳಲ್ಲಿ) ನಂಬಿಕೆಗಳು ಉಂಟಾಗಿರುವುದನ್ನ ಕಾಣಬಹುದು. ದಕ್ಷಿಣ ಕನ್ನಡದಲ್ಲಿ ಹಿಂದೆ ಮತ್ತು ಕೆಲವೆಡೆ ಈಗಲೂ ಪ್ರಚಲಿತವಾಗಿರುವ ನಂಬಿಕೆ ಏನೆಂದರೆ, ಒಂದು ಯಕ್ಷಗಾನವನ್ನು ನೋಡಿದರೆ ಏಳು ರಂಗಪೂಜೆಗಳನ್ನು ನೋಡಬೇಕು.

ಭಾರತದಲ್ಲಿ ವರ್ಣಾಧಾರಿತವಾದ ಜನಪದಗಳಿದ್ದು, ಕಾಲಾಂತರದಲ್ಲಿ ಜಾತಿ ಜನಪದಗಳಾಗಿ ಮಾರ್ಪಾಡಾಗಿವೆ. ಆದರೂ ಆ ವರ್ಣಾಧಾರಿತದ ಸೆಲೆಗಳನ್ನು ನಮ್ಮ ಜಾನಪದದಲ್ಲಿ ಈಗಲೂ ಕಾಣಬಹುದು. ಹಾಗೆಯೇ ಜಾತಿ ಜಾತಿಗಳಿಗೇ ಪ್ರತ್ಯೇಕವಾಗಿ ಜಾನಪದವೂ ಸಿಗುತ್ತದೆ.

* ಕರಿ ಬ್ರಾಹ್ಮಣನ ನಂಬಬಾರದು, ಕೆಂಪು (ಬಿಳಿ) ಹೊಲೆಯನ ನಂಬಬಾರ್ದು.
* ಕರಿ ಹಾರುವ ಇರಬಾರದು, ಕೆಂಪು ಗಾಣಿಗ್ಯಾ ಇರಬಾರ್ದು.
* ಕರಿ ಹಾರುವನನ್ನು ಬಿಳಿ ಶೆಟ್ಟರನ್ನು ನಂಬಬಾರದು.
* ಆಚಾರಿ ಆಳಲ್ಲ ಅಂಬಲಿ ಪಾಯಸ ಅಲ್ಲ.
* ಹಾರುವ ಮಡಿಯೋದು ಪಿಂಡಕ್ಕೆ, ಒಕ್ಕಲಿಗ ಮಡಿಯೋದು ದಂಡಕ್ಕೆ, ಹೊಲೆಯ ಮಡಿಯೋದು ಹೆಂಡಕ್ಕೆ.
* ಉತ್ತಬಂದ ಒಕ್ಕಲಿಗನ ಕೆಣಕಬ್ಯಾಡ, ಹಸಿದ ಬಂದ ಹಾರುವನ ಕೆಣಕಬ್ಯಾಡ. ಹೊಲೆಯನ ಮಾತು ಮಾತಲ್ಲ, ಹುಲ್ಲು ಬೆಂಕಿ ಬೆಂಕಿಯಲ್ಲ.
* ಕುರುಬನಿಗೇನು ಗೊತ್ತು ಮರುಗದ ಗಮ.
* ಹಾರುವನಿಗೆ ಆಳಾಗಬ್ಯಾಡ, ಗಾಣಿಗನ್ಗೆ ಎತ್ತಾಗ ಬ್ಯಾಡ.
* ಕುರುಬಗ ಹೂವ ಕೊಟ್ರೆ ಕುಂಡ್ಯಾಗ ಇಟ್ಕೊಂಡ್ನಂತ.
* ಹಿಂಡ ಹೊಲೆಯರು ಕೂಡಿ ತೊಗಲ ಹದ ಕೆಡಿಸಿದರಂತೆ.
* ಕೆಲಸವಿಲ್ಲದ ಕುಂಬಾರ ಮಗಳ ಕುಂಡಿ ತಟ್ಟಿದಂತೆ.
* ಹಾಲಿನಂಥವನಾದ್ರೂ ಹಾರೂವನ ನಂಬಬಾರ್ದು.
* ಬೆಲ್ಲದಂಗೆ ಇದ್ದರೂ ಬೇಡರ ಸಂಗಬೇಡ.
* ತುಪ್ಪದಂಗೆ ಇದ್ದರೂ ತುರುಕರ ಸಂಗಬೇಡ.
* ಕಿರುಬನನ್ನು ನಂಬಿದರೂ ಕುರುಬನನ್ನು ನಂಬಬೇಡ.
* ಜೈನ ಬಿಡ, ಕೊಮಟಿ ಕೊಡ.
* ಏಕಶಾಸ್ತ್ರೀ ಮನೇಲಿ ಏಳುಜನ ಮುಂಡೇರು.
* ಸುಗ್ಗೀಲಿ ಮಾದಿಗರನ್ನು ಕೆಣಕಬಾರದು, ದೀವಳ್ಗೀಲಿ ದನ ಕೆಣಕಬಾರದು.
* ಅಕ್ಕನ ಚಿನ್ನವಾದರೂ ಅಕ್ಕಸಾಲಿಗ ತೊನೆಯದೆ ಬಿಡ.
* ಮೊಂಡರಿಗೆ ನಾಚಿಕೆ ಇಲ್ಲ ಮರಳಿಗೆ ಗಾಳಿ ಇಲ್ಲ.
* ಲಿಂಗದಂಥಾವಾದ್ರೂ ಜಂಗಮನ ನಂಬಬಾರ್ದು.
* ಶೆಟ್ಟಿ ಬಿಟ್ಟಲ್ಲೆ ಪಟ್ಟಣ.
* ಬಿದ್ದಕಲ್ಲೆಲ್ಲಾ ಅಗಸಂದು, ನಿಂತಕಲ್ಲೆಲ್ಲಾ ಪೂಜಾರಿಯದು.

ಭಾರತದಲ್ಲಿ ಹೆಣ್ಣು ಗಂಡು ಎಂಬ ತಾರತಮ್ಯ ಭಾವನೆ ಮೊದಲಿನಿಂದಲೂ ಇದೆ. ಅದರಲ್ಲೂ ಹೆಣ್ಣನ್ನು ಅಪಮಾನವಾಗಿ ಕಾಣುವದು ನಮ್ಮ ಸಾಂಸ್ಕೃತಿಕ ಭಾವಕೋಶದ

ಭಾಗವಾಗಿ ಬಿಟ್ಟಿದೆ. ಈ ರೀತಿಯ ಅಸಮಾನ ಭಾವ ನಮ್ಮ ಜನಪದರ ಗಾದೆಗಳಲ್ಲೂ ಸಹ ವ್ಯಕ್ತವಾಗಿವೆ. ಅದೇ ರೀತಿ ಗಂಡಸರ ಬಗೆಗೂ ಸಹ ಕೆಲವಡೆ ಅವರ ಕೆಟ್ಟ ಗುಣಗಳಿಗೆ ಸಂಬಂಧಿಸಿದಂತೆ ಗಾದೆಗಳು ಹುಟ್ಟಿಕೊಂಡಿರುವುದನ್ನು ಕಾಣುತ್ತೇವೆ.

* ಹೆಂಗಸಿಗೆ ಗುಟ್ಟು ಹೇಳುವುದಕ್ಕಿಂತ, ತೂತು ದೋಣಿಯಲ್ಲಿ ಸಮುದ್ರ ಯಾನ ಮಾಡುವುದು ಮೇಲು (ರಷ್ಯಾ).
* ಸ್ತ್ರೀ ಬುದ್ಧಿ ಪ್ರಳಯಾಂತಕ.
* ಹೆಂಗಸರ ಬುದ್ಧಿ ಮೊಳಕಾಲ್ ಕೆಳಗೆ.
* ಅಲಲಾ ಎಂಬ ಆಲದ ಮರವನ್ನು ನಂಬಹುದು, ಮಳ್ಳಿಯಂಥ ಕಳ್ಳಿಯನ್ನು ನಂಬಬಾರದು.
* ಹೆಂಗಸರ ಬಾಯಾಗ ಮಾತ ನಿಲ್ಲಲ್ಲ, ಗಂಡಸರ ಬಗಲಾಗ ಕೂಸು ನಿಲ್ಲಲ್ಲ.
* ಊರಾಗ ಹೆಂಸಗರನ್ನು ಬಿಡಬಾರ್ದು, ನೀರಾಗ ಎಮ್ಮೆ ಬಿಡಬಾರ್ದು.
* ನೂರು ರುಮಾಲು ಒಂದುಗೂಡಬಹುದು, ಮೂರು ತುರುಬು ಒಂದು ಗೂಡಲ್ಲ.
* ಮೂವರು ಹೆಂಗಸರಲ್ಲಿ ಒಮ್ಮತವಿದ್ದದ್ದಾದರೆ ಹಗಲಿನಲ್ಲಿಯೇ ನಕ್ಷತ್ರಗಳು ಕಾಣಿಸಿ ಕೊಳ್ಳುತ್ತವೆ.
* ಮಾತ ಮಾತಿಗೂ ನಗುವ ಗಂಡಸನ್ನ ನಂಬಬಾರದು, ಮಾತುಮಾತಿಗೂ ಅಳುವ ಹೆಂಗಸನ್ನು ನಂಬಬಾರದು.
* ಮೊಂಡು ಬಿದ್ದವಳು ಗಂಡನ ಮದುವೆಗೆ ಹೋಗಿ ಅಡ್ಡಗೋಡೆಯ ಪಕ್ಕದಿಂದ ಅರ್ಧ ರೂಪಾಯಿ ಓದಿಸಿದಳು.
* ಗಂಡಸರಿಗೆ ಮಾರಿಮ್ಯಾಲ ಮೀಸಿ ಇದ್ರ, ಹೆಂಸರಿಗೆ ಎದೆಮ್ಯಾಲ ಮೀಸಿ ಇರ್ತಾವ.
* ಕುಳ್ಳ ಕೊಳ್ಳೆಗಾಲ ಕೆಡಿಸ್ದ.
* ಕುಳ್ಳ ಗಂಡನಲ್ಲ, ಸೀಗಡಿ ಬಾಡಲ್ಲ.

ಜನಪದಕಥೆ ಜನಪದ ಸಾಹಿತ್ಯದ ಬಹು ಮುಖ್ಯವೂ, ಆಕರ್ಷಕವೂ ಆದ ಭಾಗವಾಗಿದೆ. ಸುದೀರ್ಘವಾದ ಕಥೆಗಳಿಂದ ಹಿಡಿದು ಸಂಕ್ಷಿಪ್ತವಾದ ಕಥೆಗಳವರೆಗೆ ಈ ಕಥಾಕ್ಷೇತ್ರ ಆವರಿಸಿದೆ. ಈ ಕಥೆಗಳ ಬಗೆಗೆ ಜನಪದರು ತಮ್ಮದೇ ಆದ ಹಲವಾರು ನಂಬಿಕೆಗಳನ್ನಿರಿಸಿಕೊಂಡಿದ್ದಾರೆ. ಜನಪದರಲ್ಲಿ ಜನಪದ ಕಥೆಯ ಬಗೆಗೆ ಇರುವ ನಂಬಿಕೆಗಳು ಈ ರೀತಿಯಾಗಿವೆ. (Tales get fewer as one moves from village to town (Claus and Korom 1991: 13) ಕಥೆಯನ್ನು ಹೇಳದಿರುವವರು ಮತ್ತು ಕೇಳದಿರುವವರಿಗೆ ಸ್ವರ್ಗದಲ್ಲಿ ಸ್ಥಾನವಿರುವುದಿಲ್ಲ. ಚೆನ್ನಾಗಿ ಒಳ್ಳೆಯ ಕಥೆ ಹೇಳುವವರು

ಸಿಕ್ಕರೆ ಯಮಧರ್ಮರಾಯ ಅವರನ್ನು ತನ್ನ ರಾಣಿಯರಿಗೆ ಕಥೆ ಹೇಳಲು ಇಟ್ಟುಕೊಳ್ಳುತ್ತಾನೆ. ಇವಲ್ಲದೆ ಸಂಸ್ಕೃತಿ ಜನಪದ ಕಥೆಯ ಬಗೆಗೆ ತನ್ನದೇ ಆದ ಕೆಲವು ಯೋಚನೆಗಳನ್ನು ಹೊಂದಿದೆ. ರಾಮಾಯಣದ ಕಥೆಗಳನ್ನು ಕೇಳುವುದರಿಂದ ಸುಸಂಸ್ಕೃತನಾದ ವ್ಯಕ್ತಿಯಾಗುತ್ತಾನೆ. ಕಥೆಗಳು ಬರುತ್ತಿದ್ದು ಅವುಗಳನ್ನು ಬೇರೆಯವರಿಗೆ ಹೇಳದಿದ್ದರೆ, ಕಥೆಗಳೇ ಕಥೆ ಹೇಳದಿದ್ದ ವ್ಯಕ್ತಿಯಮೇಲೆ ಸೇಡು ತೀರಿಸಿಕೊಳ್ಳುವುದು. ದೇವರು ಕಥೆಗಳನ್ನು ಭೂಲೋಕಕ್ಕೆ ಜನರ ಬೇಸರ ಕಳೆಯಲಿಕ್ಕೆ ಕಳುಹಿಸಿ ಕೊಟ್ಟಿದ್ದಾರೆ. ಹಾಗೂ ಕಥೆಗಳು ಹೆಚ್ಚಾಗಿ ಹೊಲೆಯರಿಗೆ ಬರುತ್ತವೆ. ಈ ರೀತಿಗಳಲ್ಲಿ ಕಥೆಗಳ ಬಗ್ಗೆ ಜನಪದರು ಭಾವನೆಗಳನ್ನು ಹೊಂದಿದ್ದು, ಅವುಗಳಿಗೆ ಸಂಬಂಧಿಸಿದ ಕಥೆಗಳನ್ನು ಸಹ ಹೊಂದಿದ್ದಾರೆ.

ಕಥೆಗಳು ಬಂಡಾಯವೆದ್ದು ವ್ಯಕ್ತಿಯಿಂದ ಬಿಡಿಸಿಕೊಂಡು ಬಂದು ಬೇರೆ ಬೇರೆ ರೂಪ ತಾಳಿ ತಮ್ಮ ಸೇಡನ್ನು ತೀರಿಸಿಕೊಳ್ಳಲು ಪ್ರಯತ್ನಿಸುವುದನ್ನು ಡಾ. ಎ. ಕೆ. ರಾಮಾನುಜನ್ ರವರು ಸಂಗ್ರಹಿಸಿರುವ Folktales from India ಸಂಗ್ರಹದಲ್ಲಿಯ ಹೇಳಿದ ಕಥೆಗಳು (Untold Story) ಶೀರ್ಷಿಕೆಯ ಕಥೆಯನ್ನು ಗಮನಿಸಬಹುದು ಕಥೆಯ ಸಾರಾಂಶ ಕೆಳಗಿನಂತಿದೆ.

ಗೋಂಡಿ ರೈತನಿದ್ದ. ಅವನು ತನ್ನ ಸಾಮರ್ಥ್ಯಕ್ಕೆ ತಕ್ಕುದಾದ ಜಮೀನು ಮಾಡಿಕೊಂಡಿದ್ದ. ವ್ಯವಸಾಯಕ್ಕೆ ಆಳನ್ನು ಇಟ್ಟುಕೊಂಡಿದ್ದು. ಒಂದು ದಿನ ಇಬ್ಬರು ಮಗ ಮತ್ತು ಸೊಸೆ ನೋಡಲು ಹೋಗುತ್ತಾರೆ. ರಸ್ತೆಯಲ್ಲಿ ಸಣ್ಣ ಗುಡಿಸಲಿನಲ್ಲಿ ಊಟ ಮಾಡುತ್ತಾರೆ. ಆಳು ಕಥೆ ಹೇಳಿ ಅನ್ನುತ್ತಾರೆ. ಗೋಂಡಿ ರೈತನಿಗೆ ನಿದ್ದೆ ಬಂದು ಕಥೆ ಹೇಳುವುದಿಲ್ಲ. ಆಳು ಎಚ್ಚರವಾಗಿರುತ್ತಾನೆ. ಸಾಹುಕಾರನಿಗೆ ನಾಲ್ಕು ಕಥೆ ಗೊತ್ತಿವೆ. ನನಗೆ ಹೇಳಲಿಲ್ಲ ಎನ್ನುವನು. ಗೋಂಡಿ ರೈತ ಗಾಢವಾದ ನಿದ್ರೆಯಲ್ಲಿದ್ದಾಗ ಕಥೆಗಳೆಲ್ಲಾ ಹೊಟ್ಟೆಯಿಂದ ಹೊರಗಡೆ ಬರಲು ಪ್ರಾರಂಭಿಸಿದವು. ಹೊರಗಡೆ ಬಂದು ಹೊಟ್ಟೆಮೇಲೆ ಕುಳಿತುಕೊಂಡು ಮಾತಾಡಹತ್ತಿದವು. ಒಂದು ಕಥೆ ಹೇಳುತ್ತೆ `ಚಿಕ್ಕಂದಿನಿಂದಲೂ ಇವನಿಗೆ ಗೊತ್ತು, ಆದರೆ ಯಾರಿಗೂ ಹೇಳುತ್ತಿಲ್ಲ, ಇವನನ್ನು ಕೊಂದು ಬಿಟ್ಟು ಬೇರೆ ಜೊತೆ ಇರೋಣ ಎನ್ನುತ್ತದೆ.' ಅದನ್ನು ಗೋಂಡನ ಆಳು ಕೇಳಿಸಿಕೊಳ್ಳುತ್ತಾನೆ.

ಮೊದಲನೆ ಕಥೆ ಈತ ಮಗನ ಮನೆಯಲ್ಲಿ ಊಟ ಮಾಡುವಾಗ ಮೊದಲ ತುತ್ತನ್ನು ವಿಷಬಾದ ಸೂಜಿ ಮಾಡುತ್ತೇನೆ. ಅವನು ಅದನ್ನು ತಿಂದು ಸಾಯುತ್ತಾನೆ. ಎರಡನೇ ಕಥೆ ಒಂದು ವೇಳೆ ಅಲ್ಲಿ ತಪ್ಪಿಸಿಕೊಂಡರೆ ರಸ್ತೆ ಬದಿಯಲ್ಲಿ ದೊಡ್ಡ ಮರವಾಗಿ ಅವನು ರಸ್ತೆ ಬದಿಯಲ್ಲಿ ಹೋಗುವಾಗ ಅವನ ಮೇಲೆ ಬಿದ್ದು ಸಾಯಿಸುತ್ತೇನೆ. ಮೂರನೇ ಕಥೆ ಆಗಲೂ ಸಾಯದಿದ್ದರೆ ಹಾವಾಗಿ ಕಚ್ಚಿ ಸಾಯಿಸುತ್ತೇನೆ ಎನ್ನುತ್ತದೆ. ನಾಲ್ಕನೇ ಕಥೆ

ಆಗಲೂ ಸಾಯದಿದ್ದರೆ ದೊಡ್ಡ ನೀರಿನ ಅಲೆಯಾಗಿ ಬಂದು ಕೊಚ್ಚಿಕೊಂಡು ಹೋಗಿ ನದಿಗೆ ತಳ್ಳಿ ಸಾಯಿಸುತ್ತೇನೆ ಎನ್ನುತ್ತದೆ.

ಮೂರನೇದಿನ ಮಗನ ಮನೆಗೆ ಹೋದಾಗ ಊಟಕ್ಕೆ ಕುಳಿತಾಗ ಮೊದಲ ತುತ್ತನ್ನು ತಿನ್ನುವಾಗ ಆಳು ಸಾಹುಕಾರನಿಗೆ ನೀನು ತಿನ್ನಬೇಡ ಅದರಲ್ಲಿ ಸೂಜಿ ಇವೆ ತಿನ್ನಬೇಡ ಎನ್ನುವನು. ಮಾರನೇದಿನ ಊರಿಗೆ ಬರುವಾಗ ದಾರಿಯಲ್ಲಿ ದೊಡ್ಡ ಮರ ಬಂದಾಗ ಆಳು ಮರದ ಕೆಳಗೆ ಹೋಗುವಾಗ ಜೋರಾಗಿ ಓಡು ಎನ್ನುವನು. ಸಾಹುಕಾರ ಹಾಗೆ ಮಾಡಲು ಮರದಾಟಿದ ತಕ್ಷಣ ಮರ ಬೀಳುತ್ತೆ, ತಪ್ಪಿಸಿಕೊಳ್ಳುತ್ತಾನೆ. ಸ್ವಲ್ಪ ಸಮಯದಲ್ಲಿ ಹಾವು ಕಾಣಿಸಿಕೊಳ್ಳುತ್ತದೆ. ಆಳು ಅದನ್ನು ಕೊಲ್ಲುತ್ತಾನೆ. ಹೊಳೆದಾಟುವಾಗ ದೊಡ್ಡ ಅಲೆ ಬಂದು ಕೊಚ್ಚಿಕೊಂಡು ಹೋಗಬೇಕೆನ್ನುವಾಗ ಆಳು ಪಾರುಮಾಡುತ್ತಾನೆ.

ಆ ಮೇಲೆ ಹೊಳೆದಂಡೆ ಮೇಲೆ ವಿಶ್ರಾಂತಿಗೆ ಕುಳಿತಿದ್ದಾಗ ಗೋಂಡಾ `ನೀನು ನನ್ನನ್ನು ನಾಲ್ಕು ಸಾರಿ ಸಾಯುವುದನ್ನು ತಪ್ಪಿಸಿದ್ದೀಯ' ಹಾಗಾಗಿ ನಿನಗೆ ಏನೋ ಗೊತ್ತಿದೆ ಹೇಳು ಎನ್ನುವನು. ಆಳು ಅದನ್ನು ಹೇಳಿದರೆ ನಾನು ಕಲ್ಲಾಗಬೇಕಾಗುತ್ತೆ ಎನ್ನುವನು. ಅದಕ್ಕೆ ಗೊಂಡಾ ಅದು ಹೇಗೆ ಸಾಧ್ಯ ಹೇಳು ಎನ್ನುವನು. ಆಗ ಆಳು ಹೇಳುವನು 'ಒಂದು ವೇಳೆ ನಾನು ಕಲ್ಲಾದರೆ ನಿನ್ನ ಸೊಸೆಯ ಮಗುವನ್ನು ನನ್ನ ಮೇಲೆ ಎಸೆಯಬೇಕು ಆವಾಗ ಮನುಷ್ಯನಾಗುತ್ತೇನೆ' ಎಂದು ಹೇಳಿ ಕಲ್ಲಾಗುತ್ತಾನೆ. ಗೋಂಡಾ ಹಾಗೆಯೇ ಮನೆಗೆ ಹೋಗುವನು. ಸ್ವಲ್ಪ ದಿನವಾದ ಮೇಲೆ ಸೊಸೆಗೆ ಗೊತ್ತಾಗಿ ಅಲ್ಲಿಗೆ ಹೋಗಿ ತನ್ನ ಮಗುವನ್ನು ಕಲ್ಲಿನ ಮೇಲೆ ಎಸೆಯುವಳು. ಆಳು ಮನುಷ್ಯನಾಗುವನು ಆಳನ್ನು ಗೋಂಡಾ ಮನೆಗೆ ಸೇರಿಸುವುದಿಲ್ಲ. ಇವತ್ತಿಗೂ ಅಲ್ಲಿಯ ಜನ ಗೋಂಡನಿಗೆ ಏನೂ ಹೇಳಬೇಡಿ ಎಂದು ಮಾತನಾಡಿಕೊಳ್ಳುವರು.

ಕಥೆಗಳು ಭೂಮಿಗೆ ಏಕೆ ಬಂದವು, ಅವುಗಳ ಹೊಲೆಯರ ಹತ್ತಿರವೇ ಜಾಸ್ತಿ ಏಕೆ ಇವೆ ಎಂಬುದರ ಬಗೆಗೆ ಡಾ. ಆರ್. ಶೇಷಶಾಸ್ತ್ರಿಯವರು `ಹರತಿ ಸಿರಿ' ಗ್ರಂಥ ದಲ್ಲಿ 'ಕತೆಯ ಕತೆಗಳು' ಎಂಬ ಶೀರ್ಷಿಕೆಯಲ್ಲಿ ಸಂಗ್ರಹಿಸಿರುವ ಕಥೆ ಉತ್ತಮ ಉದಾಹರಣೆ ಯಾಗಿದೆ.

ಈ ಭೂಲೋಕದಾಗ ಜನಗಳು ಕೆಲ್ಸ ಮಾಡಿಕೊಂಡು ತಮ್ಮ ಬೇಕಾದ ಅದೂ ಇದೂ ಸರಿ ಮಾಡಿಕೊಳ್ಳೋದ್ರಾಗ ಬಿಡುವೇ ಇತ್ತಾ ಇರಲಿಲ್ಲ. ಎಲ್ಲಾ ಒಂದು ಅದು ಬಸ್ತ ಕ ಬಂದು ಮ್ಯಾಕ್ಕರವಷ್ಟು ಟೈಮು ಸಿಕ್ತು. ನಾನು ಏಳ್ತಾ ಇರೋದು ಈ ಭೂಲೋಕ ಉಟ್ಟಿದಾಗಿನ ಸಮಾಚಾರ. ಬಿಡುವು ಇದ್ದಾಗ ಅದೂ ಇದೂ ಮಾತಾಡ್ತಾ ಇದ್ರು. ಎಷ್ಟು ದಿನಾ ಅಂತ ಅದೂ ಇದೂ ಅಂತ ಮಾತಾಡೋದು ಅವ್ರ ಮನೆ ಇಚಾರಗಳನ್ನು ಎಚ್ಚಗಾ ಮಾತಾಡೋದು

ಮೈಕ ಒಳ್ಳೇದಲ್ಲಾ ಅಂತ ಕೂಡ ತಿಳಿದೋಯ್ತು. ಅದ್ರಸಿಂಕ ಅಪರು ದೇರ್ನ ತಬುಸು ಮಾಡಿದ್ರು. ಆವಾಗ ದೇವರು ಬಂದ್ನು. ಕೇಳಿದ್ನು ಇವ್ರು ಎಲ್ಲಾ ಏಳಿದ್ರು. ಆವಾಗ ದೇವ್ರು "ನಿಮ್ಮ ಬೇಜಾರು ಆದ್ರೆ ನಮ್ಮ ದೇವಾಸುದೇವ ಲೋಕದಾಗ ಬೆಮ್ಮಾಂಡ್ಲಗಾ ಬಿದ್ದಿರೋ ಕಥೆಗಳ್ನ ನಿಮ್ಮ ಎಷ್ಟು ಬೇಕೋ ಅಷ್ಟು ತಕ್ಕೊಂಡೋಗೆರ್ರಾ' ಅಂತವರಾ ಕೊಟ್ನು ಸರಿ ಇವ್ರು ಅವನು ಏಳಿದ್ರೇ ತವ್ರ ಎಲ್ಲಾ ಬಂಡಿಗಳ್ನ ಸರಿ ಮಾಡಿಕೊಂಡು ವೋಲೆಟ್ರು ಎಲ್ಲೂ ಗಾಡಿಗಳ್ಗಾ ಶೆನ್ನಾಗಿ ತುಂಬಿಸಿದರು. ಜನಗಳು ಮೊದಲೇ ಆಶಿಪುರುಕ್ರು ಪುಗಸೆಟ್ಟೆ ಶಿಕ್ತು ಅಂದ್ರೆ ಕೇಳಬೇಕಾ. ಅವು ಎಂತಾ ಕತೆಗಳು ಏನು? ಎತ್ತುಗಳು ಎಳಿತಾವ, ಅಚ್ಚು ತಡದಾತಾ ಈ ಭಾರಾನ ಅಂತ ಕೂಡಾ ನೋಡುಲ್ಲ. ಪುಲ್ ರೋಡ್ ಮಾಡಿದ್ರು, ಆ ಎತ್ತುಗಳು ಏಳೀಲಾರದಾ ಎಳಕಂಡು ಬತ್ತಾ ಅವೆ. ಎಲ್ಲಿಗಂಟಾ ಬಂದುವು, ಊರಗಂಟಾ ಬಂದುವು. ಮಾದಿಗರ ಮನೆಗಳ ತಾವ ಬತಾ ಅದೆ ಗಾಡಿ ಅನ್ನೋವಾಗ ಒಂದು ಗಾಡಿ ಅಚ್ಚು ಮುರ್ದು ವೋಯ್ತು. ಸರಿ, ಈ ದಾರಿ ಸರಿಗಿಲ್ಲ ಅಂತಾ ಇನ್ನೊಂದು ಗಾಡಿನಾ ಅಂಗಾಸಿ ವೊಡಕ್ಕಂಡು ಬಂದ್ರು. ಅದೂ ವೋಲೇರ ಮನೆಗ್ರ ತಾವ ಅಚ್ಚು ಮುರುದು ಕುಂತಕಂಡ್ತು. ಸರಿ ಇನ್ನೇನು ಮಾಡೋದು ಸಂಸಾರಿಗಳ್ಕ ಅಪ್ಪಾರಾಗೆ ಬೇಜಾರಾಗಿತ್ತು. ಎಲ್ಲರೂ ರವಷ್ಟು ತಕ್ಕುಂಡು ವೋದ್ರು. ಬಾಕಿ ಕತೆಗಳ್ನ ನಾವು ವೊಲೇರೂ ಎತ್ತಿಕೊಂಡು ವೋದ್ವಿ. ಅದ್ರುಕೇ ಸ್ವಾಮಿ ಸಂಸಾರಿಗಳ ಜನ್ನ ನಾವೇ ಎಚ್ಚುಗಾ ಕತೆಗಳು ಏಳಾದು ಎಂದು ತನ್ನ ಕತೆಯನ್ನು ಮುಗಿಸಿ, ತನ್ನ ತಾಯಿ ಆಣೆಯಾಗಿ ಈ ಕತೆ ಸತ್ಯವೆಂದು ಹೇಳಿದ.

ಆಧಾರ ಗ್ರಂಥಗಳು

೧. ಶೇಷಶಾಸ್ತ್ರೀ ಆರ್. ೧೯೮೭ ಕತೆಯ ಕತೆಗಳು (ಹರತಿಸಿರಿ ಸಂ. ಲಕ್ಷ್ಮಣ ತೆಲಗಾವಿ) ಹರ್ತಿಕೋಟೆ, ವಾಲ್ಮೀಕಿ ಸಾಹಿತ್ಯ ಸಂಪದ

2. Dundes. Alan; 1966.The study of Folklore. Englewood cliffr, New Jersey: Prentice Hall.

3. Peter J. Claus and Frank J. Korom; 1991. Folklorirtics and Indian Folklore. Udupi. R. R.C for Folk Performing Arts.

4. Ramanujan,A. K; 1987. `The Relevance of South Asian Folklore' In Peter J. Claus, J. Handoo and D. P. Pattanayak (eds) Indian Folklore II, Mysore, C.I.I.L.

●●

ಗ್ರಾಮಾಂತರ ವಸ್ತುಸಂಗ್ರಹಾಲಯ -ಸಂಶೋಧನಾ ಕೇಂದ್ರ

-ಕೆಳದಿ ಗುಂಡಾಜೋಯಿಸ್

ಭಾರತವು ನಿಸರ್ಗ ರಮಣೀಯತೆಗಳಿಂದ ಕೂಡಿದ ಹಳ್ಳಿಗಳ ದೇಶ. ಮಹಾನ್ ಋಷಿಗಳು, ರಾಜಮಹಾರಾಜರುಗಳು, ಅರಸುಮನೆತನಗಳು, ಕವಿಗಳು, ಧಾರ್ಮಿಕ ಸುಧಾರಕರು, ರಾಜನೀತಿಜ್ಞರು ಹಾಗೂ ಶಿಕ್ಷಣವೇತ್ತರು ಮುಂತಾದವರೆಲ್ಲರೂ ಜನ್ಮವೆತ್ತಿದುದು ಹಳ್ಳಿಗಳಲ್ಲಿ ಒಂದು ಕಾಲದಲ್ಲಿ ಗ್ರಾಮಗಳು ಸ್ವಾವಲಂಬನೆಯಿಂದ ಕೂಡಿ ಸಮೃದ್ಧಿಯೊಂದಿಗೆ ನೆಮ್ಮದಿಯಿಂದ ಬಾಳಿತ್ತು. ಆದಿಯಿಂದಲೂ ಅರಸುಮನೆತನಗಳು ಹಳ್ಳಿಗಳನ್ನು ವಿಕೇಂದ್ರಿಕರಣದತ್ತ ಕೊಂಡೊಯ್ದರು. ಈಚೆಗೆ ಗ್ರಾಮಗಳು ಎಲ್ಲ ರೀತಿಯ ಅನಾಗರಿಕತೆಯ ದಾಳಿಗೆ ತುತ್ತಾಗಿ ತತ್ತರಿಸುತ್ತಿವೆ. ಸ್ವಾತಂತ್ರ್ಯದಿಂದೀಚೆಗೆ ಇದು ಮತ್ತಷ್ಟು ಹೆಚ್ಚಾಗಿ ಕ್ಷೋಭೆಗೊಂಡಿವೆ. ಇದು ಪ್ರಜಾಪ್ರಭುತ್ವದ ದುರ್ದೈವವೆನ್ನದೆ ವಿಧಿಯಿಲ್ಲ. ಸಾಮಾನ್ಯ ಜನತೆಗೂ ಹಳ್ಳಿಗಳ ಜೀವನವೇ ದುರ್ಭರವೆನ್ನಿಸಿ ನಗರಗಳಿಗೆ ವಲಸೆ ಹೋಗುವಂತಾಗಿದೆ. ಇತಿಹಾಸದಲ್ಲಿ ಕಂಡು ಬಂದ ಭಾರತದಲ್ಲಿರುವ ಅನೇಕ ಅರಸುಮನೆತನಗಳು ಹಳ್ಳಿಗಳಿಂದಲೇ ಉದಯಿಸಿ, ಪ್ರವೃದ್ಧಮಾನವಾಗಿ ರೂಪುಗೊಂಡು ಬೃಹತ್ ಪಾಳೆಯಪಟ್ಟು ಹಾಗೂ ಸಂಸ್ಥಾನಗಳ ಬೆಳವಣಿಗೆಗೆ ಕಾರಣಗಳಾಗಿವೆ. ಈ ಅರಸು ಮನೆತನಗಳು ಶಾಸ್ತ್ರಬದ್ಧವಾಗಿ ನಿರ್ಮಿಸಿದ ದೇವಾಲಯಗಳು, ಕಲಾ ಕೇಂದ್ರಗಳು ಅವರ ಉಗಮಸ್ಥಾನದಲ್ಲಿಯೇ ಕಂಗೊಳಿಸಿ ಈಗಲೂ ಪ್ರಸಿದ್ಧಿಯನ್ನು ಗಳಿಸಿವೆ. ವ್ಯಾಪಾರೀ ಮನೋಭಾವಗಳಿಂದ ನಿರ್ಮಿಸಿದ ನಗರಗಳ ದೇವಾಲಯಗಳಿಗಿಂತ ಕ್ಷೇತ್ರ ಶುದ್ಧಿಗನುಗುಣವಾಗಿ ಆಗಮ ಶಾಸ್ತ್ರ ಹಾಗೂ ತಪಶ್ಶಕ್ತಿಗಳ ಮುಖಾಂತರ ಸುಂದರ ಪರಿಸರಗಳಿಂದ ಕೂಡಿದ ಹಳ್ಳಿಗಳಲ್ಲಿ ನಿರ್ಮಾಣಗೊಂಡ ದೇಗುಲಗಳು ಈಗಲೂ ಮನಶ್ಶಾಂತಿಯನ್ನು ನೀಡುವ ಅಧ್ಯಾತ್ಮಿಕ ತಾಣಗಳಾಗಿವೆ. ಇವುಗಳೆಲ್ಲವೂ ಅಂತರ್‌ರಾಷ್ಟ್ರೀಯ ಸಾಂಸ್ಕೃತಿಕ ಸಂಪತ್ತುಗಳು. ಇವುಗಳನ್ನು ರಕ್ಷಿಸಲು ಹಳ್ಳಿಗಳಿಗೇ ಧಾವಿಸಿ ಬರುವುದು ಅಗತ್ಯ.

ಅರಸುಮನೆತನಗಳ ಮೂಲ ಕ್ಷೇತ್ರದ ಪ್ರಾಮುಖ್ಯತೆ.

ಅರಸು ಮನೆತನಗಳ ಉಗಮ ಸ್ಥಾನದಲ್ಲಿ ನಿರ್ಮಾಣಗೊಂಡ ದೇವಾಲಯಗಳು ಹಾಗೂ ಕಲಾಕೇಂದ್ರಗಳು ವಿಪುಲವಾಗಿದ್ದು ಸ್ವಾಭಾವಿಕ ವಸ್ತು ಸಂಗ್ರಹಾಲಯಗಳೊ

ಪಾದಿಯಲ್ಲಿ ಶೋಭಿಸಿವೆ. ಲಕ್ಷಾಂತರ ಹಳ್ಳಿಗಳಲ್ಲಿರುವ ಸ್ಮಾರಕಗಳು, ಕೋಟೆಗಳು, ಕಲಾತ್ಮಕ ಪರಿಸರಗಳು ಬೆಲೆಯನ್ನೇ ಕಟ್ಟಲಾಗದ ಅಮೂಲ್ಯ ಸಾಂಸ್ಕೃತಿಕ ಸಂಪತ್ತುಗಳೆನಿಸಿ ಹಳ್ಳಿಗಳಲ್ಲಿಯೇ ಕೇಂದ್ರೀಕೃತವಾಗಿರುವುದರಿಂದ, ಇವುಗಳ ರಕ್ಷಣೆಗಾಗಿಯಾದರೂ ಗ್ರಾಮಾಭಿವೃದ್ಧಿಯಲ್ಲಿ ಸ್ವಾಭಾವಿಕವಾಗಿಯೇ ಅಭಿವೃದ್ಧಿ ಪಥದತ್ತ ಸಾಗಬೇಕಾದ ಅಗತ್ಯವಿದೆ. ಕ್ರಿ. ಶ. ೧೧೧೨ರಲ್ಲಿ ನಿರ್ಮಿತವಾದ ಇಟ್ಟಗಿಯ ಮಹಾದೇವ ದೇವಾಲಯವನ್ನು "ದೇವಾಲಯ ಚಕ್ರವರ್ತಿ" ಎಂಬುದಾಗಿ ವಾಸ್ತುಶಿಲ್ಪಶಾಸ್ತ್ರಜ್ಞರು ಪರಿಗಣಿಸಿದ್ದು ಹಳ್ಳಿಯಲ್ಲಿದೆ. ಇದರಂತೆಯೇ ಧಾರ್ಮಿಕ ಸುಧಾರಕರ, ದಾಸಶ್ರೇಷ್ಠರ, ಪ್ರಸಿದ್ಧ ಕವಿಗಳ, ರಾಜನೀತಿಜ್ಞರುಗಳ ವಿಜ್ಞಾನಿಗಳ ಜನನವು ಬಹುಪಾಲು ಹಳ್ಳಿಗಳೆಂಬುದನ್ನು ಅಲ್ಲಗಳೆಯುವಂತಿಲ್ಲ. ಇಂತಹ ಹಳ್ಳಿಗಳನ್ನು ಗುರ್ತಿಸಿ ಅರಸುಮನೆತನಗಳ, ಧಾರ್ಮಿಕ ಶ್ರೇಷ್ಠರ, ಕವಿಗಳ ರಾಜನೀತಿಜ್ಞರ ಸಮಗ್ರ ಇತಿಹಾಸವನ್ನು ಮುಂದಿನ ಪೀಳಿಗೆಗೆ ಉಳಿಸಲು ಆಯಾ ಗ್ರಾಮಾಂತರ ಕ್ಷೇತ್ರಗಳಲ್ಲಿಯೇ ವಸ್ತುನಿಷ್ಠ ಸಂಗ್ರಹಾಲಯವನ್ನು ಸ್ಥಾಪಿಸಿ ತನ್ಮೂಲಕ ಸಂಶೋಧನೆ ಕೈಗೊಳ್ಳಲು ತಜ್ಞರಿಗೆ ಪ್ರೋತ್ಸಾಹವಕಾಶಗಳನ್ನು ನೀಡಿದಲ್ಲಿ ವಿದ್ವಾಂಸರು ಹಾಗೂ ಬುದ್ಧಿಜೀವಿ ಗಳನ್ನು ಗ್ರಾಮಗಳಿಗೆ ಆಕರ್ಷಿಸುವಲ್ಲಿ ವಿಪುಲ ಅವಕಾಶಗಳಿವೆ. ಜಪಾನ್ ಮುಂತಾದ ಅಭಿವೃದ್ಧಿಶೀಲ ದೇಶಗಳು ಈ ಮಾದರಿಯನ್ನು ಅನುಸರಿಸುವಲ್ಲಿ ಸಫಲತೆಯನ್ನು ಕಂಡು ಕೊಂಡಿದ್ದಾರೆ. ಆ ದೇಶಗಳು ಹಳ್ಳಿಗಳಲ್ಲಿರುವ ಪ್ರಾಚೀನ ಅವಶೇಷಗಳನ್ನು ಅಲ್ಲಲ್ಲಿಯೇ ಗುರ್ತಿಸಿ ಇತಿಹಾಸಕ್ಕೆ ಅಪಚಾರವಾಗದಂತೆ ಸಂರಕ್ಷಿಸಿ ಅಲ್ಲಿಯೇ ಅವುಗಳನ್ನು ಅಭಿವೃದ್ಧಿಪಡಿಸಿರುವುದನ್ನು ಕಂಡುಕೊಳ್ಳಬಹುದು.

ಅರಸುಮನೆತನಗಳ ಹಳ್ಳಿ ಹಾಗೂ ವಸ್ತು ಸಂಗ್ರಹಾಲಯ

ದಕ್ಷಿಣ ಭಾರತದಲ್ಲಿ ಕ್ರಿ. ಪೂ. ೬ನೇ ಶತಕದಲ್ಲಿ ನಂದರಿಂದ ಆರಂಭಿಸಿ ಹತ್ತೊಂಭತ್ತನೆ ಶತಮಾನದಲ್ಲಿ ಕಾಲಿರಿಸಿದ ಬ್ರಿಟಿಷರ ಕಾಲದವರೆಗೆ ಆಳಿದ ಅರಸು ಪರಂಪರೆಗಳ ಉಗಮದ ಹಳ್ಳಿಗಳು ಅಪಾರವಿವೆ. ಇವಲ್ಲದೆ ಸಿಪಾಯಿದಂಗೆಗಳು, ಬ್ರಿಟಿಷರ ವಿರುದ್ಧ ಹೋರಾಡಿದ ಕ್ರಾಂತಿ ಪುರುಷರು, ಕರಾವಳಿಗಳಲ್ಲಿನ ಪೋರ್ಚುಗೀಸ್, ಡಚ್, ಇಂಗ್ಲೀಷ್, ಫ್ರೆಂಚ್‌ರ ಇತಿಹಾಸದ ಮೂಲಗಳು ಹೈದರ್, ಟಿಪ್ಪು,ಧೋಂಡೇವಾಗ್, ಕೆಳದಿ ಹಾಗೂ ಕಿತ್ತೂರು ಚೆನ್ನಮ್ಮ ಹಾಗೂ ಬ್ರಿಟಿಷರ ಕದನಗಳು ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿಸಿ ಸಂಶೋಧನೆ ಕೈಗೊಳ್ಳಲು ನೆರವು ನೀಡುತ್ತವೆ. ಇದರಿಂದ ಹಳ್ಳಿಗಳಲ್ಲಿ ಐತಿಹಾಸಿಕ ಪ್ರಜ್ಞೆ ಹಾಗೂ ರಾಷ್ಟ್ರೀಯ ಭಾವನೆಗೆ ಮಹತ್ತರ ಪರಿಣಾಮ ಬೀರಬಲ್ಲುದು. ಹಳ್ಳಿಗಳನ್ನು ಕೇಂದ್ರ ಬಿಂದುವಾಗಿರಿಸಿ ಕೊಂಡು ವಸ್ತುಸಂಗ್ರಹಾಲಯ ಹಾಗೂ ಸಂಶೋಧನಾ ಕೇಂದ್ರಗಳನ್ನು ಈ ಕೆಳಕಂಡಂತೆ ವಿಭಜಿಸಿ ನಿರ್ದೇಶಿಸಬಹುದು.

೧. ಅರಸುಮನೆತನಗಳು
೨. ದೇಶೀಯ ಪಾಳೆಯ ಪಟ್ಟುಗಳು
೩. ಕವಿಗಳು
೪. ಧಾರ್ಮಿಕ ಸುಧಾರಕರು
೫. ರಾಜನೀತಿಕೋವಿಜ್ಞರು

ಅರಸು ಮನೆತನಗಳು

ನಂ. ರಾಜವಂಶಗಳು	ಮೂಲ	ರಾಜಧಾನಿ	ಗ್ರಾಮಾಂತರ ವಸ್ತು ಸಂಗ್ರಹಾಲಯಕ್ಕೆ ಅರ್ಹತೆಯ ತಾಣ	ವಿಶೇಷ ವಿಷಯ
೧. ಗಂಗರು	ಕುಲವಲಾಪುರ ಮಣ್ಣೆ ಮನ್‌ಕುಂದಾ	ತಲಕಾಡು	ತಲಕಾಡು ಕೋಲಾರ ಕುಲವಲಾಪುರ ದಲ್ಲಿಯೂ ಮ್ಯುಜಿಯಂ ಇರುವುದಿಲ್ಲ	'ಮಣ್ಣೆ' ಬೆಂಗಳೂರು ಗ್ರಾಮೀಣ ಜಿಲ್ಲೆ 'ಮನ್‌ಕುಂದಾ' ಚೆನ್ನಪಟ್ಟಣ ತಾಲ್ಲೂಕು
೨. ಕದಂಬರು	ಆದಿ ಬನವಾಸಿ ತಾಳಗುಂದ ಚಂದ್ರವಳ್ಳಿ ?	ಬನವಾಸಿ	ಬನವಾಸಿ	Museum ಇದೆ Research Centre ಆಗಬೇಕು
೩. ಬಾದಾಮಿ ಚಾಲುಕ್ಯರು	ಬಾದಾಮಿ ವಾತಾಪಿ ಮಹಾಕೂಟ ಪಟ್ಟದಕಲ್ಲು ಐಹೊಳೆ	ಬಾದಾಮಿ ವಾತಾಪಿ ಐಹೊಳೆ	ಬಾದಾಮಿ or ಪಟ್ಟದಕಲ್ಲು	
೪. ಕಲ್ಯಾಣಿ ಚಾಳುಕ್ಯರು	ಬಸವಕಲ್ಯಾಣ ಹೂಲಿ ಇಟಗಿ	ಬಸವಕಲ್ಯಾಣ	ಬಸವಕಲ್ಯಾಣ ಹೂಲಿ ಇಟಗಿ	

ನಂ. ರಾಜವಂಶಗಳು	ಮೂಲ	ರಾಜಧಾನಿ	ಗ್ರಾಮಾಂತರ ವಸ್ತು ಸಂಗ್ರಹಾಲಯಕ್ಕೆ ಅರ್ಹತೆಯ ತಾಣ	ವಿಶೇಷ ವಿಷಯ
೫. ಗೋವೆ ಕದಂಬರು	ಹಲಸಿ, (ಬೆಳಗಾವಿ ಜಿಲ್ಲೆ) ಹೂಲಿ		ಹಲಸಿ	
೬. ಹೊಯ್ಸಳರು	ದ್ವಾರಸಮುದ್ರ ಬೇಲೂರು ಸೋಮನಾಥ ಪುರ ತಲಕಾಡು	ತಲಕಾಡು Secondary Capital	ಸೋಮನಾಥ ಪುರ ತಲಕಾಡು	
೭. ವಿಜಯನಗರ	ಹಂಪೆ ಆನೆಗೊಂದಿ	ಹಂಪೆ	ಆನೆಗುಂದಿ	
೮. ಕೆಳದಿ ನಾಯಕರು	ಕೆಳದಿ ಇಕ್ಕೇರಿ ನಗರ ಕೌಲೇದುರ್ಗ	ಕೆಳದಿ ಇಕ್ಕೇರಿ ನಗರ (ಬಿದನೂರ) ಕೌಲೇದುರ್ಗ	ಕೆಳದಿ	ಕೆಳದಿಯಲ್ಲಿ ವಸ್ತು ಸಂಗ್ರಹಾಲಯ ವಿದೆ.
೯. ಸೋದೆ ಅರಸರು	ಸೋಂದಾ N.K ಮಂಜುಗುಣಿ ಸದಾಶಿವಗಡ		ಸೋಂದಾ ಮಂಜುಗುಣಿ ಸದಾಶಿವಗಡ	
೧೦. ಬಿಳಗಿ ಅರಸರು	ಬಿಳಗಿ	ಬಿಳಿಗಿ	ಬಿಳಿಗಿ	
೧೧. ಯಲಹಂಕ ಪ್ರಭುಗಳು	ಯಲಹಂಕ ಮಾಗಡಿ	ಯಲಹಂಕ	ಯಲಹಂಕ ಮಾಗಡಿ	
೧೨. ಹಾಗಲವಾಡಿ ಪಾಳೆಯ ಪಟ್ಟ	ಹಾಗಲವಾಡಿ	ಹಾಗಲವಾಡಿ	ಹಾಗಲವಾಡಿ	
೧೩. ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ	--	
೧೪. ಮಧುಗಿರಿ	ಮಧುಗಿರಿ	ಮಧುಗಿರಿ	ಮಧುಗಿರಿ	
೧೫. ಉಮ್ಮತ್ತೂರು	ಉಮ್ಮತ್ತೂರು	ಉಮ್ಮತ್ತೂರು	ಉಮ್ಮತ್ತೂರು	*

* ಇದು ಅಪೂರ್ಣಪಟ್ಟಿ.

ಹೀಗೆಯೇ ಸ್ವಾತಂತ್ರ್ಯಪೂರ್ವದಲ್ಲಿದ್ದ ೫೬೮ ಸಂಸ್ಥಾನಗಳ ಮೂಲ ಸ್ಥಾನಗಳ ಕೇಂದ್ರ ಬಿಂದುಗಳನ್ನಾಗಿಯೂ ಹಳ್ಳಿಗಳನ್ನು ಪರಿಗಣಿಸಿದಲ್ಲಿ ಅಭಿವೃದ್ಧಿಗೆ ವಿಪುಲ ಅವಕಾಶಗಳಿವೆ. ಪ್ರಕೃತ ಶಿವಮೊಗ್ಗ, ಚಿತ್ರದುರ್ಗ, ಬೆಂಗಳೂರು ಹಾಗೂ ಮೈಸೂರುಗಳಲ್ಲಿರುವ ವಸ್ತು ಸಂಗ್ರಹಾಲಯಗಳು ಒಂದಕ್ಕೊಂದು ಸಂಬಂಧವಿಲ್ಲದಂತೆ ಕಲಬೆರಿಕೆಯು ಎಲ್ಲ ರಾಜ ಮನೆತನಗಳ ವಸ್ತುಗಳನ್ನು ಕಲೆಹಾಕಿದುದು ಸಂಶೋಧಕರಿಗೆ ಶಾಸ್ತ್ರೀಯ ಸಂಶೋಧನೆ ಕೈಗೊಳ್ಳಲು ತೊಡಕುಗಳುಂಟಾಗುತ್ತವೆ.

ಧಾರ್ಮಿಕ ಸುಧಾರಕರು

ಅ.ನಂ. ಧಾರ್ಮಿಕ ಸುಧಾರಕರು	ಮೂಲ 200 RM & R.C	ಹಳ್ಳಿ	Remarks
೧. ಗೌತಮ ಬುದ್ಧ			
೨. ಶಂಕರಾಚಾರ್ಯರು	ಕಾಲಟಿ	ಕಾಲಿಟಿ	(ಕೇರಳ ಸರಕಾರ ಮ್ಯೂಜಿಯಂ ಸ್ಥಾಪಿಸಬೇಕು.)
೩. ರಾಮಾನುಜಾಚಾರ್ಯರು	ಪೆರಂಬೂರು	ಪೆರಂಬೂರು	ತಮಿಳುನಾಡು ಸರಕಾರ ಅಥವಾ ಆಂಧ್ರ ಮ್ಯೂಜಿಯಂ ಸ್ಥಾಪಿಸಬೇಕು.
೪. ಮಧ್ವಾಚಾರ್ಯರು	ಪಾಜಕ	ಪಾಜಕ	
೫. ಬಸವಣ್ಣನವರು	ಬಾಗೇವಾಡಿ		
೬. ರಾಘವೇಂದ್ರ ಯತಿಸಾರ್ವಭೌಮರು			ಮಂತ್ರಾಲಯದಲ್ಲಿ ಮ್ಯೂಜಿಯಂ ಬಗ್ಗೆ ಪ್ರಯತ್ನ ನಡೆದಿರುವುದಾಗಿ ಕಂಡುಬಂದಿದೆ.
೭. ರಾಮಾನಂದ (1400-1470)			
೮. ಕಬೀರ (ಸು.1440-1518)			
೯. ನಾಮದೇವ (ಸು.1400)			
೧೦. ಮೀರಾಬಾಯಿ (ಸು.1470)			
೧೧. ಗುರುನಾನಕ್ (1469-1539)			

ಅ.ಸಂ. ಧಾರ್ಮಿಕ ಸುಧಾರಕರು	ಮೂಲ	ಹಳ್ಳಿ	Remarks
೧೨. ಕೃಷ್ಣಚೈತನ್ಯ (1488-1533)			
೧೩. ತುಳಸೀದಾಸ್			
೧೪. ವ್ಯಾಸತೀರ್ಥರು			
೧೫. ವಿದ್ಯಾರಣ್ಯರು			
೧೬. ಪುರಂದರದಾಸರು			ಹರಿದಾಸ ಪರಂಪರೆಯ
೧೭. ಕನಕದಾಸರು			ಹಳ್ಳಿಗಳನ್ನು ಗುರ್ತಿಸಬಹುದು
೧೮. ವಾದಿರಾಜರು			
೧೯. ಸರ್ವಜ್ಞ	ಮಾಸೂರು	ಮಾಸೂರು	ಧಾರವಾಡ ಜಿಲ್ಲೆ
೨೦. ಶ್ರೀ ರಾಮಕೃಷ್ಣ ಪರಮಹಂಸ			
೨೧. ವಿವೇಕಾನಂದ			
೨೨. ಪಾರ್ಶ್ವನಾಥ			
ಅಕ್ಕಮಹಾದೇವಿ ಇತ್ಯಾದಿ	ಉದುಗಣಿ	ಉಡುಗಣಿ	ಶಿವಮೊಗ್ಗ ಜಿಲ್ಲೆ

ಧಾರ್ಮಿಕ ಪುರುಷರ ಮೂಲ ಸ್ಥಾನದ ಹಳ್ಳಿಗಳನ್ನು ಗುರ್ತಿಸಿ ವಸ್ತು ಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಿ, ಅಧ್ಯಾತ್ಮ ಪಿಪಾಸುಗಳಿಗೆ ಪ್ರಶಾಂತ ವಾತಾವರಣಗಳನ್ನು ಕಲ್ಪಿಸಿ ಹಳ್ಳಿಗಳನ್ನು ಸಾಂಸ್ಕೃತಿಕ ರಂಗದಲ್ಲಿ ಕೊಂಡೊಯ್ಯಬಹುದು. ಧಾರ್ಮಿಕ ಪುರುಷರ ಮೂಲ ಸಾಮಗ್ರಿಗಳನ್ನು ಆಯಾ ಹಳ್ಳಿಗಳ ವಸ್ತು ಸಂಗ್ರಹಾಲಯದಲ್ಲಿಯೇ ಪ್ರದರ್ಶಿಸಿ ತದಂಗದ ಸಂಶೋಧನಾ ಕೇಂದ್ರದಲ್ಲಿ ಸಂಶೋಧನೆ - ಪ್ರಕಟಣೆಗಳಿಗೆ ವಿದ್ವಾಂಸರಗಳನ್ನು ಹಳ್ಳಿಗಳಿಗೆ ಆಕರ್ಷಿಸಬಹುದಾಗಿದೆ.

ಪ್ರಸಿದ್ಧ ಕವಿಗಳು

ಅ.ನಂ. ಕವಿಗಳು ಹುಟ್ಟೂರು	Museum & R.C. at Original Place	Remarks
೧. ಕಾಳಿದಾಸ		
೨. ಬಾಣ		
೩. ಭವಭೂತಿ		

೪. ಆರ್ಯಭಟ
೫. ಪಂಪ
೬. ಪೊನ್ನ
೭. ರನ್ನ
೮. ರತ್ನಾಕರವರ್ಣಿ
೯. ಭಟ್ಟೋಜೀ ದೀಕ್ಷಿತ
೧೦. ಅಪ್ಪಯ್ಯ ದೀಕ್ಷಿತ
೧೧. ಶ್ರೀರಾಮಭದ್ರಾಂಬಾ — ತಂಜಾವೂರಿನ ರಘುನಾಥ ನಾಯಕನ ಆಸ್ಥಾನದ ಕವಯಿತ್ರಿ
೧೨. ಕೇಶಿರಾಜ
೧೩. ಗುಣವರ್ಮ
೧೪. ಗುರುಸಿದ್ಧ
೧೫. ರೇವಣ ಸಿದ್ಧಾಚಾರ್ಯರು
೧೬. ಚಾವುಂಡರಾಯ
೧೭. ಚಾಮರಸ
೧೮. ತಿರುಮಲಭಟ್ಟ
೧೯. ನಾಗವರ್ಮ
೨೦. ನಿಜಗುಣ ಶಿವಯೋಗಿ
೨೧. ನೀಲಕಂಠಾರಾಧ್ಯ
೨೨. ಪಾಲ್ಕೂರಿಕೆ ಸೋಮ
೨೩. ಪ್ರಭುದೇವ
೨೪. ಭಟ್ಟಾಕಳಂಕ
೨೫. ಭೀಮಕವಿ
೨೬. ರಾಘವಾಂಕ
೨೭. ಷಡಕ್ಷರ
೨೮. ಕವಿ ಲಿಂಗಣ್ಣ ಇತ್ಯಾದಿ
೨೯. ಲಕ್ಷ್ಮೀಶ — ದೇವನೂರು — ದೇವನೂರು

---

* ಈ ಪಟ್ಟಿಯೂ ಅಪೂರ್ಣ.

ಈ ರೀತಿ ಅಪಾರವಾದ ಕವಿಗಳ ಹುಟ್ಟೂರನ್ನು ಗುರ್ತಿಸಿ, ಅವರ ಹೆಸರಿನಲ್ಲಿಯೇ ಅಲ್ಲಿಯೇ ವಸ್ತು ಸಂಗ್ರಹಾಲಯ ಸ್ಥಾಪಿಸಿ, ಪ್ರಕಟಣೆ ಕೈಗೊಳ್ಳುವ ಮುಖಾಂಕರ ಗ್ರಾಮಾಂತರ ಅಭಿವೃದ್ಧಿ ಸಾಧಿಸಬಹುದಾಗಿದೆ.

ಪುರಾಣ ಮತ್ತು ಆಧುನಿಕ ರಾಜನೀತಿಜ್ಞರ ಕ್ಷೇತ್ರಗಳು

ಅ.ನ.	ಹೆಸರು	ಹುಟ್ಟೂರು	M & R	Remarks
೧.	ಶ್ರೀರಾಮ	ಅಯೋಧ್ಯೆ		
೨.	ಶ್ರೀಕೃಷ್ಣ	ದ್ವಾರಕೆ		
೩.	ಚಾಣಕ್ಯ			
೪.	ರಾಜೇಂದ್ರ ಪ್ರಸಾದ್			
೫.	ಲಾಲ್‌ಬಹದ್ದೂರ್‌ಶಾಸ್ತ್ರೀ			
೬.	ಮಹಾತ್ಮಾ ಗಾಂಧಿ			
೭.	ರಾಜಗೋಪಾಲಾಚಾರಿ			
೮.	ನೇತಾಜಿ			
೯.	ಶ್ಯಾಂಪ್ರಸಾದ್ ಮುಖರ್ಜಿ			
೧೦.	ಮದನಮೋಹನ ಮಾಲವೀಯ			
೧೧.	ದಿವಾನ್ ವಿಶ್ವೇಶ್ವರಯ್ಯ			
೧೨.	ದಿವಾನ್ ಪೂರ್ಣಯ್ಯ			
೧೩.	ಜಯಪ್ರಕಾಶ್ ನಾರಾಯಣ್			
೧೪.	ಸರ್ದಾರ್ ಪಟೇಲ್			
೧೫.	ಮಲ್ಲಿಕಾರ್ಜುನಪ್ಪಗೌಡ	ಎಣ್ಣೆಕೊಪ್ಪ	ಸೊರಬ ತಾಲ್ಲೂಕು	

ರಾಜನೀತಿ ಪ್ರಮುಖರ ಹುಟ್ಟೂರು ಹಳ್ಳಿಗಳಲ್ಲಿಯೂ ಚಿಕ್ಕ ವಸ್ತು ಸಂಗ್ರಹಾಲಯ ತೆರೆದು ಸಂಶೋಧನೆಗಳ ಮುಖಾಂತರ ಅಭಿವೃದ್ಧಿ ಸಾಧಿಸಬಹುದಾಗಿದೆ.

ಗ್ರಾಮಾಂತರ ವಸ್ತುಸಂಗ್ರಹಾಲಯಗಳ ಸ್ವರೂಪ


ಮೇಲ್ಕಂಡಂತೆ ಅರಸರ, ಕವಿಗಳ, ಧಾರ್ಮಿಕ ಮುಖಂಡರ, ರಾಜನೀತಿಕೋವಿದರ ಹಾಗೂ ಇತರೆ ಪ್ರಾಮುಖ್ಯ ಕ್ಷೇತ್ರಗಳ ಹಳ್ಳಿಗಳಲ್ಲಿ ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸಿ ಪ್ರದರ್ಶನಗಳನ್ನೇರ್ಪಡಿಸಬಹುದು. ರಾಜಮನೆತನಗಳ ಮ್ಯೂಜಿಯಂಗೆ ಸ್ಮಾರಕಗಳು, ರಾಜಚಿಹ್ನೆಗಳು, ಕೋಟೆಗಳು, ಅವಶೇಷಗಳು, ಶಿಲಾ ಹಾಗೂ ತಾಮ್ರ ಶಾಸನಗಳು, ಚಾರಿತ್ರಿಕ ದಾಖಲೆಗಳು, ವರ್ಣಚಿತ್ರಗಳನ್ನಲ್ಲದೆ, ಕಲೆಗಳು (ಹಸ್ತಪ್ರತಿ) ಸಾಹಿತ್ಯಗಳು, ಜಾನಪದಗಳು ಮುಂತಾದುವುಗಳನ್ನು ಸಶಾಸ್ತ್ರೀಯವಾಗಿ ಪ್ರದರ್ಶಿಸಬಹುದು. ಧಾರ್ಮಿಕ ಸುಧಾರಕರು ಹಾಗೂ ಕವಿಗಳ ಹುಟ್ಟೂರಿನಲ್ಲಿ ಧಾರ್ಮಿಕ ಗ್ರಂಥಗಳಾದಿಯಾಗಿ ಆಧ್ಯಾತ್ಮಿಕ ಪರಿಸರಗಳನ್ನೊಂಡ ಪ್ರದರ್ಶನಗಳು ಅವಶ್ಯಕ. ರಾಜನೀತಿ ಕೋವಿದರ ಹುಟ್ಟೂರಲ್ಲಿ ಅವರ ವಸ್ತುಗಳಲ್ಲದೆ ಚಾರಿತ್ರಿಕ ದಾಖಲೆಗಳಾದಿಯಾಗಿ ಸಮಗ್ರ ವಿವರಗಳನ್ನು ಒಂದೆಡೆ ಲಭಿಸುವಂತೆ ಮಾದರಿಗಳನ್ನು ಪ್ರದರ್ಶಿಸುವುದು ಅವಶ್ಯ.

ಪ್ರವಾಸಿ ಕಂಡ ಇಂಡಿಯಾ ದಾಖಲೆಗಳು


ಭಾರತವನ್ನು ವಿವಿಧ ದೃಷ್ಟಿಕೋನಗಳಿಂದ ಅಧ್ಯಯನ ಕೈಗೊಳ್ಳಲು ಪ್ರಾಚೀನ ಕಾಲದಲ್ಲಿ ವಿದೇಶೀಯ ಪ್ರವಾಸಿಗಳು ಅಪಾರವಾಗಿ ಬಂದಿದ್ದುದು ಕಂಡು ಬಂದಿದೆ. ಇವರ ಕಥನಗಳು ಐತಿಹಾಸಿಕ ಅಮೂಲ್ಯ ಸಾಧನಗಳು. ಇವುಗಳ ಮಾದರಿಗಳನ್ನು ಆಯಾ ಪರಿಸರ ಅಧ್ಯಯನಕ್ಕನುಗುಣವಾಗಿ ಪ್ರದರ್ಶಿಸುವುದು ಸೂಕ್ತ. ಇವುಗಳ ಸಶಾಸ್ತ್ರೀಯ ಪ್ರದರ್ಶನಗಳನ್ನು ವಸ್ತು ಸಂಗ್ರಹಾಲಯತಜ್ಞರ ಮುಖಾಂತರ ನಿರ್ವಹಿಸಬಹುದು.

Rural Research Centre
ಗ್ರಾಮಾಂತರ ಸಂಶೋಧನಾ ಕೇಂದ್ರ

ಆಯಾ ರಾಜಮನೆತನಗಳ ಚರಿತ್ರೆಗನುಗುಣವಾಗಿ ಮೂಲ ಕೇಂದ್ರಗಳಲ್ಲಿ ಗ್ರಾಮಾಂತರ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿದ ನಂತರ ಸಂಶೋಧನೆಗಳಿಗೆ ಹೇರಳ ಅವಕಾಶಗಳಿದ್ದು ಕಾರ್ಯಪ್ರವೃತ್ತರಾಗಬೇಕಾಗುತ್ತದೆ. ಸಂಶೋಧನಾ ತಜ್ಞನ ಪ್ರತಿಭೆಗೆ ಗ್ರಾಮಾಂತರ ವಸ್ತು ಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರವು ಅಪೂರ್ವ ಕೇಂದ್ರವಾಗಬಲ್ಲುದು. ಆಯಾ ರಾಜಮನೆತನಗಳ ವಂಶೀಕರು ಹಾಗೂ ಬಂಧುಗಳು ಆಸಕ್ತಿ ತಳೆದಲ್ಲಿ ತುಂಬ ಪ್ರಭಾವಶಾಲಿಯನ್ನುಂಟು ಮಾಡುತ್ತದೆ. ಅದರಲ್ಲೂ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವೀಧರನಾಗಿ ತಜ್ಞತೆ ಹೊಂದಿದಲ್ಲಿ ಹೆಚ್ಚು ಪರಿಣಾಮಕಾರಿಯಾಗಬಲ್ಲದು. ಸಂಶೋಧನಾ ಸಾಮರ್ಥ್ಯವನ್ನು ಹೀಗೆ ವಿಂಗಡಿಸ ಬಹುದು.



II



ಮೂಲ ಆಕರಗಳ ಸಂಶೋಧನೆ

ಸ್ಮಾರಕಗಳು

ಆಯಾ ರಾಜಮನೆತನಗಳ ಸ್ಮಾರಕಗಳು, ವಿಶಿಷ್ಟ ಶೈಲಿಗಳು (Style of Architechture), ವೈವಿಧ್ಯಮಯ ಕಲಾಕರ್ಷಣಾ ಭಾಗಗಳು, ಮೂರ್ತಿಗಳು ಮುಂತಾದುವುಗಳ ಛಾಯಾಚಿತ್ರಗಳನ್ನು, ಸರಕಾರದ ಹಾಗೂ ವಿಶ್ವವಿದ್ಯಾಲಯಗಳ ಕಾಲಕಾಲಕ್ಕೆ ಪ್ರಕಟವಾಗುವ ವರದಿಗಳನ್ನು ಶೇಖರಿಸಿ, ಒಂದೆಡೆ ಕಲೆಹಾಕಿ ಸಂಶೋಧನಾಕಾಂಕ್ಷಿಗಳಿಗೆ ಸುಲಭವಾಗಿ

ಲಭ್ಯವಾಗುವಂತೆ ಶಾಸ್ತ್ರೀಯ ರೀತಿಯಲ್ಲಿ ಅಳವಡಿಸುವುದು ಸೂಕ್ತವಾದುದು. ಡಾ. ಎಸ್. ಆರ್. ರಾವ್‌ರವರು ನಿರೂಪಿಸಿದಂತೆ ಈಚೆಗೆ ಅಮೇರಿಕಾದ ಟೆಕ್ಸಾಸ್‌ನಂತಹ ಅನೇಕ ವಿಶ್ವವಿದ್ಯಾನಿಲಯಗಳು ಕರ್ನಾಟಕ ಚರಿತ್ರೆಯನ್ನು ಕುರಿತು ಅಧ್ಯಯನ ಕೈಗೊಳ್ಳಲು ಆಸಕ್ತಿ ತಾಳಿವೆ. ಸಂಶೋಧನಾ ಸಾಮರ್ಥ್ಯತೆಯಲ್ಲಿ ವಿದೇಶೀಯರು ಅಪಾರ ಕುತೂಹಲವನ್ನು ಬೆಳೆಸಿಕೊಂಡಿದ್ದಾರೆ. ಸಂಶೋಧನಾ ಚಟುವಟಿಕೆಗಳಿಗೆ ಹೆಚ್ಚಾಗಿ ಹಳ್ಳಿಗಳ ಪರಿಸರಗಳನ್ನೇ ವಿದೇಶೀಯರು ಆರಿಸಿಕೊಳ್ಳುವುದರಿಂದ ಗ್ರಾಮಾಂತರ ಸಂಶೋಧನಾ ಕೇಂದ್ರಗಳು ಅವರಿಗೆ ನೆರವಾಗಬಲ್ಲುವು. ಹೊಯ್ಸಳರ ಇತಿಹಾಸವನ್ನು ಕುರಿತು ವಿದೇಶೀಯ ವಿದ್ವಾಂಸರಾದ ಡಾ. ಡಂಕನ್ ಡೆರೆಟ್‌ರವರು ಅಧ್ಯಯನ ನಡೆಸಿ ಪುಸ್ತಕವನ್ನು ಪ್ರಕಟಿಸಿರುವುದು ಇದಕ್ಕೆ ಉದಾಹರಣೆಯಾಗಿದೆ. ಈಗ್ಗೆ ಕೆಲವು ವರ್ಷಗಳ ಹಿಂದೆ ಅಮೇರಿಕಾ ವಿದ್ವಾಂಸರ ಡಾ. ಇ. ಬಿ. ಹಾರ್ಪರ್‌ರವರು ಮಲೆನಾಡಿನ ಮೂಲೆಯಲ್ಲಿರುವ ಕೆಳದಿಯ ಬೇಳೂರು ಗ್ರಾಮದಲ್ಲಿ ಹಲವು ವರ್ಷಕಾಲ ಇದ್ದು ಮೂಲ ಆಕರಗಳನ್ನು ಆಯಾ ಭಾಷೆಯಲ್ಲಿಯೇ ಸಂಗ್ರಹಿಸಿ (ಕನ್ನಡದಲ್ಲಿ) ಸಂಶೋಧನೆ ಕೈಗೊಂಡು ಮಹಾಪ್ರಬಂಧವನ್ನು (Religions in South East Asia) ವಾಶಿಂಗ್‌ಟನ್ನಿನ ವಿಶ್ವವಿದ್ಯಾನಿಲಯದಲ್ಲಿ ಸಾದರಪಡಿಸಿದ್ದಾರೆ. ಆಯಾ ರಾಜಮನೆತನಗಳ ಈ ವರೆಗಿನ ಸ್ಮಾರಕಗಳು, ಶಾಸನಗಳು ಮುಂತಾದ ಸೂಚಿ (Catalogue) ಸಂಶೋಧನೆಗಳನ್ನು ಹಮ್ಮಿಕೊಳ್ಳಬಹುದಾಗಿದೆ.

ಶಾಸನಗಳ ಸಮಗ್ರ ಮಾಹಿತಿ ಸಂಶೋಧನೆ

ಆಯಾ ರಾಜಮನೆತನಗಳ ಅಪ್ರಕಟಿತ, ಪ್ರಕಟಿತ ಶಾಸನದ ಮೂಲ ಆಕರಗಳ ಸೂಚಿ (Catalogue) ಲಭಿಸುವ ಶಾಸನಗಳ ಪಡಿಯಚ್ಚುಗಳು (Impressions) ಮುಂತಾದುವುಗಳೂ ಒಂದೆಡೆ ಲಭಿಸುವಂತೆ ಏರ್ಪಡಿಸುವುದು ಸೂಕ್ತ. ಅನೇಕ ಮೂಲ ಶಾಸನಗಳು ನಾನಾಕಾರಣಗಳಿಂದ ಕಣ್ಮರೆಯಾಗುತ್ತಿವೆ. ಮೂಲ ಶಾಸನಗಳಲ್ಲದೆ ಶಾಸನಗಳ ಪ್ರತಿಕೃತಿಗಳೂ ಮೆಕಂಜಿ ಸಂಗ್ರಹಗಳಲ್ಲದೆ.* ಓಲೆಗರಿ ಹಾಗೂ ವಿದೇಶಗಳಲ್ಲಿಯೂ ಕಂಡುಬಂದಿವೆ. ಬೆಳ್ಳಿ ಬಂಗಾರ ಮುಂತಾದ ಆಭರಣಗಳಲ್ಲಿರುವ ಶಾಸನಗಳೂ Treasury (ಸರಕಾರದ ಖಜಾನೆ) ಗಳಲ್ಲಿದ್ದು ಅವುಗಳ Catalogue ಸಹ ಆವಶ್ಯಕ ಆಕರಗಳು ಸಿದ್ಧವಾದಷ್ಟು ಸಂಶೋಧನಾ ಕ್ಷೇತ್ರವೂ ವಿಸ್ತಾರವಾಗುತ್ತಲೇ ಹೋಗುತ್ತದೆ. Lmie Riceರ ನಂತರ ಇಂತಹ ಬೃಹತ್ ಯೋಜನೆಗಳು ಸಂಶೋಧನಾ ರಂಗದಲ್ಲಿ ವಿರಳವಾಗಿವೆ.

Historical Records Pertaining to rulers :-

(ಚಾರಿತ್ರಿಕ ದಾಖಲೆಗಳು)

ಮಧ್ಯಕಾಲೀನ ಇತಿಹಾಸದ ಅನೇಕ ರಾಜಮನೆತನಗಳ ಇತಿಹಾಸಗಳನ್ನೊಳಗೊಂಡ ಚಾರಿತ್ರಿಕ ದಾಖಲೆಗಳು ಇಂಗ್ಲೀಷ್ ಪೋರ್ಚುಗೀಸ್, ಡಚ್, ಫ್ರೆಂಚ್, ಮರಾಠೆ ಹಾಗೂ ಪರ್ಷಿಯನ್ ಭಾಷೆಗಳಲ್ಲಿ ವಿಪುಲವಾಗಿವೆ. ಬ್ರಿಟಿಷ್ ಮ್ಯೂಜಿಯಂ ಆದಿಯಾಗಿ ವಿದೇಶೀಯ

*ಡಾ. ಕಲ್ಬುರ್ಗಿಯವರು ಮೆಕೆಂಜಿ ಸಂಗ್ರಹಗಳನ್ನು ಸಂಶೋಧಿಸಿ ಪ್ರಕಟಿಸಿ ಉಪಕರಿಸಿದ್ದಾರೆ.

ಪುರಾತತ್ವ ಸಂಸ್ಥೆಗಳಲ್ಲಿ ಇವುಗಳನ್ನು ಕಾಣಬಹುದು. ಇವುಗಳ ಆಕರಗಳ ಸಹಕಾರವಿಲ್ಲದೆ ಇತಿಹಾಸವು ಪೂರ್ಣತೆಯನ್ನು ಪಡೆದಿರುವುದಿಲ್ಲ. ಮುಂದಿನ ಸಂಶೋಧನಾ ಪೀಳಿಗೆಗೆ ಈ ಕಾರ್ಯವನ್ನು ವಹಿಸಬಹುದು. ಸರಕಾರ, ವಿಶ್ವವಿದ್ಯಾಲಯ, ಸಂಘ ಸಂಸ್ಥೆಗಳ ಮುಖಾಂತರ ತರುಣ ಸಂಶೋಧನಾಕಾಂಕ್ಷಿಗಳು ಬೃಹತ್ ಯೋಜನೆಗಳನ್ನು ಹಮ್ಮಿಕೊಂಡು ಆಯಾ ರಾಜಮನೆತನಕ್ಕನುಗುಣವಾಗಿ ಗ್ರಾಮಾಂತರ ಸಂಶೋಧನಾಲಯದ ಮುಖಾಂತರ ಇವುಗಳನ್ನು ಕಾರ್ಯಗತಗೊಳಿಸಬಹುದು.

ಪ್ರವಾಸೀ ಕಥನ ಹಾಗೂ ಸಾಹಿತ್ಯಗಳ

ಆಯಾ ರಾಜಮನೆತನಗಳು ಪ್ರೋತ್ಸಾಹಿಸಿದ ಸಾಹಿತ್ಯ, ಸಂಗೀತ, ನೃತ್ಯ ಹಾಗೂ ಕಲೆಗಳ ಕೃತಿಗಳನ್ನು ಅಧ್ಯಯನ ಕೈಗೊಳ್ಳಲು ಅವಕಾಶಗಳಿವೆ. ಇವುಗಳ ಸಮಗ್ರ ಸೂಚಿ (Catalogues) ಸಂಪಾದನೆ, ತೌಲನಿಕ ಅಧ್ಯಯನ ಪ್ರಕಟಣೆಗಳನ್ನೂ ಕೈಗೊಳ್ಳಬಹುದು. ಇದೇ ಮಾಲೆಯಲ್ಲಿ ದೇಶೀಯ ಹಾಗೂ ವಿದೇಶೀಯ ಪ್ರವಾಸೀ ಕಥನಗಳೂ ವಿಪುಲವಾಗಿದ್ದು ಇವುಗಳ ಅಧ್ಯಯನವನ್ನು ಹಮ್ಮಿಕೊಳ್ಳಬಹುದು. ಓಲೆಗರಿಗಳಲ್ಲಿರುವ ಅಪ್ರಕಟಿತ ಕೃತಿಗಳು ಸಾಕಷ್ಟಿವೆ. ಹಳ್ಳಿಗಳಲ್ಲಿರುವ ನಿರುದ್ಯೋಗಿ ಪದವೀಧರರು ಇವುಗಳನ್ನು ಸಮೀಕ್ಷಿಸಿ, ತೌಲನಿಕ ಅಧ್ಯಯನದೊಂದಿಗೆ ಪ್ರಕಟಣಾ ಕಾರ್ಯ ನಿರ್ವಹಿಸಬಹುದು.

ಹೀಗೆಯೇ ನಾಣ್ಯಗಳು, ಜಾನಪದ, ಚಿತ್ರಕಲೆ ಮುಂತಾದುವುಗಳ ಸಮೀಕ್ಷೆ, ಸಂಪಾದನೆ, ಸಂಶೋಧನೆ ಹಾಗೂ ಪ್ರಕಟಣೆಗಳಿಗೆ ಗ್ರಾಮಾಂತರ ಸಂಶೋಧನಾಲಯದಲ್ಲಿ ಹೇರಳ ಅವಕಾಶಗಳಿವೆ. ಸದ್ಯಕ್ಕೆ ಇಷ್ಟನ್ನು ಪೂರೈಸಿದಲ್ಲಿ ಸಾಕೆನಿಸಿದೆ.

ಗ್ರಾಮಾಂತರ ಸಂಶೋಧನಾಲಯದಿಂದ ಹಳ್ಳಿಯ ಅಭಿವೃದ್ಧಿ.

ಗ್ರಾಮಾಂತರ ವಸ್ತುಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರಗಳಿಂದ ಹಳ್ಳಿಗಳ ಪುರೋಭಿವೃದ್ಧಿಗೆ ಅಪಾರ ಪ್ರಯೋಜನಗಳಿವೆ. ಸುಸಂಸ್ಕೃತ ನಾಗರಿಕತೆ, ಸಾಂಸ್ಕೃತಿಕ ಕ್ರಾಂತಿ, ಸಾಕ್ಷರತಾ ಯೋಜನೆ, ಗ್ರಾಮದಲ್ಲಿ ವಿದ್ಯಾವಂತ ನಿರುದ್ಯೋಗ ನಿವಾರಣೆ, ಗ್ರಾಮ ಪರಿಸರಗಳ ನೈರ್ಮಲ್ಯ, ಪ್ರವಾಸೋದ್ಯಮ, ವ್ಯವಸಾಯ ಚಟುವಟಿಕೆಗಳಲ್ಲಿ ವೈಜ್ಞಾನಿಕ ಧೋರಣೆ, ಮಹಿಳಾ ಸುಧಾರಣೆ ಇತ್ಯಾದಿ ರಂಗಗಳಲ್ಲಿ ಹಳ್ಳಿಗಳು ಪುರೋಭಿವೃದ್ಧಿಯಲ್ಲಿ ಚಿಗುರಿಕೊಳ್ಳುವಲ್ಲಿ ಸಾಫಲ್ಯತೆಯನ್ನು ಪಡೆಯುತ್ತವೆ. ಇದಕ್ಕೆ ಭಾರತದಲ್ಲಿಯೇ (ದೇಶದಲ್ಲಿಯೇ) ಅಪರೂಪವಾಗಿರುವ ಕೆಳದಿಯ ಗ್ರಾಮಾಂತರ ಸಂಶೋಧನಾಲಯವು ಸಾಧಿಸಿರುವ ಪ್ರಗತಿಯನ್ನು ಪ್ರತ್ಯಕ್ಷವಾಗಿ ಕಂಡುಕೊಳ್ಳಬಹುದು. ೨೦ ರಿಂದ ೩೦ಲಕ್ಷ ರೂಪಾಯಿಗಳ ಕೆಳದಿ-ಬನವಾಸಿ ಇಕ್ಕೇರಿ ದೇವಾಲಯಗಳ ಜೀರ್ಣೋದ್ಧಾರಗಳು, ಟಾರ್ ರಸ್ತೆಗಳು, ಬ್ಯಾಂಕುಗಳು, ಪ್ರೌಢಶಾಲೆಗಳು, ಅರಣ್ಯ ಸಂರಕ್ಷಣೆ, ಪ್ರವಾಸೋದ್ಯಮ ಅಭಿವೃದ್ಧಿಗಳು, ಅಪೂರ್ವ ಸಂಶೋಧನಾ ಪ್ರಕಟಣೆಗಳು ಮುಂತಾಗಿ ಮಹಾತ್ಮಾ ಗಾಂಧೀಜಿಯವರ ಕನಸಿನ ರಾಮರಾಜ್ಯದ ಏಳಿಗೆಯನ್ನು ಸಾಧಿಸುತ್ತಿರುವುದನ್ನು ಈಗಲೂ ನೋಡಬಹುದು.

ನುಲಿಯ ಚಂದಯ್ಯ: ಚರಿತ್ರಾತ್ಮಕ ನೋಟ*

-ಡಾ. ವ್ಹಿ. ಜಿ. ಪೂಜಾರ

ಶರಣ ನುಲಿಯ ಚಂದಯ್ಯ ಬಸವಣ್ಣನ ಹಿರಿಯ ಸಮಕಾಲೀನ. ಆತ ವಚನಕಾರನೆಂದು ಖ್ಯಾತಿ ಪಡೆಯುವುದಕ್ಕಿಂತ ಕಾಯಕಯೋಗಿ, ಜಂಗಮದಾಸೋಹಿ ಎಂದೇ ಹೆಸರುವಾಸಿಯಾಗಿದ್ದಾನೆ. ನಮಗಿಂದು ಆತನ ಚರಿತ್ರೆ ಪೂರ್ಣ ಸಿಗದು. ಆತನ ಜೀವನದಲ್ಲಿ ನಡೆದ ಲಿಂಗದೇವ ಪ್ರಸಂಗ ಮಾತ್ರ ವೀರಶೈವ ಕಾವ್ಯ, ಪೂರಾಣಗಳಲ್ಲಿ ವರ್ಣನೆಗೊಂಡಿದೆ. ನಮ್ಮ ಪೂರ್ವದ ಕವಿಗಳು ಶರಣರ ವೈಯಕ್ತಿಕ ಬದುಕಿನ ವಿವರಗಳನ್ನು ಅಷ್ಟಾಗಿ ಚಿತ್ರಿಸಿಲ್ಲ. ಅವರಿಗೆ ಶರಣರ ಚರಿತ್ರೆಗಿಂತ ಚಾರಿತ್ರ್ಯವೇ ಶ್ರೇಷ್ಠವಾದುದೆನ್ನಿಸಿದೆ. ಇದಕ್ಕೆ ಚಂದಯ್ಯನ ಚರಿತ್ರೆ ಹೊರತಾಗಿಲ್ಲ. ಚಂದಯ್ಯನ ಲಿಂಗದೇವ ಪ್ರಸಂಗ ಶಿವತತ್ವಚಿಂತಾಮಣಿ, ಅಸಂಖ್ಯಾತರ ಕಥೆ, ಪದ್ಯ (೧೮೩-೧೮೭), ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರ ಭಾಗ -೨ (ಪುಟ : ೭೨-೭೩), ಗುಮ್ಮಳಾಪುರ ಸಿದ್ಧಲಿಂಗದೇವರ ಶೂನ್ಯಸಂಪಾದನೆ, ಹಾಗೂ ಗೂಳೂರು ಸಿದ್ಧವೀರಣ್ಣೊಡೆಯರ ನುಲಿಯ ಚಂದಯ್ಯಗಳ ಸಂಪಾದನೆ (೪೯ ವಚನಗಳು) ಇವುಗಳಲ್ಲಿ ವಿಸ್ತಾರವಾಗಿ ಬಂದರೆ, ಸಿದ್ಧನಂಜೇಶನ ಗುರುರಾಜಚಾರಿತ್ರ (ಸಂಧಿ: ೯, ಪದ್ಯ: ೩೮) ಚೆನ್ನಬಸವ ಪುರಾಣ (ಸಂಧಿ ೫೭, ಪದ್ಯ. ೨೧)ಗಳಲ್ಲಿ ಸೂಚ್ಯವಾಗಿ ಬಂದಿದೆ. ಚಂದಯ್ಯನನ್ನು ಕುರಿತು ಅನೇಕರು ಲೇಖನಗಳನ್ನು, ಗ್ರಂಥಗಳನ್ನು ಬರೆದಿದ್ದಾರೆ. ಅವರಲ್ಲಿ ಫ. ಗು. ಹಳಕಟ್ಟಿ, ಬಿ. ಶಿವಮೂರ್ತಿಶಾಸ್ತ್ರೀ, ಸಿದ್ಧಯ್ಯ ಪುರಾಣಿಕ, ಚೆನ್ನಪ್ಪ ಎರೆಸೀಮೆ, ಎಂ.ಎಸ್. ಲಠ್ಠೆ ಹಾಗೂ ಎಸ್. ಎಸ್. ಭೂಸರಡ್ಡಿ ಮುಂತಾದವರು ಪ್ರಮುಖರು. ಇವರೆಲ್ಲರು ಚಂದಯ್ಯನ ಚರಿತ್ರೆಯನ್ನು ನಿರೂಪಿಸಲೆತ್ನಿಸಿದ್ದಾರೆ. ಬಿ. ಶಿವಮೂರ್ತಿ ಶಾಸ್ತ್ರಿ ಹಾಗೂ ಚೆನ್ನಪ್ಪ ಎರೆಸೀಮೆ ಅವರು ಕಲ್ಯಾಣಕ್ರಾಂತಿಯ ಅನಂತರದ ಚಂದಯ್ಯನ ಬದುಕನ್ನು ಚಿತ್ರಿಸಲು ಯತ್ನಿಸಿದ್ದಾರೆ. ನಾನಿಲ್ಲಿ ಇವರ ಬರಹಗಳಲ್ಲಿನ ವಿವರಗಳೊಂದಿಗೆ ಕ್ಷೇತ್ರಕಾರ್ಯದಿಂದ ತಿಳಿದು ಬಂದ ಕೆಲ ಹೊಸ ಅಂಶಗಳನ್ನು ಸೇರಿಸಿ ಚಂದಯ್ಯನ ಚರಿತ್ರೆಯನ್ನು ನಿರೂಪಿಸಲೆತ್ನಿಸಿದ್ದೇನೆ.

---

* ಕೊಪ್ಪಳದ ವೀರಶೈವ ಅಧ್ಯಯನ ವೇದಿಕೆಯಡಿಯಲ್ಲಿ ದಿ. ೧.೧೦. ೯೪ರಂದು ನಡೆದ "ವಚನಕಾರರ ಇತಿವೃತ್ತ: ಇತ್ತೀಚಿನ ಶೋಧಗಳು" ವಿಚಾರಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧ.

ಶಿವತತ್ವಚಿಂತಾಮಣಿಯಲ್ಲಿ ಚಂದಯ್ಯ ಲಿಂಗದೇವ ಪ್ರಸಂಗ ಚಿತ್ರಣಗೊಂಡುದು ಹೀಗಿದೆ : ಚಂದಯ್ಯ ಜಂಗಮ ದಾಸೋಹದಲ್ಲಿಯೇ ಮಗ್ನನಾಗಿ ಲಿಂಗಪೂಜೆ ಮಾಡಿಕೊಳ್ಳದೇ ಇರಲು ಲಿಂಗದೇವ ಬೇಸರಗೊಂಡು ಒಂದು ದಿನ ಚಂದಯ್ಯ ನಾರು ಸುಲಿಯುವ ವೇಳೆಯಲ್ಲಿ ನೀರಲ್ಲಿ ಬಿದ್ದು ಬಿಟ್ಟ. ಚಂದಯ್ಯ ಇದನ್ನು ನೋಡಿಯೂ ಹಾಗೆಯೇ ಹೋಗತೊಡಗಲು, ಲಿಂಗವು ಪುರುಷರೂಪ ತಾಳಿ, `ಓ! ಚಂದಯ್ಯ ನನ್ನನ್ನು ಕರೆದುಕೋ' ಎನ್ನುತ್ತ ಬೆನ್ನು ಹತ್ತಿತು. ಆಗ ಚಂದಯ್ಯ ಮೊದಲು ಹೋದದ್ದು ಯಾಕೆ? ಈಗೇಕೆ ಬರುವೆ ? ಆಗದು, ಎನ್ನಲು ಲಿಂಗದೇವ ಅಲ್ಲಿಯೇ ಇರುವ ಮಡಿವಾಳ ಮಾಚಿದೇವನಿಗೆ ನಡೆದುದನ್ನು ತಿಳಿಸಿದ. ಆತ ಚಂಧಯ್ಯನಿಗೆ ಇರಲಿ, ಕರೆದುಕೊಳ್ಳಿ ಎನ್ನಲು, ನುಲಿಯ ಕಾಯಕ ಮಾಡಿಕೊಂಡಿರುತ್ತೇನೆಂದು ನಿಮ್ಮ ಹೊಣೆ ಹೊತ್ತು ಬರುವುದಾದರೆ ಬರಲಿ ಎಂದ. ಇದಕ್ಕೊಪ್ಪಿ ಲಿಂಗದೇವ ಚಂದಯ್ಯನ ಬಳಿ ಕೆಲಸಕ್ಕೆ ನಿಂತ. ಒಂದು ದಿನ ಆತ ಮಾರಲೆಂದು ಒಯ್ದು ನುಲಿ ಎಲ್ಲಿಯೂ ಮಾರದಾಗಲು, ಅದನ್ನು ಬಸವಣ್ಣನ ಬಳಿ ಒಯ್ದ. ಆತ ಅದನ್ನಿಟ್ಟುಕೊಂಡು ಸಾವಿರ ಹೊನ್ನು ಕಟ್ಟು ಕಳಿಸಿದ. ಲಿಂಗದೇವ ಆ ಹೊನ್ನತರಲು ಚಂದಯ್ಯ ಸಿಡಿಮಿಡಿಗೊಂಡು ಇದು ಕಾಯಕದ ರೀತಿಯಲ್ಲ. ಇದನ್ನು ತಿರುಗಿ ಕೊಟ್ಟುಬಾ ಎಂದು ಕಳಿಸಲು, ಲಿಂಗದೇವ ಹಾಗೆಯೇ ಮಾಡಿದ. ಭೈರವೇಶ್ವರ ಕಾವ್ಯದಲ್ಲೂ ಇದೇ ರೀತಿ ವರ್ಣನೆ ಬಂದಿದ್ದು, ಇಲ್ಲಿ ಚಂದಯ್ಯನ ಪ್ರಾಣಿತ್ವವನ್ನು ಭಕ್ತರಿಗೆ ತೋರಿಸಬೇಕೆಂದು ಲಿಂಗ ನೀರಲ್ಲಿ ಬಿದ್ದಿತೆಂದು ಬಣ್ಣಿಸಲಾಗಿದೆ. ಶೂನ್ಯಸಂಪಾದನೆಗಳಲ್ಲೂ ಈ ಪ್ರಸಂಗ ಹೀಗೆಯೇ ವರ್ಣನೆಗೊಂಡಿದೆಯಲ್ಲದೆ, ಈ ಪ್ರಸಂಗದ ಮುಂದುವರಿಕೆ ಇದೆ, ಕಾಯಕ -ದಾಸೋಹ ತತ್ವಗಳ ಮಂಥನವೂ ಇಲ್ಲಿ ನಡೆದಿದೆ. ಈ ಪ್ರಸಂಗ ಅನುಭವಮಂಟಪದ ಶರಣರೆದುರು ಚರ್ಚೆಗೆ ಒಳಗಾಗುವುದು. ಅಲ್ಲಿ ಶರಣರೆಲ್ಲ ಸೇರಿ ಚಂದಯ್ಯನಿಗೆ ಜಂಗಮ ದಾಸೋಹದಂತೆ ಲಿಂಗಪೂಜೆಗೂ ಮಹತ್ವವಿದೆಯೆನ್ನುತ್ತ ` ಅಂಗವುಳ್ಳನ್ನಕ್ಕ ಲಿಂಗಪೂಜೆ ಬೇಕೆ'ನ್ನಲು ಆತ ಪುನಃ ಲಿಂಗಧಾರಿಯಾಗುವನು, ಎಂದಿದೆ. ಇದಿಷ್ಟು, ವೀರಶೈವ, ಕಾವ್ಯ - ಪುರಾಣಗಳಿಂದ ತಿಳಿದು ಬರುವ ಆತನ ವಿವರ.

ಈಗ ಚಂದಯ್ಯನ ಕಾಲ, ಕಲ್ಯಾಣಕ್ಕೆ ಬರುವ ಆತನ ಮುನ್ನಿನ ಜೀವನ, ಕಲ್ಯಾಣದಲ್ಲಿ ಈಗಿರುವ ಆತನ ಅವಶೇಷಗಳು, ಕಲ್ಯಾಣಕ್ರಾಂತಿಯ ಅನಂತರದ ಜೀವನ, ಆತನ ವಚನಗಳ ಸಂಖ್ಯೆ, ವಚನಾಂಕಿತ ಹಾಗೂ ಜನಪದ ಹಾಡುಗಳಲ್ಲಿ ಆತನ ಚರಿತ್ರೆ ಈ ಮುಂತಾದ ಅಂಶಗಳನ್ನು ಕುರಿತು ಇಲ್ಲಿ ಪ್ರಸ್ತಾಪ ಮಾಡಬಹುದು.

ಚಂದಯ್ಯ, ಬಸವಣ್ಣ, ಅಲ್ಲಮಪ್ರಭು ಮುಂತಾದ ಶರಣರ ಜೊತೆಗೆ ಅನುಭವ ಮಂಟಪದಲ್ಲಿ ಇದ್ದುದಕ್ಕೆ, ಅವರೊಡನೆ ಚರ್ಚಿಸಿದುದಕ್ಕೆ ಆತನ ವಚನಗಳೇ ನಮಗಿಂದು

ಸಾಕ್ಷಿಯಾಗಿವೆ. ಚಂದಯ್ಯ ಬಸವಣ್ಣನನ್ನು ಕುರಿತು, ಬಸವಣ್ಣ ಚಂದಯ್ಯನನ್ನು ಕುರಿತು ಹೇಳಿದ ಹೊಗಳಿದ ವಚನಗಳನ್ನಿಲ್ಲಿ ಉದಾಹರಿಸಬಹುದು :

``ಎನ್ನಂಗದ ಕ್ರಿಯೆ ಬಸವಣ್ಣನು
ಎನ್ನ ಲಿಂಗದ ಸತ್‌ಕ್ರಿಯೆ ಚೆನ್ನಬಸವಣ್ಣನು
ಎನ್ನ ಅರಿವಿನ ಸತ್‌ಕ್ರಿಯೆ ಪ್ರಭುವೇ ನೀವು
ಎನ್ನ ದಾಸೋಹದ ನಿಷ್ಠೆಯ ಮಡಿವಾಳಯ್ಯನು
.... ಚಂದೇಶ್ವರ ಲಿಂಗದಲ್ಲಿ
ಶರಣರ ಸಮ್ಯಗ್‌ಜ್ಞಾನವೆನಗಾಯಿತಯ್ಯಾ ಪ್ರಭುವೆ''[೧]

``--

ಇದು ಕಾರಣ ನಮ್ಮ ಕೂಡಲ ಸಂಗಮದೇವರಲ್ಲಿ
ಜಂಗಮ ಪ್ರಾಣಿಯಾದ ಚಂದಯ್ಯನ ಹಳೆಯ
ಮಗನಾಗಿ ಆತನ ಶ್ರೀ ಚರಣಕ್ಕೆ ಶರಣೆಂದು ಶುದ್ಧನು
ಆ ಮಹಿಮನ ಘನವ ನಾನೆತ್ತ ಬಲ್ಲೆನಯ್ಯಾ ಪ್ರಭುವೆ''[೨]

ಕರ್ನಾಟಕ ಕವಿ ಚರಿತೆ, ಸಂಪುಟ-೧ರಲ್ಲಿ ಈತನ ಕಾಲ ೧೧೬೦ ಎಂದು ಹೇಳಲಾಗಿದೆ. ಈತನ ತಂದೆ -ತಾಯಿಗಳ ಬಗ್ಗೆ ತಿಳಿದು ಬಂದಿಲ್ಲ. ಮೇಲ್ವರ್ಗದ ಶರಣರ ತಾಯಿ - ತಂದೆಗಳ ಹೆಸರು, ವಂಶ ಇತ್ಯಾದಿ ತಿಳಿದು ಬಂದಂತೆ ಕೆಳವರ್ಗದ ಶರಣರ ವೈಯಕ್ತಿಕ ವಿವರಗಳು ಹೆಚ್ಚಾಗಿ ತಿಳಿದು ಬಂದಿಲ್ಲ. ಇದಕ್ಕೆ ಚಂದಯ್ಯನೂ ಹೊರತಲ್ಲ. ಇಂಥವರ ಚರಿತ್ರೆಯನ್ನು ಕ್ಷೇತ್ರಕಾರ್ಯದಿಂದ ದೊರೆತ ವಿವರಗಳ ಆಧಾರದ ಮೇಲೆ ನಾವಿಂದು ರೂಪಿಸಿಕೊಳ್ಳಬೇಕಾಗಿದೆ. ಈತನ ಊರು ಬಿಜಾಪುರದಿಂದ ಪೂರ್ವಕ್ಕೆ ೧೮ ಮೈಲು ದೂರದಲ್ಲಿದ್ದ ಶಿವನಗಿ ಎಂದು ಫ.ಗು. ಹಳಕಟ್ಟಿ[೩] ಹೇಳಿದ್ದಾರೆ. ಇದನ್ನು ಚೆನ್ನಪ್ಪ ಎರೆಸೀಮೆ[೪], ಎಂ. ಎಸ್. ಲಠ್ಠೆ,[೫], ಎಸ್.ಎಸ್. ಭೂಸರಡ್ಡಿ[೬], ಒಪ್ಪಿಕೊಂಡಿದ್ದಾರೆ. ನಾನು ಈ ಊರಿಗೆ ಹೋಗಿ

---

೧. ಭೂಸನೂರಮಠ ಸಂ. ಶಿ. (ಸಂ.) ಗೂಳೂರು ಸಿದ್ಧವೀರಣ್ಣೊಡೆಯರ `ಶೂನ್ಯ ಸಂಪಾದನೆ,' ಪುಟ: ೨೬೩, ವ ೪೯

೨. ಭೂಸನೂರಮಠ ಸಂ. ಶಿ. ಸಂ. ಅದೇ, ಪುಟ, ೨೫೯, ವ ೩೪

೩. ಹಳಕಟ್ಟಿ, ಫ. ಗು. ಶಿವಶರಣರ ಚರಿತ್ರೆ, ಭಾಗ ೨

೪ ಚೆನ್ನಪ್ಪ ಎರೆಸೀಮೆ: `ನುಲಿಯ ಚಂದಯ್ಯ' ಲೇಖನ ``ಬಸವೇಶ್ವರರ ಸಮಕಾಲೀನರು''- ಗ್ರಂಥ

೫. ಎಂ. ಎಸ್. ಲಠ್ಠೆ : ``ಶರಣ ನುಲಿಯ ಚಂದಯ್ಯ''

೬. ಎಸ್. ಎಸ್. ಭೂಸರಡ್ಡಿ : ``ನುಲಿಯ ಚಂದಯ್ಯ''

ನೋಡಿದಾಗ ಅಲ್ಲಿ ಚಂದಯ್ಯನ ಮನೆಯಿದ್ದ ಅವಶೇಷವಾಗಲಿ, ಆತನ ವಂಶಸ್ಥರಾಗಲಿ ಇದ್ದುದು ಕಂಡು ಬರಲಿಲ್ಲ. ಆದರೆ ಅಲ್ಲಿನ ಜನ ಮಾತ್ರ ಚಂದಯ್ಯ ತಮ್ಮೂರಿನವನೆನ್ನುವರು. ಅಲ್ಲಿರುವ ಭಜಂತ್ರಿ, ಕೊರವಿ ಜನ ಚಂದಯ್ಯ ತಮ್ಮ ವಂಶದಲ್ಲಿ ಜನಿಸಿದವನೆನ್ನುವರು. ಚಂದಯ್ಯ ಬಹುಶಃ ಕೊರವ ಜಾತಿಗೆ ಸೇರಿದವನಾಗಿರಬೇಕೆಂದು ತೋರುತ್ತದೆ. `` ಚಂದಯ್ಯ ಕಲ್ಯಾಣಕ್ಕೆ ಬರುವುದಕ್ಕಿಂತ ಮೊದಲು ಸುಲಿಹೊಸೆದು ಹಗ್ಗ ಕಣ್ಣಿ ಮಾಡಿ ಮಾರಿ ಉಪಜೀವನ ಸಾಗಿಸುತ್ತಿದ್ದ. ಶಿವನಗಿಯಿಂದ ಪೂರ್ವಕ್ಕೆ ಎರಡು ಮೈಲು ದೂರದಲ್ಲಿದ್ದ ರಾಮತೀರ್ಥದಿಂದ ಮೆದೆಹುಲ್ಲು ತರ್‍ತಾ ಇದ್ದ. ಅಲ್ಲಿಗೆ ದೇವರಹಿಪ್ಪರಗಿಯಿಂದ ಮಾಚಿದೇವ ಬಟ್ಟೆ ತೊಳೆಯಲು ಬರ್‍ತಾ ಇದ್ದ. ಇಬ್ಬರೂ ಅಲ್ಲಿ ಸೇರುತ್ತಿದ್ದರು."[೭]. ಮುಂದೆ ಕಲ್ಯಾಣದಲ್ಲೂ ಇಬ್ಬರಿಗೂ ಸಂಪರ್ಕ ಬರುವುದನ್ನು ತಿಳಿದಾಗ ಮೊದಲೇ ಅವರು ಪರಸ್ಪರ ಪರಿಚಿತರಾಗಿದ್ದಾರೆಂಬುದು ಸ್ಪಷ್ಟ. ಶಿವನಗಿಯಲ್ಲಿ ಚಂದಯ್ಯನಿಗೆ ಸಂಬಂಧಿಸಿದ ಮತ್ತೇನಾದರೂ ಅವಶೇಷಗಳು ಸಿಗಬಹುದೆಂದು ಹುಡುಕಿದಾಗ ಆ ಊರಿನ ಬಸ್‌ನಿಲ್ದಾಣದ ಪಕ್ಕದಲ್ಲಿ ಬಿಜಾಪುರಕ್ಕೆ ಹೋಗುವ ಮುಖ್ಯರಸ್ತೆಯ ಬಲಭಾಗದಲ್ಲಿ ಚಂದಯ್ಯನದೆಂದು ಹೇಳುವ ಗುಡಿ ಸಿಕ್ಕಿತು. ಈಗ ಈ ಗುಡಿ ಹಾಳು ಬಿದ್ದಿದೆ. ಇದನ್ನು ಚಂದಯ್ಯನ ಸ್ಮರಣೆಗಾಗಿ ಆ ಊರಿನ ಜನ ಅನಂತರ ಕಟ್ಟಿಸಿದ್ದು ಸ್ಪಷ್ಟ. ಹೀಗೆ ಕರ್ನಾಟಕದುದ್ದಕ್ಕೂ ಶರಣರ ಅನೇಕ ಗುಡಿಗಳು ನಿರ್ಮಾಣಗೊಂಡುದನ್ನು ಶರಣರು ಆ ಗುಡಿಗಳಲ್ಲಿ ದೇವರಾಗಿ ಪೂಜೆಗೊಳ್ಳುವುದನ್ನು ಕಾಣುವೆವು.

ಚಂದಯ್ಯನ ಅವಶೇಷಗಳು ಬಸವಕಲ್ಯಾಣದಲ್ಲಿ ಇಂದೂ ಕೆಲವು ಉಳಿದುಕೊಂಡಿವೆ. ಅವುಗಳಲ್ಲಿ ಪ್ರಮುಖವಾದುದು ಆತನ ಗವಿ. ಇದು ತ್ರಿಪುರಾಂತಕ ಕೆರೆಯ ದಂಡೆಯ ಮೇಲಿದೆ. ಇದು ಚಿಕ್ಕದಿದ್ದು, ಇದರೊಳಗೆ ಒಂದು ಚಿಕ್ಕ ಗದ್ದುಗೆಯಿದೆ. ಗದ್ದುಗೆಯ ಮೇಲೆ ಮೂರು ಕಲ್ಲಿನಲ್ಲಿ ಕೆತ್ತಿದ ಮೂರ್ತಿಗಳಿವೆ.

ಎರಡು ಶಿವ-ಪಾರ್ವತಿಯರವು, ಒಂದು ಚಂದಯ್ಯನದು. ಚಂದಯ್ಯನ ಮೂರ್ತಿ ನಿಂತ ಭಂಗಿಯಲ್ಲಿದ್ದು, ಒಂದು ಕೈಯಲ್ಲಿ ಖಡ್ಗ ಹಿಡಿದುಕೊಂಡು, ಇನ್ನೊಂದು ಕೈಯ ತೋಳಿನಿಂದ ರಕ್ತಕೊಡುವ ರೀತಿಯಲ್ಲಿ ಕೆತ್ತಲ್ಪಟ್ಟಿದೆ.[೮] ಗವಿಯ ಪಕ್ಕದಲ್ಲಿ ಭಾವಿಯೊಂದು

---

೭. ಶಿವನಗಿಯ ಶರಣಯ್ಯ ರುದ್ರಯ್ಯ ಮಠಮಠ (ವಯಸ್ಸು ೮೫) ಇವರು ಹೇಳಿದ್ದು.

೮. ಈ ಮೂರ್ತಿ ಹೀಗೇಕಿದೆ ಎಂದು ಕೇಳಿದಾಗ ಅಲ್ಲಿನ ಜನ ಹೇಳಿದ್ದು ಹೀಗಿದೆ: ಮಲ್ಲಿಕಾರ್ಜುನ ದೇವ ಚಂದಯ್ಯನನ್ನು ಪರೀಕ್ಷಿಸಲೋಸುಗ ಸಾಧುವೇಷದಲ್ಲಿ ಆಕಳೊಂದನ್ನು ತೆಗೆದುಕೊಂಡು ಬರುವನು. ಇದನ್ನು ಕಂಡು ಚಂದಯ್ಯ ಆಕಳನ್ನು ಎಲ್ಲಿಗೆ ಒಯ್ಯುತ್ತೀರಿ ಎನ್ನಲು, ಇದನ್ನು ಕೊಟ್ಟು ರಕ್ತ ತರುವೆನೆನ್ನುವನು. ನಿಮಗೆ ನನ್ನ ರಕ್ತ ಕೊಟ್ಟರೆ ನಡೆಯುತ್ತದೆಯೇ ? ಎಂದಾಗ,

ಇದ್ದು, ಈಗಲೂ ಜನ ಇದಕ್ಕೆ ಚಂದಯ್ಯನ ಬಾವಿಯೆಂದೇ ಕರೆಯುವರು. ತ್ರಿಪುರಾಂತಕ ಕೆರೆಯ ಪಕ್ಕದಲ್ಲಿ ಇನ್ನೊಂದು ಕೆರೆ ಇತ್ತಂತೆ. ಇದಕ್ಕೆ ಜನ ಚಂದಯ್ಯನ ಗಂಜಿ ಕೆರೆ ಎನ್ನುವರು. ಈ ಹೆಸರು ಹೇಗೆ ಬಂತೆಂದು ಕೇಳಿದಾಗ ಅಲ್ಲಿನ ಜನ ಈ ರೀತಿ ಹೇಳಿದರು: `ಚಂದಯ್ಯ ಆ ಸ್ಥಳದಲ್ಲಿ ಗಂಜಿ ಮಾಡಿಕೊಳ್ತಾ ಇದ್ದ. ಒಂದು ದಿನ ಆತ ಗಂಜಿ ಮಾಡಲಿಟ್ಟು ಹೊರಗೆಲ್ಲೋ ಹೋಗಿದ್ದ ಆತ ಬರುವಷ್ಟರಲ್ಲಿ ಅದು ಉಕ್ಕಿ ಹೊರಚೆಲ್ಲಿ ಇಡೀ ಆ ಬಯಲು ಪ್ರದೇಶವನ್ನೆಲ್ಲ ಆವರಿಸಿತ್ತಂತೆ. ಅಂದಿನಿಂದ ಜನ ಆ ಪ್ರದೇಶಕ್ಕೆ ಚಂದಯ್ಯನ ಗಂಜಿಕೆರೆ ಎನ್ನ ತೊಡಗಿದರಂತೆ'. ಆದರೆ ಈಗ ಆ ಸ್ಥಳದಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದರೂ ಜನ ಆ ಸ್ಥಳಕ್ಕೆ ಚಂದಯ್ಯನ ಗಂಜಿ ಕೆರೆ ಎಂದೇ ಕರೆಯುವರು.

ಕಲ್ಯಾಣಕ್ರಾಂತಿಯ ಅನಂತರದ ಚಂದಯ್ಯನ ಬದುಕು ತುಂಬ ಕ್ರಿಯಾಶೀಲವಾದುದಾಗಿ ಕಂಡು ಬರುತ್ತದೆ. ಚಂದಯ್ಯ ಕಲ್ಯಾಣ ಕ್ರಾಂತಿಯಾದೊಡನೆ ಉಳವಿಗೆ ಹೋಗುವನು. ಅಲ್ಲಿ ಅಕ್ಕನಾಗಮ್ಮ ಹಾಗೂ ರೇಚಣ್ಣರನ್ನು ಕಾಣುವನು. ಮಗನನ್ನು ಕಳೆದುಕೊಂಡು ದುಃಖಿತಳಾದ ಅಕ್ಕನಾಗಮ್ಮನ ರಕ್ಷಣೆಯ ಭಾರಹೊತ್ತು ಚಂದಯ್ಯ ಮಲೆನಾಡನ್ನೆಲ್ಲ ಸುತ್ತುತ್ತ ಎಣ್ಣೆಹೊಳೆಗೆ ಬರುವನು. ಅಲ್ಲಿ ಸಿದ್ಧವೀರಸ್ವಾಮಿಗಳು ಅಕ್ಕನಾಗಮ್ಮನಿಗೆ ಮಠವೊಂದನ್ನು ಕಟ್ಟಿಸಿ ಕೊಡುವರು. ಆಕೆ ಅಲ್ಲಿಯೇ ಉಳಿದು ಲಿಂಗೈಕ್ಯಳಾಗುವಳು. ಚಂದಯ್ಯ ಅಲ್ಲಿಂದ ಶಿವಮೊಗ್ಗಾ ಜಿಲ್ಲೆಯ ತರೀಕೆರೆ ತಾಲೂಕಿನ ನಂದಿ ಗ್ರಾಮಕ್ಕೆ ಬರುವನು. ಅಲ್ಲಿ ಕೆಲಕಾಲವಿದ್ದು, ತನ್ನ ಜೋಳಿಗೆ ಬೆತ್ತಗಳನ್ನು ಅಲ್ಲಿಯೇ ಬಿಟ್ಟು ಕಲ್ಲತ್ತಿಗಿರಿಗೆ ಬರುವನು. ಹೀಗೆ ಚಂದಯ್ಯ ಧೈರ್ಯದಿಂದ ಮಲೆನಾಡನ್ನೆಲ್ಲ ಸುತ್ತುತ್ತ ವೀರಶೈವ ಧರ್ಮಪ್ರಚಾರಕಾರ್ಯ ಕೈಕೊಂಡ. ಅಳಿದು ಹೋಗಬಹುದಾಗಿದ್ದ ಬಸವಾದಿ ಶರಣರ ವಚನಗಳನ್ನು ಅಲ್ಲಿನ ಜನತೆಗೆ ಪರಿಚಯಿಸಿದ.

ಚಂದಯ್ಯ ಹೀಗೆ ಊರೂರು ಸುತ್ತುತ್ತ ಕೊನೆಗೆ ಎಲ್ಲಿ ಲಿಂಗೈಕ್ಯನಾದ ? ಯಾವ ಯಾವ ಊರುಗಳನ್ನು ಸುತ್ತಿದ? ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ.

ಆಗುತ್ತದೆನ್ನುವನು. ಆಗ ಚಂದಯ್ಯ ತನ್ನ ರಕ್ತ ಕೊಟ್ಟು ಆಕಳನ್ನು ಉಳಿಸುವನು. ಚಂದಯ್ಯ ದಯಾಮಯಿ ಯಾಗಿದ್ದನೆಂದು ತಿಳಿಸಲು ಜನ ಈ ಕಥೆಯನ್ನು ಕಟ್ಟಿದ್ದು ಸ್ಪಷ್ಟ.

ಈ ಮೂರ್ತಿ ಶಿಲ್ಪದ ಭಂಗಿಯನ್ನು ಕಂಡಾಗ ನನಗೆ ತೋರಿದ್ದು ಹೀಗೆ: ಬಸವಕಲ್ಯಾಣದಲ್ಲಿ ಕ್ರಾಂತಿ ಸಂಭವಿಸಿದಾಗ ಶರಣರೆಲ್ಲ ಆಕಡೆ ಈಕಡೆ ಚೆಲ್ಲಾಪಿಲ್ಲಿಯಾದರು. ಬಿಜ್ಜಳನ ಕೊಲೆಯಾಯ್ತು ಆತನ ಕೊಲೆಗೆ ಶರಣರೇ ಕಾರಣರಿರಬೇಕೆಂದು ಕೆಲ ಕರ್ಮಠರು, ಸ್ವಾರ್ಥಿಗಳು ಶರಣರನ್ನು ಬೆನ್ನಟ್ಟಿದರು. ಇಂಥ ಪ್ರಸಂಗದಲ್ಲಿ ಶರಣರು ತಮ್ಮನ್ನು ತಾವು ರಕ್ಷಿಸಿಕೊಳ್ಳುವುದು ಅನಿವಾರ್ಯವಾಯಿತು. ಮಾಚಿದೇವನಂಥವರು ಖಡ್ಗ ಹಿಡಿದು ಹೋರಾಡಿದರು. ಚಂದಯ್ಯನೂ ಆಗ ಖಡ್ಗ ಹಿಡಿದು ಹೋರಾಡಿರಬೇಕು. ಅದನ್ನೇ ಈ ಚಿತ್ರ ಸಂಕೇತಿಸುವಂತೆ ತೋರುತ್ತದೆ.

ಫ. ಗು. ಹಳಕಟ್ಟಿ[೯] ಶಿವಮೂರ್ತಿಶಾಸ್ತ್ರಿ[೧೦] - ಇವರು ಚಂದಯ್ಯ ನಂದಿ ಗ್ರಾಮದಲ್ಲಿ ಲಿಂಗೈಕ್ಯನಾದನೆಂದು ಹೇಳಿದರೆ, ಚೆನ್ನಪ್ಪ ಎರೆಸೀಮೆಯವರು ಚಿತ್ರದುರ್ಗ ಜಿಲ್ಲೆಯ ಆರ್. ನುಲೇನೂರಿನಲ್ಲಿ ಲಿಂಗೈಕ್ಯನಾದನೆಂದು ಹೇಳುವರು. ನಾನು ಆ ಎಲ್ಲ ಊರುಗಳನ್ನು ಸುತ್ತಾಡಿದ ಬಳಿಕ ಚಂದಯ್ಯ ಆರ್. ನುಲೇನೂರಿನಲ್ಲಿಯೇ ಲಿಂಗೈಕ್ಯನಾದುದು ದಿಟವೆಂದು ತೋರಿತು.

ಚಂದಯ್ಯ ನಂದಿ ಗ್ರಾಮದಲ್ಲಿ ಕೆಲ ಕಾಲ ಇದ್ದುದೇನೋ ಸತ್ಯ. ಆದರೆ ಆತ ಅಲ್ಲಿ ಲಿಂಗೈಕ್ಯನಾಗಿಲ್ಲ. ಆತನದೆಂದು ಹೇಳುವ ಅಲ್ಲಿ ಇರುವ ಗುಡಿ ಆತನದಾಗಿರದೆ ಸಿದ್ಧಲಿಂಗೇಶ್ವರರದಾಗಿದೆ. ಅಲ್ಲಿನ ಜನ ಚಂದಯ್ಯ ಆ ಗುಡಿಯಲ್ಲಿಯೇ ಇರುತ್ತಿದ್ದನೆಂದು ಹೇಳುತ್ತಾರೆ. ಈ ಗುಡಿಯ ಪಕ್ಕದಲ್ಲಿ ಎರಡು ಸಮಾಧಿಗಳಿದ್ದು, ಇವುಗಳಲ್ಲಿ ಒಂದು ಚಂದಯ್ಯನದೆಂದು ಶಿವಮೂರ್ತಿಶಾಸ್ತ್ರೀ[೧೨]ಗಳು ಹೇಳುತ್ತಾರೆ. ಆದರೆ ಆ ಸಮಾಧಿ ಚಂದಯ್ಯನದಲ್ಲ. ಒಂದು ಸಿದ್ಧವೀರಸ್ವಾಮಿಗಳದು, ಇನ್ನೊಂದು ಅವರ ಶಿಷ್ಯನದು, ಎಂದು ಖಚಿತವಾಗಿ ತಿಳಿದುಬಂದಿದೆ. ನಂದಿಯಲ್ಲಿ ಪ್ರತಿ ವರ್ಷ ಅಶ್ವೀಜ ಶುದ್ಧ ಎರಡನೇ ಸೋಮವಾರದಿಂದ ಅಶ್ವೀಜ ಬಹುಳ ಮೊದಲನೇ ಸೋಮವಾರದ ವರೆಗೆ ಚಂದಯ್ಯನ ಜಾತ್ರೆ ನಡೆಯುತ್ತದೆ. ಆಗ ಆತನ ಹೆಸರಿನಲ್ಲಿ ಅನ್ನದಾಸೋಹವೂ ನಡೆಯುವುದು. ಚಂದಯ್ಯನ ಜಾತ್ರೆ ನಡೆದರೂ ಅಲ್ಲ ಆತನ ಗುಡಿ ಇಲ್ಲ. ಇದರಿಂದ ಆತ ಅಲ್ಲಿ ಕೆಲಕಾಲ ಇದ್ದು ಮುಂದೆ ಆರ್. ನುಲೇನೂರಿಗೆ ಬಂದುದು ಸ್ಪಷ್ಟವಾಗುವುದು.

ಆರ್. ನುಲೇನೂರಿಗೆ ಮೊದಲು ದುಮ್ಮಿರಾಯನಾಯಕನ ಪತ್ನಿ ಪದ್ಮಾವತಿಯ ಹೆಸರಿತ್ತು. ಆ ಊರಿಗೆ ಚಂದಯ್ಯ ಬಂದು ನೆಲೆನಿಂತು ಅಲ್ಲಿಯೇ ಲಿಂಗೈಕ್ಯನಾಗಲು ಮುಂದೆ ಆತನ ನುಲಿಯ ಕಾಯಕದ ಹೆಸರು ಪ್ರಾಪ್ತವಾಯ್ತು. ನುಲಿಯಯ್ಯನೂರು ಜನರ ಬಾಯಲ್ಲಿ ಬರಬರುತ್ತ ನುಲೇನೂರ ಎಂದಾಯ್ತು. ಇದು ರಾಮಗಿರಿಗೆ ಸಮೀಪವಿದ್ದುದರಿಂದ ಇದಕ್ಕೆ ಆರ್. ನುಲೇನೂರ ಎನ್ನುವರು. ಈ ಊರಿಗೆ ಚಂದಯ್ಯ ಬರಲು ಪದ್ಮಾವತಿ ಈತನ ಶಿಷ್ಯೆಯಾದಳು. ಆಕೆ ಆತನಿಗೆ ಒಂದು ಕೆರೆಯನ್ನು ನಿರ್ಮಿಸಿಕೊಟ್ಟಳು. ಆ ಕೆರೆಯ ದಂಡೆಯ ಮೇಲೆ ಆತನಿಗೆ ಚಿಕ್ಕದಾದ ಮೂರಂಕಣದ ಒಂದು ಮಠವನ್ನೂ ಕಟ್ಟಿಸಿಕೊಟ್ಟಳು. ಆಕೆ ಕೆರೆ ನಿರ್ಮಿಸಿದುದಕ್ಕೆ ಆ ಊರಿನ ಸರಕಾರಿ ಲೆಕ್ಕಪತ್ರದಲ್ಲಿ `ಪದ್ಮಾವತಿಗಳಟ'ಎಂದು ದಾಖಲೆ ಇದೆ.

---

೯. ಶಿವಶರಣ ಚರಿತ್ರೆ ಭಾಗ -೨

೧೦. ಶರಣ ಸಾಹಿತ್ಯ ಪತ್ರಿಕೆ, ಸಂಪುಟ:೩೦, ಸಂಚಿಕೆ, ೯, ಪುಟ ೩೫೯

೧೧. `ಬಸವೇಶ್ವರರ ಸಮಕಾಲೀನರು '' ಗ್ರಂಥದಲ್ಲಿನ ನುಲಿಯ ಚಂದಯ್ಯ' ಲೇಖನ, ಪುಟ, ೩೯೬

೧೨. ಶರಣ ಸಾಹಿತ್ಯ ಪತ್ರಿಕೆ, ಸಂಪುಟ: ೩೦, ಸಂಚಿಕೆ, ೯, ಪುಟ ೩೫೯

ಆ ಊರಿನ ನಂದಪ್ಪ ಗಂಗಮ್ಮ ಎಂಬ ಶಿವಭಕ್ತರು ಚಂದಯ್ಯನ ಶಿಷ್ಯರಾದರು. ಆ ಊರಿನಲ್ಲಿ ಚಂದಯ್ಯನ ಮೇಲೆ ಬರೆದ ನಾಟಕವನ್ನು ಈಗಲೂ ಆಡುತ್ತಾರೆ. ಆ ನಾಟಕ ದಲ್ಲಿ ನಂದಪ್ಪ -ಗಂಗಮ್ಮರ ಪಾತ್ರಗಳೂ ಇವೆ. ಆ ಊರಿನ ಮಠದ ಪಕ್ಕದಲ್ಲಿಯೇ ಚಂದಯ್ಯನ ಗದ್ದುಗೆ ಇದ್ದು, ಅದರ ಎಡ-ಬಲಕ್ಕೆ ನಂದಪ್ಪ-ಗಂಗಮ್ಮರ ಸಮಾಧಿಗಳಿವೆ. ಚಂದಯ್ಯನ ಗದ್ದುಗೆಯ ಮೇಲೆ ೧೯೫೭ರಲ್ಲಿ ಆ ಊರಿನ ಜನ ಒಂದು ಚಿಕ್ಕದಾದ ಗುಡಿಯನ್ನು ಕಟ್ಟಿಸಿದ್ದಾರೆ. ಒಳಗೆ ಚಂದಯ್ಯ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ನಿತ್ಯ ಪೂಜೆ -ಪುನಸ್ಕಾರಗಳೂ ಅಲ್ಲಿ ನಡೆಯುತ್ತಿವೆ. ಅಲ್ಲಿ ಪ್ರತಿ ವರ್ಷ ಅಶ್ವೀಜ ಮೊದಲನೇ ಸೋಮವಾರ ದಂದು ಚಂದಯ್ಯ ಜಾತ್ರೆ ನಡೆಯುತ್ತದೆ. ಚಂದಯ್ಯನ ಪ್ರಭಾವ ಆ ಭಾಗದಲ್ಲಿ ಹೆಚ್ಚಾಗಿದ್ದು, ಜಾತ್ರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ನೆರೆಯುವರು. ಅನ್ನದಾಸೋಹವೂ ಈ ಸಂದರ್ಭದಲ್ಲಿ ನಡೆಯುವುದು. ಆ ಊರಿನ ಜನ ಚಂದಯ್ಯನ ಮಹಿಮೆಯನ್ನು ಈಗಲೂ ಕೊಂಡಾಡುವರು. ಇದರಿಂದಾಗಿ ಚಂದಯ್ಯ ಇಲ್ಲಿಯೇ ಲಿಂಗೈಕ್ಯನಾದುದು ಸ್ಪಷ್ಟವಾಗುವುದು.

ಚಿತ್ರದುರ್ಗ ಜಿಲ್ಲೆಯಲ್ಲಿ ಇನ್ನೊಂದು ನುಲೇನೂರು ಇದ್ದು, ಇದಕ್ಕೆ ಟಿ. ನುಲೇನೂರ ಎನ್ನುವರು. ಚಂದಯ್ಯ ಈ ಊರಲ್ಲಿಯೂ ಕೆಲಕಾಲ ಇದ್ದ. ಇಲ್ಲಿಯೂ ಆತನ ಹೆಸರಿನಲ್ಲಿ ಚಿಕ್ಕಮಠವೊಂದಿದ್ದು, ಪೂಜಾದಿ ಕಾರ್ಯ ನೆರವೇರುವವು ಎಂದು ಚೆನ್ನಪ್ಪ ಎರೆಸೀಮೆ ಹೇಳುತ್ತಾರೆ.[೧೩] ಆದರೆ ಈ ಊರಿನ ಜನರನ್ನು ಸಂಪರ್ಕಿಸಿ ಕೇಳಿದಾಗ ಅಲ್ಲಿ ಮಠವಿಲ್ಲದ್ದು ತಿಳದು ಬಂತಲ್ಲದೆ, ಅಲ್ಲಿನ ಜನ ಚಂದಯ್ಯ ಎಂದಾಕ್ಷಣ ಆರ್. ನುಲೇನೂರ ಊರಿನ ಹೆಸರನ್ನೇ ಹೇಳುವರು. `ಈಗಿನ ನುಲೇನೂರಿನ ನೈಋತ್ಯ ದಿಕ್ಕಿಗೆ ಮೂರುವರೆ ಮೈಲು ದೂರದಲ್ಲಿರುವ ಮುರುಕ ನಂದಿ ಎಂಬ ಊರಿನಲ್ಲಿ ನುಲಿಯ ಚಂದಯ್ಯ ಕೆಲವು ದಿವಸ ವಾಸವಾಗಿದ್ದನೆಂದು ಆ ಊರಿನ ಸ್ಥಳ ಚರಿತ್ರೆಯಿಂದ ತಿಳಿದು ಬಂದಿದೆ.'[೧೪]

ಒಟ್ಟಿನಲ್ಲಿ ಚಂದಯ್ಯ ಕಲ್ಯಾಣ ಕ್ರಾಂತಿಯ ಅನಂತರ ಏಕಾಕಿಯಾಗಿ ಉಳವಿಗೆ ಬಂದ. ಅಲ್ಲಿಂದ ಅಕ್ಕನಾಗಮ್ಮನೊಂದಿಗೆ ಎಣ್ಣೆಹೊಳೆಗೆ ಹೋದ. ಮುಂದೆ ಆತ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ನಂದಿ ಗ್ರಾಮಕ್ಕೆ ಪ್ರಯಾಣ ಬೆಳೆಸಿದ. ಇಲ್ಲಿ ಕೆಲಕಾಲವಿದ್ದು, ಕಲ್ಲತ್ತಿಗಿರಿಗೆ ಹೋದ. ಅಲ್ಲಿಂದ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಪದ್ಮಾವತಿ (ಆರ್.ನುಲೇನೂರಿ)ಗೆ ಬಂದು ನೆಲೆಸಿದ. ಇಲ್ಲಿಂದ ಮುರುಕನಂದಿ ಹಾಗೂ ಟಿ. ನುಲೇನೂರಗಳಲ್ಲಿ ಕೆಲಕಾಲ ವಾಸಮಾಡಿ ಮತ್ತೆ ತಿರುಗಿ ಪದ್ಮಾವತಿಗೇ ಬಂದ. ಅಲ್ಲಿಯೇ ಲಿಂಗೈಕ್ಯನಾದ.

---

೧೩. 'ಬಸವೇಶ್ವರ ಸಮಕಾಲೀನರು' ಪುಟ ೩೯೭

೧೪. ಅದೇ ಪುಟ, ೩೯೭.

ವೀರಶೈವ ಕಾವ್ಯ, ಪುರಾಣಗಳಲ್ಲಿ ಬಂದ ಚಂದಯ್ಯನ ಲಿಂಗದೇವ ಪ್ರಸಂಗವು ಜನಪದ ಹಾಡೊಂದರಲ್ಲಿಯೂ ವರ್ಣಿತಗೊಂಡುದನ್ನು ಕಾಣುವೆವು. `ಚಂದಯ್ಯನ ವಾರ್ಧಕ' ಎಂಬ ಶೀರ್ಷಿಕೆಯಲ್ಲಿ ಇಪ್ಪತ್ತಕ್ಕಿಂತಲೂ ಹೆಚ್ಚು ಪದ್ಯಗಳಿರುವ ಕೋರಿ ಕಾಗದದ ಹಸ್ತ ಪ್ರತಿಯೊಂದು ರಾಯಚೂರು ಜಿಲ್ಲೆಯ ಮುಧೋಳ ಗ್ರಾಮದ ಶ್ರೀ ಸಜ್ಜನ ಅವರಿಂದ ತಮಗೆ ಸಿಕ್ಕಿದೆಯೆಂದು ಎಂ. ಎಸ್. ಲಠ್ಠೆಯವರು ತಿಳಿಸಿದ್ದಾರೆ.[೧೫] ಅವರು ಈ ಹಾಡುಗಳನ್ನು ತಮ್ಮ ಶರಣ ನುಲಿಯ ಚಂದಯ್ಯ ಗ್ರಂಥದ ಕೊನೆಗೆ ಕೊಟ್ಟಿದ್ದಾರೆ. ಅವು ಗ್ರಾಮ್ಯರೂಪದಲ್ಲಿದ್ದು ಅವನ್ನು ಯಾರು ರಚಿಸಿದ್ದಾರೆಂಬುದು ತಿಳಿದಿಲ್ಲ. ಆರು ಸಾಲುಗಳುಳ್ಳ ಇವು ಶಾರದ ಛಂದಸ್ಸಿನಲ್ಲಿರುವುದಾಗಿ ತಿಳಿದು ಬರುವುದು.[೧೬] ಭಾವುಕ ಮನಸ್ಸಿನ ಜನಪದ ಕವಿಯೊಬ್ಬ ಚಂದಯ್ಯನ ಲಿಂಗದೇವ ಪ್ರಸಂಗವನ್ನು ಹೃದಯದುಂಬಿ ಹಾಡಿದ್ದಾನೆ.

``ನುಲಿಯ ಚಂದಯ್ಯನ ಕಥೆ ಪದ್ಯ'' ಎಂಬ ಶೀರ್ಷಿಕೆಯಲ್ಲಿ ೨೫ ಪದ್ಯಗಳನ್ನೊಳಗೊಂಡ `ಚೆನ್ನವೃಷಭ'ನೆಂಬ ಕವಿಯಿಂದ ರಚನೆಗೊಂಡ ಹಸ್ತಪ್ರತಿಯೊಂದು ನನಗೆ ಸಿಕ್ಕಿದೆ. ಎಂ. ಎಸ್. ಲಠ್ಠೆಯವರಿಗೆ ಸಿಕ್ಕ ಹಾಡುಗಳೂ ಮತ್ತು ಈ ಹಾಡುಗಳೂ ಹೆಚ್ಚು ಕಡಿಮೆ ಒಂದೇ ತೆರನಾಗಿವೆ. ಇದರಿಂದ ಇವೆರಡೂ ಒಂದೇ ಮೂಲ ಪ್ರತಿಯ ನಕಲುಗಳಾಗಿದ್ದು, ಈ ಹಾಡುಗಳನ್ನು ಚೆನ್ನವೃಷಭನೇ ಬರೆದಂತೆ ತೋರುತ್ತದೆ. ಮೂಲ ಹಾಡನ್ನು ಪ್ರತಿ ಮಾಡಿಕೊಳ್ಳುವಾಗ ಕೆಲಜಾಣ ಲಿಪಿಕಾರರು ಹೆಚ್ಚಿನ ಸಂಗತಿಗಳನ್ನು, ಪದ್ಯಗಳನ್ನು ತಮ್ಮ ಕೈಗಂಟಾಗಿ ಸೇರಿಸುವುದುಂಟು. ನನಗೆ ಸಿಕ್ಕ ಹಾಡಿನಲ್ಲಿ ಚಂದಯ್ಯ ನುಲಿಗೆ ಜಂಗಮ ಪಾದೋದಕ ಸಿಂಪಡಿಸಿ ಅದನ್ನು ಬಂಗಾರ ಮಾಡಿ ಜಂಗಮರಿಗೆ ಹಂಚಿದ ಎಂಬ ಪವಾಡ ಹೆಚ್ಚಿಗೆ ಸೇರಿದೆ. ಈ ಪವಾಡ ಹಿಂದಿನ ಹಾಡುಗಳಲ್ಲಿ ಇಲ್ಲ. ವೀರಶೈವ ಕಾವ್ಯ ಪುರಾಣಗಳಲ್ಲೂ ವರ್ಣಿತವಾಗಿಲ್ಲ. ಆ ಪ್ರಸಂಗದ ಪದ್ಯ ಹೀಗಿದೆ :

ನೆರೆದ ಗಣ ಸಂದೇಶ ಕರಗಿ ಭಿನ್ನೈಸುತ್ತಾ
ಪರಿಪರಿಯ ಪ್ರಮಥ ತಲೆಗೋಡಿ
ಪ್ರಭುವಿಗಿರದೆ ಪಾದಾರ್ಚನೆಯ ಮಾಡಿ
ಗಣಕ ಪರಮಾಂನ್ನ ಭಕ್ತಗಳ ನೀಡಿ
ಚರಣೋದಕದಿಂ ನುಲಿಯ ಸುವರ್ಣವ ಮಾಡಿ
ಚರಕೆ ಕೊಡೆ ಜಂಗಮರು ಕೊಂಡಾಡಿ.

ಇನ್ನು ಚಂದಯ್ಯನ ವಚನ-ವಚನಾಂಕಿತದ ಬಗ್ಗೆ ನೋಡೋಣ. ಆರ್. ನರಸಿಂಹಾಚಾರ್ ಅವರು ತಮ್ಮ ಕರ್ನಾಟಕ ಕವಿಚರಿತೆ, ಸಂಪುಟ -೧ ರಲ್ಲಿ ಚಂದಯ್ಯ ೪೯ ವಚನ ಬರೆದಿದ್ದಾನೆ, ಎಂದಿದ್ದಾರೆ. ಚಂದಯ್ಯನ ವಚನಗಳು ಮೊದಲ ಬಾರಿಗೆ

---

೧೫. 'ಶರಣ ನುಲಿಯ ಚಂದಯ್ಯ' ಪುಟ. ೩೬

೧೬, ಪುಟ್ಟಪ್ಪ ಕೆ. ಪಿ. (ಪ್ರ. ಸಂ): ಕನ್ನಡ ಕೈಪಿಡಿ, ಸಂಪುಟ ೧ ಪುಟ ೧೬೦. `ನುಲಿಯ ಚಂದಯ್ಯನ ಶಾರದ'

ಕಾಣಿಸಿಕೊಂಡುದು ಗುಮ್ಮಳಾಪುರ ಸಿದ್ಧಲಿಂಗದೇವರ ಶೂನ್ಯಸಂಪಾದನೆಯಲ್ಲಿ. ಇಲ್ಲಿ ೨೭ ಮಾತ್ರ ಇವೆ. ಗೂಳೂರು ಶೂನ್ಯಸಂಪಾದನೆಯಲ್ಲಿಯೂ ಇಷ್ಟೇ ಹಾಗೂ ಇವೇ ಇವೆ. ೧೯೭೨ರಲ್ಲ ಆರ್. ಸಿ. ಹಿರೇಮಠರ ಸಂಪಾದಕತ್ವದಲ್ಲಿ ಹೊರಬಂದ `ಸಕಲ ಪುರಾತನರ ವಚನಗಳು' ಗ್ರಂಥದಲ್ಲಿ ಆತನ ೩೯ ವಚನಗಳು ಅಚ್ಚಾಗಿದ್ದು, ಇವುಗಳಲ್ಲಿ ಶೂನ್ಯಸಂಪಾದನೆಗಳಲ್ಲಿ ಬಂದ ೨೭ ವಚನಗಳ ಪೈಕಿ ೨೨ ಮಾತ್ರ ಸೇರಿಕೊಂಡಿವೆ. ಬಿಟ್ಟ ೫ ವಚನಗಳನ್ನು ಆ ೩೯ಕ್ಕೆ ಸೇರಿಸಿದರೆ ಚಂದಯ್ಯನ ವಚನಗಳ ಸಂಖ್ಯೆ ೪೪ ಆಗುವುದು. ಇತ್ತೀಚೆಗೆ ಬಂದ ಸಮಗ್ರ ವಚನ ಸಂಪುಟ - ೭ರಲ್ಲಿ ಆತನ ೪೮ ವಚನಗಳು ಅಚ್ಚಾಗಿವೆ. ಇದರಲ್ಲಿ ಮತ್ತೆ ನಾಲ್ಕು ವಚನಗಳು ಶೋಧಗೊಂಡು ಸೇರ್ಪಡೆಯಾದಂತಾಯಿತು. ಹೀಗೆಯೇ ಆತನ ವಚನಗಳ ಶೋಧವಿನ್ನೂ ನಡೆಯಬೇಕಾಗಿದೆ.

`ಚಂದೇಶ್ವರ ಲಿಂಗ' ಎಂಬುದು ಆತನ ವಚನಾಂಕಿತ. `ಗುರುರಾಜ ಚಾರಿತ್ರ'[೧೭] ಚಂಡೇಶ್ವರ ಲಿಂಗವೆಂದಿದೆ. ಚಂಡೇಶ್ವರ ಮೇಲ್ನೋಟಕ್ಕೆ ತೋರುವಂತೆ ಅಶುದ್ಧಪಾಠವಾಗಿದೆ. ಇನ್ನು ಆತನ ಎಲ್ಲ ವಚನಗಳಲ್ಲೂ ಅಂಕಿತ ಹೀಗೆಯೇ ಬಳಕೆಗೊಂಡಿಲ್ಲ. `ಚೆನ್ನಬಸವಣ್ಣಪ್ರಿಯ ಚಂದೇಶ್ವರಲಿಂಗ'[೧೮] `ಸಂಗನ ಬಸವಣ್ಣಪ್ರಿಯ ಚಂದೇಶ್ವರ ಲಿಂಗ'[೧೯] ಎಂದೆಲ್ಲ ಬಳಕೆಗೊಂಡಿದೆ. ಶರಣರು ಯಾರನ್ನು ಉದ್ದೇಶಿಸಿ ವಚನಗಳನ್ನು ಹೇಳುತ್ತಿದ್ದರೋ ತಮ್ಮ ವಚನಾಂಕಿತದ ಹಿಂದೆ ಅವರ ಹೆಸರು, ಹೆಸರಿನ ಹಿಂದೆ `ಪ್ರಿಯ' ವಿಶೇಷಣ ಸೇರಿಸಿ ಹೇಳುತ್ತಿದ್ದುದುಂಟು. ಅಲ್ಲಮಪ್ರಭು ಬಸವಣ್ಣ ಹಾಗೂ ಚೆನ್ನಬಸವಣ್ಣ - ಇವರನ್ನು ಚಂದಯ್ಯ ಗೌರವಾದರ ಭಾವದಿಂದ ಕಂಡು ತನ್ನ ವಚನಾಂಕಿತದ ಹಿಂದೆ ಅವರ ಹೆಸರುಗಳನ್ನು, ಹೆಸರುಗಳ ಹಿಂದೆ `ಪ್ರಿಯ' ಎಂಬ ವಿಶೇಷಣವನ್ನು ಸೇರಿಸಿಕೊಂಡಿದ್ದಾನಷ್ಟೇ. ಹೀಗೆ ಸೇರಿಸಿಕೊಂಡ ವಚನಗಳೆಲ್ಲ ಇವನುವೇ ಆಗಿವೆಯೆಂದು ತಿಳಿಯಬೇಕು.

ಚಂದಯ್ಯನ ವಚನಗಳಲ್ಲಿ ಕಾಯಕ ಮತ್ತು ದಾಸೋಹವನ್ನು ಕುರಿತ ವಿಚಾರಗಳೇ ಮುಖ್ಯವಾಗಿ ಬರುವವು. ಆತನೇನು ಬಹಳ ಓದಿದವನಲ್ಲ, ಸಂಸ್ಕೃತದ ಜ್ಞಾನವೂ ಆತನಿಗಿರಲಿಲ್ಲ. ಈ ಮಾತು ಬಹುಸಂಖ್ಯೆಯ ಕೆಳವರ್ಗದ ವಚನಕಾರರಿಗೂ ಅನ್ವಯಿಸುವುದು. ಚಂದಯ್ಯನ ಆರು ವಚನಗಳಲ್ಲಿ ಕಾಯಕ ವಿಷಯವಿದ್ದರೆ, ಇನ್ನುಳಿದವುಗಳಲ್ಲಿ ದಾಸೋಹದ ವಿಷಯವಿದೆ. ಒಟ್ಟಿನಲ್ಲಿ ಆತನ ವಚನಗಳಲ್ಲಿ ಆತನ ಕಾಯಕನಿಷ್ಠೆ ಹಾಗೂ ಜಂಗಮ ದಾಸೋಹಭಾವ ಕೆನೆಗಟ್ಟಿದುದನ್ನು ಕಾಣುವೆವು. ಆತನ ವಚನಗಳ ಭಾಷೆಯಂತೂ ಸರಳವಾದುದು, ನೇರವಾದುದು.

●●

---

೧೭. ಗುರುರಾಜ ಚಾರಿತ್ರ: ಸಂಧಿ. ೯, ಪದ್ಯ. ೩೮.
೧೮. ಭೂಸನೂರಮಠ, ಸಂ. ಶಿ. ಸಂ. ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆ, ಪುಟ ೨೬೧, ವಚನ ೪೧
೧೯. ಅದೇ. ಪುಟ ೨೫೯, ವಚನ. ೩೫.

ಕರಡಿಕಲ್ಲು ಬಿಲ್ಲಮರಾಯ - ಶಿವಜಾತ ಒಡೆಯರು

-ಡಾ. ಬಸವಲಿಂಗ ಸೊಪ್ಪಿಮಠ

ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳಲ್ಲಿ ಎಡೆದೊರೆ ೨೦೦೦ ನಾಡುಸ್ಥೂಲವಾಗಿ ರಾಯಚೂರು ಜಿಲ್ಲೆಯನ್ನು ಪ್ರತಿನಿಧಿಸುತ್ತದೆ. ಎಡೆದೊರೆ ನಾಡಿನ ವ್ಯಾಪ್ತಿಯ ಕುರಿತು ಬರೆಯುತ್ತಾ ಡಾ. ಫ್ಲೀಟ್ ಅವರು ಉತ್ತರಕ್ಕೆ ಕೃಷ್ಣಾ, ದಕ್ಷಿಣಕ್ಕೆ ತುಂಗಭದ್ರಾ ನದಿಗಳ ನಡುವಿನ ಪ್ರದೇಶ. ಅಂದರೆ ಈಗಿನ ರಾಯಚೂರು ಜಿಲ್ಲೆ ಎಂದರು.[1] ಡಾ. ಫ್ಲೀಟ್ ಸರಿಯಾಗಿಯೇ ಗುರುತಿಸಿದ ಎಡೆದೊರೆ ನಾಡಿನ ಈ `ಮೇರೆ' ಯನ್ನು `ನಿಷ್ಪತ್ತಿ' ಎಂದು ತಪ್ಪಾಗಿ ಸ್ವೀಕರಿಸುತ್ತಾ ಬಂದು ಎಡೆದೊರೆ (ಎಡೆ+ ತೊರೆ) ಎಂದರೆ, ನದಿ (ತೊರೆ) ಗಳೆರಡರ ನಡುವಣ ಪ್ರದೇಶ/ ಸ್ಥಳ (ಎಡೆ) ಎಂದು ಅರ್ಥ ಹೇಳುತ್ತಿದ್ದೇವೆ. ಹೀಗೆ ತರ್ಕಿಸಲು ನಮಗೆ ಇನ್ನೂ ಸಹಾಯಕ್ಕೆ ಬಂದದ್ದು, ವಿಜಯನಗರ ಕಾಲದಲ್ಲಿ ಮುಸ್ಲಿಂ ಅರಸರು ಈ ನಾಡಿಗೆ ಇಟ್ಟ `ದೋ ಆಬ್' ಎಂಬ ಹೆಸರು. ವಿಜಯನಗರದ ಅರಸರು ತುಂಗಭದ್ರಾ ದಂಡೆಯಲ್ಲಿ ಬಹಮನಿ ಸುಲ್ತಾನರು ಕೃಷ್ಣಾದಂಡೆಯಲ್ಲಿ ಈ ನಾಡಿನ ಮೇಲೆ ವಿಜಯ ಸಾಧಿಸಲು ನಡೆಸಿದ ಕಿತ್ತಾಟದ ಫಲವಾಗಿ, ನದಿಗಳೆರಡರ ಫಲವತ್ತಾದ ಈ ಪ್ರದೇಶ ಇವರಿಗೆ `ದೋ ಆಬ್' ಎನಿಸಿದ್ದು ನಿಜ. ಹೀಗೆ ವ್ಯಾಪ್ತಿಯಾಗಿ, ಫಲವತ್ತಾದ ನೆಲದ ಸೂಚಕವಾಗಿ ಬಳಕೆಯಾದ ಈ ಮಾತುಗಳು ಈ ಪ್ರದೇಶವನ್ನು ವರ್ಣಿಸಿದುವೇ ವಿನಾ `ಎಡೆದೊರೆ' ಪದದ ನಿಷ್ಪತ್ತಿಯನ್ನು ಹೇಳಲಿಲ್ಲ. ನನಗ ತೋರುವಂತೆ `ಎರಡು ನದಿಗಳ ನಡುವಣ ಪ್ರದೇಶ' ಎಡೆದೊರೆ ಎನಿಸುವುದಿಲ್ಲ. ಪ್ರಾಯಶಃ ಕೃಷ್ಣಾ ನದಿಯ ಮೂಲ ಹೆಸರಾದ `ಪೆರ್ದೊರೆ' ಎಂಬುದು ಎಡೆದೊರೆ ಪದದ ಮೂಲವಿರಬಹುದು.

ಹನ್ನೆರಡನೆಯ ಶತಮಾನದ ಹೊತ್ತಿಗಾಗಲೇ ಕೃಷ್ಣಾ ನದಿ `ಪೆರ್ದೊರೆ' ಎನಿಸಿಕೊಳ್ಳುತ್ತಿತ್ತು ಎಂಬುದಕ್ಕೆ ಹೊಯ್ಸಳರ ಶಾಸನಗಳನ್ನು (ಉದಾ. ಗೆ, ಕ್ರಿ. ಶ. ೧೧೬೧ರ ಬೇಲೂರು ಶಾಸನ) ನೋಡಬಹುದಾಗಿದೆ. ಪಿರಿದು + ತೊರೆ > ಪೆರ್ದೊರೆ ಎಂದು ಇದನ್ನು ಸುಲಭವಾಗಿ ಬಿಡಿಸಬಹುದು. ಎಡೆದೊರೆ ನಾಡಿನಲ್ಲಿ ಬರುವ ಕರಡಿಕಲ್ಲು -೪೦೦,

1. EI 12 No. 32, Notes by Dr. Fleet, P. 296

ಮೊರಟ- ೩೦೦, ಮೊಸಳಿಕಲ್ ೩೦೦ ಮೊದಲಾದ ಉಪವಿಭಾಗಗಳು ಈ `ಪೆರ್ದೊರೆ' ಎಂಬ ಕೃಷ್ಣಾ ನದಿಗೆ ಸಮೀಪ ಇವೆಯೇ ಹೊರತು ತುಂಗಭದ್ರೆಗೆ ಅಲ್ಲ. ಈ ನಾಡಿನ ವ್ಯಾಪ್ತಿಗೆ ತುಂಗಭದ್ರೆಯ ವರೆಗ ಆ ಮೇರೆ ಚಾಚಿರಬಹುದು. ಅಷ್ಟು ಮಾತ್ರಕ್ಕೇ ಕೃಷ್ಣಾ-ತುಂಗಭದ್ರಾ ನಡುವಣ `ಎಡೆ' (ಸ್ಥಳ) ಎಂದು ಎಡೆದೊರೆಯನ್ನು ಗುರುತಿಸಬೇಕಾಗಿಲ್ಲ. ಪೆರ್ದೊರೆ > ಹೆರ್ದೊರೆ > ಎರ್ದೊರೆ > ಎರದೊರೆ > ಎಡದೊರೆ(ಎಡೆದೊರೆ) ಎಂದು ಬಿಡಿಸುವುದೇ ಸರಿ ಎಂದು ನನಗೆ ತೋರುತ್ತದೆ.

ಎಡೆದೊರೆ -೨೦೦೦ ಎರಡು ಸಾವಿರ ಗ್ರಾಮಗಳ ಆಡಳಿತವನ್ನು ಹೇಳುತ್ತಿರಬಹುದು. ಇದರಲ್ಲಿ ೪೦೦ ಗ್ರಾಮಗಳೊಂದಿಗೆ ಕೇಳಿಬರುವ ಕರಡಿಕಲ್ಲು -೪೦೦ ತನ್ನದೇ ಆದ ವಿಶೇಷತೆಯನ್ನು ಹೊಂದಿರುವ ಉಪವಿಭಾಗವಾಗಿದ್ದು, ರಾಜಕೀಯ, ಧಾರ್ಮಿಕ ಸಂಬಂಧಿ ಅನೇಕ ಅವಶೇಷಗಳು, ಐತಿಹ್ಯಗಳು, ಸಾಹಿತ್ಯೋಲ್ಲೇಖಗಳಿಂದ ಸಮೃದ್ಧವಾಗಿದ್ದು ಅಭ್ಯಾಸಯೋಗ್ಯ ಎನಿಸಿದೆ. ಇಲ್ಲ ದೊರೆಯಾಗಿ ಭಿಲ್ಲಮರಾಯ, ದೊರೆಯ ಗುರುವಾಗಿ ಶಿವಜಾತ ಒಡೆಯರು ತಮ್ಮ ವಿಶಿಷ್ಟ ಸನ್ನಡತೆಯ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಿದ್ದಾರೆ. ಅಪರೂಪದ ಈ ಗುರು -ಶಿಷ್ಯರಿಬ್ಬರ ಸಂಬಂಧವನ್ನು ಅರಿಯುವ ಮೊದಲ ಸಂಶೋಧನ ಪ್ರಯತ್ನ ನನ್ನ ಈ ಲೇಖನವಾಗಿದೆ.

ಮೊದಲೊಂದು ಕಾಲಕ್ಕೆ ವೈಭವದಿಂದ ಮೆರೆದು ಕರಡಿಕಲ್ಲು -೪೦೦ರ ಮುಖ್ಯ ನೆಲೆ ಕರಡಿಕಲ್ಲು (ಕರಡಕಲ್ಲು) ಈಗ ರಾಯಚೂರು ಜಿಲ್ಲಾ ಲಿಂಗಸೂರು ತಾಲೂಕಿನ ಒಂದು ಸಣ್ಣ ಗ್ರಾಮ. ಗ್ರಾಮಕ್ಕೆ ಹೊಂದಿಕೊಂಡು `ಬಿಲ್ಲಮರಾಜನ ಗುಡ್ಡ', ಗುಡ್ಡಕ್ಕೆ ಹೊಂದಿ ಹಾಳುಬಿದ್ದ ಕೋಟೆಯ ಬಯಲಿನಲ್ಲಿ ಈಗ ಬಿದ್ದು ಹೋಗಿರುವ `ಶಿವಜಾತ ಒಡೆಯರ ಮಠ' ಮಠದಿಂದ ಕೂಗಳತೆ ದೂರದಲ್ಲಿ ' ಕುಣಿ ಸೋಮೇಶ್ವರ' ದೇವಸ್ಥಾನ, ದೇವಸ್ಥಾನಕ್ಕೆ ಹೊಂದಿ ಇರುವ ಕೆರೆಗಿಂತಲೂ ನೂರುಪಟ್ಟು ಮಿಗಿಲಾದ ಆಳ ಮತ್ತು ವಿಸ್ತಾರ (ಉತ್ಪ್ರೇಕ್ಷೆ ಅಲ್ಲ) ದ ಬೃಹತ್ತಾದ `ಬಿಲ್ಲಮರಾಜನ' ಕೆರೆ 'ಕೆರೆ ನಿಲ್ಲಲು ರಾಜಾಜ್ಞೆಯಂತೆ` ಕೆರೆಗೆ ಹಾರ' ವಾದ (ನಿಯೋಜಿತಳಾಗಿದ್ದಳು, ಶಿವಜಾತ ಒಡೆಯರು ತಪ್ಪಿಸಿದರು ಎಂಬ ಮಾತಿದೆ) ಅಂತ್ಯಜ ಹೆಣ್ಣು ಮಗಳು 'ಬಿಜ್ಜಮ್ಮ' ಎಂಬಾಕೆಯ 'ಸೆರಮನೆ' ಸ್ಥಾನ ಈ ಕೆರೆಯ ದಕ್ಷಿಣ ದಂಡೆಯಲ್ಲಿ `ಡೊಂಬರ ಚೆನ್ನಮ್ಮನ ಗುಡ್ಡ' ಹೀಗೆ ಒಂದೆರಡಲ್ಲ ಹಲವು ಹತ್ತು ಅವಶೇಷಗಳು, ಐತಿಹ್ಯಗಳಾ ಕರಡಿಕಲ್ಲಿನಲ್ಲಿ ಗೋಚರಿಸುತ್ತವೆ. ಇಲ್ಲೆಲ್ಲ ಕಣ್ಣಿಗೆ ಬೀಳುವ, ಮುಖ್ಯವಾಗಿ ಬಿಲ್ಲಮರಾಯ -ಶಿವಜಾತ ಒಡೆಯರು - ಡೊಂಬರ ಚೆನ್ನಮ್ಮ ಚಾರಿತ್ರಿಕ ವ್ಯಕ್ತಿಗಳಾಗಿದ್ದು ಇವರು ವಾಸ್ತವವಾಗಿ ಯಾರು? ಇವರ ಕಾಲ ಮತ ಇತ್ಯಾದಿ ಏನು ? ನೋಡೋಣ.

ಕರಡಿಕಲ್ಲು -೪೦೦ನ್ನು ಆಳಿದ ರಾಜಮನೆತನಗಳಲ್ಲಿ ಕಲ್ಯಾಣ ಚಾಳುಕ್ಯರ ಹೆಸರು . ಮುಂಚೂಣಿಯದು ಇವರಿಗೆ ಮಾಂಡಳಿಕರಾಗಿ ಕರಡಕಲ್ಲಿನ ಕದಂಬರು, ದೇವಗಿರಿಯ

ಯಾದವರು ಅರ್ಥಾತ್ ಸೇವುಣರು ಮುಖ್ಯರಾಗಿದ್ದಾರೆ. ಕಲ್ಯಾಣ ಚಾಳುಕ್ಯ ದೊರೆಗಳಲ್ಲಿ ಆರನೆಯ ವಿಕ್ರಮಾದಿತ್ಯ, ಒಂದನೆಯ ಸೋಮೇಶ್ವರ ಮೊದಲಾದವರ ಶಾಸನಗಳು ಕರಡಿಕಲ್ಲು-೪೦೦ ರ ಕರಡಕಲ್ಲು, ನವಿಲೆ, ಮುದಗಲ್ಲು ಮೊದಲಾದ ಗ್ರಾಮಗಳಲ್ಲಿ ದೊರೆತಿವೆ. ಚಾಳುಕ್ಯರ ಮಹಾಮಂಡಳೇಶ್ವರ ಎನಿಸಿದ್ದ ಕದಂಬ ನಾಗವರ್ಮರಸ, ಘೂತರಸ ಮೊದಲಾದವರು ನವಿಲೆಯ ಜಡೆಯ ಶಂಕರಲಿಂಗ ದೇವಸ್ಥಾನಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು ದತ್ತಿ-ದಾನ ನೀಡಿದ್ದಾರೆ. ಶರಣ ಶಂಕರದಾಸಿಮಯ್ಯ ಇದೇ ನವಿಲೆ ಗ್ರಾಮದವನು. ಆರನೆಯ ವಿಕ್ರಮಾದಿತ್ಯನ ಕಾಲದ ಕರಡಕಲ್ಲಿನ ಶಾಸನದಲ್ಲಿ, ವಿಕ್ರಮಾದ್ಿತನ ರಾಜಗುರುವಾಗಿ `ಶಿವಚಿಂತಾಯಕ' ಎಂಬ ಶೈವ ಆಚಾರ್ಯನ ಉಲ್ಲೇಖ ಮಹತ್ವದ್ದು.[೨] ಆತ ಇಲ್ಲಿಯ ಕುಣಿಸೋಮೇಶ್ವರ ದೇವಸ್ಥಾನದ ಸ್ಥಾನಾಚಾರ್ಯ ಎನಿಸಿದ್ದನೋ ಹೇಗೋ ತಿಳಿಯದು. ಈ ದೇವಸ್ಥಾನದ ಸಂಬಂಧವನ್ನು ಹೇಳುವ, ಈಗ ಹಾಳಾಗಿರುವ ಇಲ್ಲಿನ `ಮಠ' ವೊಂದು `ಶಿವಜಾತ ಒಡೆಯ' ನ ಹೆಸರನ್ನು ಹೇಳುತ್ತದೆ. ಶಿವಚಿಂತಾಯಕ, ಶಿವಜಾತ ಈ ಮಠ ಪರಂಪರೆಯ ಸ್ಥಾನಪತಿಗಳೆಂದೇ ನನಗೆ ತೋರುತ್ತದೆ. ಶಿವಚಿಂತಾಯಕ ಆರನೆಯ ವಿಕ್ರಮಾದಿತ್ಯನ ಗುರುವಾಗಿದ್ದರೆ, ಶಿವಜಾತ ಒಡೆಯ ಬಿಲ್ಲಮರಾಯನ ಗುರುವಾಗಿದ್ದಾನೆ. ಈ ಬಿಲ್ಲಮರಾಯ ಯಾರು ?

ಕಲ್ಯಾಣ ಚಾಳುಕ್ಯರ ಮಾಂಡಳಿಕರಾಗಿ ಮುಂದೆ ಸ್ವತಂತ್ರ ಅರಸರಾಗಿ ರಾಜ್ಯ ಭಾರ ಮಾಡಿದವರು ಸೇವುಣರು. ಸೇವುಣ ದೊರೆಗಳಲ್ಲಿ ಕನಿಷ್ಠ ಪಕ್ಷ ಇವರಿಗೆ ಬಿಲ್ಲಮ ಹೆಸರಿದೆ. ಇವರಲ್ಲಿ ಶಿವಜಾತ ಒಡೆಯರಿಗೆ ಶಿಷ್ಯನಾಗಿದ್ದಾತ ಯಾವ ಬಿಲ್ಲಮನೋ ಸ್ಪಷ್ಟ ತಿಳಿಯದಾಗಿದೆ. ಹನ್ನೆರಡನೆಯ ಶತಮಾನದ ಶಿವಶರಣರಲ್ಲಿ ಅಂಬಿಗರ ಚೌಡಯ್ಯ, ಸತ್ಯಕ್ಕ ಮೊದಲಾದವರು ಗುರುಭಕ್ತನಾಗಿ ಬಿಲ್ಲಮರಾಯನನ್ನು ಸ್ಮರಿಸುತ್ತಿದ್ದು, ಆತ ಶಿವಜಾತ ಗುರುವಿನ ಭಕ್ತನಾದ ಈ ಸೇವುಣ ದೊರೆ ಬಿಲ್ಲಮನೇ ಇರಬೇಕು. ``ಪ್ರಸಾದವ ಕೊಂಡಡೆ ಭಿಲ್ಲಮರಾಯನಂತೆ ನಂಬಬೇಕೆಯ್ಯಾ '' ಎಂದು ಅಂಬಿಗರ ಚೌಡಯ್ಯ ನುಡಿದರೆ,[೩] ಸತ್ಯಕ್ಕ ತನ್ನ ವಚನದಲ್ಲಿ ``ವಿಶ್ವಾಸದಿಂದ ನಂಬಿದರಯ್ಯಾ ಭಿಲ್ಲಮರಾಯನವರು''ಎಂದು ಭಿಲ್ಲಮರಾಯನ ದೃಢ ಮನಸ್ಸಿನ ವಿಶ್ವಾಸ ಭಕ್ತಿಯನ್ನು ಎತ್ತಿ ಆಡುತ್ತಾರೆ.[೪] ಹೀಗೆ ಭಿಲ್ಲಮನ ಪ್ರಸಾದ, ವಿಶ್ವಾಸಗಳು ಆತನೊಬ್ಬ ಶಿವಭಕ್ತ ಎಂಬುದನ್ನು, ಭಿಲ್ಲಮರಾಯ' ಎಂಬುದು ಆತನ ದೊರೆತನವನ್ನು ಸೂಚಿಸುತ್ತದೆ. ಸಿದ್ಧನಂಜೇಶನ `ರಾಘವಾಂಕ ಚರಿತೆ' ಯ ಈ ಪದ್ಯ ನೋಡಿ :

---

೨. H. A. R. 18, Corpus of Inscriptions in the Kannada districts of Hyderabad State 1079, May 10

೩. ಡಾ. ಎಸ್. ವಿದ್ಯಾಶಂಕರ ಸಂ. ಅಂಬಿಗರ ಚೌಡಯ್ಯನ ವಚನಗಳು, ವ. ಸಂ. ೧೭೨

ಸಲ್ಲೀಲೆಯಿಂ ಕೇಳು ಮತ್ತೊರ್ವ ಗುರುಭಕ್ತ
ಬಿಲ್ಲಮನೆನಿಪ್ಪ ಭೂಪಾಲಕಂ ಸುಖಮಿರಲು
ಕೊಲ್ಲಟಿಗರಂಗನೆಗೆ ಮೆಚ್ಚಿ ತನ್ನಯ ಗುರುವು ಯತಿಮಾರ್ಗದೂರನಾಗಿ
ಪುಲ್ಲಶರತಾಪದಿಂದವಳೊಡನೆ ಪೋಗೆ ಭೂ
ವಲ್ಲಭಂ ಬಳಿಸಂದು ಪೋಗಿ ಪ್ರಣಮಿತನಾಗಿ
ನಲ್ಲಳೊಡನಾತನುಂಬಲಿಯನುಣೆ ಶಿವಂ ಕೈಲಾಸಪುರಕೊಯ್ದನು*

ಇಲ್ಲಿ `ಗುರುಭಕ್ತ ಭಿಲ್ಲಮನೆನಿಪ್ಪ ಭೂಪಾಲಕಂ' ಎಂಬ ನುಡಿಯಲ್ಲಿ ಭಿಲ್ಲಮನನ್ನು ಗುರುಭಕ್ತನೆಂದೂ ಭೂಪಾಲನೆಂದೂ ಕರೆದಿರುವುದು ಮಹತ್ವದಾಗಿದೆ. ವಚನಕಾರರು ನೆನೆಯುವ `ವಿಶ್ವಾಸ' ದ ಭಿಲ್ಲಮರಾಯ `ಪ್ರಸಾದಿ' ಭಿಲ್ಲಮರಾಯ ಈತನೇ ಎನ್ನುವಲ್ಲಿ ಸಂದೇಹವಿಲ್ಲ. ಪ್ರಸಾದದ ಮಾತು ಮೇಲಿನ ಪದ್ಯದಲ್ಲೂ ಬಂದಿದೆ. ಈತನ ಗುರುವು ಯತಿಮಾರ್ಗದೂರನಾಗಿ ಕೊಲ್ಲಟಿಗರಂಗನೆಯ ಜೊತೆಗೆ ಅಂಬಲಿಯನುಣ್ಣುತ್ತಿರುವಾಗ ಜಾತಿ, ನಡತೆ ಇತ್ಯಾದಿ ನೋಡದೆ ಅವರ ಅಂಬಲಿಯನ್ನು ಬೇಡಿ ಪ್ರಸಾದಭಾವದಿಂದ ಉಂಡಿದ್ದಕ್ಕೇ ಶಿವ ಈತನನ್ನು ಕೈಲಾಸಪುರಕೊಯ್ದನೆನ್ನುತ್ತಾನೆ ಸಿದ್ಧನಂಜೇಶ. ಈ ಸನ್ನಿವೇಶವನ್ನೇ ವಿರೂಪಾಕ್ಷ ಪಂಡಿತ `ಚೆನ್ನಬಸವ ಪುರಾಣ" ಬಿಲ್ಲಮರಾಯನಿರದೆ ತನ್ನಯ ಗುರುವ ಶಿವಲೋಕ ಕೊಯ್ದುಂ " ಎಂಬ ಒಂದು ಸಾಲಿನಲ್ಲಿ[೬] ಸಮಾರೋಪಗೊಳಿಸುತ್ತಾನೆ (ಭಿಲ್ಲಮನ ಗುರುವಿನ ಬಗೆಗೆ ಮುಂದೆ ನೋಡಿ).

ಭಿಲ್ಲಮರಾಯನನ್ನು ವಚನಕಾರರು ಸ್ಮರಿಸುವುದರಿಂದ ಖಂಡಿತವಾಗಿ ಭಿಲ್ಲಮರಾಯ ಬಸವಪೂರ್ವಯುಗದ ಶಿವಭಕ್ತನೆಂಬುದು ದೃಢಪಡುತ್ತದೆ. ಈ ಕಾಲದಲ್ಲಿ ಇದ್ದ ಸೇವುಣ ಭಿಲ್ಲಮ ಯಾರು ? ಸೇವುಣರಲ್ಲಿ ಹೆಸರಾಂತ ದೊರೆ ಭಿಲ್ಲಮ `ಐದನೆಯ ಭಿಲ್ಲಮ' ನಾಗಿದ್ದರೂ ಈತ ಕಲ್ಯಾಣದಲ್ಲಿ ಕಳಚುರಿ ಬಿಜ್ಜಳನ ಆಳ್ವಿಕೆ ಕೊನೆಗೊಂಡ ಮೇಲೆ ಬರುವುದರಿಂದ (ಕ್ರಿ.ಶ. ೧೧೬೨-೧೧೯೨) ಕರಡಿಕಲ್ಲು ವಚನಕಾರರು ಸ್ಮರಿಸುವ ಕರಡಿಕಲ್ಲು ಬಿಲ್ಲವ, ಈತನಲ್ಲ. ನಾಲ್ಕನೆಯ ಭಿಲ್ಲಮ ಆಗಿರಬಹುದೆ ? ಎಂದರೆ, ಈತನ ಕಾಲಕ್ಕೆ ಸರಿಯಾಗಿ ಕರಡಿಕಲ್ಲು ಶಾಸನೋಕ್ತ ಶಿವಚಿಂತಾಯಕ (ಆರನೆಯ ವಿಕ್ರಮಾದಿತ್ಯನ ರಾಜಗುರು) ಕರಡಿಕಲ್ಲಿನಲ್ಲಿ ಇದ್ದಾನೆ. ಸ್ಥಾನಾಚಾರ್ಯನಾಗಿ ಶಿವಚಿಂತಾಯಕ ಈಗಾಗಲೇ ಇಲ್ಲಿ ಇರುವಾಗ ಶಿವಜಾತರನ್ನು ಭಿಲ್ಲಮನ ಗುರುವಾಗಿ ಅಲ್ಲಿ (ಒಂದೇ ಸ್ಥಾನದಲ್ಲಿ) ಊಹಿಸುವುದು

---

* ಡಾ. ಆರ್. ಸಿ. ಹಿರೇಮಠ (ಸಂ.), ಶಿವಶರಣೆಯರ ವಚನಗಳು, ವ.ಸಂ. ೧೯೯

೫ ಪ್ರೊ. ಸಂ. ಶಿ. ಭೂಸನೂರಮಠ (ಸಂ), ರಾಘವಾಂಕ ಚರಿತೆ, ಸಂ. ೫, ಪ. ೩೪

೬ ಚೆನ್ನಬಸವ ಪುರಾಣ, ಸಂ. ೫೭, ಪ. ೩೨

ಅಸಂಭವವಾಗುತ್ತದೆ. ಇದೇ ಮಾತನ್ನು ಮುಮ್ಮಡಿ ಭಿಲ್ಲಮನ ವಿಷಯಕ್ಕೆ ಹೇಳುವ ಹಾಗಿಲ್ಲ. ``ಮುಮ್ಮಡಿ ಭಿಲ್ಲಮ (ಕ್ರಿ. ಶ. ೧೦೨೫-೫೫) (ಕಲ್ಯಾಣ) ಚಾಳುಕ್ಯ ಎರಡನೆಯ ಜಯಸಿಂಹನ ಪುತ್ರಿಯೂ ಆಹವಮಲ್ಲ ಸೋಮೇಶ್ವರನ ಸಹೋದರಿಯೂ ಆದ ಆವಲ್ಲದೇವಿಯನ್ನು ವಿವಾಹವಾಗಿದ್ದ ವ್ಯಕ್ತಿ. ಜಯಸಿಂಹ ಮತ್ತು ಆಹವಮಲ್ಲ ಇಬ್ಬರಿಗೂ ವಿಧೇಯನಾಗಿದ್ದ ಈತ ಯುದ್ಧಗಳಲ್ಲಿ ಅವರಿಗೆ ಸಹಾಯ ಮಾಡಿದ²." ಮುಮ್ಮಡಿ ಭಿಲ್ಲಮನ ಈ ಸಾಹಸ ಗುಣ ಚಕ್ರವರ್ತಿ ಮನೆತನದೊಂದಿಗೆ ರಕ್ತಸಂಬಂಧ ಇವುಗಳನ್ನು ನೆನೆದರೆ, ಗುರುಭಕ್ತಿಗೆ ತನ್ನ ಜೀವನವನ್ನು ಮುಡಿಪಿಡುವಷ್ಟು ನಿರುಮ್ಮಳ ಜೀವನ ಈತನದಾಗಿತ್ತೆಂದು ಊಹಿಸಲೂ ಸಾಧ್ಯವಿದೆ. ಅಲ್ಲದೆ, ಶಿವಚಿಂತಾಯಕರಿಗೆ ಶಿವಜಾತರನ್ನು ಹೋಲಿಸುವುದಾದರೆ, ಶಿವಚಿಂತಾಯಕರ ರಾಜಗಾಂಭೀರ್ಯಕ್ಕೂ ಕರಪಕಲ್ (ಶಾಸನ ವರ್ಣಿಸುವಂತೆ) ಶಿವಜಾತರ ಸಿದ್ಧನೊಬ್ಬನ ವರ್ತನೆಗೂ ಎದ್ದು ಕಾಣುವ ವ್ಯತ್ಯಾಸವಿದೆ. ಕಾಳಾಮುಖ ಸ್ಥಾನಾಚಾರ್ಯನೊಬ್ಬನ ತಪಸ್ಸು, ವಿದ್ವತ್ತು, ಪಾಂಡಿತ್ಯಗಳು ಶಿವಚಿಂತಾಯಕನಲ್ಲಿದ್ದರೆ, ಕೊಲ್ಲಟಿಗ ಹೆಣ್ಣಿನೊಂದಿಗೆ ತಿರುಗಿದ (ರಾಘವಾಂಕ ಚರಿತೆ) ಲಾಕುಳ ಸಿದ್ಧನ ಅವಧೂತ ವರ್ತನೆ ಶಿವಜಾತ ಒಡೆಯನಲ್ಲಿದೆ. ಈ ಹಿನ್ನೆಲೆಯಲ್ಲಿ ೧೨ನೆಯ ಶತಮಾನದ ಹೊತ್ತಿಗೆ ಸುಪ್ರತಿಷ್ಠರಾಗಿದ್ದ ಕಾಳಾಮುಖರ ಕಾಲಕ್ಕಿಂತ ಮೊದಲೇ ಶಿವಜಾತ ಒಡೆಯರನ್ನು ನೋಡುವುದು ಉಚಿತವಾಗಿ ಕಾಣುತ್ತದೆ. ಹಾಗೂ ಮುಮ್ಮಡಿ ಭಿಲ್ಲಮನ ಕಾಲಕ್ಕೆ ಅವನ ಗುರುವಾಗಿ ಶಿವಜಾತ ಒಡೆಯರು ಕರಪಕಲ್ಲಿನಲ್ಲಿ ಇದ್ದರೆಂದು ತಿಳಿಯುವುದು ಸಮಂಜಸವಾಗುತ್ತದೆ. ಹೀಗೆ ಮುಮ್ಮಡಿ ಭಿಲ್ಲಮನೇ ಶಿವಜಾತ ಒಡೆಯರ ಶಿಷ್ಯ ಕರಡಿಕಲ್ಲು ಭಿಲ್ಲಮರಾಯನೆಂಬುದು ನನ್ನ ಅಭಿಮತ.

ಭಿಲ್ಲಮರಾಯ ಬಸವ ಪೂರ್ವಯುಗದ ಶಿವಭಕ್ತನಾದುದರಿಂದ ಈತ ಶೈವನೇ ಹೊರತು ವೀರಶೈವನಲ್ಲ.* ಶೈವವೆಂದರೆ ಲಕುಲೀಶ ಪಾಶುಪತವೆಂದೇ ಇಲ್ಲಿ ಹೇಳಬಹುದು. ಪಾಶುಪತ ಮಾರ್ಗದ ಗುರುವೊಬ್ಬನ ವಿಲಕ್ಷಣ ವರ್ತನೆಗಳು ಭಿಲ್ಲಮನ ಗುರು ಶಿವಜಾತನಲ್ಲಿರುವುದು ಒಂದು ಕಾರಣವಾಗಬಹುದು. ವಿಲಕ್ಷಣ ವರ್ತನೆ ಎಂದರೆ, ಶಿವಸಾಧನೆ ರಹಸ್ಯದಲ್ಲಿ ನಡೆಯುತ್ತಿದ್ದು ಲೋಕಕ್ಕೆ ಹುಚ್ಚರ ಹಾಗೆ, ಕಾಮುಕರ ಹಾಗೆ ಇವರು ತೋರ್ಪಡಿಸಿಕೊಳ್ಳುವುದೇ ಆಗಿದೆ. ಪಾಶುಪತ ಸೂತ್ರಗಳು ವಿಧಿಸುವ ಈ ಚರ್ಯೆಗಳಿಗೆ ಅನುಗುಣವಾಗಿಯೇ ಶಿವಜಾತ ಒಡೆಯನಿದ್ದಾನೆ. ಈತನ ಚೇಷ್ಟೆ (ಇದೇ 'ಲೀಲೆ') ಲೋಕಕ್ಕೆ

---

೨. ಕನ್ನಡ ವಿಷಯ ವಿಶ್ವಕೋಶ, ಪು. ೧೫೨೪

* ಈತನ ಕುರಿತು ಮಾನ್ಯ ಗೋಗಿ ಚಂದ್ರಶೇಖರ ಶಾಸ್ತ್ರಿಗಳ ಆಧುನಿಕ ಕಾಲದ (೧೯೫೯) ಪುರಾಣ ಇರುವ ಹಾಗೆ, ವಿಜಯನಗರ ಕಾಲದ ಸಿದ್ಧಬಸವ ಎಂಬ ಕಾಲಜ್ಞಾನ ವಚನಕಾರನು (ಕ್ರಿ. ಶ. ೧೫೪೩) ಬರೆದ 'ಬಿಲ್ಲಮರಾಯನ ಸಾಂಗತ್ಯ' ಎಂಬ ಅಪ್ರಕಟಿತ ಕಾವ್ಯವೊಂದಿದೆ.

ಅರ್ಥವಾಗದೆ, ರಾಘುವಾಂಕ ಚರಿತೆಯಂತಹ ಗ್ರಂಥಗಳಿಗೆ `ಯತಿ ಮಾರ್ಗದೂರ'ವಾದ `ಫುಲ್ಲಶರತಾಪ' ದ ತಾಪಸಿಯಂತೆ ಕಂಡುಬಂದಿರಬೇಕು. ರೇವಣಸಿದ್ಧ ಮಾಯಿದೇವಿ ಎಂಬ ವೇಶ್ಯೆಯ ಮನೆಗೆ ನೀರು ಹೊರುವುದು, ಅವಳ ಸಂಗದಲ್ಲಿರುವುದು, ಕರಸ್ಥಲದ ನಾಗಿದೇವ ಪರಸ್ತ್ರೀಯಳಲ್ಲಿ ನೆರೆದನೆಂಬ ಘಟನೆ ಅವನ ಚರಿತ್ರೆಯಲ್ಲಿ ಬರುವುದು, ಅಷ್ಟೇ ಏಕೆ ಕಲ್ಯಾಣದ ಮಿಂಡ ಜಂಗಮರ ವರ್ತನೆಗಳಲ್ಲೂ ಈ ಕಾಮಚೇಷ್ಟೆಯ ವಿವಿಧ ರೂಪಗಳಿವೆ. ಮತ್ಸ್ಯೇಂದ್ರ ಮೊದಲಾದ ನಾಥಸಿದ್ಧರಲ್ಲೂ ಇವೇ ಮಹೋನ್ನತ ವ್ಯಕ್ತಿಗಳ ಈ ನಡತೆಯನ್ನು ವ್ಯಾಖ್ಯಾನಿಸಲು ಆಧಾರಗಳ ಕೊರತೆ ಇದೆ. ಹೆಣ್ಣಿನ ಮೂಲಕ ಹೆಣ್ಣನ್ನೇ ಗೆಲ್ಲಹೊರಟ ನಿಜವಾದ ವಾಮಾಚಾರಿಗಳ ವಿಷಯದಲ್ಲೂ ಈ ಮಾತು ಸತ್ಯ.

`ರಾಘುವಾಂಕ ಚರಿತೆ' ಯ ಹಾಗೆ `ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ'ದಲ್ಲೂ ಶಿವಜಾತ ಒಡೆಯರು (ಇಲ್ಲಿ ಇವರ ಹೆಸರು` ಜಾತೊಡೆಯರು'ಎಂದಿದೆ) ಕೊಲ್ಲಟಿಗರ ಕನ್ಯೆಗೆ ಸೋತ ಮಾತಿದೆ.ಇಲ್ಲಿ ಇವಳನ್ನು `ಡೊಂಬರ ಚನ್ನಿ' ಎಂದು ಕರೆದಿದೆ.[೮] `ಡೊಂಬ'ರು -`ಕೊಲ್ಲಟಿಗ'ರೇ ಆಗಿದ್ದಾರೆ. ಡೊಂಬು ಇಲ್ಲವೆ ಕೋಲಿನ ಮೇಲೆ ಇವರು ಮಾಡುವ ಕಸರತ್ತು (ಲಾಗ ಹಾಕುವುದು ಇತ್ಯಾದಿ) ಗಳ ಮೂಲಕ` ಡೊಂಬು' ಹಿಡಿದು` ಡೊಂಬರು'`-ಕೋಲು' ಹಿಡಿದು` ಕೊಲ್ಲಟಿಗರು' ಎನಿಸಿದಂತಿದೆ. ರಾಘುವಾಂಕ ಚರಿತೆ ಹೇಳುವ `ಕೊಲ್ಲಟಿಗರಂಗನೆ' ಭೈ.ಕಾ. ರತ್ನಾಕರ ಹೇಳುವ` ಡೊಂಬರ ಚನ್ನಿ' ಎನ್ನುವಲ್ಲಿ ಸಂಶಯವೇ ಇಲ್ಲ. (ನಾಥ ಸಿದ್ಧರಲ್ಲಿ ಅನೇಕರು ಡೊಂಬರ ಕನ್ಯೆಯನ್ನು ಸಾಧನೆಯ ಮುದ್ರೆಯಾಗಿ ಹೊಂದುವ ಕಾರಣವೇನು? ಎಂಬುದನ್ನು ಹುಡುಕಬೇಕು) ಇವಳ ಹೆಸರು` ಚನ್ನಿ' ಎಂಬುದು ಮಾತ್ರ ಇದರಿಂದ ತಿಳಿದುಬರುತ್ತದೆ. ಕರಡಕಲ್ಲಿನ ಅವಶೇಷಗಳನ್ನು ಮೇಲೆ ಪ್ರಸ್ತಾಪಿಸಿದ್ದು, ಅಲ್ಲಿ` ಡೊಂಬರ ಚೆನ್ನಮ್ಮನ ಗುಡ್ಡ' ಬಂದಿದೆ. ಶಿವಜಾತ ಒಡೆಯರಿಗೆ ಸಂಬಂಧಿಸಿದಂತೆ ಕರಡಕಲ್ ಸ್ಥಳ ಪುರಾಣದಲ್ಲಿ ಕೇಳಿಬರುವ ಈ` ಡೊಂಬರ ಚೆನ್ನಮ್ಮ'ನೇ ಭೈ. ಕ. ರತ್ನಾಕರ ಹೇಳುವ `ಡೊಂಬರ ಚನ್ನಿ' ಆಗಿದ್ದಾಳೆ. ಕರಡಕಲ್ಲಿನ ಡೊಂಬರ ಚೆನ್ನಮ್ಮನ ಗುಡ್ಡಕ್ಕೂ ಬಿಲ್ಲಮರಾಜನ ಗುಡ್ಡಕ್ಕೂ ಸು. ೩. ಕಿ. ಮೀ. ಅಂತರವಿದ್ದು, ಆ ಗುಡ್ಡದಿಂದ ಈ ಗುಡ್ಡಕ್ಕೆ ಚೆನ್ನಮ್ಮ ತಂತಿ ಹಾಕಿ ನಡೆದು ಬರುತ್ತಿದ್ದಳೆಂದು ಕರಡಕಲ್ಲಿನಲ್ಲಿ ಐತಿಹ್ಯವಿದೆ. ಬಿಲ್ಲಮ ರಾಜನ ಗುಡ್ಡದಲ್ಲಿಯೇ ಭಿಲ್ಲಮನ ಅರಮನೆ ಇತ್ತೆಂದೂ ಅಲ್ಲಿಂದ ಪೂರ್ವಕ್ಕೆ $^1/_2$ ಕಿ. ಮೀ. ದೂರವಿರುವ ತನ್ನ ಆರಾಧ್ಯ ದೈವ ಸೋಮನಾಥನ (ಕುಣಿಸೋಮೇಶ್ವರ ದೇವಸ್ಥಾನ) ದರ್ಶನಕ್ಕೆ ಆತ ನಿತ್ಯ ಹೋಗಿಬರುತ್ತಿದ್ದನೆಂದೂ, ಆ ಮಾರ್ಗದಲ್ಲಿಯೇ ಇರುವ`ಶಿವಜಾತ ಒಡೆಯರ ಮಠ'ದಲ್ಲಿ ಗುರು ಶಿವಜಾತರು ಇರುತ್ತಿದ್ದರೆಂದೂ ಕರಡಕಲ್ಲಿ ನಲ್ಲಿ ಜನ ಹೇಳುತ್ತಾರೆ. ಡೊಂಬರ ಚೆನ್ನಮ್ಮ ಈ ಬಿಲ್ಲಮರಾಜನ ಗುಡ್ಡಕ್ಕೆ ಬಂದು ಅವರನ್ನು ವಶಮಾಡಿಕೊಂಡು

---

೮ ಡಾ. ಆರ್. ಸಿ. ಹಿರೇಮಠ /ಡಾ. ಎಂ. ಎಸ್. ಸುಂಕಾಪುರ (ಸಂ.) ಭೈ. ಕಾ. ರತ್ನಾಕರ (ಪು. ೮೬)

ಹೋದಳಂತೆ. ಈ ಎಲ್ಲ ಐತಿಹ್ಯಗಳಿಂದ ಹಾಗೂ ಅವಶೇಷಗಳಿಂದ ಶಿವಜಾತ ಒಡೆಯರಿಗೆ `ಡೊಂಬರ ಚನ್ನಿ' ಯ ಸಂಬಂಧ ಬಂದುದು ನಿಜವೆಂದೇ ತೋರುತ್ತದೆ. ಈ ಸಂಬಂಧದ ಸ್ವರೂಪವೇನು? ಇವರೇ ಬೆನ್ನುಹತ್ತಿದರೋ? ಆವಳೇ ಸೆಳೆದೊಯ್ದುಳೊ? ಇವಳ ಬೆನ್ನಿಗೆ ಬೀಳಲು ಕಾರಣವಾದರೂ ಏನು? ಎಂಬುದು ವಿಚಾರಾರ್ಹವಾಗಿದೆ.

`ಗುರುಭಕ್ತ ಬಿಲ್ಲಮರಾಯನು ಎಂಬುದಕ್ಕೆ ಕಥೆ' ಎಂದು ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ (ಭಾಗ-2) ಹೇಳುವ ಕಥೆಯಿದು - `` ಕರಡಿಕಲ್ಲೆಂಬ ಪುರದಲ್ಲಿ ಬಿಲ್ಲಮರಾಯನೆಂಬರಸು ರಾಜ್ಯವನಾಳುತ್ತ ಜಾತಿ ನೀತಿಯ ನಡೆಸುತ್ತಿರುವಾಗ, ಜಾತೊಡೆಯರೆಂಬ ತಮ್ಮ ಗುರುವಿನಲ್ಲಿ ಶುದ್ಧ ಶೈವೋಪದೇಶವಂ ಪಡೆದು, ಪದ್ಮಾವತಿಯೆಂಬ ಸ್ತ್ರೀಯೊಡನೆ ಬಾಳುತ್ತ ಗುರುಭಕ್ತಿಯಂ ಮಾಡುತ್ತ, ಲಿಂಗಾರ್ಚನೆಯ ಮಾರ್ಗವಿಡಿದು ನಡೆವುತ್ತಿರಲೊಂದು ದಿನ ಜಾತೊಡೆಯರು ಬಿಲ್ವವನದಲ್ಲಿ ತರಗೆಲೆಯ ಹಾರದಿಂದ ತಪವನಾಚರಿಸುವಾಗ, ಬಿಲ್ಲಮರಾಯನು ದಿನಂಪ್ರತಿಯಲ್ಲಿ ಪೋಗಿ ಗುರುವಿಗೆ ವಂದಿಸಿ ಪಟ್ಟಣಕ್ಕೆ ಬರುತ್ತಿರಲಿತ್ತಂ ಡೊಂಬರ ಚನ್ನಿಯೆಂಬವಳು ಮೇಳಸಹಿತಂ ಪಟ್ಟಣಕ್ಕೆ ಬಂದಿರುವಾಗಂ, ಮೇಳದಾಟವನಾಡಿಸುವುದಕ್ಕೆ ಸಮಯಂ ಕೂಡದಿರಲು, ಬಳಿಕ ಬಿಲ್ಲಮರಾಯನ ಗುರುವು ಜಾತೊಡೆಯರು ಬಿಲ್ವವನದಲ್ಲಿ ತಪವಿರ್ದಹರೆಂಬುದ ಡೊಂಬರ ಚೆನ್ನಿ ಕೇಳಿ ಅಲ್ಲಿಗೆ ಪೋಗಿ, ಕಣ್ಣ ಮುಚ್ಚಿ ತಪದಿಂದಿರ್ದು ಕೈಯಲ್ಲಿ ಬಿದ್ದ ತರಗೆಲೆಯ ಮೆಲುವದಂ ಕಂಡು`` ಈತನ ಎನ್ನೊಸವ ಮಾಡಿಕೊಂಬೆನೆಂ"ದು ಚನ್ನಿ ಗಾನವಿದ್ಯವಂ ಪಾಡಲು ನೋಡದಿರಲಾಗ, ಗೋದಿಯಲ್ಲಿ ಒಂದೆಸಳಿನಂತೆ ತರಗಂ ಮಾಡಿ ಕೈಯೊಳಗಿಡಲು ಪತ್ರಿಯೆಂದು ಮೆಲ್ಲಲು, ಎಂಟು ದಿನ ಪರ್ಯಂತರವು ತುಪ್ಪದಲ್ಲಿ ತಾಳಿಸಿ ಎಂಟು ತರಗ ನೀಡಲು, ಮೆಲಿದು ಸಪ್ತಧಾತುಗಳು ಹೆಚ್ಚಿ, ಕರಣ ಪಟುತರವಾಗಿ, ಕಣ್ದೆರೆದು ನೋಡಲಾಗ, ಮುಂದಿಟ್ಟ ಮೊಸರು ಓಗರದ ಹರಿವಾಣವಂ ಕಂಡು " ಶಿವನು ಕೊಟ್ಟ ಎಡೆಯಿದು" ಎಂದುಂಡು ಅಂಗಚೇತನವಾಗಿ ಚೆನ್ನಿಯಂ ನೋಡಿದಾಗ ರುದ್ರ ವೀಣೆಯಂ ಪಿಡಿದು ರಾಗವಂ ಕೊಂಡಾಡಲು, ಅಂಗದ ಶೃಂಗಾರವಂ ಕಂಡು ಬೆಜಿಗಾಗಿ ನೋಡುತ್ತಿರಲಾಗ, ಚನ್ನಕ್ಕ ಪೋಗುತ್ತಿರಲಾಗ " ಚನ್ನಿ ಎನ್ನ ಬಿಟ್ಟು ಪೋಗಬೇಡೆ" ನಲು" ನಿನ್ನ ಕೂಡ ಬನ್ನಿ" ಯೆಂದು ಕರೆದುಕೊಂಡು ಮತ್ತೊಂದು ದೇಶಕ್ಕೆ ಪೋಗಿ, ವಿದ್ಯವನಾಡುವಲ್ಲಿ ಇತ್ತ ಬಿಲ್ಲಮರಾಯ ಎಂದಿನಂತೆ ಗುರು ನಮಸ್ಕಾರಕ್ಕೆ ಬರಲು, ಮೂಜು, ದಿನವಲ್ಲಿಲ್ಲದಿರಲು ``ಗುರುವ ಕಾಣೆ" ನೆಂದು ಮಂತ್ರಿಗೆ ಪೇಳಲವನು ಡೊಂಬರಿದ್ದಲ್ಲಿಗೆ``ಬಿಲ್ಲಮರಾಯ ನಿಮ್ಮ ಬರಹೇಳಿದ"ನೆಂದು ಚನ್ನಿಯ ಕರೆತರಲವರು ಅರಸಿನ ಸಭೆಗೆ ಬಂದಾಡುವಾಗ ಜಾತೊಡೆಯರು ಓಮ್ಮೇಳದಲ್ಲಿ ನಿಂದು ವಾದ್ಯವ ಬಾರಿಸಲು ಬಿಲ್ಲಮರಾಯಂ ಕಂಡು ಅಂತಃಕರಣದಲ್ಲಿ ತಲೆವಾಗಿ ಶರಣೆಂದು ತ್ಯಾಗವಂ ಬೇಡಿದಷ್ಟು ಕೊಟ್ಟು ಮನ್ನಿಸಿ ಕಳುಹಿದ ಬಳಿಕ ಏಕಾಂತದಲ್ಲಿ

ಬಿಲ್ಲಮನು ``ಗುರುವಿಂಗೆ ಶರಣೆನ್ನಬೇಕೆಂ"ದಂ ಡೊಂಬರಿದ್ದಲ್ಲಿಗೆ ಪೋಗಲಾಗಂ ಜಾತೊಡೆಯರು ಡೊಂಬರ ಚೆನ್ನಿಯೊಡನುಂಬುದಂ ಕಂಡಬ್ಬರಿಗೆ ಹೊಡೆಗೆಡೆದೊಂದಿಸಿ ``ನಿಮ್ಮ ಶೇಷವ ಕೊಡಿ"ಎನಲಾಗ ``ಕುಲಗೆಟ್ಟೆ ನಾನು, ಕುಲವುಳ್ಳಾತಂಗೆ ಎನ್ನ ಶೇಷವ ಕೊಡಲಾಜಿ" ಎನಲಾಗ ಕಂದುಳ್ಳ ಚಂದ್ರಂಗೆ ಪ್ರಭೆ ಕುಂದುವುದೆ? ಶಿವನ ರೂಪಾದ ಗುರುವೆ, ನಿಮಗೆ ಕುಂದುಂಟೆ?" ಎಂದು ಎರಗಲಾಗಂ, ಚನ್ನಮ್ಮ ಪ್ರಸಾದವ ನೀಡಲುಂಬಾಗ ಶಿವನು ಮೆಚ್ಚಿ " ಜಾತೊಡೆಯರು ಸಮಸ್ತ ಜಾತಿಗೆ ಒಡೆಯರಾದ ಗುರುವಾದನು. ಬಿಲ್ಲಮರಾಯ ನಿನ್ನಿಂದ ಎಲ್ಲಾ ಜಾತಿಯು ಗುರುಭಕ್ತಿಯ ಕಲಿವ"ರೆಂದು ಗುರುಭಕ್ತಿಗೆ ಒಲಿದು ರಾಯನ ಬಂಧುಬಳಗಸಹಿತವಾಗಿ ಡೊಂಬರ ಚನ್ನಿಯ ಬಂಧುವನೊಪಗೂಡಿ `` ಜಾತೊಡೆಯರೆ ಗುರು, ಬಿಲ್ಲಮರಾಯನೆ ಶಿಷ್ಯನೆಂದು" ದೇವಾದಿ ದೇವರ್ಕಳು ಕೊಂಡಾಡುತ್ತಿರಲು, ಕೈಲಾಸಕ್ಕೆ ಕರೆದೊಯ್ದ ಶಿವನು"

ಈ ಕಥೆಯಲ್ಲಿ ವ್ಯಕ್ತವಾದ ಅಂಶಗಳನ್ನು ಹೀಗೆ ಪಟ್ಟಿ ಮಾಡಬಹುದು.:

೧. ಕರಡಿಕಲ್ಲು ಎಂಬ ಪುರವನ್ನು ಆಳುತ್ತಿದ್ದವನು ಬಿಲ್ಲಮರಾಯ. ಈತನ ಹೆಂಡತಿ ಪದ್ಮಾವತಿ. ಜಾತೊಡೆಯರು ಗುರುಗಳು. `ಜಾತಿ ನೀತಿಯ ನಡೆಸುತ್ತ' ಬಿಲ್ಲಮ ಗುರುಭಕ್ತಿ -ಲಿಂಗಾರ್ಚನೆ ಮಾರ್ಗದಲ್ಲಿದ್ದಾನೆ.

೨. ಜಾತೊಡೆಯರು ಬಿಲ್ವವನದಲ್ಲಿ ತಪವಿರುವಾಗ ಡೊಂಬರ ಚೆನ್ನಿ ``ಈತನ ಎನ್ನೊಸವ ಮಾಡಿಕೊಂಬೆ"ನೆಂದು, ಬಿಲ್ವಪತ್ರಗಳೇ ಆಹಾರವಾಗಿದ್ದ ಈ ತಾಪಸಿಗೆ ಕಾಮೋದ್ದೀಪನದ ಆಹಾರವುಣ್ಣಿಸಿ ತನ್ನೊಡನೆ ಕರೆದೊಯ್ಯುತ್ತಾರೆ.

೩. ಗುರುವನ್ನು ಕಾಣದೆ ತತ್ತರಿಸುವ ಬಿಲ್ಲಮ ಆತನಿಗೆ ಹುಡುಕಿಸುತ್ತಾನೆ. ಡೊಂಬರ ಮೇಳದಲ್ಲಿ ವಾದ್ಯ ಬಾರಿಸುತ್ತಿದ್ದ ಜಾತೊಡೆಯರನ್ನು ಕಂಡು ಅಂತಃಕರಣದಲ್ಲಿ ಬಾಗಿದವನು, ಏಕಾಂತದಲ್ಲಿ ಕಾಣಹೋದಾಗ ಡೊಂಬರ ಚೆನ್ನಿಯೊಂದಿಗೆ ಗುರು ಅಂಬಲಿ ಉಣ್ಣುತ್ತಿದ್ದುದನ್ನು ಕಂಡು ಬಿನ್ನವಿಸಿ ಅವರ ಪ್ರಸಾದವನ್ನು ಪಡೆದು ಸೇವಿಸಿ ಜಾತಿ ಮೀರಿದ ಭಕ್ತನಾಗುತ್ತಾನೆ. ಸಮಸ್ತ ಜಾತಿಗೆ ಒಡೆಯ ಗುರು ಶಿವಜಾತ ಒಡೆಯರಾಗುತ್ತಾರೆ.

ಈ ಅಂಶಗಳನ್ನು ಗಮನಿಸುತ್ತಿದ್ದರೆ, ಬಿಲ್ಲಮರಾಯನ ಗುರುಭಕ್ತಿ ಪರೀಕ್ಷೆಗೆ ಈ ಕತೆ ಹುಟ್ಟಿದೆಯೇ ವಿನಾ ಜಾತೊಡೆಯರ (ಶಿವಜಾತ ಒಡೆಯರ) ಜಾರಿದ ಮಾರ್ಗವನ್ನು ಸೂಚಿಸಲಿಲ್ಲ ಎನಿಸುತ್ತದೆ. ಈ ಕತೆಯ ಹೆಸರೇ ಅದನ್ನು ಹೇಳುತ್ತದೆ. `ಗುರುಭಕ್ತನು ಬಿಲ್ಲಮರಾಯ ಎಂಬುದಕ್ಕೆ ಕಥೆ 'ಇದು. ಆದರೆ ಎಂತಹ ಗುರುಭಕ್ತ!' ಜಾತಿ ನೀತಿಯ ನಡೆಸುತ್ತ.---- ಗುರುಭಕ್ತಿಯಂ ಮಾಡುತ್ತ ಲಿಂಗಾರ್ಚನೆಯ ಮಾರ್ಗ, ಒಡೆದ ಭಕ್ತ ಈತ.

ಬಿಲ್ಲಮ ಭಕ್ತನೇ ಆಗಿದ್ದರೂ ಆತನಲ್ಲಿ ಇನ್ನೂ ಜಾತಿಯ ತರತಮ ಹೋಗಿಲ್ಲ ಎನ್ನಲು ಜಾತಿ ನೀತಿಯ ನಡೆಸುತ್ತ ಎಂಬ ಮಾತು ಆಧಾರವಾಗುತ್ತದೆ. ಭಕ್ತನ ಜಾತಿಯ ಮೇಲು-ಕೀಳು ಕೆಡಿಸರೋ ಎಂಬಂತೆ ಗುರುವಿಗೆ ಅನಾಯಾಸ ಒದಗಿದವಳು ಡೊಂಬರ ಚೆನ್ನಿ ಎನಿಸುತ್ತದೆ.

ಡೊಂಬರ ಚೆನ್ನಿಯ ಬೆನ್ನುಹತ್ತಿ ಜಾತಿ ಮೀರಿ ನಿಂತ ಗುರು ಜಾತೊಡೆಯರು, ಗುರುವಿನ ಮೋಹದ ಮುಂದೆ ಎಲ್ಲವನ್ನೂ (ಜಾತಿಯನ್ನು ಮುಖ್ಯವಾಗಿ) ಮೀರಬಲ್ಲ ಶಕ್ತಿಯ ಶಿಷ್ಯ ಬಿಲ್ಲಮ: ಜಾತಿಸಂಪ್ರದಾಯ ದಾಟಲು ಇನ್ನೇನು ಬೇಕು? ಅಂತೆಯೇ `ಕುಲಗೆಟ್ಟೆ ನಾನು, ಕುಲವೃಳ್ಳಾತಂಗೆ ಶೇಷವ ಕೊಡಲಾರೆ' ಎಂದು ಗುರುವು ನಿರಾಕರಿಸಿದರೂ, ಭಿಲ್ಲಮ ಮುಂದಾಗಿ ಚೆನ್ನಿಯೊಂದಿಗೆ ಅವರುಂಬ ಅಂಬಲಿಯನ್ನೇ ಪ್ರಸಾದವಾಗಿ ಸ್ವೀಕರಿಸಿ `ಜಾತೊಡೆಯರೆ ಗುರು, ಬಿಲ್ಲಮರಾಯನೆ ಶಿಷ್ಯ'ನೆಂದು ದೇವತೆಗಳು ಹೊಗಳಲು ಕಾರಣನಾಗುತ್ತಾನೆ.

ಹಾಗಾದರೆ ಭಕ್ತ ಬಿಲ್ಲಮನ ಕಾಲಾಭಿಮಾನ ಕಿತ್ತೆಸೆಯಲು, ಅವನಿಗೆ ಪಾಠ ಕಲಿಸಲೆಂದು ಡೊಂಬರ ಚೆನ್ನಿಯೊಂದಿಗೆ ಅವರು ತಿರುಗಿದರೆ? ಅದು ನಟನೆ ಮಾತ್ರವೆ ? ಅಥವಾ ಚೆನ್ನಿ ಜಾತೊಡೆಯರ ಜೀವನದಲ್ಲಿ ಸಂಗಾತಿಯಾಗಿ ಬಂದುದು ಸತ್ಯವಿದ್ದು, ಗುರುವಿನ ಈ ನಡತೆಯನ್ನು ಎಣಿಸದ ಮಹಾಭಕ್ತ-ಮಹಾಪ್ರಸಾದಿ ಎನಿಸಿದ್ದನೋ ಬಿಲ್ಲಮ ? ಜಾತೊಡೆಯ ನಾರಿಗೆ ಮನಸೋತರೆ?

ಸೋಲಲಿಲ್ಲ ಎನ್ನುತ್ತದೆ: ರಾಘವಾಂಕ ಚರಿತೆಯಲ್ಲಿಯೇ ಬೇರೊಂದು ಕಡೆಗೆ ಬರುವ ಜಾತೊಡೆಯ ಹಾಗೂ ಆತನ ಶಿಷ್ಯನ ಕತೆ. ಈ ಕತೆ ಯಾರ ಕಣ್ಣಿಗೆ ಬೀಳದೆ ಹೋಗಿರುವುದು (ಸ್ವತಃ ಸಿದ್ದನಂಜೇಶನಿಗೆ) ವಿಚಿತ್ರವಾಗಿದೆ. ಅಲ್ಲಿನ ಕತೆ ಇದು:[೧೦]

`ಪೂವೊಳಲು' ಪುರದಲ್ಲಿ* ರತ್ನಸಾಗರ - ಪದ್ಮಿನಿ ವೈಶ್ಯ ದಂಪತಿಗಳು. ಸಂಪತ್ತಿನ ದುರಾಸೆ ಇವರಿಗೆ. ತಮ್ಮನನ್ನು ಕೊಂದು ಅವನ ಸಂಪತ್ತನ್ನು ಎತ್ತಿಹಾಕಲು ಪದ್ಮಿನಿ ಪತಿಯೊಂದಿಗೆ ಸೇರಿ ಸಂಚು ಮಾಡುತ್ತಾಳೆ. ಆದರೆ ಸತ್ತವನು ತಮ್ಮನಲ್ಲ, ಮಗನೇ ಆಗುತ್ತಾನೆ. ಅರಿಯದೆ ತಾವು ಮಾಡಿದ ಅಪರಾಧಕ್ಕೆ ಇವರು ಕಂಗೆಟ್ಟು, ಪಶ್ಚಾತ್ತಾಪ ಪಡುತ್ತಿರುವಾಗ, ಜನರ ಬಹಿಷ್ಕಾರದ ನೋವನ್ನು ಉಣ್ಣುತ್ತಿರುವಾಗ `ಶಿವಧರ್ಮ' ಎಂಬ ಮುನಿಯೊಬ್ಬ ಕಾಣಿಸಿಕೊಂಡು ಇವರ ಪಾಪಪರಿಹಾರದ ಮಾರ್ಗ ತಿಳಿಸುತ್ತಾನೆ -

---

* ಪೂರ್ವೋಕ್ತ. ಪು. ೪೭ - ೪೮

೧೦. ಪ್ರೊ.ಸ.ಸ. ಮಾಳವಾಡ ಸಂ. ರಾಘವಾಂಕ ಚರಿತೆ. ಸಂ ೧೦. ಪ. ೫೪-೫೮

* 'ಪೂವೊಳಲು' ಗ್ರಾಮ ಪೂವಲ್ಲಿ > ಪೂಲಿ > ಹೂಲಿ ಆಗಿರಬಹುದೆ ?

ಚಿರಕಾಲ ಕೀವೂರ್ಗೆ ಚಿತ್ರವತಿಯೆಂಬ ಡೊಂ
ಬರನಾರತಿಯ ಬರವು ಸಮನಿಪುದವಳ ಬಳಿಯೊ
ಳಿರುತಿಹಂ ತನ್ನ ನಿಜಮಂ ಮಾಜಿ ಸೇವೆಗೈಯುತ್ತೊರ್ವ ಶಿವಯೋಗಿಯು
ಪರಿಹರಿಪುದೀ ಪಾಪವಾತನೈತಂದು ಶಂ
ಕರಪೂಜೆಗೆಯ್ದು ನಿಮ್ಮಯ ಮನೆಯೊಳುಂಡೊಡನೆ
ಪಿರಿದು ವಿಸ್ಮಿತರಾಗಿ ನೀಚೆಯಂ ಭಜಿಪನೇಕಾ ಪುರುಷನುಸುರೆಂದರು[೧೧]

ಚಿತ್ರವತಿ ಎಂಬ ಡೊಂಬರ ಕನ್ನೆ ಆ ಊರಿಗೆ ಬರುವವಳಿದ್ದಾಳೆಂದೂ, ಅವಳಲ್ಲಿ ಸೇವಾನಿರತನಾಗಿ ಶಿವಯೋಗಿಯೊಬ್ಬನಿದ್ದಾನೆಂದೂ, ಅವರನ್ನು ಕರೆತಂದು ಮನೆಯಲ್ಲಿ ಪೂಜೆ- ಪ್ರಸಾದ ಮಾಡಿಸಿದರೆ ಪಾಪ ಪರಿಹಾರವೆಂದು ಆ ದಂಪತಿಗಳಿಗೆ ಶಿವಧರ್ಮ ಮುನಿ ಸೂಚಿಸುತ್ತಾನೆ. ಅವರಿಗೆ ಆಶ್ಚರ್ಯ: ನೀಚ ಕುಲದವಳೊಂದಿಗೆ ಆ ಶಿವಯೋಗಿ ಏಕೆ ?

ಕೇಳು ಶಿವಜಾತನೆಂದೆಂಬ ಮುನಿಪನ ಶಿಷ್ಯ
ನಾಲಲಿತ ಮಂತ್ರಜಾತಂ ಸೇವೆಗೆಯ್ಯುತ್ತೆ
ಬಾಲನಾದಂದು ಮೊದಲಖಿಳ ವಿದ್ಯಾಭ್ಯಾಸಮಂ ಮಾಡಿ ಪೂರ್ಣಮಾಗೆ॥
ಮೇಲುಳ್ಳುದುಪದೇಶಿಸುವುದೆನಲು ಪೋಪನೆಂ
ದೋಲೈಸಿಕೊಳಲೆಳಸಿ ತನಗಳಿವು ಸಮನಿಸುವ
ಕಾಲದೊಳು ಶಿವಮಂತ್ರಮಂ ಪೇಳ್ವೆನೆಂದೆಣಿಸಿ ಎಲೆ ಮಗನೆ ಕೇಳು ನಿನಗೆ[೧೨] ॥

ಶಿವಜಾತನ ಶಿಷ್ಯ ಮಂತ್ರಜಾತ. ಚಿಕ್ಕಂದಿನಿಂದಲೂ ಮಂತ್ರಜಾತ ಶಿವಜಾತ ಗುರುವಿನಲ್ಲಿ ವಿದ್ಯಾಭ್ಯಾಸ ಪೂರೈಸುತ್ತ ಬೆಳೆದರೂ ಇನ್ನೂ `ಮೇಲುಳ್ಳ ಪರೇಶ' ಆಗಲಿಲ್ಲ. ಕೊನೆಗಾಲದಲ್ಲಿ ಹೇಳಬಹುದೆಂದು ನಿರೀಕ್ಷಿಸುತ್ತಿರುವಾಗ, `ಮನೋರಥಕರ ಸಿದ್ಧಿಯಾವೆ ನಿನಗೊರದಪೆವು' ಎಂದು ಶಿವಜಾತರು ಶಿಷ್ಯ ಮಂತ್ರಜಾತನಿಗೆ ಭರವಸೆ ನೀಡುತ್ತಾರೆ. ದೇಶಾಂತರ ತಿರುಗುತ್ತ ಅರಣ್ಯಪ್ರದೇಶವೊಂದಕ್ಕೆ ಬರುತ್ತಾರೆ. ಗುರುವಿಗೆ ಹಸಿವು ಬಾಯಾರಿಕೆ.ತಣಿಸಲೆಂದು ಜಲ -ಫಲ ತರಲು ಶಿಷ್ಯ ಕಾಡಿನಲ್ಲಿ ಹೋದಾಗ, ಗುರು ಶಿವಧ್ಯಾನನಿರತನಾಗಿ ತನ್ನ ಕೊನೆಗಾಲ ಸಮೀಪಿಸಿದುದನ್ನು ಕಂಡು, ಶಿಷ್ಯನಿಗೆ ತಾವಾಡಿದಂತೆ ಮಂತ್ರಬೋಧೆ ಮಾಡಬೇಕೆಂದರೆ ಅವನು ಸಮೀಪ ಇಲ್ಲವಾಗಿ ಆತ ಮರಳಿದಮೇಲೆ ಬಂದು ನೋಡಲೆಂದು ನೆಲದ ಮೇಲೆ ಮಂತ್ರ ಬರೆದು ಪ್ರಾಣಬಿಡುತ್ತಾನೆ.

---

೧೧. ಅದೇ, ಪು. ೪೮

೧೨. ಅದೇ, ಪು. ೪೯

ಅದೇ ವೇಳೆಯಲ್ಲಿ ಗಣೆ, ಮಿಣೆ, ಡೊಳ್ಳು, ಚಾಪೆಗಳೊಂದಿಗೆ ಹೊರಟಿದ್ದ ಡೊಂಬರ ಸಮೂಹ, ಸಮೂಹದೊಡತಿ ಚಿತ್ರವತಿ ಆ ಮಾರ್ಗವಾಗಿ ಹೋಗುವಾಗ ಶಿವೈಕ್ಯರಾಗಿ ಮರಕ್ಕೊರಗಿ ಕುಳಿತ ಶಿವಜಾತರನ್ನು ತಪ ಕುಳಿತವರೆಂದೇ ಭಾವಿಸಿ ನಮಸ್ಕರಿಸಿ ಮುಂದೆ ದಾಟುವಾಗ, ನೆಲದ ಮೇಲಿನ ಬರಹಗಳನ್ನು ನೋಡಿ ಬರೆದುಕೊಂಡು, ಯಾರಾದರೂ ಕಂಡಾರು ಎಂದು ನೆಲದ ಮೇಲಿನ ಅಕ್ಷರಗಳನ್ನು ಅಳಿಸಿ ಹೊರಟುಹೋಗುತ್ತಾಳೆ. ಎಲ್ಲ ವಿಷಯ ತಿಳಿದುಕೊಂಡ ಮಂತ್ರಜಾತ, ಡೊಂಬಿತಿ ಬರೆದುಕೊಂಡ ಗುರುಮಂತ್ರವನ್ನು ಅವಳಿಂದ ಪಡೆಯಲು ಈಗ ಹನ್ನೆರಡು ವರ್ಷಗಳಿಂದ ಅವಳ ಸೇವೆಯಲ್ಲಿದ್ದಾನೆ. ಸೇವೆ ಮುಗಿದು ಅವಳ ವಶದಲ್ಲಿರುವ ಗುರುಮಂತ್ರ ಅವನಿಗೆ ಪ್ರಾಪ್ತವಾಗಲು ಇನ್ನು ಹದಿನೈದು ದಿನಗಳು ಮಾತ್ರ ಉಳಿದಿವೆ. ಆ ಡೊಂಬರ ತಂಡ ಇಲ್ಲಿಗೆ ಬರಲಿದೆ. ನೀವು ಅವರನ್ನು ಕರೆದು ಮನೆಯಲ್ಲಿ ಪೂಜಾ-ಪ್ರಸಾದ ಮಾಡಿಸಿ ಪಾಪಮುಕ್ತರಾಗಿ ಎಂದು ಶಿವಧರ್ಮ ಹೇಳಿ ಹೋಗುತ್ತಾನೆ. ಅವರಾದರೂ ಹಾಗೆಯೇ ನಡೆದುಕೊಳ್ಳುತ್ತಾರೆ. ತನ್ನ ಸೇವೆಯಲ್ಲಿರುವ ಮಂತ್ರಜಾತ ಸಾಮಾನ್ಯನಲ್ಲ. ಶಿವಯೋಗಿ ಎಂಬುದು ಚಿತ್ರವತಿಗೆ ತಿಳಿದು, ತಾನು ಅವನಿಂದ ಸೇವೆ ಮಾಡಿಸಿಕೊಂಡ ಬಗ್ಗೆ ಕಳವಳಿಸುತ್ತಾಳೆ. ತಾನು ಬರೆದುಕೊಂಡಿದ್ದ ಮಂತ್ರವನ್ನು ಅವನಿಗೆ ಹಿಂದಿರುಗಿಸುತ್ತಾಳೆ.[೧೩] ಇಷ್ಟು ಕತೆ.

ಶಿವಜಾತ ಒಡೆಯರನ್ನು `ಭೈ. ಕಾ. ರತ್ನಾಕರ' 'ಜಾತ' ಒಡೆಯರೆಂದು ಕರೆದಿದ್ದರೆ, `ರಾಘವಾಂಕ ಚರಿತೆ' 'ಶಿವಜಾತ' ಒಡೆಯರೆಂದು ಸ್ಪಷ್ಟವಾಗಿ `ಶಿವಜಾತನೆಂದೆಂಬ ಮುನಿಪ') ಕರೆದಿರುವುದು ಮಹತ್ವದ್ದಾಗಿದೆ.[೧೪] ಗಮನಿಸುವ ಸಂಗತಿಯೆಂದರೆ, ಶಿವಜಾತರು ಇಲ್ಲಿ ಡೊಂಬರ ಚೆನ್ನಿ (ಇಲ್ಲಿ `ಚಿತ್ರವತಿ') ಯ ಬೆನ್ನುಹತ್ತಿ ಹೋಗುವುದಿಲ್ಲ ಮಾತ್ರವಲ್ಲ, ಅವಳು ನೋಡಲು ಅವರು ಬದುಕಿರುವುದೇ ಇಲ್ಲ. ಅವರು ಸತ್ತ ಅರಿವೂ ಇಲ್ಲದ ಆಕೆ, ತಪೋನಿರತರೆಂದು ಕೈಮುಗಿದು, ಮಂತ್ರ ನೋಡಿ ಕುತೂಹಲಿಗಳಾಗಿ ಬರೆದುಕೊಂಡು ಹೊರಟುಬಿಡುತ್ತಾಳೆ. ಇಲ್ಲಿಗೆ ಮುಗಿಯಿತು ಇಬ್ಬರ ಸಂಬಂಧ. ಸತ್ತೂ ಆತ ಕಣ್ಣೆತ್ತಿ ನೋಡದ ಈಕೆ.

ಚಿತ್ರವತಿ ಅರ್ಥಾತ್ ಚೆನ್ನಮ್ಮ ತಾನು ಮಂತ್ರ ಬರೆದುಕೊಂಡವಳು ಬರಹವನ್ನು ಅಳಿಸದೆ ಹೋಗಿದ್ದರೆ, ಶಿವಜಾತನ ಸಿಷ್ಯ ಮಂತ್ರಜಾತ ಏನೆಲ್ಲ ತೊಂದರೆಗೆ, ವೇಷ ಮರೆಸಿ ಅವಳ ಸೇವೆಗೆ ನಿಲ್ಲುವ ಪರಿಸ್ಥಿತಿ ಬರುತ್ತಿರಲಿಲ್ಲ. ಗುರುವಿನ ಮಂತ್ರ ಮರಳಿ ಪಡೆಯಲು ಆತ ವಹಿಸಿದ ಶ್ರದ್ಧೆ, ಸಹನೆ ಅಪೂರ್ವವಾಗಿ ಕಾಣುತ್ತವೆ.

---

೧೩. ಅದೇ, ಪು. ೫೨ -೮೧

೧೪. ಕರಡಕಲ್ಲಿನಲ್ಲಿ ಈಗ `ಶಿವಜಾತ ಒಡೆಯರ' ಪಾಳುಬಿದ್ದ `ಮಠ ಇರುವ ಹಾಗೆ, `ಶಿವಜಾತ' ಹೆಸರಿಡುವುದು ಈ ಗ್ರಾಮದಲ್ಲಿ ಸಾಮಾನ್ಯ; ಭಿಲ್ಲಮರಾಜ, ಬಿಲ್ಲಮಪರ್ವತ ರೆಡ್ಡಿ ಇತ್ಯಾದಿ ಹೆಸರು ಕೂಡ.

ಚೆನ್ನಮ್ಮನ ಹೆಸರು ಈ ಕತೆಯಲ್ಲಿ ಚಿತ್ರವತಿ ಎಂದು ಆಗಿರುವಾಗಲೂ ಈಕೆ ಚೆನ್ನಮ್ಮ ಎಂಬುದೇ ಸತ್ಯ; ಚನ್ನಮ್ಮ ಎಂಬುದೇ ಇವಳ ಮೂಲ ಹೆಸರಾಗಿರಬೇಕು ಎನ್ನಲು ಕರಡಿಕಲ್ಲು ಸ್ಥಳಪುರಾಣ, ಭೈ.ಕ. ರತ್ನಾಕರ ಪ್ರಬಲ ಸಾಕ್ಷಿಯಾಗಿವೆ. ಈಕೆಯೊಂದಿಗೆ ದೇಶಾಂತರ ತಿರುಗಿದವನು `ರಾಘವಾಂಕ ಚರಿತೆ' ಪ್ರಕಾರ ಮಂತ್ರಜಾತನೇ ಹೊರತು ಶಿವಜಾತನಲ್ಲ. ಹಾಗೆಂದು ಮಂತ್ರಜಾತನೇ ಶಿವಜಾತನೆಂದು ನಾವು ತರ್ಕಿಸುವ ಕಾರಣವಿಲ್ಲ. ಶಿವಜಾತನ ಹೆಸರು ಮಾತ್ರ ಜಾತನಿಗೆ ಭಿನ್ನವಾಗಿ ಈ ಕಾವ್ಯದಲ್ಲಿ ನಿಸ್ಸಂದೇಹವಾಗಿ ಬಳಕೆಯಾಗಿದೆ. ಶಿವಜಾತನ ಶಿಷ್ಯ ಮಂತ್ರಜಾತ ಎಂಬಾತನೊಬ್ಬ ಆಗಿಹೋಗಿರಬೇಕು.

ಇಲ್ಲಿ ಬಿಲ್ಲಮರಾಜನ ಉಲ್ಲೇಖವಿಲ್ಲದಿರುವುದು, ಮಂತ್ರಜಾತನಿಗೆ ಪ್ರಾಮುಖ್ಯತೆ ಸಂದಿರುವುದು, ಶಿವಜಾತನ ಐಕ್ಯ ಪ್ರಸಂಗ ಬಂದಿರುವುದು ಇವು ಶಿವಜಾತ ಒಡೆಯರ ಕೊನೆಗಾಲದ ಬಹುಶಃ ಕರಡಿಕಲ್ಲು ಪುರವನ್ನು ಬಿಟ್ಟು ದೇಶಾಂತರ ಹೊರಟ ವೇಳೆಯಲ್ಲಿ ನಡೆದ ಘಟನೆಗಳಾಗಿರಬೇಕು. ಮೇಲಿನ ಕತೆಯಲ್ಲಿ ಶಿವಜಾತರ ಐಕ್ಯ ಪ್ರಸಂಗ ದೇಶಾಂತರ ಕಾಲದಲ್ಲಿ ಕಾಡಿನಲ್ಲಿ ವಿಶ್ರಮಿಸುತ್ತಿದ್ದಾಗ ಎಂದು ಬಂದಿದೆ. ಈ ವೇಳೆಯಲ್ಲಿ ಡೊಂಬರ ಚಿತ್ರವತಿ (ಚೆನ್ನಮ್ಮ)ಯ ಪ್ರವೇಶವಾಗುತ್ತದೆ. ಇಲ್ಲಿ ಈಕೆ ಶಿವಜಾತರಿಗೆ ಸಂಪೂರ್ಣ ಅಪರಚಿತಳು. ಆದರೆ ಕರಡಕಲ್ಲಿನ ಸ್ಥಳ ಪುರಾಣ, ಭೈ.ಕಾ. ರತ್ನಾಕರದ ಹೇಳಿಕೆಗಳು ಇದಕ್ಕೆ ವಿರೋಧವಾಗಿವೆ. ಚೆನ್ನಮ್ಮ ಶಿವಜಾತರೊಂದಿಗೆ ದಿನಗಳೆದುದಕ್ಕೆ ಅವು ಸಾಕ್ಷಿಯಾಗಿವೆ. ಶಿವಜಾತರು ಶಿಷ್ಯಮಂತ್ರಜಾತನೊಂದಿಗೆ ದೇಶಾಂತರದಲ್ಲಿದ್ದಾಗಲೂ ಅವಳು ಜೊತೆ ಯಲ್ಲಿಯೇ ಇದ್ದಳೆಂದು ಭಾವಿಸುವುದು ಸರಿಯಾಗುತ್ತದೆ. ಚೆನ್ನಮ್ಮ ಗುರುಪತ್ನಿ ಎಂದೇ ಮಂತ್ರಜಾತ ಆಕೆಯನ್ನು ಹಿಂಬಾಲಿಸಿದುದು, ಸೇವೆಯಲ್ಲಿದ್ದುದು ಎಂದು ಊಹಿಸುವುದು ಸರಿಯಾಗುತ್ತದೆ. `ರಾಘವಾಂಕ ಚರಿತೆ' ಹೇಳುವಂತೆ, `ಪಂಚಾಕ್ಷರಿ ಮಂತ್ರ 'ವಷ್ಟಕ್ಕೇ ಮಂತ್ರಜಾತ ಸೇವೆಯಲ್ಲಿ ಆಕೆಯೊಂದಿಗೆ ಲೋಕಸುತ್ತಿದ ಎಂಬುದು ವಿಚಿತ್ರವಾಗಿ ಕಾಣುತ್ತದೆ. ಮಂತ್ರದ ಕತೆ `ಮಂತ್ರಜಾತ' ಎಂಬ ಹೆಸರಿನ ಮೇಲೆ ಹುಟ್ಟಿಕೊಂಡ ಆಮೇಲಿನ ಕತೆ ಎನಿಸುತ್ತದೆ. ಚೆನ್ನಮ್ಮನ ಸೇವೆಯಲ್ಲಿ ಮಂತ್ರಜಾತ ಇರುವುದನ್ನು ನೋಡಿದರೆ, ಅವಳೊಬ್ಬ ಉತ್ಕಟ ಶಿವಭಕ್ತಳೇ ಇರಬೇಕು. ಅವಳ ಭಕ್ತಿಯ ಆಕರ್ಷಣೆಯೇ ಮುಖ್ಯವಾಗಿ ಶಿವಜಾತರನ್ನು ಸೆಳೆಯಿತೆಂದರೆ ಬಹುಶಃ ತಪ್ಪಾಗಲಾರದು. ಏನಿದ್ದರೂ ಆಕೆ ಹೆಣ್ಣು. ಹೆಣ್ಣಿಗೊಲಿದ ಶಿವಯೋಗಿಗೆ `ಯತಿ ಮಾರ್ಗದೂರ' ಫುಲ್ಲಶರ ಪಾಪ' ಸಾಮಾನ್ಯ ಅಪವಾದಗಳೇ ಅಲ್ಲವೆ?

●●

ಎಂ. ಆರ್. ಶ್ರೀ. ಅವರ

ವೀರಶೈವ ಸಾಹಿತ್ಯದ ಹಿನ್ನೆಲೆ

-ಸಂ. ಡಾ. ನಗುವನಹಳ್ಳಿ ರತ್ನ

ಕನ್ನಡ ಸಾಹಿತ್ಯದ ತ್ರಿವೇಣಿಗಳಲ್ಲಿ ವೀರಶೈವ ಸಾಹಿತ್ಯ ಎರಡನೆಯದು. ಕನ್ನಡ ನಾಡಿನ ಜನಜೀವನ ಮತ್ತು ಸಂಸ್ಕೃತಿಗಳ ಮೇಲೆ ಈ ಸಾಹಿತ್ಯ ಪ್ರಬಲವಾದ ಪ್ರಭಾವವನ್ನು ಬೀರಿದೆ. ಜೈನ ಮತ ಕನ್ನಡ ನಾಡಿನಲ್ಲಿ ಹುಟ್ಟಿದುದಲ್ಲ. ಅದರ ತ್ರಿಷಷ್ಟಿ ಶಲಾಕಾಪುರುಷರಲ್ಲಿ ಯಾರೂ ಬಹುಶಃ ಕನ್ನಡ ನಾಡಿನಲ್ಲಿ ಅವತರಿಸಿದವರಲ್ಲ. ಆದರೆ ಕನ್ನಡನಾಡು ಜೈನಮತಕ್ಕೆ ಉದಾರವಾದ ಆಶ್ರಯವನ್ನು ಕೊಟ್ಟಿತು. ತಮಿಳುನಾಡಿನಲ್ಲಿಯೂ ಆಂಧ್ರದೇಶದಲ್ಲಿಯೂ ಜೈನಮತ ನಾಮಾವಶೇಷವಾಗುತ್ತಿದ್ದಾಗ ಕನ್ನಡ ನಾಡಿನಲ್ಲಿ ಅದು ಹರಡುತ್ತಲಿತ್ತು. ಆದರೆ ವೀರಶೈವ ಮತ ಕನ್ನಡನಾಡಿಗೆ ವಿಶೇಷವಾದುದು. ಅದು ತಲೆಯೆತ್ತಿದ್ದು ಕನ್ನಡನಾಡಿನಲ್ಲಿ; ಅದನ್ನು ಜೀರ್ಣೋದ್ಧಾರ ಮಾಡಿದವರು ಅಚ್ಚ ಕನ್ನಡಿಗರು; ಕನ್ನಡ ನಾಡಿನಲ್ಲಿಯೇ ಹುಟ್ಟಿ, ಕನ್ನಡ ನಾಡಿನಲ್ಲಿಯೇ ತಮ್ಮ ಕಾರ್ಯಕಲಾಪಗಳನ್ನು ನಡೆಸಿ, ಕನ್ನಡ ನುಡಿಯಲ್ಲಿಯೇ ಸಾಕ್ಷಾತ್ತಾಗಿ ಮತಪ್ರಚಾರಮಾಡಿ ಕಡೆಗೆ ಕನ್ನಡನಾಡಿನಲ್ಲಿಯೇ ಐಕ್ಯರಾದರು. ಆ ಶರಣರನ್ನು ಆಗಿನ ಕಾಲದ ಕನ್ನಡಿಗರು ಕಣ್ಣಾರೆ ನೋಡಿದರು, ಅವರ ಪ್ರಭಾವಕ್ಕೂ ಒಳಗಾದರು. ಆ ಶರಣರಾದರೊ ಪ್ರಚಂಡವ್ಯಕ್ತಿಗಳು, ನಾಡಿನ ಜನಜೀವನದಲ್ಲಿ ದೊಡ್ಡ ಕಾಂತ್ರಿಯನ್ನುಂಟುಮಾಡಿದವರು. ಆದುದರಿಂದ ವೀರಶೈವ ಸಾಹಿತ್ಯದಲ್ಲಿ ಮತಪ್ರಚಾರದ ಉರುಲು ಉತ್ಸಾಹ ಉದ್ರೇಕಗಳು ಹೆಚ್ಚಾಗಿ ಕಂಡುಬರುತ್ತವೆ.

ವೀರ ಶೈವಕ್ರಾಂತಿಯ ಹಿನ್ನೆಲೆಯನ್ನು ತಿಳಿಯಬೇಕಾದರೆ ಶೈವಮತ ಚರಿತ್ರೆಯನ್ನು ಸಂಕ್ಷೇಪವಾಗಿಯಾದರೂ ತಿಳಿಯುವುದು ಆವಶ್ಯಕ. ಭರತಖಂಡದ ಮತಗಳಲ್ಲಿ ಶೈವಮತ ಬಹುಶಃ ಅತ್ಯಂತ ಪ್ರಾಚೀನ ವಾದುದೆಂದು ಮೊಹೆಂಜೊದಾರೊ ಮತ್ತು ಹರಪ್ಪ ಪ್ರಾಂತಗಳ ಭೂಗರ್ಭ ಸಂಶೋಧನೆಗಳಿಂದ ವ್ಯಕ್ತವಾಗುತ್ತದೆ. ಶೈವ ಮತಕ್ಕೆ ಮುಖ್ಯವಾಗಿ ಶೈವಾಗಮಗಳೂ ಶೈವ ಪುರಾಣಗಳೂ ಆಧಾರವಾಗಿವೆ. ಶೈವ ಮತ ವೇದಗಳಲ್ಲಿಯೇ ಅಡಕವಾಗಿರುವುದೆಂದೂ ಲಿಂಗಧಾರಣೆಯನ್ನು ಲಿಂಗಪೂಜೆಯನ್ನು ವೇದಗಳು ಹೇಳುತ್ತವೆಯೆಂದೂ ಶೈವ ಮತವು ದ್ರಾವಿಡರಿಗೆ ಮಾತ್ರ ವಿಶಿಷ್ಟವಾದುದಲ್ಲವೆಂದೂ ಅಭಿಪ್ರಾಯ ಪಡುವ ಪಂಡಿತರೂ ಇದ್ದಾರೆ.

ವೇದಮತದ ಪ್ರಭಾವ ಶೈವ ಮತದ ಮೇಲೆ ಬಿದ್ದು ವೇದಗಳ ರುದ್ರನೂ ಆಗಮಗಳ ಶಿವ ಒಬ್ಬನೇ ಆಗಿ ಮಾರ್ಪಟ್ಟು ವೇದಾಗಮಗಳೆರಡನ್ನೂ ಆಧಾರವಾಗಿ ಕೊಡುವ ಒಂದು ಸಮಾಧಾನ ಸ್ಥಿತಿ ಏರ್ಪಟ್ಟಿತೆಂದು ಹೇಳುವ ಪಂಡಿತರೂ ಇದ್ದಾರೆ. ಪ್ರಾಚೀನ ಶೈವ ಮತದಲ್ಲಿ ಲಿಂಗಪೂಜೆ ಮುಖ್ಯವಾದುದು. ಸಣ್ಣಲಿಂಗಗಳನ್ನು ಮೈಮೇಲೆ ಧರಿಸುತ್ತಿದ್ದುದೂ ಉಂಟು. ಅದರಲ್ಲಿ ಅಗ್ನಿ ಪ್ರತಿಷ್ಠಾಪನೆ, ಯಜ್ಞಯಾಗಗಳು ಇರಲಿಲ್ಲ. ದೇವಸ್ಥಾನಗಳಲ್ಲಿ ಯಾರುಬೇಕಾದರೂ ಹೋಗಿ ಪೂಜೆ ಮಾಡಬಹುದಾದ ಸ್ವಾತಂತ್ರ್ಯವೂ ಇದ್ದಂತೆ ತೋರುತ್ತದೆ. ಪ್ರಾಚೀನ ಶೈವರಲ್ಲಿ ವರ್ಣ ವ್ಯತ್ಯಾಸಗಳಿದ್ದಂತೆ ತೋರುವುದಿಲ್ಲ. ಮಹಾಭಾರತದ ಶಾಂತಿಪರ್ವದಲ್ಲಿ ಒಂದು ಪಾಶುಪತ ಪಂಗಡದ ವಿಚಾರವನ್ನು ಹೇಳಿದೆ. ``ವೇದಗಳನ್ನು ತ್ಯಜಿಸಿ ಮುಖತಲೆಗಳನ್ನು ಬೋಳಿಸಿಕೊಂಡು ಕಾಷಾಯ ವಸ್ತ್ರಗಳನ್ನು ಧರಿಸಿ ಭಿಕ್ಷುಕರಾಗಿ ತಿರುವುವಂಥವರು*`` ವರ್ಣ ವ್ಯವಸ್ಥೆಗೆ ಮತ್ತು ಶಾಸ್ತ್ರಗಳ ನಿಯಮಗಳಿಗೆ ವಿರುದ್ಧ ವಾಗಿದೆಯೆಂದು ತಿಳಿಗೇಡಿಗಳಿಂದ ತಿರಸ್ಕರಿಸಲ್ಪಟ್ಟಿರೂ ಬಲ್ಲವರು (ಗತಾಂತ) ಅದನ್ನು ಬಣ್ಣಿಸುವರು. ಅದು ನಿಜವಾಗಿಯೇ ವರ್ಣ ವ್ಯವಸ್ಥೆಯುಳ್ಳದ್ದಕ್ಕೂ ಮಿಗಿಲಾದುದು* ಎಂದು ಆ ಪಂಡಗದ ಕೆಲವು ಲಕ್ಷಣಗಳಿವೆ. ವೇದಮತದಲ್ಲಿ ವರ್ಣವ್ಯತ್ಯಾಸಗಳುಂಟು. ಆದರೆ ಈಗಿನಷ್ಟು ಕಟ್ಟು ನಿಟ್ಟಾಗಿರಲಿಲ್ಲವೆಂದು ಹೇಳಬಹುದಾಗಿದೆ. ವೈದಿಕರಲ್ಲಿ ಷೋಡಶ ಸಂಸ್ಕಾರಗಳು, ಪಂಚಸೂತಕಗಳು ಉಂಟು. ಅಗ್ನಿ ಪ್ರತಿಷ್ಠಾಪನೆ, ಯಜ್ಞಯಾಗಗಳು ಉಂಟು. ವೇದಮತದ ಪ್ರಭಾವದಿಂದ ಶೈವ ಮತದಲ್ಲಿ ಹಲವು ವೈದಿಕಾಚಾರಗಳೂ ಪದ್ಧತಿಗಳೂ ಸೇರಿ ಕೊಂಡಿರಬಹುದು. ವರ್ಣವ್ಯತ್ಯಾಸಗಳು ಕಾಣಿಸಿಕೊಂಡಿರಬಹುದು. ಇವುಗಳಿಗೆ ಹಿಂದೆ ಎರಡನೆಯದಾಗಿ ಶೈವಮತ ಮತ್ತು ವೈಷ್ಣವ ಮತ ಇವೆರಡರಲ್ಲಿಯೂ ಭಕ್ತಿ ಮಾರ್ಗ ಪ್ರಬಲವಾದ ಸ್ಥಾನವನ್ನು ಪಡೆದಿದೆ. ಭಗವಂತನು ಸೌಮ್ಯನೆಂದೂ, ಭಕ್ತಿಗೆ ಸುಲಭವಾಗಿ ಒಲಿಯುವನೆಂದೂ, ಸ್ತ್ರೀಪುರುಷರೆಂಬ ಭೇದವಿಲ್ಲದೆ ಜಾತಿ ಮತಗಳೆಂಬ ವ್ಯತ್ಯಾಸಮಾಡದೆ ಎಲ್ಲರಿಗೂ ಮುಕ್ತಿಯನ್ನು ಕರುಣಿಸುವನೆಂದೂ ಈ ಪಂಥಸಾರುತ್ತದೆ. ಭಗವಂತನು ಪ್ರತ್ಯಕ್ಷನಾಗುತ್ತಾನೆ. ಭಕ್ತರೊಡನೆ ಮಾತನಾಡುತ್ತಾನೆ, ಅವರನ್ನು ಕಷ್ಟಗಳಿಂದ ಪಾರುಮಾಡಿಸುತ್ತಾನೆ, ಭಕ್ತಪರಾಧೀನನಾಗಿ ಉದ್ಧಾರಮಾಡುತ್ತಾನೆ ಎಂಬ ನಂಬಿಕೆಗಳು ಬೇರೂರಿ ಅವಕ್ಕೆ ತಕ್ಕ ಭಗವದ್ಭಕ್ತರ ಕಥೆಗಳು ಹೇರಳವಾಗಿ ಬೆಳೆದಿದೆ. ಚತುರ್ವೇದ ಪಾರಂಗತನಿಗಿಂತ ಭಕ್ತನೇ ಹೆಚ್ಚು; ಭಕ್ತನೇ ಭಗವಂತನಿಗೆ ಹೆಚ್ಚು ಪ್ರಿಯನಾದವನು: ಶ್ವಪಚನಾದರೂ, ಸರಿಯೆ ಭಕ್ತನಾಗಿದ್ದರೆ ಬ್ರಾಹ್ಮಣನಿಗಿಂತ ಮೇಲು ಎಂಬ ಭಾವನೆಗಳು ಭಕ್ತಿಪಂಥದವರಲ್ಲಿವೆ.

---

* ಕನ್ನಡ ನಾಡಿನ ಚರಿತ್ರೆಯಲ್ಲಿ ಡಾ. ನಂದಿಮಠರವರ "ಕರ್ನಾಟಕದ ಧರ್ಮಗಳು" ಪುಟ ೨೦೩

ಶೈವ ಮತದಲ್ಲಿ ಹಲವು ಪ್ರಭೇದಗಳಿವೆ. ಅವುಗಳಲ್ಲಿ ಕೆಲವು ಸೌಮ್ಯರೂಪವಾದುವು, ಕೆಲವು ಘೋರರೂಪವಾದುವು. ಕಾಶ್ಮೀರ ಪ್ರಾಂತದಲ್ಲಿ ವಸುಗುಪ್ತನು ೯ನೆಯ ಶತಮಾನದಲ್ಲಿ ಶೈವಾಗಮಗಳ ಆಧಾರದ ಮೇಲೆ ತ್ರಿಕ ಧರ್ಮವನ್ನು ಸ್ಥಾಪಿಸಿದನು. ಇದನ್ನೇ ಕಾಶ್ಮೀರ ಶೈವವೆಂದೂ ಕಾಶ್ಮೀರದ ಶಿವಾದ್ವೈತ ಸಿದ್ಧಾಂತವೆಂದೂ ಹೇಳುತ್ತಾರೆ. ಶಿವನು ಶ್ರೀಕಂಠನಾಗಿ ದೂರ್ವಾಸರಿಗೆ ಕಾಣಸಿಕೊಂಡು ಲೋಕದಲ್ಲಿ ಶೈವಸಿದ್ಧಾಂತವನ್ನು ಹರಡಬೇಕೆಂದು ಅಪ್ಪಣೆ ಮಾಡಿದನು. ದೂರ್ವಾಸರು ``ತ್ರ್ಯಂಬಕ, ಅಮರ್ದಕ, ಶ್ರೀನಾಥರೆಂದು ಮೂವರು ಮಾನಸಪುತ್ರರನ್ನು ನಿರ್ಮಿಸಿ, ಅಭೇದ, ಭೇದ, ಭೇದಾಭೇದವೆಂದು ಮೂರು ರೂಪಗಳಲ್ಲಿರುವ ಅನಾದಿ ಮತ್ತು ನಿತ್ಯವಾದ ಶೈವ ಧರ್ಮವನ್ನು ಹಬ್ಬಿಸಬೇಕೆಂದು ಅವರಿಗೆ ಅಪ್ಪಣೆಯನ್ನಿತ್ತನು. ತ್ರ್ಯಂಬಕನು ಅಭೇದ ಶೈವವನ್ನು ಅಮರ್ದಕನು ಭೇದ ಶೈವವನ್ನು ಶ್ರೀನಾಥನು ಭೇದಾಭೇದ ಶೈವವನ್ನು ಬೋಧಿಸಿದರು. ತ್ರ್ಯಂಬಕನಿಂದ ಹರಡಿಸಲ್ಪಟ್ಟ ಅಭೇದ ಅಥವಾ ಅದ್ವಯ ಶೈವವು ತ್ರಿಕವೆಂದು ಪ್ರಸಿದ್ಧ ಹೊಂದಿತು'.

ಪಶು, ಪಾಶ ಮತ್ತು ಪತಿ ಈ ಮೂರು ತ್ರಿಕ. ಪಶು ಎಂದರೆ ಜೀವಾತ್ಮ, ಪಾಶ ಎಂದರೆ ಜೀವಾತ್ಮನಾಗಿರುವ ಬಂಧನಗಳು, ಈ ಬಂಧನಗಳನ್ನು ಬಿಡಿಸಿ ಮುಕ್ತಿಯನ್ನು ಕೊಡುವವನು ಶಂಕರಾಚಾರ್ಯರ ಅದ್ವೈತಕ್ಕೆ ಕೆಲವು ವಿಚಾರಗಳಲ್ಲಿ ಭಿನ್ನವಾಗಿ, ಪರವಸ್ತುವಿನಲ್ಲಿ `ಸಮಾವೇಶ' ಹೊಂದುವುದೇ ಮುಕ್ತಿ ಎಂದು ಕಾಶ್ಮೀರ ಶೈವ ಸಿದ್ಧಾಂತ ತಿಳಿಸುತ್ತದೆ. ಸ್ಪಂದಶಾಸ್ತ್ರವೂ ಪ್ರತ್ಯಾಭಿಜ್ಞಾಶಾಸ್ತ್ರವೂ ತರ್ಕಬದ್ಧವಾಗಿ ಸಿದ್ಧಾಂತದ ವಿವರಣೆಯನ್ನು ಮಾಡಿರುತ್ತವೆ. ಕಾಶ್ಮೀರಶೈವದಲ್ಲಿ ಕರ್ಮಜ್ಞಾನ ಮತ್ತು ಯೋಗಗಳಿಗೆ ಪ್ರಾಶಸ್ತ್ಯವುಂಟು: ಭಕ್ತಿಗೆ ಪ್ರಾಶಸ್ತ್ಯವಿಲ್ಲ. ಕಾಶ್ಮೀರಶೈವದ ಕೆಲವು ಮಠಗಳು ಕನ್ನಡ ನಾಡಿನಲ್ಲಿಯೂ ಇದ್ದುವು. ಗೋದಾವರೀ ತೀರದಲ್ಲಿ ಅಮರ್ದಕ ಮಠವೊಂದು ಇತ್ತು. ಗೋಳಕೀಮಠದ ಆಚಾರ್ಯರು ಕುಲಚಾರ್ಯ ಚಕ್ರವರ್ತಿಗಳ ದೀಕ್ಷಾ ಗುರುಗಳಾಗಿದ್ದರು.

ಬಂಗಾಳ ಪ್ರಾಂತದಲ್ಲಿ ಶೈವ ಮತ ಪ್ರಚಾರದಲ್ಲಿದ್ದು ಶಾಕ್ತಮತದೊಡನೆ ನಿಕಟ ಸಂಬಂಧವನ್ನು ಪಡೆದಿತ್ತು. ಆಂಧ್ರದೇಶದಲ್ಲಿ ಶೈವ ಮತದ ಮೇಲೆ ವೇದಮತದ ಪ್ರಭಾವ ಹೆಚ್ಚಾಗಿ ಬಿದ್ದಿತು. ಆದ್ದರಿಂದ ಯಜ್ಞೋಪವೀತಧಾರಣಾದಿ ವೈದಿಕ ಸಂಪ್ರದಾಯಗಳು ಜೆರಕೆಯಾಗಿ ಲಿಂಗಧಾರಣದೊಂದಿಗೆ ಉಪನಯನ ಸಂಸ್ಕಾರವೂ ಸೇರಿಕೊಂಡಿತು. ಆರಾಧ್ಯ ಬ್ರಾಹ್ಮಣರು ತಲೆಯೆತ್ತಿದರು. ತಮಿಳುನಾಡಿನಲ್ಲಿ ಶೈವ ಮತ ಪ್ರಬಲವಾಗಿತ್ತು. ಚೋಳರಾಜರು

---

* ಶೈವಧರ್ಮಗಳು' ಪುಟ ೭, ಶಿವಾನುಭವ ಪತ್ರಿಕೆ, ನವೆಂಬರ್ ೧೯೨೬, ಪ್ರಭುಲಿಂಗ ಲೀಲೆಯಲ್ಲಿ ದೂರ್ವಾಸರು ಬರುತ್ತಾರೆ. ಋಷಿಗಳಿಗೆ ಜ್ಞಾನೋಪದೇಶ ಮಾಡುತ್ತಾರೆ.

ವೀರನಿಷ್ಠೆಯಿಂದ ಶೈವಮತವನ್ನು ಪಾಲಿಸಿಕೊಂಡು ಬರುತ್ತಿದ್ದರು. ಸಂಸ್ಕೃತಾಭಿಮಾನಿಗಳಾದ ಈಶಾನಶಿವ, ಅಘೋರ ಶಿವ, ಮೊದಲಾದವರು ಸಿದ್ಧಾಂತ ರಚನೆಮಾಡಿರುವುದು ಒಂದು ಕಡೆ ನಮಗೆ ಕಂಡು ಬರುತ್ತದೆ. ಇವರು ಬರೆದುದರ ಸಾರವನ್ನು ತಮಿಳಿನಲ್ಲಿ ಪ್ರಚಾರ ಮಾಡಿದ ತಿರುನಂದಿಯಾರ್, ಮೆಯ್‌ಕಂಡದೇವರ್, ಅರಳ್‌ನಂದಿ, ಮೊದಲಾದವರು ಇನ್ನೊಂದು ಕಡೆ ನಮಗೆ ಕಂಡು ಬರುತ್ತಾರೆ. ಆದರೆ ಕನ್ನಡ ನಾಡಿನಲ್ಲಾದ ಕ್ರಾಂತಿ ಈ ಎರಡು ಪಂಗಡದವರ ಪ್ರಭಾವದಿಂದಲ್ಲ ಎಂದು ಹೇಳಬೇಕಾಗಿದೆ. ತಮಿಳುನಾಡಿನಲ್ಲಿ ಭಕ್ತಿಪಂಥಕ್ಕೆ ಸೇರಿದ ಅರುವತ್ತಮೂವರು ಪುರಾತನರು ಇದ್ದಾರೆ. ಈ ಪುರಾತನ ಕಥೆಗಳೂ ಅವರು ಹಾಡಿದ ದೇವರ ಕೀರ್ತನೆಗಳೂ ಜನರಲ್ಲಿ ಪ್ರಚಾರವಾಗಿದ್ದುವು. ಈ ಪುರಾತನರಲ್ಲಿ ನಾನಾ ಜಾತಿಯವರು ಸೇರಿದ್ದಾರೆ, ಗಂಡಸರೂ, ಹೆಂಗಸರೂ ಸೇರಿದ್ದಾರೆ. ಇವರುಗಳಲ್ಲಿ ಹಲವರು ಏಳನೆಯ ಮತ್ತು ಎಂಟನೆಯ ಶತಮಾನದವರು; ಎಲ್ಲರೂ ಬಹುಶಃ ಹನ್ನೆರಡನೆಯ ಶತಮಾನಕ್ಕೆ ಹಿಂದಿನವರು. ಇವರ ಕಥೆಗಳನ್ನೆಲ್ಲ ಸಂಗ್ರಹಿಸಿ `ಪೆರಿಯ ಪುರಾಣ'ವನ್ನು ಶೇಕ್ಕಿಳಾರನು ಬರೆದಿದ್ದಾನೆ. ಕನ್ನಡ ನಾಡಿನ ಶೈವರ ಮೇಲೆ ಈ ಪುರಾತನರು ಹೆಚ್ಚಾಗಿ ಪ್ರಭಾವವನ್ನು ಬೀರಿದ್ದಾರೆ. ಕನ್ನಡನಾಡಿನಲ್ಲಿ ಆಗ ಲಕುಲೀಶ ಪಾಶುಪತ, ಕಾಳಾಮುಖ, ನಾಥಪಂಥ, ಕಾಪಾಲಿಕ ಮೊದಲಾದ ಪಂಗಡಗಳು ಶುದ್ಧ ಶೈವ, ಅನುಶೈವ, ಮಾರ್ಗಶೈವಾದಿ ಭೇದಗಳೂ ಇದ್ದುವೆಂದು ಕಾಣುತ್ತದೆ. ಹೆಚ್ಚಾಗಿ ಲಕುಲೀಶ ಪಾಶುಪತರೂ, ಬಹುಶಃ ಅವರಲ್ಲಿ ಒಳಪಂಗಡವಾದ ಕಳಾಮುಖರೂ ಕನ್ನಡನಾಡಿನಲ್ಲಿ ಪ್ರಬಲರಾಗಿದ್ದರು. ಕಾಳಾಮುಖ ಗುರುಗಳು ರಾಜಗುರುಗಳಾಗಿಯೂ ಇದ್ದ ಉದಾಹರಣೆಗಳು ಸಿಕ್ಕಿವೆ.

ಆಗಮಗಳಲ್ಲಿ ಪ್ರತಿಪಾದಿತವಾದ ಪಶು, ಪಾಶ ಮತ್ತು ಪತಿ ಎಂಬ ಮೂರು ಪದಾರ್ಥಗಳು ಶೈವಮತದ ಶಾಖೆಗಳಿಗೆಲ್ಲ ಸಾಮಾನ್ಯವಾದರೂ ಮುಕ್ತಿಯ ವಿಚಾರದಲ್ಲಿ ಭಿನ್ನಾಭಿಪ್ರಾಯಗಳೂ, ಆಚರಣೆಗಳ ವಿಷಯದಲ್ಲಿ ವ್ಯತ್ಯಾಸಗಳೂ ಕಂಡು ಬರುತ್ತವೆ. ಪಾಶುಪತರು ದಿನಕ್ಕೆ ಮೂರು ಬಾರಿ ವಿಭೂತಿಯಲ್ಲಿ ಸ್ನಾತ ಮಾಡುವುದು, ವಿಭೂತಿಯಲ್ಲಿ ಮಲಗುವುದು, `ಅಹಾ, ಆಹಾ' ಎಂದು ಧ್ವನಿ ಮಾಡುವುದು, ಇಷ್ಟ ದೇವತೆಯ ಸ್ತೋತ್ರವನ್ನು ಗಟ್ಟಿಯಾಗಿ ಹಾಡುವುದು, ಶಾಸ್ತ್ರ ರೀತಿಯಾಗಿ ಅಥವಾ ಇನ್ನಾವ ರೀತಿಯಲ್ಲಾದರೂ ಕುಣಿಯುವುದು, `ಹುಡು, ಹುಡು' ಎಂದು ಧ್ವನಿ ಮಾಡುವುದು, ನಮಸ್ಕಾರಾದಿಗಳು, ಶಿವನಾಮಸ್ಮರಣೆ, ಮೊದಲಾದುವನ್ನೆಲ್ಲ ಆಚರಣೆಯಲ್ಲಿಟ್ಟುಕೊಂಡಿದ್ದರು. ಜನರಿರುವ ಕಡೆಗಳಲ್ಲಿ ಮೇಲೆ ಹೇಳಿದ ಕರ್ಮಗಳಾವುದನ್ನೂ ಮಾಡಕೊಡದು ಇವುಗಳಲ್ಲಿ ಹುಚ್ಚರಂತೆ ನಟಿಸುವುದು, ಕಾಮುಕರಂತೆ ವರ್ತಿಸುವುದು, ಅರ್ಥವಿಲ್ಲದ ಸದ್ದುಗಳನ್ನು ಮಾಡುವುದು, ಪಾರ್ಶ್ವವಾಯು ಪೀಡಿತರಂತೆ ಅಂಗಾಂಗಗಳನ್ನು ಚಲಿಸುವುದು, ಇತರರ ಎಂಜಲನ್ನು ತಿನ್ನುವುದು ಮುಂತಾದುವನ್ನೂ ಮಾಡುವಂತೆ ಅವರಲ್ಲಿ ವಿಧಿಗಳುಂಟು.

ಕಳಾಮುಖರು ಹಣೆಯ ಮೇಲೆ ಒಂದು ಕಪ್ಪುಗೆರೆಯನ್ನು ಎಳೆದುಕೊಳ್ಳುತ್ತಿದ್ದರೆಂದೂ ಆ ಕಾರಣದಿಂದ ಅವರಿಗೆ ಆ ಹೆಸರು ಬಂದಿತೆಂದೂ ತಿಳಿಯುತ್ತದೆ. ರಾಮಾನುಜಾಚಾರ್ಯರ ಶ್ರೀಭಾಷ್ಯದಿಂದ ಇವರ ವಿಚಾರಗಳು ಸ್ವಲ್ಪ ತಿಳಿಯುತ್ತವೆ. ನರಕಪಾಲವನ್ನು ಪಾನ ಪಾತ್ರೆಯಾಗಿಯೂ ಭೋಜನ ಪಾತ್ರೆಯಾಗಿಯೂ ಉಪಯೋಗಿಸುವುದು, ಪ್ರೇತ ಭಸ್ಮಧಾರಣ ಮಾಡುವುದು, ಆ ಪ್ರೇತದ ಮಾಂಸವನ್ನು ತಿನ್ನುವುದು, ಒಂದು ದೊಣ್ಣೆಯನ್ನು ಹೊತ್ತುಕೊಂಡು ತಿರುಗುವುದು, ಪಾತ್ರೆಯ ತುಂಬ ಮದ್ಯವನ್ನಿಟ್ಟು ದೇವರನ್ನು ಆವಾಹನೆಮಾಡಿ ಪೂಜಿಸುವುದು, ಇವುಗಳು ಕಾಳಾಮುಖರ ಕರ್ಮಗಳು.

ಕಾಪಾಲಿಕರು ಷಣ್ಮುದ್ರಿಕೆಗಳಿಗೆ ಪ್ರಾಧಾನ್ಯಕೊಡುವರು. ಇವು ಕಂಠಹಾರ, ಆಭರಣ, ಕರ್ಣಕುಂಡಲ, ಶಿರೋಭೂಷಣ, ಭಸ್ಮ ಮತ್ತು ಯಜ್ಞೋಪವೀತ. ಕೆಲವು ಗ್ರಂಥಗಳಲ್ಲಿ ಬರುವ ಕಾಪಾಲಿಕರ ವರ್ಣನೆಗಳು. ಭಯೋತ್ಪಾದಕಗಳಾಗಿವೆ. ಮನುಷ್ಯರ ಅಸ್ಥಿಗಳಿಂದ ಮಾಡಿದ ಕಂಠಹಾರವನ್ನೂ ಆಭರಣವನ್ನೂ ಧರಿಸುವುದು, ಪ್ರೇತಭಾಸ್ಮೋದ್ಧೂಳನ ಮಾಡಿಕೊಂಡು ನರಕಪಾಲದಲ್ಲಿ ಭೋಜನ ಮಾಡುವುದು; ಅದರಲ್ಲಿಯೇ ಮದ್ಯಪಾನ ಮಾಡುವುದು; ಯಜ್ಞಾಹುತಿಗೆ ಮಾಂಸ ಮಿಶ್ರವಾದ ಮಿದುಳನ್ನು ಮತ್ತು ಶ್ವಾಸಕೋಶಗಳನ್ನು ಹಾಕುವುದು; ಕಂಠ ವಿಚ್ಛೇದನವಾಗಿ ಹೊರಸೂಸುತ್ತಿರುವ ಬಿಸಿ ನೆತ್ತರಿನ ನರರಬಲಿ ಇವುಗಳನ್ನೆಲ್ಲ ಕಾಪಾಲಿಕರು ಆಚರಿಸುತ್ತಿದ್ದರು.

ನಾಥ ಪಂಥದ ಶೈವರು ಕೊಲ್ಲಾಪುರ ಮೊದಲಾದ ಪ್ರಾಂತಗಳಲ್ಲಿ ಇರುತ್ತಿದ್ದರೆಂದು ಕಾಣುತ್ತದೆ. ರೋಗರುಜಿನಾದಿಗಳು ಬರದಂತೆಯೂ ದೇಹವು ವಜ್ರಸಮಾನವಾಗಿದ್ದು ಚಿರಕಾಲ ಬಾಳುವಂತೆಯೂ ಇವರು ಯೋಗಸಿದ್ಧಿಯನ್ನು ಪಡೆಯುತ್ತಿದ್ದರೆಂದು ಕಾಣುತ್ತದೆ.

ಒಟ್ಟಿನಲ್ಲಿ ಕೆಲವು ಶೈವಶಾಖೆಗಳು ಶಿವನ ಘೋರರೂಪದ ಘೋರಕೃತ್ಯಗಳನ್ನು ಅನುಕರಣ ಮಾಡುವುದರಿಂದ ಮೋಕ್ಷವುಂಟಾಗುವುದೆಂದು ತಿಳಿದಂತೆ ತೋರುತ್ತದೆ. ತತ್ತ್ವಗಳು ಉದಾತ್ತವಾಗಿದ್ದಿರಬಹುದು. ಆದರೆ ಆಚರಣೆಗಳು ಹೇಯವಾಗಿದ್ದುವು. ಸಾಮಾನ್ಯ ಜನರು ಇವುಗಳನ್ನೆಲ್ಲ ಆಚರಿಸುತ್ತಿದ್ದರೆಂದು ಹೇಳುವುದಕ್ಕೆ ಸಾಕಾದಷ್ಟು ಆಧಾರಗಳಿಲ್ಲ ಆಯಾ ಪಂಥದವರ ಮಠಗಳಲ್ಲಿ ವ್ರತನಿಷ್ಠರೆಂದೂ ಸಾಧಕರೆಂದು ಇದ್ದವರು ಹೀಗೆ ಆಚರಿಸುತ್ತಿದ್ದಿರಬಹುದು.

ಶೈವಮತದ ಭಿನ್ನಭಿನ್ನ ಶಾಖೆಗಳು ಭರತಖಂಡದಲ್ಲಿ ಕಾಶ್ಮೀರದಿಂದ ಹಿಡಿದು ರಾಮೇಶ್ವರದವರೆಗೂ ಗುಜರಾತಿನಿಂದ ಹಿಡಿದು ಬಂಗಾಳಕ್ಕೂ ವ್ಯಾಪಿಸಿರುವಲ್ಲಿ ಹನ್ನೊಂದನೆಯ ಶತಮಾನದ ಆದಿಭಾಗದಲ್ಲಿ ಕೆಲವು ಐತಿಹಾಸಿಕ ಘಟನೆಗಳ ನಡೆದು ಶೈವಮತ ಚರಿತ್ರೆಯ ಮೇಲೂ ಪರಿಣಾಮವುಂಟುಮಾಡಿದುವು. ಉತ್ತರದಲ್ಲಿ

ಘಜ್ನೀಮಹಮ್ಮದನ ದಂಡೆಯಾತ್ರೆಗಳು ಆರಂಭವಾಗಿ ಕಾಶ್ಮೀರ ಪ್ರಾಂತವೂ ಪಂಜಾಬ ಪ್ರಾಂತವೂ ಹಿಂದೂಗಳ ಕೈಬಿಟ್ಟು ಹೋಯಿತು. ಈ ದಂಡೆಯಾತ್ರೆಗಳು ಪೂರ್ವಕ್ಕೆ ಪ್ರಯಾಗದವರೆಗೂ ದಕ್ಷಿಣಕ್ಕೆ ಗುಜರಾತಿಗೂ ವ್ಯಾಪಿಸಿ ಆ ಸುಮಾರು ೨೦ -೨೫ ವರ್ಷಗಳ ಕಾಲದಲ್ಲಿ ಹಿಂದುಗಳ ದೇವಸ್ಥಾನಗಳು ಕೊಳ್ಳೆಯಾಗಿ ಹೋದುವು, ಹಿಂದೂ ಪಂಡಿತರು ಹಲವರು ಹತರಾದರು, ಹಲವರು ದೂರ ಪ್ರಾಂತಗಳಾದ ಬಂಗಾಳ, ಆಂಧ್ರ, ದಕ್ಷಿಣಾಪಥಗಳ ಕಡೆಗೆ ವಲಸೆ ಹೋದ ದಕ್ಷಿಣದಲ್ಲಿ ರಾಜೇಂದ್ರ ಚೋಳನು ಜೈನ ರಾಷ್ಟ್ರವಾದ ಗಂಗವಾಡಿಯ ಮೇಲೆ ದಂಡೆತ್ತಿಬಂದು ಗಂಗರನ್ನು ಧ್ವಂಸ ಮಾಡಿ ತಲಕಾಡಿನಲ್ಲಿ ಸ್ಥಾನಿಯಾದನು. ಶೈವ ಮತದ ಜೈತ್ರಯಾತ್ರೆಯೂ ಕನ್ನಡನಾಡಿಗೆ ನುಗ್ಗಿ ಬಂದುದಾಯಿತು. ಚೋಳಮಂಡಲದ ಶೈವಭಕ್ತಿ ಪ್ರವಾಹ ಕಾವೇರಿಯನ್ನು ದಾಟಿ ಕನ್ನಡನಾಡಿನಲ್ಲಿ ಹರಿಯಿತು. ಅರವತ್ತುಮೂರು ಪುರಾತನ ಕನ್ನಡಿಗರಿಗೆ ಮಾರ್ಗದರ್ಶಕರಾದರು.

ಮೇಲಿನ ಕಾರಣಗಳಿಂದ ಕನ್ನಡ ನಾಡಿನಲ್ಲಿ ಒಂದು ಹೊಸ ಹುರುಪು ತಲೆದೋರಿ ಅಜ್ಞಾತವಾಸದಲ್ಲಿದ್ದ ಶರಣರಿಗೆ ನವಚೈತನ್ಯವುಂಟಾಯಿತು ಮತ್ತು ನೂತನ ಪುರಾತನರು ಹುಟ್ಟಿಕೊಂಡರು. ಮೇಲಿನವರ್ಗದಿಂದಲೇ ಅವರು ಬಂದವರಲ್ಲ; ಸಂಸ್ಕೃತದಲ್ಲಿ ಭಾಷ್ಯಗಳನ್ನು ಬರೆದು ವಾದ ವಿವಾದಗಳನ್ನು ಮಾಡಿ ಆಚಾರ್ಯರೆನಿಸಿಕೊಂಡವರಲ್ಲ. ಅವರು ಶ್ವಪಚರಾದಿಯಾಗಿ ಎಲ್ಲ ವರ್ಗಗಳಿಂದಲೂ ಬಂದವರು; ಶಿವಾನುಭವಿಗಳು ಮತ್ತು ವಿಚಾರವಾದಿಗಳು; ಮತ್ತು ಜನರಾಡುವ ಭಾಷೆಯಲ್ಲಿ- ಕನ್ನಡದಲ್ಲಿ -ಮತ ಪ್ರಚಾರ ಮಾಡಿದವರು. ಕಲ್ಯಾಣ ಪಟ್ಟಣ ಈ ಕ್ರಾಂತಿಯ ಮುಖ್ಯ ಕೇಂದ್ರವಾಯಿತು. ಅಲ್ಲಿ ಬಸವೇಶ್ವರನು ಕ್ಷೇತ್ರಪತಿಯಾಗಿದ್ದನು. ಸ್ವಲ್ಪ ದಕ್ಷಿಣಕ್ಕೆ ಸೊನ್ನಲಾಪುರದಲ್ಲಿ ಸಿದ್ಧರಾಮನೆಂಬ ಶಿವಯೋಗಿಯು ಪ್ರಬಲ ಗುರುವಾಗಿ ಸಾವಿರಾರು ಶಿಷ್ಯರನ್ನು ಪಡೆದುಕೊಂಡು ಕ್ಷೇತ್ರಪತಿಯಾಗಿದ್ದನು. ಇನ್ನೂ ದಕ್ಷಿಣಕ್ಕೆ ಮೂರನೆಯ ಕೇಂದ್ರ ಉಳುಕನಕ್ಷತ್ರದಂತೆ ಬಳ್ಳಿಗಾವೆ ಬನವಸೆಗಳಾಗಿದ್ದವು. ಪರಮಜ್ಞಾನಿಯೂ ಮೇಧಾವಿಯೂ ಆದ ಅಲ್ಲಮಪ್ರಭು ಇಲ್ಲಿಯ ಕ್ಷೇತ್ರಪತಿಯಾಗಿದ್ದನು. ಆದರೆ ಅಲ್ಲಮಪ್ರಭು ಆಗ ನಾಡಿನಲ್ಲಿ ತಲೆದೋರುತ್ತಿದ್ದ ದಿವ್ಯಶಕ್ತಿಯನ್ನು ಕಂಡು ಬಳ್ಳಿಗಾವೆ ಬನವಸೆ ಪ್ರಾಂತವನ್ನು ಬಿಟ್ಟು ಕನ್ನಡನಾಡಿನ ಪ್ರವಾಸವನ್ನು ಕೈಕೊಂಡು ಸಾಧಕರನ್ನು ಸಂಧಿಸಿ ಜ್ಞಾನೋಪದೇಶ ಮಾಡುತ್ತಾ ಸೊನ್ನಲಾಪುರಕ್ಕೆ ಹೋಗಿ ಸಿದ್ಧರಾಮನನ್ನು ಅದ್ವೈತಕ್ಕೆ ಪರಿವರ್ತಿಸಿ ಆತನನ್ನೂ ಜೊತೆಯಲ್ಲಿ ಕರೆದುಕೊಂಡು ಕಲ್ಯಾಣಪಟ್ಟಣವನ್ನು ಸೇರಿ ತಾನು ಶಿವಾನುಭಾವ ಮಂಟಪದ ಅಧ್ಯಕ್ಷನಾಗಿ ವೀರಶೈವ ಮತೋದ್ಧಾರದ ಮೂಲಮೂರ್ತಿಯಾಗಿ ನಿಂತು ಬಸವೇಶ್ವರನನ್ನು ಉತ್ಸವಮೂರ್ತಿಯಾಗಿರಲು ಬಿಟ್ಟನು. ಶೈವ ಶಾಖೆಗಳಲ್ಲಿ ಘೋರವಾದವುಗಳ ಹುಟ್ಟಡಗಿಸಿ, ಸೌಮ್ಯವಾದುವುಗಳ ತತ್ತ್ವಸಾರವನ್ನೆಲ್ಲ ಸಂಗ್ರಹಿಸಿ ಸಮಾವೇಶ ಮಾಡಿಕೊಂಡು, ಪುರಾತನ

ಪಾಶುಪತ ಸಮಾಜದಂಥ ವರ್ಣಾಶ್ರಮ ವ್ಯತ್ಯಾಸಗಳಿಲ್ಲದ ಸರ್ವಸಮಾನತಾ ಭಾವದ ಸ್ವತಂತ್ರ ಬಲಿಷ್ಠ ಐಕ್ಯಮತ ಜನಾಂಗವನ್ನು ಕಟ್ಟುವುದೂ, ಸಮಾಜದ ದುರ್ನೀತಿ ದುರಾಚಾರಗಳನ್ನು ನಿರ್ಮೂಲಗೊಳಿಸಿ ಷಟ್ಸ್ಥಲಸಾಧನೆಯ ಮೂಲಕ ಜನತೆಯೆಲ್ಲಕ್ಕೂ ಮುಕ್ತಿಸಾಧನಾಧಿಕಾರನ್ನು ಕಲ್ಪಿಸಿ ಕೊಡುವುದು ಈ ಕ್ರಾಂತಿಯ ಮುಖ್ಯಧ್ಯೇಯವಾಯಿತು. ಈ ಕ್ರಾಂತಿ ವೈದಿಕಮತಕ್ಕೆ ಯುದ್ಧದಕರೆ ಕೊಟ್ಟು ರಣರಂಗಕ್ಕಿಳಿಯಿತು. ಸಾಹಿತ್ಯ ಪಾಶುಪತಾಸ್ತ್ರವಾಯಿತು.

ವೀರಶೈವ ಸಾಹಿತ್ಯದಲ್ಲಿ ಕಂಡುಬರುವ ಗ್ರಂಥಭೇದಗಳನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು :

೧. **ವಚನಗಳು :** ಇವು ಶರಣರ ಬಾಯಿಂದ ಬಂದ ಶಿವಾನುಭಾವದ ನಾಮಗಳು. ಇವರನ್ನು ವಚನಕಾರರೆಂದು ಸಾಹಿತ್ಯಚರಿತ್ರೆಯಲ್ಲಿ ಕರೆಯುತ್ತೇವೆ.

೨. **ಪುರಾಣಗಳು** : ಇವು ಸಾಮಾನ್ಯವಾಗಿ ಶಿವಶರಣರ ಜೀವನ ಚರಿತ್ರೆಗಳು. ತಮಿಳುನಾಡಿನ ಅರುವತ್ತು ಮೂವರು ಪುರಾತನರೂ ಕನ್ನಡ ನಾಡಿನ ಬಸವೇಶ್ವರ ಮೊದಲಾದ ನೂತನ ಪುರಾತನರೂ ಕನ್ನಡನಾಡಿನ ಬಸವೇಶ್ವರ ಮೊದಲಾದ ನೂತನ ಪುರಾತನರೂ, ಇತರ ಭಾಗಗಳ ಶಿವಭಕ್ತರೂ, ವಿಜಯನಗರದ ಕಾಲದ ನೂರೊಂದು ವಿರಕ್ತರೂ- ಇವುಗಳ ಕಥಾ ನಾಯಕರಾಗಿರುತ್ತಾರೆ. ವೀರಶೈವಮತಾಚಾರ್ಯರೆನಿಸಿರುವ ರೇಣುಕಾದಿ ಪಂಚಾಚಾರ್ಯರ ಜೀವನ ಚರಿತ್ರೆಗಳನ್ನು ಬರೆದಿರುವುದುಂಟು.

೩. **ಶತಕಗಳು :** ಇವು ಆಯಾ ಕವಿಯ ಇಷ್ಟದೇವತೆಯು ಅಂಕಿತದಲ್ಲಿ ಭಕ್ತಿ, ಜ್ಞಾನ, ವೈರಾಗ್ಯ ಮತ್ತು ನೀತಿಬೋಧಕಗಳಾಗಿಯೂ ದೇವರ ಸ್ತೋತ್ರಗಳನ್ನೊಳಗೊಂಡಿರುತ್ತವೆ.

೪. **ಹಾಡುಗಳು ಮತ್ತು ಕೀರ್ತನೆಗಳು :** ಇವು ವಿಷಯ ದೃಷ್ಟಿಯಿಂದ ಶತಕಗಳ ಜಾತಿಗೆ ಸೇರಿವೆ. ಕೆಲವು ಶಿವನ ಪರವಾಗಿ ಮಾತ್ರ ಇದ್ದರೂ, ಕೆಲವು ಶಿವಶರಣರ ಸಂಬಂಧವಾಗಿದ್ದು ಅವರ ಚರಿತ್ರೆಯನ್ನೂ ಬೋಧೆಯನ್ನೂ ತಿಳಿಸತಕ್ಕವುಗಳಾಗಿವೆ. ಕೇವಲ ತತ್ತ್ವಬೋಧಕವಾದ ಹಾಡುಗಳು ಅಥವಾ ಗೀತಗಳ ದೊರೆಯುತ್ತವೆ.

೫. **ಮತ ಸಂಬಂಧವಿಲ್ಲದ ಕಾವ್ಯಗಳು :** ಹೆಚ್ಚು ಕಡಿಮೆ ಶುದ್ಧ ಸಾಹಿತ್ಯಕ್ಕೆ ಸಂಬಂಧಿಸಿದುವೆಂದು ಹೇಳಬಹುದು.

೬. **ವಚನಗಳಿಗೂ ಪುರಾಣಗಳಿಗೂ ಗದ್ಯದಲ್ಲಿ ಟೀಕೆಗಳು:** ಗದ್ಯದಲ್ಲಿ ಶರಣರ ಕಥೆಗಳು.

ವೀರಶೈವ ಸಾಹಿತ್ಯದ ಕಾಲದಲ್ಲಿ ಐತಿಹಾಸಿಕ ದೃಷ್ಟಿಯಿಂದ ಮೂರಾಗಿ ವಿಂಗಡಿಸಬಹುದು. ಕಲಚೂರ್ಯರ ಕಾಲ, ವಿಜಯನಗರದ ಕಾಲ, ಮೈಸೂರರಸರ ಕಾಲ. ಕಲಚೂರ್ಯರರ ಕಾಲ ಎಂದು ಮೊದಲನೆಯದನ್ನು ನಾವು ಕರೆದಿದ್ದರೂ ಚಾಳುಕ್ಯ ವಿಕ್ರಮಾದಿತ್ಯನ ಕಾಲದಿಂದಲೇ ಇದು ಆರಂಭವಾಗುತ್ತದೆ. ಆದರೆ ವಚನಕಾರರು ಹೆಚ್ಚಾಗಿದ್ದುದೂ ನೂತನ ಪಂಥ ಹುಪುರಿಸಲ್ಲಿದ್ದುದೂ ಕಲಚೂರ್ಯರ ಕಾಲದಲ್ಲಿ. ಆದುದರಿಂದ ಮೊದಲನೆಯ ಕಾಲವನ್ನು ಕಲಚೂರ್ಯರ ಕಾಲವೆಂದು ಕರೆದಿದ್ದೇವೆ. ಇದನ್ನೇ ವಚನಗಳ ಅಥವಾ ವಚನಕಾರರ ಕಾಲವೆಂದು ಕರೆದರೆ ತಪ್ಪಾಗಲಾರದು. ಈ ಕಾಲದಲ್ಲಿ ಪುರಾಣರಚನೆಗೆ ಆರಂಭವಾದರೂ ಅವು ಹೆಚ್ಚಾಗಿ ತಲೆ ದೋರಲಿಲ್ಲ. ಕಲಚೂರ್ಯರ ಕಾಲ ಮುಗಿದ ಮೇಲೆ ಸುಮಾರು ಒಂದೂವರೆ ಶತಮಾನಕಾಲ ವೀರಶೈವ ಸಾಹಿತ್ಯ ಚರಿತ್ರೆ ಅಸ್ಪಷ್ಟವಾಗಿದೆ. ಹೆಚ್ಚು ಕಡಿಮೆ ಆಗೊಂದು ಶೂನ್ಯತೆ ಕಂಡು ಬರುತ್ತದೆ ಎಂದು ಹೇಳಿದರೂ ಹೇಳಬಹುದು. ವಿಜಯನಗರ ರಾಜ್ಯ ತಲೆಯೆತ್ತುವ ಕಾಲಕ್ಕೆ ವೀರಶೈವ ಸಾಹಿತ್ಯವೂ ತಲೆಯೆತ್ತಿತು. ವಿಜಯನಗರದ ಕಾಲದಲ್ಲಿ ಹೆಚ್ಚಾಗಿ ಪುರಾಣಗಳು ರಚಿತವಾದುವು. ವಚನಕಾರರು ಕೆಲವರು ಮಾತ್ರ - ಬೆರಳುಗಳಲ್ಲಿ ಎಣಿಸುವಷ್ಟು ಮಂದಿ ಕಂಡುಬರುತ್ತಾರೆ. ಆದರೆ ವಚನಗಳ ಸಂಕಲನಗಳೂ, ವಚನಗಳ ಟೀಕೆಗಳೂ ಹೆಚ್ಚುಹೆಚ್ಚಾಗಿ ದೊರೆಯುತ್ತವೆ. ವೀರಶೈವ ಮತ ಸಿದ್ಧಾಂತವನ್ನು ಒಂದು ರೂಪಕ್ಕೆ ತಂದು ಸ್ಥಿರಪಡಿಸಿರುವುದು, ಸಂಸ್ಕೃತಾಧಾರಗಳೊಂದಿಗೆ ವಚನಗಳನ್ನು ಸಮೀಕರಿಸಿ ವಚನಗಳ ಮಹತ್ವವನ್ನು ಹೆಚ್ಚಿಸಲು ಪ್ರಯತ್ನಪಟ್ಟಿರುವುದೂ ಕಂಡು ಬರುತ್ತವೆ. ಹಿಂದಿನ ವಚನಕಾರರು ಆಗಲೇ ಅವತಾರ ಪುರುಷರಾಗಿ ಏರ್ಪಟ್ಟಿದ್ದರಿಂದ ಅವರ ಹೆಸರಿನಲ್ಲಿ ವಚನಗಳನ್ನು ರಚಿಸಿ ಸಂಕಲಗಳಲ್ಲಿ ಪ್ರಕ್ಷಿಪ್ತ ಮಾಡಿರಲು ಬಹುದೆಂದು ತೋರುತ್ತದೆ. ಈ ಕಾಲದಲ್ಲಿ ಬಸವೇಶ್ವರ, ಚೆನ್ನಬಸವ ಮತ್ತು ಅಲ್ಲಮಪ್ರಭು -ಇವರ ಪ್ರಭಾವವನ್ನು ಹೆಚ್ಚಿಸುವ, ಹೆಚ್ಚುಕಡಿಮೆ ಅವರುಗಳಿಂದಲೇ ವೀರಶೈವಮತ ಜೀರ್ಣೋದ್ಧಾರವಾಯಿತೆಂದು ತೋರಿಸುವ, ಪ್ರಯತ್ನಗಳು ಬಲವತ್ತರವಾಗಿ ನಡೆದಿವೆ. ವೀರಶೈವ ಮತ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲವೆಂದು ಧಾರಾಳವಾಗಿ ಹೇಳಬಹುದಾಗಿದೆ. ಈ ಕಾಲದಲ್ಲಿ ಶತಕಗಳು ಹೇರಳವಾಗಿ ರಚಿತವಾಗಿವೆ; ಹಾಡುಗಳು ಕೀರ್ತನೆಗಳು ತಕ್ಕಮಟ್ಟಿಗೆ ಹೊರಬಿದ್ದಿವೆ. ವಿಜಯನಗರದ ಅರಸರ ಕಾಲದಿಂದ ಮೈಸೂರು ಅರಸರ ಕಾಲಕ್ಕೆ ಬರುವಲ್ಲಿ ಮಧ್ಯದಲ್ಲಿ ಯಾವುದೊಂದು ಶೂನ್ಯತೆಯೂ ಇಲ್ಲ. ಈ ಎರಡು ಕಾಲಗಳೂ ಒಂದಕ್ಕೊಂದು ಕೂಡಿಕೊಂಡು ಕನ್ನಡನಾಡಿನ ರಾಜಧಾನಿಗಳು ದಕ್ಷಿಣಕ್ಕೆ ವರ್ಗವಾದಂತೆ ಸಾಹಿತ್ಯ ಕೇಂದ್ರಗಳೂ ದಕ್ಷಿಣಕ್ಕೆ ವರ್ಗವಾಗಿವೆ. ವಿಜಯನಗರದ ಕಾಲದಲ್ಲಿಯ ವೀರಶೈವದ ಕೇಂದ್ರಗಳು ಮೈಸೂರು ಪ್ರಾಂತದಲ್ಲಿ ಪ್ರಬಲವಾಗಿದ್ದು, ಅವುಗಳಲ್ಲಿ ಮುಖ್ಯವಾಗಿ ಕೆಳದಿ, ಬಿದನೂರು, ಗುಬ್ಬಿ, ಕಣುಗಲು, ಗೂಳೂರು, ಎಳಂದೂರು, ಮಳವಳ್ಳಿ,

ಮೈಸೂರು ಮತ್ತು ಚಿತ್ರದುರ್ಗ ಮುಖ್ಯವಾದುವು. ಶಿವತತ್ತ್ವ ಚಿಂತಾಮಣಿಯಲ್ಲಿಯೂ ವೀರಶೈವಾಮೃತ ಮಹಾಪುರಾಣದಲ್ಲಿಯೂ ಆಗಿನ ಕಾಲದ ಶಿವಭಕ್ತರ ಮತ್ತು ಅವರ ಸ್ಥಳಗಳ ಹೆಸರುಗಳನ್ನು ಹೇಳಿದೆ. ಆ ಹೆಸರುಗಳನ್ನು ನೋಡಿದರೆ ನಾವು ಮೇಲೆ ಹೇಳಿರುವ ವಿಷಯ ಸ್ಪಷ್ಟವಾಗುತ್ತದೆ. ಆದುದರಿಂದ ವಿಜಯನಗರ ರಾಜ್ಯ ಧ್ವಂಸವಾಗಿ ವೀರಶೈವ ಮತಕ್ಕೂ ವೀರಶೈವ ಸಾಹಿತ್ಯಕ್ಕೂ ಉತ್ತರದಲ್ಲಿ ಧಕ್ಕೆ ತಗುಲಿದರೂ ದಕ್ಷಿಣದಲ್ಲಿ ಯಾವುದೊಂದು ಬಾಧೆಯೂ ಇಲ್ಲದೆ ಅವು ಬೆಳೆದುಬಂದುವು. ಕ್ರಿ. ಶ. ೧೬೦೦ರಿಂದ ಈ ಮೂರನೆಯ ಕಾಲ ಆರಂಭವಾಗುತ್ತದೆಂದು ಹೇಳಬಹುದು. ಇಲ್ಲಿಂದ ವೀರಶೈವ ಸಾಹಿತ್ಯದ ಇಳಿಗಾಲ ಆರಂಭವಾಗುತ್ತದೆಂದೂ ಹೇಳಬಹುದು. ದೊಡ್ಡ ದೇವರಾಜೊಡೆಯರ ಕಾಲದಲ್ಲಿಯೆ ಮೈಸೂರಿನ ಆಸ್ಥಾನದಲ್ಲಿ ಶ್ರೀ ವೈಷ್ಣವರ ಪ್ರಾಬಲ್ಯ ಕಂಡುಬರುತ್ತದೆ. ರಾಜಾಶ್ರಯದಿಂದಲೂ ದಳವಾಯಿಗಳ ಆಶ್ರಯದಿಂದಲೂ ಬ್ರಾಹ್ಮಣ ಸಾಹಿತ್ಯಹೆಚ್ಚಾಗಿ ಬೆಳೆಯಿತು. ವೀರಶೈವ ಕವಿಗಳಲ್ಲಿ ಹೆಸರುವಾಸಿಯಾದವರು ಒಬ್ಬಿಬ್ಬರು ದೊರೆಯುತ್ತಾರೆ. ಉಳಿದವರು ಅಪ್ರಸಿದ್ಧರು. ಹಾಡುಗಳೂ ಹಿಂದಿನ ಪುರಾಣಗಳ ಗದ್ಯನುವಾದಗಳೂ, ಪುನಃ ಹಿಂದಿನ ವಚನಗಳ ಸಂಕಲನಗಳೂ, ಸಾಮಾನ್ಯ ಪುರಾಣಗಳೂ ಈಗ ಕಂಡುಬರುತ್ತವೆ. ಯಕ್ಷಗಾನಗಳು ಈ ಮೂರನೆಯ ಕಾಲದ ಉತ್ತರಾರ್ಧದಲ್ಲಿ ರಚಿತವಾಗಿವೆ.

ವೀರಶೈವ ಮತ ಚರಿತ್ರೆಯಲ್ಲಿ ಬಸವೇಶ್ವರ, ಅಲ್ಲಮಪ್ರಭು ಮೊದಲಾದವರೆಲ್ಲ ಅವತಾರ ಪುರುಷರೆಂಬುದು ನಿಜ. ವಚನಕಾರರೆಲ್ಲ ಕೈಲಾಸದ ಗಣಗಳು. ಪುರಾಣ ಕರ್ತೃಗಳಿಗೂ ಕೈಲಾಸದಲ್ಲಿ ಗಣ ಪದವಿ ಇರುವುದನ್ನು ಗ್ರಂಥಗಳಲ್ಲಿ ಕಾಣುತ್ತೇವೆ. ಆದರೆ ಈಗ ನಾವು ಕೇವಲ ಸಾಹಿತ್ಯ ದೃಷ್ಟಿಯಿಂದ ಅವರನ್ನು ನೋಡುತ್ತೇವೆ. ನಮ್ಮ ಭಾಗಕ್ಕೆ ಅವರು ಮನುಷ್ಯರು ಮತ್ತು ಕವಿಗಳು ಮಾತ್ರ. ಈ ಸಾಹಿತ್ಯಚರಿತ್ರೆಯಲ್ಲಿ ಹಾಗೆಂದು ಅವರನ್ನು ಭಾವಿಸಿ ವಿಷಯ ನಿರೂಪಣೆ ಮಾಡಲಾಗುತ್ತದೆ.

ಪಿ. ಲಂಕೇಶರ ಕಲ್ಲು ಕರಗುವ ಸಮಯ ಮತ್ತು ಇತರ ಕತೆಗಳು

-ಡಾ. ಎಸ್. ಎಲ್. ಎಂ. ಪಾಟೀಲ

೧೯೯೩ರ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದುಕೊಂಡ ಪಿ. ಲಂಕೇಶರ 'ಕಲ್ಲು ಕರಗುವ ಸಮಯ ಮತ್ತು ಇತರ ಕತೆಗಳು' ಅವರ ವೈವಿಧ್ಯಮಯ ಅನುಭವ ದಿಂದುಂಟಾದ ಚಿಂತನೆಯ ಫಲವಾಗಿದೆ. ಮನುಷ್ಯನ ಸುತ್ತಲಿನ ಬದುಕಿನ ಸಮಸ್ಯೆಗಳನ್ನು ಸಹನಶೀಲತೆಯಿಂದ ಅರ್ಥಮಾಡಿಕೊಳ್ಳುವುದರಲ್ಲಿ, ಅದಕ್ಕೆ ಪರಿಹಾರ ಹುಡುಕುವುದರಲ್ಲಿ ಲೇಖಕರ ಮಾಗುವಿಕೆ, ಆಳವಾದ ಒಳನೋಟ ನೋಡಬಹುದು. ಈ ಕಥಾ ಸಂಗ್ರಹದಲ್ಲಿ ಜಾತಿ ಪದ್ಧತಿಯ ಬಗ್ಗೆ ಬದಲಾಗುತ್ತಿರುವ ಧೋರಣೆಗಳು, ಮನಸ್ಸಿನ ಆಂತರ್ಯದ ಸಂಕೀರ್ಣತೆ, ಸಂಕ್ರಮಣ ಸ್ಥಿತಿಯಲ್ಲಿರುವ ಭಾರತೀಯ ಸಮಾಜ ಸ್ಥೂಲವಾಗಿ ಲಂಕೇಶರ ಮುಖ್ಯ ಕಾಳಜಿಗಳಾಗಿವೆ.

ಜಾತಿ ಪದ್ಧತಿಯ ಬಗ್ಗೆ ಯಾವ ಲೇಖಕನೂ ವೈಚಾರಿಕ ನೆಲಗಟ್ಟಿಲ್ಲದೆ ಬರೆಯಲಾರ. ಈ ವಿಷಯದಲ್ಲಿ ಗಾಂಧೀಜಿಯ ವಿಚಾರಗಳು ಲಂಕೇಶರ ಮೇಲೆ ಪ್ರಭಾವ ಬೀರಿರುವದನ್ನು ಇಲ್ಲಿ ಕಾಣಬಹುದು. ಈ ತನಕ ಜಾತಿ ವ್ಯವಸ್ಥೆಯ ಕುರಿತ ಕತೆಗಳೆಂದರೆ ಬಹುತೇಕವಾಗಿ ಸಂಘರ್ಷ ಶೋಷಣೆ, ದೌರ್ಜನ್ಯದ ಬಗೆಗೆ ಇರುತ್ತಿದ್ದವು. ಆದರೆ ಲಂಕೇಶರ ಇಲ್ಲಿನ ಕತೆಗಳು ಆ ಘಟ್ಟವನ್ನು ದಾಟಿ ಕಟುವಾದ ಧೋರಣೆಗಳು ಮೆದುವಾಗುತ್ತಿರುವ ಹೊಸ ಅರಿವನ್ನು ಸೂಚಿಸುತ್ತವೆ.

`ಕಲ್ಲು ಕರಗುವ ಸಮಯ' ಕತೆಯಲ್ಲಿ ಮೇಲು ಜಾತಿಯ ಮಲ್ಲಯ್ಯ ತನ್ನ ಮಗಳು ಬೇಡರ ಹುಡುಗನನ್ನು ಮದುವೆಯಾಗುತ್ತೇನೆಂದು ಹೇಳಿದಾಗ ರೋಷಗೊಳ್ಳುತ್ತಾನೆ. ಆದರೆ ಅವಳ ಗಟ್ಟಿ ನಿರ್ಧಾರದೆದುರು, ಅಂತರ್ಮುಖಿಯಾಗಿ, ತನ್ನೊಳಗೆ ಚಿಂತಿಸುತ್ತ ಮೆದುವಾಗುತ್ತಾನೆ. ಕತೆಯ ಕೊನೆಯಲ್ಲಿ ಈ ವಿಲೋಮ ಪದ್ಧತಿಯ ಮದುವೆಯನ್ನು ಒಪ್ಪುತ್ತಾನೆ. ಅವನ ಕಠಿಣತೆ ಮಾಯವಾಗಿ ಭಿನ್ನವಾದ ಮನುಷ್ಯನಾಗುತ್ತಾನೆ. ಅದನ್ನು ಹೀಗೆ ವರ್ಣಿಸಲಾಗಿದೆ.

"ತನ್ನನ್ನು ಹೆತ್ತ ತಂದೆ ನೇರ, ಕಠೋರ ಮನುಷ್ಯ. ಬಂಡೆಯ ಸಂದಿನಲ್ಲಿ ಮರ ಬೇರು ಬಿಟ್ಟಂತೆ ಬೇರು ಬಿಟ್ಟು ಬಂಡೆಯನ್ನು ಒಡೆದಂತೆ: ಎಳೆಯ ಹೆಣ್ಣಿನಲ್ಲಿ ಹೊಸ

ಜೀವ ಮೊಳೆದಂತೆ... ಅಥವಾ ಪರಂಪರಾಗತ ಬದುಕಿನಲ್ಲಿ ಮುಳುಗಿದವ, ಎಲ್ಲ ಸ್ಪಷ್ಟವಾದ ಆಚಾರಗಳಲ್ಲಿ ಬಂಧಿಸಲ್ಪಟ್ಟವ ಒಂದು ದಿನ ಪೂರ್ಣ ನೀಲಿ ಆಕಾಶ, ಬೆಳ್ಳಕ್ಕಿಗಳ ಹಿಂಡು, ಅದರೊಂದಿಗೆ ಅನಂತತೆಯ ಕಾಣ್ಕೆ ಕಂಡಂತೆ"(ಪು. ೧೨೩)

`ಸಹಪಾಠಿ' ಕತೆಯಲ್ಲಿ ಈ ಮನೋಪರಿವರ್ತನೆ ಹೆಚ್ಚು ಸಂಕೇತಿಕವಾಗಿದೆ. ಇಲ್ಲಿನ ಮುಖ್ಯ ಪಾತ್ರ ಮೇಲುಜಾತಿಯ ಜೂಳಿಗದೊಡೆಯ ಬಸವೇಗೌಡ ಲೇಖಕರ ಸಹಪಾಠಿ. ಅವರ ಪ್ರಗತಿಪರ ವಿಚಾರಗಳಿಂದ ಪ್ರಭಾವಿತನಾಗಿ ತಪ್ಪಿತಸ್ಥ ಭಾವನೆಯಿಂದ ಆದರೆ ತನ್ನ ದರ್ಪವನ್ನು ಬಿಡಲೂ ಆಗದ ಸ್ಥಿತಿಯಿಂದ ನೆರಳುತ್ತಿದ್ದಾನೆ. ಲೇಖಕರ ಸಲಹೆಯಂತೆ ಪ್ರಾಯಶ್ಚಿತ್ತವೆಂದು ಹರಿಜನ ಶಿಕ್ಷಕನ ಪಾದವನ್ನು ಊರು ಜನರ ಎದುರಿನಲ್ಲಿ ತೊಳೆಯುತ್ತಾನೆ. ಆದರೆ ಇದಕ್ಕೂ ಮೊದಲು ಖಾಸಗಿಯಾಗಿ ಜೋನಿ ಎಂಬ ಹೊಲೆಯರ ಹುಡುಗನನ್ನು ಪೂಜಿಸಿ ಅವನ ಹೆಂಡತಿಯನ್ನು ರಾತ್ರಿ ಮಾನಭಂಗ ಮಾಡಿ ಬಂದಿರುತ್ತಾನೆ. ಜೂಳಿಗ ಪದ್ಧತಿಯ, ಮೇಲುಜಾತಿಯವರ ದರ್ಪ, ದೌರ್ಜನ್ಯ ಇಲ್ಲಿ ಪ್ರಸ್ತುತವಲ್ಲ. ಅವರ ಪಾಪಪ್ರಜ್ಞೆ, ಗೊಂದಲಗಳು ಮುಖ್ಯ. ಊರಿನ ಒಡೆಯ ದರ್ಪದ ಮನುಷ್ಯ ಹರಿಜನ ಒಬ್ಬನ ಪಾದ ತೊಳೆಯುವದು, ಅದರಿಂದ ಮನಶ್ಶಾಂತಿ ಪಡೆಯುವದು ಸಾಮಾನ್ಯ ಕ್ರಾಂತಿಯಲ್ಲ. ಜೊತೆಗೆ ಇಲ್ಲಿ ವ್ಯಂಗ್ಯವೂ ಇದೆ. ಈ ಕ್ರಿಯೆ (ಪೂಜೆ)ಯನ್ನು ಪ್ರಚೋದಿಸುವ ಲೇಖಕರಿಗೂ ಬಸವೇಗೌಡನ ಪಾಪಪ್ರಜ್ಞೆ ಇದೆ. ಪ್ರಾಯಶ್ಚಿತ್ತದಿಂದ ಇಬ್ಬರೂ ನಿರಾಳ ವಾಗುತ್ತಾರೆ. ಇಲ್ಲಿನ ಪಾದಪೂಜೆ ಸಾಂಕೇತಿಕವಾದರೂ ಅದು ಅವರನ್ನು ಅವರ ಜಾತಿಯ ಅಹಂಕಾರದಿಂದ ಬಿಡುಗಡೆ ಮಾಡಿಸುತ್ತದೆ. ಇಲ್ಲಿಯ ಸಫಲತೆ, ಲೇಖಕರು ಹೇಳುವ ಹಾಗೆ, ಮನಸ್ಸು ಕೂಡ ಪಾದ ಪೂಜೆಯಂತೆ ವರ್ತಿಸಿದರೆ ಮಾತ್ರ ಸಾಧ್ಯ.

ಆದರೆ `ಕಲ್ಲು ಕರಗುವ ಸಮಯ'ದಲ್ಲಿನ ವಿಲೋಮ ಮದುವೆ ಹೆಚ್ಚು ಮೂರ್ತವಾದದ್ದು. ಮೇಲಿನ ಎರಡೂ ಕತೆಗಳಲ್ಲಿನ ಸಾಮ್ಯವೆಂದರೆ ಮಲ್ಲಯ್ಯ ಮತ್ತು ಬಸವೇಗೌಡ ಇಬ್ಬರೂ ತಮ್ಮ ಜಾತಿಯ ಔನ್ನತ್ಯನಲ್ಲಿ ನಂಬಿಕೆ ಇದ್ದವರು. ಸಿಟ್ಟಿಗೆ, ದೌರ್ಜನ್ಯಕ್ಕೆ ಹೆಸರಾದವರು. ಮಲ್ಲಯ್ಯನಲ್ಲಿ ಅವನ ಮಗಳು, ಬಸವೇಗೌಡನಲ್ಲಿ ಅವನ ಸಹಪಾಠಿ ಮಿತ್ರ ಪರಿವರ್ತನೆ ತರುತ್ತಾರೆ. ಇಬ್ಬರೂ ತಮ್ಮ ವೃದ್ಧಾಪ್ಯದಲ್ಲಿ ಪರಿವರ್ತನೆಗೊಳ್ಳುತ್ತಾರೆ. ಅದು ಹೊರಗಿನಿಂದ ಪ್ರೇರಿತವಾಗಿ ಒಳಗಿನಿಂದ ಹುಟ್ಟುತ್ತದೆ. ಅವರ ಸಾವು ಕೂಡ ಜಾತಿಯ ಅಹಂಕಾರವು ಸಮಾಜದಿಂದ ನಿವೃತ್ತಿಯಾಗುತ್ತಿರುವದರ ಸಂಕೇತವಾಗುತ್ತದೆ.

`ಮುಟ್ಟಿಸಿಕೊಂಡವನು' ಕತೆಯಲ್ಲೂ ಕೂಡ ಇದೇ ಸಮಸ್ಯೆಯನ್ನು ಇನ್ನೂ ಹೆಚ್ಚಿನ ಆತ್ಮೀಯತೆಯೊಂದಿಗೆ, ಸಹನೆಯೊಂದಿಗೆ ಪಾತ್ರಗಳ ಒಳಹೊಕ್ಕು ಬಿಡಿಸುತ್ತಾರೆ. ಮೇಲು

ಜಾತಿಯ ಬಸಲಿಂಗ ತನ್ನ ಕಣ್ಣಿನ ತೊಂದರೆಗಾಗಿ ಡಾಕ್ಟರ್ ತಿಮ್ಮಪ್ಪನ ಬಳಿ ಚಿಕಿತ್ಸೆ ಪಡೆಯುತ್ತಾನೆ. ಈ ಡಾಕ್ಟರ್ ಹೊಲೆಯ ಎಂದು ಗೊತ್ತಾಗಿ ಅವರ ಎಚ್ಚರಿಕೆ ಮೀರಿ ಶುದ್ಧತೆಗಾಗಿ ಸ್ನಾನ ಮಾಡುತ್ತಾನೆ. ತೊಂದರೆ ಹೆಚ್ಚಾಗಿ ಇನ್ನೂ ಒಂದು ಕಣ್ಣು ಕೆಡುತ್ತದೆ. ಅದಕ್ಕಾಗಿ ಪುನಃ ತಿಮ್ಮಪ್ಪನಲ್ಲಿಗೇ ಬರಬೇಕಾಗುತ್ತದೆ. ಸತ್ಯ ಹೇಳಲು ಹಿಂಜರಿದು ಕಣ್ಣಿಗೆ ನೀರು ತಾಗಿಸಿಲ್ಲ ಎಂದು ಸುಳ್ಳು ಹೇಳುತ್ತಾನೆ. ಈ ಸನ್ನಿವೇಶದಲ್ಲಿ ಔದಾರ್ಯ ಮೆರೆಯುವವನು ತಿಮ್ಮಪ್ಪ. ತನ್ನ ಸರಳತೆ, ಅನುಕಂಪ ಮತ್ತು ಆಳವಾದ ತಿಳುವಳಿಕೆಯೊಂದಿಗೆ ಅವನು ಬಸಲಿಂಗ ಮತ್ತು ಅವನ ಪ್ರತಿನಿಧಿಸುವ ಜನರ ಮುಗ್ಧತೆಯ ದೋಷಗಳನ್ನು ಬಿಚ್ಚಿ ಹೇಳುತ್ತಾನೆ. ಈ ಕತೆಯಲ್ಲಿ ಬಸಲಿಂಗ ಪರಂಪರೆಯಾಗಿ ಬಂದ ಜಾತಿ ಭಾವನೆಗಳಿಗೆ ಪಕ್ಕಾಗಿ ಸುಳ್ಳು ವಿಚಾರ ಮಾಡುತ್ತ ಆತ್ಮವಂಚನೆ ಮಾಡಿಕೊಳ್ಳುತ್ತ ಬೇರೆಯ ವ್ಯಕ್ತಿಯಾಗಿ ಬಿಡುತ್ತಾನೆ. ತನ್ನ ತಪ್ಪು ಒಪ್ಪಿಕೊಳ್ಳುವವರೆಗೂ ಹೀಗೆ ಮೇಲೆ ವಿವರಿಸಿದ ಕತೆಗಳಿಗಿಂತ ಭಿನ್ನವಾದ, ಅಂದರೆ ಮುಗ್ಧತೆ ಗೊಂದಲಗಳಿಗೆ ಸಿಕ್ಕು ಮತ್ತೆ ತಿಳಿಯಾಗುವ ಕತೆ ಇಲ್ಲಿದೆ.

ಹೀಗೆ ಲಂಕೇಶರ ಕತೆಗಳು ಅನುಮಾನ, ದ್ವೇಷಗಳನ್ನು ಬಿಟ್ಟು ನಮ್ಮ ಜಾತಿ ವ್ಯವಸ್ಥೆಯಲ್ಲಿ ಹುದುಗಿರುವ ಮುಗ್ಧತೆಗಳನ್ನು, ಗೊಂದಲಗಳ ಅಪಾಯಗಳನ್ನು ತೋರಿಸುವ ಪ್ರಯತ್ನ ಮಾಡುತ್ತವೆ. ಆಳದಲ್ಲಿ ಒಳ್ಳೆಯವರಾಗಿರುವವರ ಆದರೆ `ಸ್ಪಷ್ಟವಾದ ಆಚಾರಗಳಿಂದ' ದಿಕ್ಕೆಟ್ಟವರನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಇಲ್ಲಿ ಕಾಣಬಹುದು. ಅರ್ಥ ಮಾಡಿಕೊಳ್ಳುವದೆಂದರೆ ಕ್ಷಮಿಸಿದಂತೆಯೆ.

ಲಂಕೇಶರು ಸೂಚಿಸುವ ಪರಿವರ್ತನೆಗಳು ಕಾವ್ಯಾತ್ಮಕ ಎನಿಸಿದರೂ ಅಸಂಭಾವ್ಯವೇನಲ್ಲ, ಗಾಂಧೀಜಿಯಂಥವರ ಪ್ರೇರಣೆ ಇದ್ದಲ್ಲಿ. ಕಠೋರ ಸತ್ಯಗಳಿಂದ ಕೂಡಿದ ಜಾತಿ ವ್ಯವಸ್ಥೆಯಲ್ಲಿ ಲೇಖಕರು ಸೂಚಿಸುವ ಬದಲಾವಣೆ ಅತ್ಯಂತ ವಿವೇಕಾತ್ಮತ ಮತ್ತು ಅಪೇಕ್ಷಣೀಯ ಎಂದು ಹೇಳಬಹುದು. ಏಕೆಂದರೆ ಇಲ್ಲಿನ ಕ್ರಾಂತಿ ಏನಿದ್ದರೂ ಅರಿವಿನಿಂದ ಉಂಟಾಗುವಂಥದ್ದು.

ಈ ಸಂಗ್ರಹದ ಇನ್ನು ಕೆಲವು ಕತೆಗಳಲ್ಲಿ ಮನಸ್ಸಿನ ಒಳಾಂಗಣ (Interior landscape)ವೇ ಮುಖ್ಯ ಪಾತ್ರಧಾರಿ `ದಾಹ' ಮತ್ತು `ಕೃತಜ್ಞತೆ' ಮತ್ತು `ಸ್ಟೆಲ್ಲಾ ಎಂಬ ಹುಡುಗಿ' ಕತೆಗಳನ್ನು ಇಲ್ಲಿ ಗಮನಿಸಬಹುದು. `ದಾಹ' ಮನಸ್ಸು ವಗಿಸುವ ಎಲ್ಲ ಪಾತ್ರಗಳನ್ನು ಅದರ ಕ್ಲಿಷ್ಟತೆಯನ್ನು ಒಳ -ಹೊರಗು ಮಾಡಿ ತೋರಿಸುತ್ತದೆ. ಇಲ್ಲಿನ ಕಥಾ -ವ್ಯಕ್ತಿ ತನ್ನ ಹೆಂಡತಿಯ ಸಾವಿನಲ್ಲಿ ತನ್ನನ್ನು ಕಂಡು ಕೊಳ್ಳುತ್ತಾನೆ. ಜೊತೆಗೆ ಬದುಕಿನ ಸತ್ಯಗಳನ್ನು ಅರಿಯುತ್ತಾನೆ. ಅವನ ಸತ್ಯ ಅನೇಕರ ಬದುಕಿನ ಸತ್ಯವೂ ಆಗುತ್ತದೆ.

ಅಂಥ ಒಂದು ಉದಾಹರಣೆ ನೋಡಿ-

"ಒಂದಲ್ಲ ಒಂದು ಶ್ರೇಷ್ಠತೆಗಾಗಿ ನಾವು ಪ್ರಯತ್ನಿಸುತ್ತಲೇ ಇರ್ತೇವೆ. ಈ ಶ್ರೇಷ್ಠತೆಯನ್ನು ನಮ್ಮ ಪಾಪಗಳಲ್ಲೂ ಕಾಣಲು ಪ್ರಯತ್ನಿಸುತ್ತೇವೆ." (ಪು. ೭)

ತನ್ನ ನೆಮ್ಮದಿಯ ಬದುಕಿಗೆ ದ್ರೋಹ ಮಾಡಿದ್ದು, ಅನುಭವದ ದಾಹ ತೀರಿಸಿ ಕೊಳ್ಳಲು ನೀಚತನಕ್ಕಿಳಿಸಿದ್ದು ವಿವರಿಸುತ್ತ, ಕಥಾನಾಯಕ ನೆಮ್ಮದಿ ಪಡೆಯಲೆತ್ನಿಸುತ್ತಾನೆ. ದಾಹವನ್ನು ಹಿಂಗಿಸಿಕೊಳ್ಳಲು ಇಚ್ಛಿಸುವವ ಅದರಿಂದುಂಟಾಗುವ ಪಾಪ ಪ್ರಜ್ಞೆಯನ್ನೂ ಅನುಭವಿಸಲು ಸಿದ್ಧನಿರಬೇಕಾಗುತ್ತದೆ. ಅಂತಃಸಾಕ್ಷಿ ಇದ್ದರೆ. ಈ ಸಾಕ್ಷಿಪ್ರಜ್ಞೆಯ ಅಗತ್ಯ ಮತ್ತು ಅದರ ಪಾತ್ರವೇ ಕಲ್ಲು ಕರಗುವ ಸಮಯ.... ಕಥಾ ಸಂಗ್ರಹದ ಕಥಾದ್ರವ್ಯ ಎಂದು ಹೇಳಬಹುದು.

`ಸ್ಟೆಲ್ಲಾ ಎಂಬ ಹುಡುಗಿ' ಯಲ್ಲೂ ಇದೇ ಅಂತಃ ಪ್ರಜ್ಞೆಯಿಂದ ವೃದ್ಧ ಸುಬ್ಬಣ್ಣ ನರಳುತ್ತ ಸಾಯುವದನ್ನು ನೋಡಬಹುದು. ತನ್ನ ಹಿಂದಿನ ದಿನಗಳಲ್ಲಿನ ದುರಾಶೆ, ಹೇಡಿತನ, ದ್ವಂದ್ವಗಳನ್ನು ನೆನೆಸುತ್ತ ತನ್ನ ಹೆಂಡತಿಯ ಮಾನಭಂಗ ಮಾಡಿದವನನ್ನು ತರಿದು ಹಾಕಿ ``ನೇಣಿಗಂಬ ಏರಿದ್ರೆ, ನನ್ನಲ್ಲಿ ಒಳಗೊಂದು ಹೊರಗೊಂದು ಆಗುತ್ತಿರಲಿಲ್ಲ"(ಪು. ೧೩೫) ಎನ್ನುತ್ತಾನೆ. ಪರಿಶುದ್ಧತೆಗಾಗಿನ ತನ್ನ ದಾಹವನ್ನು ಅವನು ನೇರವಾಗಿ ``ನಾನು ಕೆಟ್ಟವನಾಗಿದ್ದೇನೆ, ಒಳ್ಳೆಯವನ ಹಾಗೆ ನಡೆದುಕೊಳ್ಳುವ ಶಕ್ತಿನೂ ಇಲ್ಲ" (ಪು ೧೩೫) ಎಂದು ತೋಡಿಕೊಳ್ಳುತ್ತಾನೆ. ಇವನಂಥ ಪಾಪಗಳನ್ನೇ ಸ್ಟೆಲ್ಲಾಳ ಗಂಡ, ಪ್ರಿಯಕರ ಮಾಡುತ್ತಿರುವದು ಕತೆಯನ್ನು ಗಟ್ಟಿಯಾಗಿಸುತ್ತದೆ. ಗಂಡನಿದ್ದೂ ಸ್ಟೆಲ್ಲಾ ಬೇರೊಬ್ಬ ಪ್ರಿಯಕರನ ಬಿಸಿ ಪ್ರೇಮವನ್ನು ಇಚ್ಛಿಸುತ್ತಾಳೆ. ಒಟ್ಟಿನಲ್ಲಿ, ಇಲ್ಲಿ ದಾಹ ಸತತವಾಗಿದೆ. ಈ ಸಂಗ್ರಹದ ಬಹಳಷ್ಟು ಕತೆಗಳ ಪಾತ್ರಗಳು ಮಲಿನಗೊಂಡ ಮನಸ್ಸಿನಿಂದ ಪರಿಶುದ್ಧವಾಗಲು ಹಂಬಲಿಸುತ್ತವೆ. ತಪ್ಪೊಪ್ಪಿಗೆಯ ಬಯಕೆ, ಕ್ಷಮೆಯ ಬಯಕೆ ಅವರನ್ನು ಕ್ರಿಶ್ಚಿಯನ್ ಮೌಲ್ಯಗಳಿಗೆ ಸಮೀಪ ತರುತ್ತವೆ.

`ಕೃತಜ್ಞತೆ'. `ಕಣ್ಮರೆ'ಯಲ್ಲಿ ಹೆಣ್ಣಿನ ಪಾತ್ರಗಳು ಮುಖ್ಯವಾಗಿದ್ದು ಬದುಕನ್ನು ಹತೋಟಿಗೆ ತರಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನ ಮಾಡುತ್ತವೆ. ಇದೂ ಕೂಡ ಈ ಸಂಗ್ರಹದ ವಿಶೇಷತೆ. `ಕೃತಜ್ಞತೆ' ಯಲ್ಲಿ ನಿರ್ಮಲಾಳಲ್ಲಿ ಹುದುಗಿದ ಕಾಮದಾಹ ಜಾಗೃತವಾಗಿ ಆದರೆ ಪಾಪಪ್ರಜ್ಞೆಯಿಂದ ಅದನ್ನು ಹಿಂಗಿಸಿಕೊಳ್ಳಲಾಗದೆ ತೊಳಲಾಡುತ್ತ ಬದುಕನ್ನು ಹತೋಟಿಗೆ ತರಲಾರದೆ ಸೋಲುತ್ತಾಳೆ.

`ಕಣ್ಮರೆ' ಯ ವಸ್ತು ಹೆಚ್ಚು ಸಂಕೀರ್ಣವಾದದ್ದು. ಸಾವಿತ್ರಿಯ ಪಾತ್ರಕ್ಕೆ ವಿಭಿನ್ನ ಜನರ ಸಂಪರ್ಕ ಬರುತ್ತದೆ. ತಂದೆಯ ರಸಿಕತನ, ಶಾಸ್ತ್ರಿಗಳ ಹೆಂಡತಿ ಬೇರೊಬ್ಬರೊಡನೆ

ಓಡಿಹೋಗುವದು, ಶ್ರೀಮಂತಿಕೆಯ ಭ್ರಮರಾಂಭ, ಹೆಣ್ಣಿನ ಹಕ್ಕುಗಳ ಬಗೆಗೆ ಮಾತನಾಡುವ ಆದರೆ ಏಕಾಂತದಲ್ಲಿ ಮನುಷ್ಯರ ಸಹವಾಸಕ್ಕಾಗಿ ಹಾತೊರೆಯುವ ಅಸುಖಿ ಅಚ್ಚಮ್ಮ, ಸಾವಿತ್ರಿಯನ್ನು ಗೊಂದಲಗೊಳಿಸುತ್ತವೆ. ಅವಳು ಪ್ರೀತಿಸುವ ಅರಾಜಕತೆಯನ್ನು ಕೊನೆಗೊಳಿಸಿ, ಜಾರಿಹೋಗುತ್ತಿರುವ ತನ್ನ ಬದುಕನ್ನು ನಿಯಂತ್ರಿಸಲು ಬಯಸುತ್ತಾಳೆ. ಏಕೆಂದರೆ "ನಾನು ಬದುಕನ್ನು ಹತೋಟಿಗೆ ತೆಗೆದುಕೊಳ್ಳುವ ಬದಲು ಬದುಕೇ ನನ್ನನ್ನು ಹತೋಟಿಗೆ ತೆಗೆದು ಕೊಳ್ಳುತ್ತಿರುವ ಅನುಮಾನ ಕೂಡ ನನ್ನಲ್ಲಿತ್ತು" (ಪು. ೪೨) ಆದರೆ ಸುಳ್ಳು ಹೇಳಿದ ಗಂಡ ಸತ್ತುಹೋದಾಗ, ತಂದೆ ತಾಯಿಗಳೂ ದೇಶಾಂತರ ಹೋದಾಗ ಅವಳ ಅನುಮಾನ ಕೊನೆಗೂ ನಿಜವಾಗಿ, ಕೊನೆಗೂ ಬದುಕೇ ಅವಳನ್ನು ಹತೋಟಿಯಲ್ಲಿಡುತ್ತದೆ. ಈ ಭ್ರಮನಿರಸನ ಯಾವದೇ ಹುಡಗ ಹುಡಿಗೆಯರದ್ದೂ ಆಗಬಹುದೆಂದು ಲೇಖಕರೇ ಹೇಳಿರುವದರಿಂದ ಹೆಚ್ಚಿನ ವಿವರಣೆ ಅವಶ್ಯವಿಲ್ಲ.

ಮೇಲಿನ ಪಾತ್ರಗಳಿಗೆ ಪ್ರತಿದ್ವಂದ್ವಿ (foil) ಆಗಿ `ಕಲ್ಲು ಕರಗುವ ಸಮಯ' ದಲ್ಲಿನ ಶ್ಯಾಮಲ ಮತ್ತು `ದೇವಿ'ಯ ದೇವಿ ಇದ್ದಾರೆ. ಶ್ಯಾಮಲ ಹಳ್ಳಿಯ ವಾತಾವರಣದಲ್ಲಿದ್ದು ಅಪರೂಪಕ್ಕೆ ಅಲ್ಲಿ ನಡೆದ ಸಿನಿಮಾ ವರ್ಕಶಾಪನಿಂದ ಅರಿವಿಗೆ ಬಂದವಳು. ಅಲ್ಲಿ ಪರಿಚಯವಾದ ಬೇಡರ ಹುಡುಗನ ಸರಳತನ ಒಳ್ಳೆಯತನದಿಂದ ಆಕರ್ಷಿತಳಾಗಿ ಅವನಲ್ಲಿ ಧೈರ್ಯ ತುಂಬಿ ತಂದೆ, ತಾಯಿ, ಊರನ್ನು ಎದುರಿಸುತ್ತಾಳೆ. ತನ್ನ ಧೈರ್ಯ, ನಿಚ್ಚಳವಾದ ಅರಿವಿನಿಂದ ಬದುಕನ್ನು ನಿರ್ಮಿಸಿಕೊಳ್ಳುತ್ತಾಳೆ.

ದೇವಿ ಮಾತ್ರ ಗೊಂದಲಗಳ ಗೊಂದಲವಿಲ್ಲದೆ ಸರಳವಾಗಿ ಸಹಜವಾಗಿ ಜೀವನೋತ್ಸಾಹದಿಂದ ಓಡಾಡಿಕೊಂಡಿದ್ದಾಳೆ. ಎಲ್ಲ ಸಮಸ್ಯೆಗಳನ್ನು ಎದುರಿಸಲು ಅವಳ ವ್ಯಕ್ತಿತ್ವವೇ ಸಾಕಾಗುತ್ತದೆ. ಲಂಕೇಶರು ಇಷ್ಟಪಡುವ ಎಲ್ಲ ಗುಣಗಳು, ಅಂದರೆ ಇಡಿಯಾದ ವ್ಯಕ್ತಿತ್ವ, ಮೃಗತ್ವ, ಶಾಂತತೆ, ಲವಲವಿಕೆ, ನಿರಾಳತೆ ಇವಳಲ್ಲಿವೆ. ಲೇಖಕರು ಹೇಳುವಂತೆ ``ಅವಳ ಮಾತುಗಳಲ್ಲಿ ಕಾವ್ಯ ತಾನೇ ತಾನಾಗಿ ಬರುತ್ತಿತ್ತು. ಅದು ಮಾತುಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿರಲಿಲ್ಲ. ಅವಳ ಹೊಟ್ಟೆಯಿಂದ, ಹೃದಯದಿಂದ ಎದ್ದು ಬಂದಂತೆ ಬರುತ್ತಿತ್ತು..... ಚುರುಕಾಗಿ ಓಡಾಡುವ, ಆದರೆ ಆಳದಲ್ಲಿ ತೀವ್ರವಾಗಿ ವೇದಿಸುವ ಜೀವ ಅದು ದೇವಿಯ ಜೀವ."(ಪು. ೧೪೧). ಮುಂದೆ ಅವಳ ಇತರ ಗುಣಗಳನ್ನು ಹೀಗೆ ಹೇಳುತ್ತಾರೆ, `` ಅವಳ ಭಾವ ಪುಟಿಯುತ್ತಿದ್ದುದೇ ಹಳ್ಳಿಯ ಗಟ್ಟಿಗತನದಿಂದ,..... ಅಳಿಯ ಏಕಾಂತ ಕುಸುಮಳ ಕಣ್ಣಿಗಿಂತ ಅತ್ತೆ ದೇವಿಯ ಕಣ್ಣು ಉಗ್ರವಾಗಿದ್ದುದು, ಮೃಗತ್ವ ಅಡಿಗಿಸಿಕೊಂಡಿದ್ದು ಗಮನಿಸಿದ.. " (ಪು. ೧೪೨) ನೇರವಾದ, ನಿರ್ಭಿಢೆಯ ಮಾತು, ಸ್ವಲ್ಪ ಒರಟುತನ, ಭಾವುಕತೆ, impulsive ಆಗಿ ಪ್ರತಿಕ್ರಿಯಿಸುವದು. ಇವು ಲೇಖಕರ ಸ್ವತಃ ಗುಣಗಳಾಗಿದ್ದು

ಎಷ್ಟರಮಟ್ಟಿಗೆ ಅವು ಅವರ ಕೃತಿಯಲ್ಲಿ ಕಂಡು ಬರುತ್ತವೆನ್ನುವದು ಕುತೂಹಲಕಾರಿ ವಿಷಯವಾಗಬಹುದು.

ಏನಿದ್ದರೂ, ಮೇಲ್ಕಾಣಿಸಿದಂಥ ಸಹಜತೆ, ಸರಳತೆ, ಉತ್ಕಟತೆಯ ಬದುಕಾದಾಗ, ಲಂಕೇಶರು ಆರಂಭದಲ್ಲಿ ಉದ್ಧರಿಸುವ `` ಹರಿವ ನದಿಗೆ ಮೈಯೆಲ್ಲ ಕಾಲು/ ಉರಿವ ಕಿಚ್ಚಿಗೆ ಮೈಯೆಲ್ಲ ಬಾಯಿ/ಬೀಸುವ ಗಾಳಿಗೆ ಮೈಯೆಲ್ಲ ಕೈ" ಎನ್ನುವ ಅಲ್ಲಮಪ್ರಭುವಿನ ವಚನ ಸಾಕಾರವಾಗುತ್ತದೆ. ರೂಢಿಗತವಾದ ನಡವಳಿಕೆಗಳಿಂದ ಸ್ಪಷ್ಟವಾದ ಆಚಾರಗಳಲ್ಲಿ ಸಿಲುಕುವ ಅಪಾಯದಿಂದ ಪಾರಾಗಲು ಇದೊಂದೇ ಉಪಾಯ.

`ವೃಕ್ಷದ ಪತ್ನಿ' ಯ ಪಾರ್ವತಜ್ಜಿ ಕೂಡ ಕಾವ್ಯಮಯ ಬದುಕನ್ನು ನಡೆಸಿದವಳು. ಯಾವ ಹೊಂದಾಣಿಕೆಗೆ ದುರಾಶೆಗೆ ಬಗ್ಗದೆ, ತೆಂಗಿನ ಮರದ ಆಸರೆಯೊಂದಿಗೆ ಇಡೀ ಬಾಳು ನಡೆಸುತ್ತಾಳೆ. ಇವಳೂ ದೇವಿಯಂತೆ ಲೇಖಕರು ಇಷ್ಟಪಡುವ ಕೆಲವು ಗುಣಗಳಿಂದ ಜೀವಿಸುವವಳು. ಇವಳ ವರ್ಣನೆ ಗಮನಿಸಿ.

``ನನ್ನ ಕವಿ ದೃಷ್ಟಿಯಲ್ಲಿ ಈ ಪಾರ್ವತಜ್ಜಿಯ ವ್ಯಕ್ತಿತ್ವ ಇಡಿಯಾಗಿತ್ತು, ಗೋದಿಯ ಕಾಳಿನಂತೆ, ಪಾರಿವಾಳದ ವ್ಯಕ್ತಿತ್ವದಂತೆ, ಆಕೆ ಕಲ್ಪಿಸಿದ ಕತೆಗಳ ಜೀವಂತಿಕೆಯಂತೆ. ... ಸತ್ತಿದ್ದಕ್ಕೆ ಜೀವಕೊಡುವ ಶಕ್ತಿ ಆಕೆಗಿತ್ತು." (ಪು. ೯೬)

ಆದರೆ ಪಾರ್ವತಜ್ಜಿಯ ಪಾತ್ರ ಲೇಖಕರ ಭಾಷಣದಲ್ಲೇ ಬೆಳೆಯುತ್ತ ಹೋಗಿ ನಾಟ್ಯೀಕರಣವಾಗದೆ ಹೋಗುತ್ತದೆ. ಬಹುಶಃ ಕವನವಾಗಿ ಹೆಚ್ಚು ಯಶಸ್ವಿಯಾಗಬಹುದಾದ ಕತೆ ಇದು.

ಲಂಕೇಶರು ಮನುಷ್ಯನ ಮನಸ್ಸಿನೊಳಗೆ ಎಷ್ಟು ಆಳವಾಗಿ ಹೋಗಿ ನೋಡಬಲ್ಲರು ಎನ್ನುವದಕ್ಕೆ `ತೋಟದವನು' ಕತೆ ಸಾಕ್ಷಿ. ಇಬ್ಬರು ರೈತರ ನಡುವಿನ ಜಿದ್ದು ಅನಿರೀಕ್ಷಿತ ತಿರುವುಗಳನ್ನು ಪಡೆಯುತ್ತ ಗಹನವಾದ ಸತ್ಯವನ್ನು ಎದುರಿಗೆ ತಂದು ನಿಲ್ಲಿಸುತ್ತದೆ: "ಮನುಷ್ಯ ಎಷ್ಟು ವಿಚಿತ್ರ ಅಂತ ಕಾಣಹತ್ತಿತ್ತು.. ಅವನಿಗೆ ಸಂಪತ್ತು, ವಿದ್ಯೆ, ಕಲೆ ಎಲ್ಲ ಬೇಕು. ಆದರೆ ಆತ ಯಾವದೋ ಅಸಹ್ಯ ಜಿದ್ದಿನಿಂದ ಬದುಕುತ್ತಾನೆ. ಅದಿಲ್ಲದಿದ್ದರೆ ಅವನು ಬದುಕುವುದಕ್ಕೆ ಕಾರಣವೇ ಸಿಗಲ್ಲ.. " (ಪು. ೧೦೧)

ಇಂಥದೇ ಸತ್ಯವನ್ನು `ಸುಭದ್ರ' ಕತೆಯಲ್ಲೂ ನೋಡಬಹುದು. ``ಇನ್ನೊಂದು ವ್ಯಕ್ತಿಯ ಆಳಕ್ಕೆ ನಮ್ಮ ಆಳಕ್ಕೆ ಹೋಗುವ ಮೂಲಕ ಮಾತ್ರ ಹೋಗುವದು ಸಾಧ್ಯ" (ಪು. ೧೧೬ - 2) ಎನ್ನುವ ಲೇಖಕರು ಮನಸ್ಸಿನಾಳಕ್ಕೆ ಇಳಿಯುವದು ಮಾತ್ರವಲ್ಲ, ಅಲ್ಲಿಂದ ಮುತ್ತುಗಳನ್ನು, ಬೇತಾಳಗಳನ್ನು ಆಯ್ದುಕೊಂಡು ಬರುತ್ತಾರೆ.

ಇಲ್ಲಿನ ಎಲ್ಲ ಕತೆಗಳು ಸಾರ್ಥಕವಾಗಿವೆ ಎಂದೇನಿಲ್ಲ. ಉದಾಹರಣೆಗಾಗಿ: `ಹರಿದ ಊರಿನವರು' ನಮ್ಮ ಹಳ್ಳಿಗಳಲ್ಲಿ ಸಾಮಾನ್ಯ ಜನರಲ್ಲಿ ಉಂಟಾಗುತ್ತಿರುವ ರಾಜಕೀಯ ಪ್ರಜ್ಞೆ, ಕಲುಷಿತಗೊಂಡಿರುವ ಬದುಕನ್ನು ಚಿತ್ರಿಸುತ್ತದೆ. ಆದರೆ ಲೇಖಕರು ಏನು ಹೇಳಬಯಸುತ್ತಾರೋ ಅದು ಚದುರಿ ಹೋದಂತಾಗಿ ಕತೆ ಕೇವಲ ಪತ್ರಿಕಾವರದಿಯಂತಿದೆ. ಉಳಿದಡೆ ಕಾಣುವ ಒಳನೋಟಗಳ ಕೊರತೆಯೂ ಇದೆ.

ಲಂಕೇಶರು ಕತೆಗಾರ, ಕಾದಂಬರಿಕಾರ, ನಾಟಕಾರ ಸಂಪಾದಕರಾಗಿದ್ದರೂ ಅವರ ನಿಜವಾದ ಮನೋಧರ್ಮ ಕವಿಯದು ಎಂದು ಅನಿಸುತ್ತದೆ. ಅವರ ಗದ್ಯ ಕೂಡ ಕಾವ್ಯದ ಲಕ್ಷಣಗಳನ್ನು, ಸೊಬಗನ್ನು ಎಂದೊ ಪಡೆದುಕೊಂಡಿದೆ. ಅವರು ವಾಚ್ಯವಾದಾಗ, ಅವರಲ್ಲಿನ ಪತ್ರಿಕಾಕರ್ತ ಮಧ್ಯ ಪ್ರವೇಶಿಸಿದಾಗ ಮಾತ್ರ ಕಲೆಗೆ ವ್ಯತ್ಯಯ ಬರುತ್ತದೆ.

ಪ್ರತಿಯೊಂದು ಭಾವನೆ, ಕ್ರಿಯೆಯನ್ನು ಅದರ ಸಂಕೀರ್ಣತೆಯೊಂದಿಗೆ ಹಿಡಿಯ ಲೆತ್ನಿಸಿದ್ದಾರೆ ಲಂಕೇಶ. ಬದುಕನ್ನು ಅದರ ಎಲ್ಲ ಸೌಂದರ್ಯ, ಆಕರ್ಷಣೆ, ಒರಟುತನ, ದೌರ್ಬಲ್ಯಗಳೊಂದಿಗೆ ಇಷ್ಟಪಡುತ್ತಾರೆ. ಇದನ್ನೆಲ್ಲ ಬರೆಯಲು ಹೊಸ ರೀತಿ ಹಿಡಿದಿದ್ದಾರೆ. ಆದರೆ ಕತೆಯ ಮಾಧ್ಯಮ ಅವರ ಉದ್ದೇಶಕ್ಕೆ, ಸಂವೇದನೆಗೆ ಹೊಂದುವದಿಲ್ಲ ಎನಿಸುತ್ತದೆ. ಕಾದಂಬರಿ ಅಥವಾ ಟಿಪ್ಪಣಿಗಳು ಅವರಿಗೆ ಹೆಚ್ಚು ಸೂಕ್ತ ಮಾಧ್ಯಮವಾಗಬಹುದು.

●●

ಸಂಗಮದ ಶಾಸನಗಳು

- ಹನುಮಾಕ್ಷಿ ಗೋಗಿ

ಜೇವರ್ಗಿ, ಶಹಾಪೂರ ತಾಲೂಕುಗಳು ಮತ್ತು ರಾಯಚೂರು ಜಿಲ್ಲೆಗಳು ಸೇರುವಲ್ಲಿ, ಕೃಷ್ಣವೇಣಿ-ಭೀಮರಥಿ ನದಿಗಳು ಸಂಗಮಿಸುವಲ್ಲಿ ಸುಪ್ರಸಿದ್ಧವಾದ ಸಂಗಮನಾಥ ದೇವಸ್ಥಾನವಿದೆ. ಆ ದೇವಸ್ಥಾನದಲ್ಲಿರುವ ಎರಡು ಶಾಸನಗಳನ್ನು ಪ್ರಕಟಿಸುವ ಪ್ರಯತ್ನವಿದಾಗಿದೆ.

೧. ಸಂಗಮೇಶ್ವರ ದೇವಸ್ಥಾನದ ಒಳಗೋಡೆಯಲ್ಲಿರುವ ಕಲ್ಲು

ಸುಮಾರು ೨$^1/_2$' x ೩$^1/_2$ ಗಾತ್ರದ ಕರಿಕಲ್ಲಿನಲ್ಲಿ ಈ ಶಾಸನವನ್ನು ಕೆತ್ತಲಾಗಿದೆ. ಮೇಲೆ ಸುಣ್ಣ ಬಳಿದಿರುವುದರಿಂದ ಕಷ್ಟಪಟ್ಟು ಶಾಸನವನ್ನು ಓದಬೇಕಾಗುತ್ತದೆ. ಕಲ್ಯಾಣ ಚಾಲುಕ್ಯ ಚಕ್ರವರ್ತಿ ತ್ರೈಳೋಕ್ಯಮಲ್ಲ ಮೊದಲನೆಯ ಸೋಮೇಶ್ವರನ ಕಾಲದ (ಕ್ರಿ. ಶ. ೧೦೪೪-೧೦೬೮) ಶಾಸನವಿದಾಗಿದ್ದು, ಮಿತಿಯ ಉಲ್ಲೇಖ ಇಲ್ಲ.

ಸಗರ ಪೈನೂಜಿನ್ನು ಆಳುವ ಮಹಾಮಂಡಳೇಶ್ವರರ ಬಿರುದಾವಳಿಗಳೊಂದಿಗೆ ಅವರ ವಂಶಾವಳಿಯನ್ನು ಹೀಗೆ ನೀಡುತ್ತದೆ.

ಚಂದ

ರೇವ ಭೂಭುಜ | ಮಂಡಳಿಕಗೊಗ್ಗಿ (ಗಣ್ಡಗೋಪಾಳ ನೃಪ)

ಈ ಗೊಗ್ಗರಸರ ಆಳ್ವಿಕೆಯನ್ನು ಉಲ್ಲೇಖಿಸಿ ಶಾಸನ ಅಪೂರ್ಣವಾಗಿ ಕೊನೆಗೊಳ್ಳುತ್ತದೆ. ಶಾಸನದ ಪೂರ್ಣಪಾಠ ಇಂತಿದೆ.

೧. ಓಂ ನಮೋ ಭೀಮರಥಿ ಕೃಷ್ಣಭಿಣ್ಣಾ ಸಂಗಮದಂಶವೇ ಸಂಸ್ಥಾಪಿ

೨. ತ ಜಗದ್ದೇಹ ಶಾಸ.... ಪ್ರಕೀರ್ಣ್ಣೆ ಶ್ರೀಮಲ್ಲಿಂಗ

೩. ಂತ್ರೈಪುರುಷಮಯಣಂಕಾರ ವೇದಾದಿ ಶ

೪. ಬ್ದ ಸ್ತೋಮಾದ್ಯಂ ಭೂರ್ಭ್ಭುವ ಸ್ವರ್ಜ್ಜನ ಮಹತಪಸತ್ಯಾದಿ

೫. [illegible] ಕಾಪ್ತ ತೇಜೋ [illegible] ಯುಕ್ತಂ ಶಲಿಶಿಖಿ
೬. ದಿನ ಕೃಸ್ಪೇತ್ರಸಬ್ಬೂರ್ಮಿ ವಾಯುವ್ಯೋಮಾತಾತ್ಮೀಯ ಕಾ
೭. ಯಂ ಜಗದುದಯಮನಿಗಾಗದ್ಯಭಿತ್ಯ ಭಾವಮ್ ॥ ⓖ
೮. ಶ್ರೀ ರಾಮಾರಮಣೀಯ ವಾಸಹೃದಯಂ ಶೋದೃತ್ತವಿದ್ದಿ
೯. ಜಯಶ್ರೀ ರಾಮಾರಮಣೀಯಂ ದಕ್ಷಿಣಭೂಜಂ ಸ
೧೦. ತೃ (?) ಪ್ರಿಯ ಸ್ಪಷ್ಟಸ್ಸಾಕ್ಷಿ ರಾಮಾರಮಣೀಯ ವಕ್ತ್ರ
೧೧. ನೆಸೆದಂ ಸಪುಂಣ್ನ ಕೀರ್ತ್ತೀಸ್ಸು ವಕ್ತ್ರರಾಮಾರಮಣೀಯ ದಿಕು
೧೨. ವಳಯಂ ತ್ರೈಳೋಕ್ಯಮಲ್ಲಾಧಿಪಂ ॥ ಸ್ವಸ್ತಿ ಸಮಸ್ತ ಭು
೧೩. ವನಾಶ್ರಯ ಶ್ರೀಪೃಥ್ವೀವಲ್ಲಭಂ ಮಹಾರಾಜಾಧಿರಾಜಂ ಪ
೧೪. ರಮೇಶ್ವರಂ ಪರಮಭಟ್ಟಾರಕಂ ಸತ್ಯಾಶ್ರಯ ಕುಳತಿ
೧೫. ಳಕಂ ಚಾಳುಕ್ಯಾಭರಣಂ ಶ್ರೀಮತ್ತ್ರೈಳೋಕ್ಯಮಲ್ಲದೇ
೧೬. ವರ ವಿಜರಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನ
೧೭. ಮಾಚಂದ್ರಾರ್ಕ್ಕ ತಾರಂಬರಂ ಸಲುತ್ತಮಿರೆ ॥ ತತ್ಪಾ
೧೮. ದ್ವಿಜ ನರನಾಥರ ಸತ್ಪೋದಯುಗಭಕ್ತರಾದರರಿ ಕು
೧೯. ಜಕುಳಮಾದಾತ್ಮಜ್ಞನ ದಕ್ಷಸ್ಸಪತ್ನದಯಾತರ
೨೦. ಯ್ಯಣಪ್ರಿಯ॥ ಕ್ರಮದಿಂದಂ॥ ನೆಗಟ್ಟಾದಿಯ ಚಂದನ
೨೧. ಪೆರ್ಮ್ಮಗನಾದಂ ಜನ.. ವದನಲವರ ಆದಶನ ಮ
೨೨. ಗಂ ಚಂದಂ ಚಂದಿಗನ ಮಗಂ ರೇವಭೂಭುಜಂ ಕ್ರಮದಿಂದಂ॥
೨೩. ಭಣ್ಣಣದೊಳೊದವಿ ಮೂವಡಿಗಣ್ಣನೆನತ್ತಿಗಟ್ಟಿ ರೇವ
೨೪. ಭೂಪನ ತಂಮ್ಮ ಮಣ್ಣಳಿಕ ಗೊಗ್ಗಿ ನೆಗಟ್ಟನಖಿಣ್ಣೆ
೨೫. ತ ಮಣ್ಣಳಿಕ ಗಣ್ಣಗೋಪಾಳನೃಪಂ॥ ಭಂಗುರತ
೨೬. ರಾಸಿದೊಡೇಶರಂಗಳುಗ್ರ ಶನಿಗಂಭೀರಮೆನೆ ರೇವಭೂ
೨೭. ಪ ಮಾತಂಗ ಮದಭ್ಯಂಗನಳಿಯನ ಸಿಂಗಂ
೨೮. ರಣವಾದಿಯೊಳಸ್ಸ ಗತಾಂಕಜನೆಸೆದಮ್ ॥ ⓖ
೨೯. ಸ್ವಸ್ತಿ ಸಮಧಿಗತ ಪಂಚ ಮಹಾಶಬ ಮಹಾಮ
೩೦. ಣ್ಡಳೇಶ್ವರಂ ಮಾಹಿಷ್ಮತಿ ಪುರವರೇಶ್ವರಂ ಜೂರಾ
೩೧. ನೇಕ ಪ್ರಹತಿಕಂ ದುಂತಂಪ್ರತಿ [illegible]
೩೨. ಗಣ್ಣಗೋಪಾಳಂ ಜಯಲಕ್ಷ್ಮೀ [illegible] ಸಾ

೩೩. ಮನ್ತಂ ರಿಪುಮದಭಂಗನಳಿಯನ ಸಿಂಗಂ ಶ್ರೀಮನ್ಮ
೩೪. ಹಾಮಣ್ಡಳೇಶ್ವರ ಗೊಗ್ಗರರ್ ಸಗರಮ್ಮೆನೂಱುಮ
೩೫. ನುಭಯಸಾಮ್ಯಂಬೆರಸು ಸುಖಸಂಕಥಾ ವಿನೋದದಿಂ
೩೬. ನಾಳ್ಪು ರಾಜ್ಯಂಗೆಯ್ಯುತ್ತುಮಿಪ್ಪ ಧರ್ಮ್ಮಚಿತ್ತರಾಗಿ

ಇಲ್ಲಿಗೆ ಶಾಸನ ನಿಂತುಹೋಗುತ್ತದೆ.

ಸಂಗಮೇಶ್ವರ ದೇವಸ್ಥಾನದ ಹೊರಗೆ ನಿಲ್ಲಿಸಿದ ಕಲ್ಲು

ಸುಮಾರ ೭' x ४' ಗಾತ್ರದ ಬೃಹದಾಕಾರದ ಕರಿಕಲ್ಲಿನಲ್ಲಿ ಈ ಸುದೀರ್ಘ ಶಾಸನವನ್ನು ಕಂಡರಿಸಲಾಗಿದೆ.

ಕಲ್ಯಾಣಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲದೇವ IIರ ಕಾಲದ ಶಾಸನವಿದು. ಶಾಸನದ ४೮-೫೦ನೆಯ ಸಾಲುಗಳಲ್ಲಿ ಬರುವ ``ಜಗದೇಕಮಲ್ಲದೇವ ವರ್ಷದ ೬ನೆಯ ರುಧಿರೋದ್ಗಾರಿ ಸಂವತ್ಸರದ ಶ್ರಾವಣದ ಪೌರ್ಣ್ನಮಾಸ್ಯೆ ಬುಧವಾರ ಧನಿಷ್ಠಾ ನಕ್ಷತ್ರ ಶೋಭನಯೋಗ ಭವಕರಣ ಸೂರ್ಯ್ಯಸಿಂಹ ಸಂಕ್ರಮಣದಂದು ಸೋಮಗ್ರಹಣ" ಎನ್ನುವ ಮಿತಿಯು ಜುಲೈ ೨೮, ೧೧४೩ಕ್ಕೆ ಸರಿಹೊಂದುತ್ತದೆ.

ಶಾಸನವು ಬ್ರಹ್ಮನಿಂದ ಜಗದೇಕಮಲ್ಲನವರೆಗೆ ಚಾಲುಕ್ಯ ವಂಶಾವಳಿಯನ್ನು ನೀಡಿ, ಆತನ ಮಹಾಪ್ರಧಾನ ಸೇನಾಧಿಪತಿ ಕಡಿತವೆರ್ಗಡೆ ಕನ್ನಡ ಸಂಧಿವಿಗ್ರಹಿ ಹಿರಿಯ ದಂಡನಾಯಕ ಬಮ್ಮಣಯ್ಯ (ಬಮ್ಮದೇವ)ನನ್ನು ಹೆಸರಿಸುತ್ತದೆ. ಈತನ ತಮ್ಮ ಸಾಹಣಿ ಹೆಗ್ಗಡೆ ಮಹಾಗ್ರಾಯ್ತ ದಂಡನಾಯಕ ಚಿದ್ದರಸರು ಸಗರವ್ವೆನೂಱುಂಬಾಡದಲ್ಲಿದ್ದರೆಂದು ಸೂಚಿಸುತ್ತದೆ. ಈ ಚಿದ್ದರಸರು, ಮಹಾಮಂಡಳೇಶ್ವರ ಹೆಮ್ಮಾಡಿಯರಸರು, ಹಯ್ಯಾಳದ ಪ್ರಭು ನಾಗರಸ ದಂಡನಾಯಕರು, ಮುಂನೂರ್ಬ್ಬರಿಟ್ಟಗೆಯ ಪ್ರಭು ತಿಪ್ಪಣಭಟ್ಟರು, ಮಾಡುಬಳ ಪ್ರಭು ಕೇಶವದೇವರು, ಹಾರುಣಗೆಱೆಯ ಪ್ರಭು ಬಮ್ಮರಸರು ಇತ್ಯಾದಿ ಪ್ರಮುಖರು ಸೇರಿ ಸಂಕ್ರಮಣದಂದು ಸಂಗಮದಲ್ಲಿ ಸ್ನಾನ ಮಾಡಿ, ಉಭಯ ಮುಖಿಧೇನುದಾನ, ಭೋಜನದಾನ, ಸುವರ್ಣದಾನಗಳನ್ನು ಬ್ರಾಹ್ಮಣರಿಗೆ ನೀಡಿದ ವಿಷಯವಿದೆ. ನಂತರ ಗುಂಡಲೂರು, ಸೂಗೂರು, ಕೋಬಾಳ (ಈಗಲೂ ಇದೇ ಹೆಸರುಗಳಿವೆ) - ಈ ಮೂರು ಊರುಗಳನ್ನು ಸಂಗಮೇಶ್ವರ ದೇವರ ಪೂಜೆ, ಪುನಸ್ಕಾರ, ಅಂಗಭೋಗ, ನೈವೇದ್ಯ, ಖಂಡಸ್ಫುಟಿತ, ಜೀರ್ಣೋದ್ಧಾರ, ಚೈತ್ರ ಪವಿತ್ರಾರೋಪಣ, ಪಾತ್ರ ಪಾವುಳಗಳಿಗಾಗಿ ದತ್ತಿಯಾಗಿ ಬಿಟ್ಟುದನ್ನು ತಿಳಿಸುತ್ತದೆ. ಈ ದತ್ತಿಯನ್ನು ಸ್ಥಾನಾಚಾರ್ಯರಾದ ಕಾಳಾಮುಖ ರುದ್ರಶಕ್ತಿ ಪಂಡಿತದೇವರು ಪಾಲಿಸುವರೆಂದು ಹೇಳುತ್ತದೆ. ಇದಲ್ಲದೆ ವಿದ್ಯಾರ್ಥಿಗಳು, ಯತಿಗಳು, ಬ್ರಾಹ್ಮಣರಾದಿಯಾಗಿ

ದೇವಸ್ಥಾನದಲ್ಲಿರುವ ಐವತ್ತೈದು ಜನರಿಗೆ ೨೬ ಮತ್ತರು ಭೂಮಿ ದತ್ತಿ ಬಿಟ್ಟದನ್ನೂ ಈ ಶಾಸನ ವಿವರಿಸುತ್ತದೆ.

ಅಣ್ಣನಂಕಕಾಜಿನ ಘಳೆ, ಬಣ್ಣದ ಬಾಡು, ಎಮ್ಮೆದಾನ, ತೈತ್ರಿಯವೇದ ಖಂಡಿಕೆ ಶಾಸ್ತ್ರ ವ್ಯಾಖ್ಯಾನ, ಕಾಳಾಮುಖ ರುದ್ರಶಕ್ತಿ ಪಂಡಿತರು ಇತ್ಯಾದಿ ಉಲ್ಲೇಖಗಳು ಗಮನ ಸೆಳೆಯುತ್ತವೆ.

ಶಾಸನದ ಪೂರ್ಣಪಾಠ ಕೆಳಗಿನಂತಿದೆ.

೧. ಓಂ ನಮ ಶಿವಾಯ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ

೨. ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ ll ಸೋಮಸೋಮಪದು ವ್ರಿತ್ತಿಮಿದು

೩. ನಿಂ ದೇವದೇವಪದ ಪಂಕಜಯುಗ್ಮೆ ಷಟ್ಪದನನಿಹಿತ ಸ್ಥಿರಭಕ್ತ್ಯಾದೇವ ದೇವ ವರದಾ ಭವಸಧ್ಯಃ ll ಸರ್ವ್ವ ವರ್ಣ್ನ

೪. ಧರ ಶ್ರೀಮಾನ್ ಸರ್ವ್ವವರ್ಣ್ನಧರಃಪ್ರಿಯ ಆಪಾಯಾದುವನಂ ಪಾಯಾತ್ಸಮಸ್ತ ಭುವನಾ

೫. ತ್ರಯಂ ವಸುಭಿರ್ವ್ವಸುಧಾ ರಾಜಭಿಸ್ಸಗರಾಧಿಭಿ ಯಸ್ಯ ಯಸ್ಯ ಯದಾ ಭೂಮಿ ತಸ್ಯ ತಸ್ಯ ತದಾ

೬. ಫಲಂ ಶ್ರೀರಮಣಿಪ್ರಿಯನುದರದ ವಾರಿಜದಲರೊಳು ಪರಾಗರಾಗದವೊಲು ವಾಕು ಶ್ರೀರ

೭. ಮಣನಖಿಳ ವೇದ ವಿಶಾರದನೊಗೆದಂ ಹಿರಣ್ಯಗರ್ಬ್ಭಂ ಬ್ರಹ್ಮll ಚತುರಾಸ್ಯಂ ಸ್ವಾಯಂಭುವಯತಿಯಾ ತದ್ವ್ರ

೮. ತಿ ವಿನೂತ ಮಾನವ್ಯನನಾ ಯತಿಪತಿ ಹರೀತನಂ ತದ್ವ್ರುತಿಪಂ ಪರಾಶತಿಂ (?) ಯೆಂಬ ಯತಿಯಂ ಪಡೆದಂll

೯. ಅಮಳಾತ್ಮನೆನಿ ಹಾರೀತಿ ಮುನೀಂದ್ರನೆ ಪಂಚಶಿಖಾಸಮಾಖ್ಯನೆನಿಪ್ಪಾಯ ಮಿಯ ಕರಚುಳುಕ ಜವಿದಿಂದಮೆ ಪು

೧೦. ಟ್ಟಿದನೆಳೆಗೆ ನಂನ್ನಿ ಚಳುಕಿ ನ್ರಿಪೇಂದ್ರಂll ಆ ವಂಶಜಾತನಖಿಳ ಕಳಾವಿದ ನೆನಿಸಿರ್ದ್ದ ವಿಕ್ರಮಾಂಕಂಗಂ ಸಂಭಾವಿನಿತೆ ಬೊನ್ತಾ

೧೧. ದೇವಿಗವೊಗೆದಂ ತನೂಭವಂ ತೈಲನ್ರಿಪಂ ll ವ್ರ ll ಜನನಾಥಾಗ್ರಣಿ ತೈಲ ನಗ್ರತನೆಯ ಸತ್ಯಾಶ್ರಯ ಸತ್ಯಭೂ

೧೨. ಪನ ತಮ್ಮಂ ವಿಜಿಗೀಷು ವಿಕ್ರಮನ್ರಿಪಂ ತದ್ವಿಕ್ರಮಾದಿತ್ಯದೇವನ ತಮ್ಮಂ ಜಯಸಿಂಹ ನಾತನ ಸುತಂ ತ್ರೈ

೧೩. ಳೋಕ್ಯಮಲ್ಲಾಂಕನಾತನ ಪುತ್ರಂ ಭುವನೈಕಮಲ್ಲನ ಸುಹ್ರಿತ್ಸೆಲ್ಲಂ ಕಳಾಕೋವಿದ ಕಂ॥ ಭುನೈಕಮಲ್ಲನ

೧೪. ನುಜ ಭುಂ* ವನತ್ರಯ ಕೀರ್ತ್ತಿ ಭುನರಕ್ಷಾದಕ್ಷಂ ಭುವನಯ್ಕ ಭುಂಭುಕಂ ಭೂಭುವನ ಜನಾನಂದಮೂರ್ತ್ತಿ ವಿಕ್ರಮಭೂಪ॥

೧೫. ಎನೆ ನೆಗರ್ಜ್ದ ವಿಕ್ರಮಾಂಕನ ತನೆಯಂ ಭೂಲೋಕಮಲ್ಲನಾ ವಿಭುವಿಗೆ ಜಗಜ್ಜನ ವಿನುತನನತಿಶಯ ಬಟಿನನಘ ಜಗದೇಕಮಲ್ಲವಲ್ಲಭ

೧೬. ನೊಗೆದ॥ವ್ರಿ॥ ಜನಮೆಲ್ಲಂ ಕೈಮುಗಿಯೆ ಸೆಪ್ತಾಂಬೋಧಿ ಸಂವೇಷ್ಟಿತಾವನಿಯಂ ಪರ್ಬ್ಬಿರೆ ತನ್ನ ಕೀರ್ತ್ತಿ ಬಳದ್ವೀರಾತಿ ಮಹಾಂಗನಾಜನ

೧೭. ವಕ್ತ್ರಾಂಬುಹಾಂಕ ತಾಂಗೆ ವರೆಯಂ ಯನ್ತಂ ಬಸನ್ತಂದಲೆಂಬಿನ ವಾಳ್ದಂ ಜಗದೇಕ ಮಲ್ಲನತುಳಂ ವೈರೀಭ ಕಣ್ಣೀರಿವ.॥

೧೮. ಇನ್ತು ನೆಗಳ್ದ ಪ್ರತಾಪ ಚಕ್ರವರ್ತ್ತಿ ಜಗದೇಕಮಲ್ಲದೇವರ ಮಹಾಪ್ರಧಾನಂ ಸೇನಾಧಿಪತಿ ಕಡಿತವೆರ್ಗ್ಗಡೆ ಂ** ಕನಡ

೧೯. ಸಂಧಿವಿಗ್ರಹಿ ಹಿರಿಯದಂಡನಾಯಕಂ ಬಂಮಣಯ್ಯಂಗಳ ಮಹಿಮಾಳಂಕಾರ ಮೆನ್ತೆಂ ದೊಡೆ॥ವ್ರಿ॥ ಪ್ರಭು ಮಂ

೨೦. ತ್ರೋತ್ಸಾಹಶಕ್ತಿ ತ್ರಿತಯಗುಣನಿಧಾನಂ ಸಮಾಧಾನಚಿತ್ತಂ ಶುಭರೂಪಂ ವಾಗ್ವಧೂಟಿ ಮುಖಿಮುಕುರನುದ

೨೧. ಗ್ರ ಪ್ರತಾಪ ಪ್ರಚಣ್ಡ ಪ್ರಭವಾಶಾದಂನ್ತಿ ದನ್ತೋಪಮ ವಿಶದ ಯಶಶ್ರೀ ವಧೂವಲ್ಲಭ ದುರ್ಲ್ಲಭ ದೋಷ ದಣ್ಡನಾ

೨೨. ಥಾಗ್ರಣಿ ಸಕಳಕಳಾಪಾಂಗ ಬಮ್ಮದೇವಂ॥ಕ॥ ಮರನಲ್ಲದ ಕಲ್ಪಕುಜಂ ಖರಕರ ನಲ್ಲದ ದಿವಾಧಿನಾಥಂ ದೋಷಾಕರನ

೨೩. ಲ್ಲದಮಿತ್ರರುಚಿ ದುಶ್ಚರಿತ್ರನಲ್ಲದ ಶಚೀಶ್ವರಂ ಬರ್ಮ್ಮರಸ॥ ಎನೆ ನೆಗಳ್ದ ಬರ್ಮ ದಂಡೇಶನ ತಮ್ಮಂ ಸಿಜಕುಳಾಂಬರ ದ್ಯುಮಣಿ

---

* ಭು ಅಕ್ಷರದ ಹಿಂದೆ ಬರಬೇಕಿತ್ತು.

**ಕ ಅಕ್ಷರದ ಮುಂದೆ ಬರಬೇಕಿತ್ತು.

೨೪. ಚತುರ್ವ್ವನಧಿಪರೀತ ಮಹೀತಳವಿನುತಂ ಶ್ರೀ ಚಿದ್ದರಾಜ ನದಟಿಂಗೋಜ।। ಅರಿ ವಿಲ್ಲನ್ಯಬಳಂ ಬ್ರಿಹದ್ಭುಜಬಳಾ

೨೫. ದೋಷರ್ಕ್ಕೆ ಸಂಗ್ರಾಮದೊಳುರಗೆಲ್ಲಾದ್ವಿನೋದಾಳಿಯಿಲ್ಲ ನುಡಿಯೊಳು ಪೊರ್ದ್ದಿಲ್ಲ ದೋಷರ್ಕ್ಕೆ ಕಣ್ಬರಿಯಿಲ್ಲತ್ರಿಜನಾಳಿ

೨೬. ಬೇಡೆ ಕೊರಲೊಳ್ಕೊಂಕಿಲ್ಲ ಚಾರಿತ್ರದೊಳ್ಕೊರೆಯಿಲ್ಲ ದ್ಯುತಿಕಂ ಪೊಗರ್ತ್ತೆಗೆಸಕಂ ಶ್ರೀಚಿದ್ದದಂಡೇಶನ।। ನೆಗಳ್ದ ..ರಕಾಗ್ರ

೨೭. ಯನ ನಾಕುಳವಾಗ್ರ್ಯಸ್ಸಿರ್ದ್ದಗುರ್ಬ್ಬಿನ ಜಿಗಿನೊಳಗಾಗಿ ದುಷ್ಟಬಳ ಮನ್ನೆಯ ಸಂಕುಳ ಮಲಯಾಗ್ನಿಯೊಳಗೆ ಮಿಗಿ

೨೮. ಲಾಗಿ ಕಾಯ್ವುದೇವ ಚಿದ್ದಚಮೂಪತಿ ಮುತ್ತಲಟ್ಟಿ ಜಟ್ಟಿಗ ಬಳರಾಧಿಪದೇವನ ಶೌರ್ಯ್ಯದಗುರ್ಬ್ಬಿನ ದೇವ ನೆಗಳ್ದಪೆರ್ಗ

೨೯. ಭಯವಹಿತಾಸ್ವವರ್ಗ್ಗ ರಣರಂಗ ಸಮರ್ತ್ಥ ಮಹೋಗ್ರದುಷ್ಟ ಮಂಸಿನಯಕುಳ ಶಿಷ್ಟ ಮನ್ನೆಯ ಕುಳಾರಕ

೩೦. ಯಕ್ಕನಯ ಚಂಡೆಕಾಜಿಮನ್ನೆಯ ಗಜಸಿಂಹಮಂನೆಯ ಸಮೂಹವಾರಿಜ ರಗ ನತೆಯ ಮಂನೆಯ ವೈ

೩೧. ರಿವಜ್ರನೆಂಬುದಖಿಳೊರ್ವ್ವರೆ ಚಿದ್ದಣ ದಣ್ಣನಾಥನ।। ಬ. ಸಿ. ವಾಳುಕೊ ....

೩೨. ದೊವಯೊಳು.. ದಾತನ...

೩೩. ಕಾಯ್ಪಿನಿಂ ಪೆಜಗಿದಿರಾಗಿ ಸೂಧವಮನಿರಿದು...

೩೪. ....।। ಸ್ವಸ್ತಿ ಸಮಸ್ತ

೩೫. ಭುವನಾಶ್ರಯಂ ಶ್ರೀ ಪ್ರಿಥ್ವೀವಲ್ಲಭಂ ಮಹಾರಾಜಾಧಿರಾಜಂ ಪರಮೇಶ್ವರಂ ಪರಮ ಭಟ್ಟಾರಕಂ ಸತ್ಯಾಶ್ರಯಕುಳತಿಳಕಂ ಚಾಳು

೩೬. ಕ್ಯಾಭರಣಂ ಶ್ರೀಮತ್ತ್ರೈಳೋಕ್ಯಚಕ್ರವರ್ತ್ತಿ ಜಗದೇಕಮಲ್ಲದೇವರ ವಿಜಯರಾಜ್ಯ ಮುತ್ತರೋತ್ತರಾಭಿವ್ರಿದ್ಧಿ ಪ್ರವರ್ದ್ಧಮಾ

೩೭. ನಮಾಚಂದ್ರಾರ್ಕ್ಕ ತಾರಂಬರಂ ಕಲ್ಯಾಣಪುರದ ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತ

೩೮. ಮಿರೆ। ತತ್ಪಾದಪದ್ಮೋಪಜೀವಿ ಸ್ವಸ್ತಿಸಮಸ್ತ ರಾಜ್ಯಾಭ್ಯುದಯ................ ಮಾ

೩೯. ನೋಂನಸ ಪ್ರಭುಮಂತ್ರೋತ್ಸಾಹ ಶಕ್ತಿತ್ರಯ.................................ಕಡಿತ

೪೦. ವೆರ್ಗ್ಗಡೆ ಕಂನಡಸಂಧಿವಿಗ್ರಹಿ ಒರಿಯದಂಡನಾಯಕಂ....................... ಸಾಸಿರ .... ಯಿರ್ಚ್ಛಾಸಿರ

೪೧. ಬೆಳವಲು ಮುನ್ನೂಱು ಬನವಸೆ ಹಂನ್ನಿರ್ಚ್ಛಾಸಿರದೊಳಗೆ................ ಬಿಟ್ಟಂ

೪೨. ತಹರಿಷ್ಪಪ್ರಭು.. ನಾಳುತ್ತಮಿರೆ..

೪೩. ಸಾಹಣಿ ಸಗರವಯ್ಯನೂಱುಂಬಾಡದ.... ಹೆರ್ಗ್ಗಡೆ ಮಹಾ ಗ್ರಾಯ್ತಂ ದಂಡನಾಯಕ ಚಿದ್ದರ

೪೪. ಸರುಂ ಅಳಿಯಮಂನೆಯ ಶ್ರೀಮನ್ಮಹಾಮಂಡಳೇಶ್ವರಂ ಹೆಮ್ಮಡಿಯರಸ ಮುಖ್ಯಮಾ ಸನ್ತತಿಗಳು

೪೫. ಮವರ ಹೆರ್ಗ್ಗಡೆ..... ನಾಯಕನು ಹಯ್ಯಾಳದ ಪ್ರಭು ನಾಗರಸ ದಂಡನಾಯಕರುಂ ಮುಂನೂರ್ಬ್ಬರಿಟ್ಟಗೆ

೪೬. ಯ ಪ್ರಭು ತಿಪ್ಪಣಭಟ್ಟರು ಮಾಡುಬುಳ ಪ್ರಭು ಕೇಶವದೇವನುಂ ಹಾರುಣಗೆಱೆಯ ಪ್ರಭು ಬಮ್ಮರಸನುಂ

೪೭. ಸಗರದಪ್ರಭು....... ಮದ್ದೆಯ ನಾಯಕನಿನ್ತಿವರು ಪ್ರಮುಖವಯ್ನೂಱುಂಬಾಡದ ಗ್ರಾಯ್ತರು

೪೮. ಮಿದ್ರ್ಪ ಶ್ರೀಮಚ್ಚಾಳುಕ್ಯಪ್ರತಾಪಚಕ್ರವರ್ತ್ತಿ ಜಗದೇಕಮಲ್ಲದೇವ ವರ್ಷದ ೬ನೆಯ ರುಧಿರೋದ್ಗಾರಿ ಸಂವತ್ಸ

೪೯. ರದ ಶ್ರಾವಣದ ಪೌರ್ಣ್ನಮಾಸ್ಯೆ ಬುಧವಾರ ಧನಿಷ್ಠಾ ನಕ್ಷತ್ರ ಶೋಭನಯೋಗ ಭವಕರಣ ಸೂರ್ಯ್ಯಸಿಂ

೫೦. ಹ ಸಂಕ್ರಮಣದಂದು ಸೋಮಗ್ರಹಣ ನಿಮಿತ್ತವಾಗಿ ಶ್ರೀಮನ್ಮಹಾಪ್ರಧಾನಂ ಸೇನಾಧಿಪತಿ ಹಿ

೫೧. ರಿಯ ದಂಡನಾಯಕಂ ಚಿದ್ದರಸರು ಮಹಾನದಿ ದಕ್ಷಿಣಪ್ರಯಾಗೆ ಸಕ ಶ್ರೀ ಕ್ರಿಷ್ಣ ವೇಣ್ಣಾ ಭೀಮರಥ್ಯಾದೇವಿ

೫೨. ಸಂಗಮದಲು ಸ್ನಾನದಾನಗಳಂ ಮಾಡಲುವೇಡಿ ಒಂದುಭಯಮುಖಿಧೇನು ಸಂಗ್ರಹಣ ಭೋಜನ ಸುವರ್ಣ್ನ ದಾ

೫೩. ನಾದಿ ಮಹಾದಾನಂಗಳಂ ವೇದಶಾಸ್ತ್ರವಿದ್ಯಾವಿಶಾರದರಪ್ಪ ಬ್ರಾಹ್ಮಣರ್ಗ್ಗೆ ಕೊಟ್ಟಲ್ಲಿಯ ಮಹಾಸ್ಥಾನ ಸ್ವಯಂಭು

೫೪. *ಶ್ರೀ ಸಂಗಮೇಶ್ವರ ದೇವರ್ಗ್ಗೆಯಾಳೆಯಾಗಿ ನಡೆವ ಸಗರವಯ್ನೂಱಱ ಬಳಿಯ ಬಾಡಂ ಗುಂಡಲೂರು ಸೂಗೂ

೫೫. ರು ಕೋಬಾಳಸ್ತು ಮೂಪುರವುಭೆಯ ಸಾಮ್ಯವಂ ದೇವರಪೂಜೆ ಪುನಸ್ಕಾರವಂಗ ಭೋಗ ನೈವೇದ್ಯ ಖಂಡ

೫೬. ಸ್ಫುಟಿತ ಜೀರ್ಣ್ನೋದ್ಧಾರ ಚೈತ್ರ ಪವಿತ್ರಾರೋಪಣ ಪಾತ್ರಪಾವುಳಕ್ಕೆಂದಾ ದೇವರ ಶ್ರೀಪಾದಪದ್ಮಂ

೫೭. ಗಳಲು ಧಾರಾಪೂರ್ವ್ವಕಂ ಮಾಡಿ ಸರ್ವ್ವನಮಸ್ಯವಾಗಿ ಬಿಟ್ಟು ಮತ್ತವನ್ನದಾನ ತೈತ್ರಿಯ ಖಂಡಿಕೆ ಶಾ

೫೮. ಸ್ತ್ರ ಬ್ಯಾಖ್ಯಾನಕ್ಕೆ ಮುಂಡಕಲ್ಲ ಚೆಬುಳ ಹೊಲದೊಳಗೆ ಕಕ್ಕೆಯ ಬಾಗಿಂ ಮೂಡ ಮುಂಡಕಲ್ಲಿಂದೆ ವಾರ

೫೯. ಹಡಗಿಲೆಯ ಬ್ರಹ್ಮೇಶ್ವರದೇವರ ಮಾನ್ಯದ ಕೆಯ್ಯಸೀಮೆಯಿಂ ತೆಂಕ ಕೋಡಾಲ ಸೀಮೆಯಿಂ ಪಡುವ

೬೦. ಲಯ್ವತ್ತು ಗೇಣ ಅಣ್ಣನಂಕಶಾಱನ ಘಳೆಯಲು ಯತಿಗಳ ಬ್ರಾಹ್ಮಣರ ವಿದ್ಯಾರ್ತ್ಥಿಗಳ ಭೋಜನಕ್ಕೆ ದೇವಸ್ಥಾನದ ಐ

೬೧. ವತ್ತಯ್ದು ಮಾನಸರ್ಗ್ಗೆ ನೆಲ್ಲಕೂಳ್ ಮೆಯ್ಯೊಳಸ ತುಪ್ಪವಯ್ದು ಬಣ್ಣದ ಬಾಡಿನ್ತೀ ಮಾರ್ಗ್ಗದಿಂ ನಡಯಿಸುವ

೬೨. ನ್ತಾಗಿರಲಜರಾಮರ ಕೀಲಾರವಾಗಿ ತೆಪ್ಪವಳೆಯಂ ನಡೆಯಿಸುವನ್ತಾಗಿ ಯಾಜಿಮ್ಮೆಯ ಕೊಟ್ಟು ಸತ್ರ

೬೩. ಕ್ಕೆ ಬಿಟ್ಟ ಮಸ್ತರಿಪ್ಪತ್ತು ತೈತ್ರಿಯ ವೇದಖಂಡಿಕೆಯಂ ವಿದ್ಯಾರ್ತ್ಥಿಗಳ್ಗೆ ಹೇಳ್ವ ಬ್ರಾಹ್ಮಣಂಗೆ ಮತ್ತರೊಂದು

೬೪. ಶಾಸ್ತ್ರಬ್ಯಾಖ್ಯಾನಕ್ಕೆ ಮತ್ತರೊಂದು ಪ್ರಭುಗಳ ಪಂಚಾತ್ತಿರಕೆ ಮತ್ತರು ನಾಲ್ಕಂನ್ತು ಮತ್ತರು ೨೬ ಯಿನ್ತಿ

೬೫. ನಿತು ದೇವಕಾರ್ಯ್ಯಮಂ ಸ್ಥಾನಾಪತಿ ಕಾಳಾಮುಖರು ರುದ್ರಶಕ್ತಿಪಂಡಿತ ದೇವರು ನಿತ್ಯಸ್ಥಿತಿ

೬೬. ಯಲು ಸಾಗಿ ನಡೆಯಿಸುವರೀ ಧರ್ಮವನುಭೆಯ ಸಾಮ್ಯದರಸುಗಳ್ ಪ್ರತಿಪಾಳಿ ಸುವರಿದಂ

---

*೧ -೧ ಸಾಲಿನ ಕೆಳಗೆ ಬರೆದಿದೆ.

೬೭. ಪ್ರತಿಪಾಳಿಸಿದವರ್ಗ್ಗೆ ವಾರಣಾಸಿ ಕುರುಕ್ಷೇತ್ರವರ್ಗ್ಯ ತೀರ್ಥಂಗಳಲು ಸಾಸಿರ ಕೋಟಿ ಕವಿಲೆಯಂ ಕೋ

೬೮. ಡುಂ ಕೊಳಗುಮಂ ಸುವರ್ಣ್ನದಲುಂ ಪಂಚರತ್ನಂಗಳಲುಂ ಕಟ್ಟಿಸಿ ಸಾಸಿರಕೋಟಿ ವೇದಶಾಸ್ತ್ರಪಾರಗರ

೬೯. ಪ್ಪ ಬ್ರಾಹ್ಮಣರ್ಗ್ಗೆ ಪುಣ್ಯತಿಥಿಗಳಲು ಮನೋತ್ಸಾಹದಿಂ ಕೊಟ್ಟ ಫಲವಕ್ಕು ಈ ಧರ್ಮ್ಮವನಳಿದವಂ

೭೦. ಗಂಗೆ ಗಯೆ ಕುರುಕ್ಷೇತ್ರವರ್ಗ್ಯತೀರ್ಥಂಗಳಲು ಸಾಸಿರಕೋಟಿ ಹೊಂನ ಬಣ್ಣದ ಕವಿಲೆಗಳ್ಮ ಸಾಸಿರಕೋಟಿ

೭೧. ವೇದಪಾರಗರಪ್ಪ ಬ್ರಾಹ್ಮಣರುಮಂ ದಿಬ್ಯತಪೋಧನರುಮನಳಿದ ಪಾತಕಂ ಸಾರ್ದ್ದ್ವ ಸ್ವಗೋತ್ರಸ

೭೨. ಹಿತಂ ನರಕಕ್ಕಿಳಿಗು ॥ಶ್ಲೋಕ॥ ಸ್ವದತ್ತಂ ಪರದತ್ತಂ ವಾಯೋಹರೇತಿ ವಸುಂಧರಾಂ ಷಷ್ಟಿರ್ವ್ವ

೭೩. ರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೇಕ್ರಿಮಿ ॥ ೬ ಕಲುಕುಟಿಗ ಚೌಡೋಜಂಗೆ ಗುಂಡಲೂರ ಹೊಲ

೭೪. ದಲ್ಲಿ ಸಂಗಮದ ಬಟ್ಟೆಯ ಬಡಗ ಮತ್ತರು ೨ ಮಾನ್ಯ॥

ಕದರಮಂಡಲಗಿ ಹನುಮಂತ

- ಡಾ. ಬಿ. ಪಿ. ಪಾಟೀಲ

ಗ್ರಾಮ ಪರಿಚಯ : ಬ್ಯಾಡಗಿ ಧಾರವಾಡ ಜಿಲ್ಲೆಯ ಒಂದು ಮುಖ್ಯ ತಾಲೂಕ ಸ್ಥಳ. ಮೆಣಸಿನಕಾಯಿ ಮೊದಲಾದ ವಾಣಿಜ್ಯ ಬೆಳೆಗಳಿಂದ ಇದು ಆರ್ಥಿಕ ಸಂಪತ್ತಿನಿಂದ ಸಮೃದ್ಧವಾದ ಪ್ರದೇಶವೆನಿಸಿದೆ. ಬ್ಯಾಡಗಿಯಿಂದ ಪೂರ್ವಕ್ಕೆ ಸುಮಾರು ಐದು ಕಿ. ಮಿ. ದೂರದಲ್ಲಿ ಕದರಮಂಡಲಗಿ ಗ್ರಾಮವಿದೆ. ಇಲ್ಲಿ ಸುಮಾರು ಹತ್ತುಸಾವಿರ ಜನರು ವಾಸಿಸುವರು. ಹನುಮಂತದೇವರು ಈ ಗ್ರಾಮದ ಅಧಿದೈವನಾಗಿದ್ದಾನೆ. ಈತನಿಗೆ ಈ ಊರಿನಲ್ಲಿ ಕಾಂತೇಶ ಎಂದು ಕರೆಯುತ್ತಾರೆ. ಈ ದೇವರಿಂದ ಈ ಗ್ರಾಮದ ಹೆಸರು ಪ್ರಸಿದ್ಧವಾಗಿದೆ. ಹೀಗಾಗಿ ಹನುಮಂತನ ಹೆಸರಿನೊಂದಿಗೆ ಗ್ರಾಮದ ಹೆಸರನ್ನು ಸೇರಿಸಿ `ಕದರಮಂಡಲಗಿ ಹನುಮಂತ' ಎಂದು ಹೇಳುವ ಪರಿಪಾಠ ಬೆಳೆದುಕೊಂಡು ಬಂದಿದೆ. ಈ ಗ್ರಾಮದ ಜನರು ಹನುಮಂತನನ್ನು ಗ್ರಾಮದೇವತೆಯನ್ನಾಗಿ ಆರಾಧಿಸುತ್ತಾರೆ. ಈ ಗ್ರಾಮ ದೇವತೆಯನ್ನು ಕುರಿತು ಕೆಲವು ಐತಿಹ್ಯಗಳು ಹುಟ್ಟಿಕೊಂಡಿವೆ.

ಐತಿಹ್ಯ ೧. ಪಾಂಡವರ ಕೊನೆಯ ಅರಸನಾದ ಜನಮೇಜಯ ರಾಯನು ವ್ಯಾಸರಾಯನ ಆಜ್ಞಾನುಸಾರವಾಗಿ ಈ ಹನುಮಂತದೇವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿದನು. ಹೀಗಾಗಿ ಇದಕ್ಕೆ ಸುಮಾರು ಐದು, ಆರುಸಾವಿರ ವರ್ಷಗಳ ಇತಿಹಾಸವಿದೆ ಎಂದು ಒಂದು ಐತಿಹ್ಯ ತಿಳಿಸುತ್ತದೆ.

ಐತಿಹ್ಯ ೨. ಒಂದು ದಿನ ಈ ಹನುಮಂತ ದೇವರು ಹಿರೇಎಡಚಿ ಗ್ರಾಮದಿಂದ ಕಜ್ಜಾರಿ ಎಂಬ ಗ್ರಾಮಕ್ಕೆ ಚಕ್ಕಡಿಯ ಮೇಲೆ ಹೊರಟಿದ್ದನಂತೆ. ಕದರಮಂಡಲಗಿ ಗ್ರಾಮದ ಅಗಸಿಗೆ ಬರಲು ಚಕ್ಕಡಿ (ಬಂಡೆ) ಯ ಅಚ್ಚು ಮುರಿಯಿತಂತೆ, ನಾಲ್ಕು ಐದು ಸಲ ಅಚ್ಚನ್ನು ಸರಿಪಡಿಸಲು ಪ್ರಯತ್ನಪಟ್ಟರೂ ಅದು ಸರಿಯಾಗಲಿಲ್ಲವಂತೆ, ಕೊನೆಗೆ ಒಬ್ಬ ಹುಡುಗನ ಮೈಯಲ್ಲಿ ಕಾಂತೇಶನು ಪ್ರವೇಶಮಾಡಿ `ನಾನು ಇನ್ನು ಮೇಲೆ ಇದೇ ಗ್ರಾಮದಲ್ಲಿ ವಾಸವಾಗುತ್ತೇನೆ. ಅದಕ್ಕಾಗಿ ನನ್ನನ್ನು ಇಲ್ಲಿಯೇ ಪ್ರತಿಷ್ಠಾಪನೆ ಮಾಡಬೇಕು' ಎಂದು

ಹೇಳಿದನಂತೆ. ಆ ಹೇಳಿಕೆಯ ಪ್ರಕಾರ ಕದರಮಂಡಲಗಿಯಲ್ಲಿ ಈ ಹನುಮಂತ ದೇವರನ್ನು ಸ್ಥಾಪನೆ ಮಾಡಲಾಯಿತು ಎಂದು ಮತ್ತೊಂದು ಐತಿಹ್ಯ ಹೇಳುತ್ತದೆ.

ಮೂರ್ತಿಯ ಆಕಾರ: ಮೂರ್ತಿಯನ್ನು ಕರಿಯ ಕಲ್ಲಿನಲ್ಲಿ ಕೆತ್ತಲಾಗಿದೆ. ಸುಮಾರು ಐದು ಅಡಿ ಎತ್ತರ ಇದೆ. ಎರಡು ಕೈಗಳು ಇವೆ. ಎಡಗೈಯನ್ನು ಟೊಂಕದ ಮೇಲೆ ಇರಿಸಿದ್ದರೆ ಬಲಗೈಯನ್ನು ಮೇಲಕ್ಕೆ ಎತ್ತಿದೆ. ಮೂರ್ತಿಯ ಎಡಭಾಗದಲ್ಲಿ ಗದೆ ಹಾಗೂ ಥಾಲು ಇದೆ. ಮೂರ್ತಿಯ ಮುಖವು ಎದುರಿಗೆ (ಒಂದು ಬದಿಗೆ ವಾಲದೆ) ನೇರವಾಗಿದೆ. ತಲೆಗೆ ಕಿರೀಟವನ್ನು ಧರಿಸಿದೆ. ಕಣ್ಣು ಮತ್ತು ಕಿರೀಟದೊಳಗೆ ಸಾಲಿಗ್ರಾಮ ಇದೆ. ಎರಡು ಕಾಲುಗಳ ಮಧ್ಯದಲ್ಲಿ ಉತ್ಸವಮೂರ್ತಿ ಇದೆ.

ದಿನ ನಿತ್ಯದ ಪೂಜೆ: ಈ ದೇವರಿಗೆ ದಿನಾಲು ತ್ರಿಕಾಲ ಪೂಜೆಯು ನೆರವೇರುತ್ತದೆ. ಬೆಳಗಿನ ಜಾವದಲ್ಲಿ ಹನುಮಾವತಾರ ಮಧ್ಯಾಹ್ನದಲ್ಲಿ ಭೀಮಾವತಾರ ಸಂಜೆಯ ಸಮಯದಲ್ಲಿ ಮಧ್ವಾವತಾರ ಹೀಗೆ ಮೂರು ಅವತಾರಗಳ ಪ್ರತೀಕವಾಗಿ ಮೂರು ಸಮಯದಲ್ಲಿ ಪೂಜೆಗಳು ಸಲ್ಲುವವು.

ಬೆಳಗಿನ ಜಾವದಲ್ಲಿ ಹನುಮಾವತಾರ ಪೂಜೆಯನ್ನು ಬ್ರಾಹ್ಮಣ ಕುಲದವರು ನೆರವೇರಿಸುವರು. ಈ ಪೂಜಾರಿಗಳು ಮನೆಯಲ್ಲಿಯೇ ಸ್ನಾನಮಾಡಿ ಮಡಿಯಾಗಿ ಪಂಜೆಯನ್ನು ಧರಿಸಿಕೊಂಡು ಪೂಜಾ ಸಾಮಾನುಗಳೊಂದಿಗೆ ಗುಡಿಗೆ ಬರುವರು. ಪೂಜೆಗಾಗಿ ನಿರ್ಮಿಸಿದ ಹೊಂಡದಿಂದ ನೀರನ್ನು ತರುವರು. ಅದರಲ್ಲಿ ಪರಿಮಳವನ್ನು ಬೆರೆಸುವರು. ಆ ನೀರಿನಿಂದ ಹನುಮಂತದೇವರನ್ನು ಸ್ನಾನಮಾಡಿಸುವರು. ಗಂಧವನ್ನು ಹಚ್ಚಿ, ಪುಷ್ಪಗಳನ್ನು ಅರ್ಪಿಸಿ, ಆರತಿಯನ್ನು ಬೆಳಗುವರು. ಅನ್ನವನ್ನು ನೈವೇದ್ಯ ಮಾಡುವರು. ಈ ಸಮಯವಲ್ಲಿ ದೇವರಿಗೆ ಅರುವೆಗಳ್ನು ತೊಡಿಸುವದಿಲ್ಲ. ಇದೊಂದು ವಿಶೇಷ.

ಮಧ್ಯಾಹ್ನದ ಸಮಯದಲ್ಲಿ ಭೀಮಾವತಾರ. ಈ ಪೂಜೆಯನ್ನು ಲಿಂಗಾಯತ ಕುಲದವರು ನೆರವೇರಿಸುವರು. ದೇವಾಲಯದ ಆವರಣದಲ್ಲಿರುವ ಹೊಂಡದ ನೀರನ್ನು ತರುವರು. ಆ ನೀರಿನಿಂದ ಮೂರ್ತಿಗೆ ಅಭ್ಯಂಜನ ಮಾಡಿಸುವರು. ಗಂಧವನ್ನು ಹಚ್ಚುವರು. ನಂತರ ದೇವರಿಗೆ ಪೋಷಾಕುಗಳನ್ನು ತೊಡಿಸುವರು. ಆರತಿಯನ್ನು ಬೆಳಗುವರು ಅನ್ನವನ್ನು ಎಡೆ ಹಿಡಿಯುವರು.

ಸಾಯಂಕಾಲದ ಸಮಯದಲ್ಲಿ ಮಧ್ವಾವತಾರ ಪೂಜೆಯನ್ನು ಗುಡಿಯ ಪೂಜಾರಿ ಮಾಡುವನು. ಈತ ಸಾಂಪ್ರದಾಯಿಕವಾಗಿ ಪೂಜೆಯನ್ನು ನೆರವೇರಿಸುವನು. ರಾತ್ರಿ ಸಮಯದಲ್ಲಿ ಮುಪ್ಪಿನ ವಯಸ್ಸಿನ ಉಡಿಗೆಯನ್ನು (ಪಂಜೆಯನ್ನು) ಉಡಿಸುವರು ನಂತರ ಆರತಿಯನ್ನು ಬೆಳಗುವರು.

ಜಾತ್ರೆ: ಈ ದೇವರಿಗೆ ವರ್ಷದಲ್ಲಿ ಎರಡು ಸಲ ಜಾತ್ರೆಯು ನೆರವೇರುತ್ತದೆ. ಮೊದಲನೆಯದು ಕಾರ್ತಿಕ ಮಾಸದಲ್ಲಿ ಜರುಗುವದು. ಕಾರ್ತಿಕ ಅಮವಾಸ್ಯೆಯ ನಂತರ ಬರುವ ಶನಿವಾರ ಹಾಗೂ ರವಿವಾರಗಳಂದು ಇದು ನಡೆಯುತ್ತದೆ. ಉತ್ಸವ ಪ್ರಾರಂಭವಾಗುವದಕ್ಕಿಂತ ಮೊದಲು ದೈವದ ವತಿಯಿಂದ ದೇವರಿಗೆ ಅಭಿಷೇಕ ಪೂಜೆಯನ್ನು ಸಲ್ಲಿಸುವರು. ಸಾಯಂಕಾಲದಲ್ಲಿ ದೀಪೋತ್ಸವವನ್ನು ನೆರವೇರಿಸುವರು. ಮರುದಿನ ಊರಿನ ಪ್ರತಿಯೊಂದು ಮನೆತನದವರು ಪೂಜಿಸುವರು. ದೀಪೋತ್ಸವವನ್ನು ಜರುಗಿಸುವರು. ನಂತರ ನಾಯಕ ಮನೆತನದವರು ಹೊಂಡದಲ್ಲಿ ಕಟ್ಟಿಗೆಯ ಎರಡು ಡೋಣಿಯ ಮೇಲೆ ಮಂಟಪವನ್ನು ಕಟ್ಟುವರು. ಅದರ ಮೇಲೆ ತೇರನ್ನು ಕಟ್ಟುವರು, ಶನಿವಾರ ದಿನದಂದು ಪೂಜಾರಿಯ ಮನೆತನದ ಹೆಣ್ಣುಮಕ್ಕಳು ಐದುಗಿತ್ತಿಯರಾಗುವರು. ಅವರು ಸಾಯಂಕಾಲ ದೇವರಗುಡಿಗೆ ಬರುವರು. ದೇವರಿಗೆ ಆರತಿಯನ್ನು ಬೆಳಗುವರು. ನಂತರ ಬ್ರಾಹ್ಮಣ ಮನೆತನದವರು ಆರತಿಯನ್ನು ಬೆಳಗುವರು. ತದನಂತರ ಪೂಜಾರಿಯು ಉತ್ಸವ ಮೂರ್ತಿಯನ್ನು ಹಿಡಿದುಕೊಂಡು ತೇರಿನಲ್ಲಿ ಕೂಡ್ರುವನು. ತೆಪ್ಪದ ಮಂಟಪದ ಕೆಳಗೆ ಒಂದು ದೀಪವನ್ನು ಇಡುವರು. ನಂತರ ಶೃಂಗಾರ ಮಾಡಿದಂತಹ ತೇರು ನೀರಿನಲ್ಲಿ ಚಲಿಸಲು ಪ್ರಾರಂಭವಾಗುವದು. ಅದು ಐದು ಸುತ್ತು ಹೊಂಡವನ್ನು ಸುತ್ತುತ್ತದೆ. ಈ ಐದು ಸುತ್ತು ಮುಗಿಯುವವರೆಗೆ ಕೆಳಗಿನ ದೀಪವು ಆರುವ ಹಾಗಿಲ್ಲ. ಒಂದು ವೇಳೆ ದೀಪವು ಆರಿದರೆ ಊರಿಗೆ ಏನೋ ಕೇಡಾಗುವದು ಎಂದು ನಂಬುವರು. ಹೀಗೆ ಸ್ವಾಮಿಯ ತೆಪ್ಪೋತ್ಸವ ರಾತ್ರಿ ಹತ್ತುಗಂಟೆಯವರೆಗೆ ನೆರವೇಗುತ್ತದೆ.

ಹನುಮಂತದೇವರ ಎರಡನೆಯ ಜಾತ್ರೆಯು ಭಾರತ ಹುಣ್ಣಿಮೆಯೊಳಗೆ ಮಾಘ ಶುದ್ಧ ಪೌರ್ಣಿಮೆಯ ನಂತರ ಬರುವ ಶನಿವಾರ ಮತ್ತು ರವಿವಾರದಂದು ನಡೆಯುವುದು. ಅದು ಮಹಾರಥೋತ್ಸವ ಎಂದು ಕರೆಸಿಕೊಳ್ಳುತ್ತದೆ. ಶನಿವಾರದಂದು ಪೂಜಾರಿಯ ಮನೆತನದವರು ದೇವರ ತೇರನ್ನು ಹನ್ನೊಂದು ಅಂಕಣ ಆಗುವ ವರೆಗೆ ಕಟ್ಟುವರು. ಊರಿನ ದೈವದವರು ದೇವರಿಗೆ ಅಭಿಷೇಕ ಪೂಜೆಯನ್ನು ನೆರವೇರಿಸುವರು. ಸಾಯಂಕಾಲ ಹೂವಿನ ತೇರಿನಲ್ಲಿ ಆಚಾರ್ಯರು ಉತ್ಸವಮೂರ್ತಿ ಎಳೆಯುವರು. ರವಿವಾರ ಬೆಳಗಿನಜಾವ ಹನ್ನೊಂದು ಗಂಟೆಯ ಸಮಯಕ್ಕೆ ಬ್ರಾಹ್ಮಣ ಕುಲದವರು ತೇರನ್ನು ಎಳೆಯಲು ಪ್ರಾರಂಭಿಸುವರು. ಮೊದಲು ಇವರು ಹತ್ತು ಹೆಜ್ಜೆಯವರೆಗೆ ತೇರನ್ನು ಎಳೆಯುವರು. ನಂತರ ಉಳಿದ ಜನರು ತೇರನ್ನು ಮುಂದುವರೆಸುವರು. ಇದೇ ಪ್ರಕಾರವಾಗಿ ಸೋಮವಾರ ದಿವಸ ಪರ್ಸಿಯ ತೇರು ನಡೆಯುತ್ತದೆ.

ದೇವರ ಪವಾಡ. ೧. ಚಿತ್ರದುರ್ಗ ಪಾಳೆಯಕ್ಕೆ ಸಂತೇಬೆನ್ನೂರು ಎನ್ನುವ ಗ್ರಾಮ ಸೇರಿತ್ತು. ಈ ಗ್ರಾಮದಲ್ಲಿಯ ವಾಲ್ಮೀಕಿ ಮನೆತನದ ಸಣ್ಣಕೆಂಗಪ್ಪ ನಾಯಕ ಹಾಗೂ

ದೊಡ್ಡ ಕೆಂಗಪ್ಪ ನಾಯಕ ಅನ್ನುವಂಥವರು ಕಲಿಪಾಳೆಯಗಾರರು ಆಗಿದ್ದರು. ಅವರಿಬ್ಬರು ಈ ಗ್ರಾಮದ ಕಾಂತೇಶನಿಗೆ ಪರಮಭಕ್ತರಾಗಿದ್ದರು. ಒಂದು ಸಲ ಸಣ್ಣ ಕೆಂಗಪ್ಪ ನಾಯಕನಿಗೆ ಮಹಾರೋಗವು ಪ್ರಾಪ್ತವಾಯಿತು. ಆಗ ಅವನು ಕದರಮಂಡಲಗಿ ಗ್ರಾಮಕ್ಕೆ ಬಂದು ಕಾಂತೇಶನ ಸೇವೆಯನ್ನು ಮಾಡಿದನು. ಕಾಂತೇಶನು ಅವನ ಭಕ್ತಿಗೆ ಮೆಚ್ಚಿ ಮಹಾರೋಗದಿಂದ ಗುಣಪಡಿಸಿದನು. ಆ ಕೃತಜ್ಞತೆಗಾಗಿ ತನ್ನ ಆಧೀನಕ್ಕೆ ಒಳಪಟ್ಟ ಕದರಮಂಡಲಗಿ ಗ್ರಾಮವನ್ನು ನಂದಾದೀಪ, ಅಭಿಷೇಕ ಹಾಗೂ ನೈವೇದ್ಯದ ಸಲುವಾಗಿ ದತ್ತಿಯನ್ನು ಹಾಕಿಕೊಟ್ಟನು. (ಈ ವಿಷಯವು ಸಂವತ್ಸರ ಶಾಲಿವಾಹನ ಶಕೆ ೫೬೩ ಕರ್ಕಿ ಸಂಕ್ರಮಣದ ದಿವಸ ಇಡಿ ಗ್ರಾಮವನ್ನೆ ದತ್ತಿಕೊಟ್ಟನೆಂದು ಅಲ್ಲಿಯ ಶಿಲಾಲೇಖದಿಂದ ತಿಳಿದು ಬರುತ್ತದೆ)

ಪವಾಡ ೨. : ಮರಾಠ ರಾಜ್ಯ ಪತನವಾದ ಬಳಿಕ ಅಲ್ಲಿಯ ಪಾಳೆಯಗಾರರು ಸ್ವತಂತ್ರರಾದರು. ಅವರು ಮನಬಂದಂತೆ ಕೊಲೆ ಸುಲಿಗೆಗಳಲ್ಲಿ ಮಗ್ನರಾದರು. ದೊಂಡಗಿ ವಾಘನೆಂಬ ಪಾಳೆಗಾರನು ರಾಣೇಬೆನ್ನೂರಿನ ಮಾರ್ಗವಾಗಿ ಕೊಳ್ಳೆಹೊಡೆಯುತ್ತ ಕದರಮಂಡಲಗಿ ಗ್ರಾಮದ ಕಡೆಗೆ ಸಾಗಿಬಂದನು. ಅವನ ಮುಂದಿನ ಬೇಟೆಯೆಂದರೆ ಕದರಮಂಡಲಗಿ ಗ್ರಾಮವಾಗಿತ್ತು ಈ ಸಂಗತಿಯನ್ನು ತಿಳಿದಂತಹ ಅಲ್ಲಿಯ ಜನರು ಕಂಗಾಲಾದರು. ಆಗ ಹಿರೇ ಆಚಾರ್ಯರು ಕಾಂತೇಶನ ಪೂಜೆಯನ್ನು ಮಾಡುತ್ತಿದ್ದರು. ಈ ಗ್ರಾಮದ ಜನರು ಅವರಿಗೆ ದೈನ್ಯಭಾವದಿಂದ ಬೇಡಿಕೊಂಡರು. ಆಗ ಅವರು ಭಯ ಪಡಬೇಡಿರಿ. ಕಾಂತೇಶನು ನಿಮ್ಮನ್ನು ರಕ್ಷಿಸುವನು ಎಂದು ಹೇಳಿಕಳುಹಿಸಿದರು. ಆಚಾರ್ಯರು ದೇವರಿಗೆ ಪ್ರಾರ್ಥನೆ ಮಾಡುತ್ತ ಕುಳಿತರು. ಗ್ರಾಮದ ಗುಡಿಯವರೆಗೆ ಬಂದಿದ್ದ ದೊಂಡಿಗವಾಘನೆಂಬವನಿಗೆ ಎರಡು ಕಣ್ಣುಗಳು ಕಾಣದಂತಾದವು. ಅವನು ಕದರಮಂಡಲಗಿ ಕಾಂತೇಶನ ಮಹಿಮೆಯನ್ನು ಕೇಳಿದ್ದನು. ಹನುಮಂತದೇವರ ದೇವಸ್ಥಾನಕ್ಕೆ ಬಂದನು. ``ನಿನ್ನ ಗ್ರಾಮದಲ್ಲಿಯ ಒಂದು ಹುಲ್ಲುಕಡ್ಡಿಯನ್ನು ನಾನು ಒಯ್ಯುವದಿಲ್ಲ. ನನಗೆ ದಾರಿಯನ್ನು ತೋರಿಸು ಎಂದು ಬೇಡಿಕೊಂಡನು. ಆಗ ಸ್ವಾಮಿಯ ಕರುಣೆ ಆಯಿತು. ಅವನ ಕಣ್ಣುಗಳು ಕಾಣಲಿಕ್ಕೆ ಹತ್ತಿದವು. ದೇವರಿಗೆ ವಂದನೆಗಳನ್ನು ಸಲ್ಲಿಸಿದನು. ಕ್ಷಮೆಯನ್ನು ಕೇಳಿಕೊಂಡನು. ತನ್ನ ಎಡಗೈಯೊಳಗೆ ಹಿಡಿಯುವ ಪಟ್ಟಾಕತ್ತಿಯನ್ನು ಕಾಣಿಕೆಯಾಗಿ ಅರ್ಪಿಸಿದನು. ಈಗಲೂ ಅದು ದೇವರ ಬಳಿಯಲ್ಲಿಯೇ ಇದೆ.

ನಿಯಮಗಳು.

೧. ಕಾರ್ತಿಕ ಮಾಸದಲ್ಲಿ ಎಲ್ಲ ಮನೆತನದವರು ಕಾರ್ತಿಕವನ್ನು ಹಚ್ಚಬೇಕು.

೨. ತೇರನ್ನು ಹನ್ನೊಂದು ಅಂಕಣದವರೆಗೆ ಪೂಜಾರಿಗಳೆ ಕಟ್ಟಬೇಕು.

೩. ಜಾತ್ರೆಯ ಸಮಯದಲ್ಲಿ ಪೂಜಾರಿಯ ಮನೆತನದ ಹೆಣ್ಣು ಮಕ್ಕಳು ಮುತ್ತೈದೆಯರಾಗಬೇಕು.

೪. ಮಹಾರಥೋತ್ಸವದಂದು ಹಿರೇಎಡಚಿಗ್ರಾಮದ ಹನುಮಂತದೇವರು ಕದರ ಮಂಡಲಗಿ ತಲುಪಿದ ತರುವಾಯ ಇಲ್ಲಿಯ ತೇರು ಪ್ರಾರಂಭವಾಗಬೇಕು.

ನಂಬಿಕೆಗಳು :

೧. ತೆಪ್ಪೋತ್ಸವದ ದಿವಸ ತೆಪ್ಪದ ಬುಡದಲ್ಲಿ ಇರಿಸಿದ ದೀಪವು ಆರಿದರೆ ಊರಿಗೆ ಕೇಡಾಗುತ್ತದೆ ಎಂಬ ನಂಬಿಕೆ ಇದೆ.

೨. ಈ ದೇವರನ್ನು ನಂಬಿ ನಡೆದುಕೊಂಡರೆ ಭಕ್ತರಿಗೆ ವರವನ್ನು ದಯಪಾಲಿಸುವನು ಎಂಬ ನಂಬಿಕೆ ಇದೆ.

ಹರಕೆಗಳು :

೧. ಜಾತ್ರೆಯ ಸಮಯದಲ್ಲಿ ಮಕ್ಕಳ ಜವಳ ತೆಗೆಸುವರು.

೨. ದೀಡ ನಮಸ್ಕಾರಗಳನ್ನು ಹಾಕುವರು.

೩. ಬೆಳ್ಳಿ ಬಂಗಾರದ ಆಭರಣಗಳನ್ನು ಅರ್ಪಿಸುವರು.

೪. ದೇವರಿಗೆ ಪೋಷಾಕು ಅರ್ಪಿಸುವರು.

ಹೀಗೆ ಕದರಮಂಡಲಗಿ ಹನುಮಂತ ತನ್ನದೇ ಆದ ಪ್ರಾಚೀನತೆ ಪೂಜೆ - ಜಾತ್ರೆ ಮಹಿಮೆಗಳಿಂದ ಈ ಭಾಗದ ಪ್ರಸಿದ್ಧ ಗ್ರಾಮದೇವತೆಯಾಗಿ ಜನಮನದಲ್ಲಿ ಭಕ್ತಿ ಗೌರವಗಳನ್ನು ಮೂಡಿಸುತ್ತ ಬಂದಿದ್ದಾನೆ.

ಮಾಹಿತಿ ಹೇಳಿದವರು : ಸೋಮರಾಚಾರ್ಯ ಭೀ. ಕದರಮಂಡಲಗಿ, ನಿವೃತ್ತ ಶಿಕ್ಷಕರು, ಕದರಮಂಡಲಗಿ ವ ೧೦೦

ಘರಾಣ ಸಂಗೀತ

-ಡಾ. ಶ್ರೀಮತಿ ಮೀರಾ ಶಿವಶಂಕರ ಗುಂಡಿ

ವಿಶ್ವದಲ್ಲಿ ಭಾರತೀಯ ಸಂಗೀತಕ್ಕೆ ಸರಿಸಮವಾದ ಸಂಗೀತ ಇಲ್ಲವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಭಾರತೀಯ ಸಂಗೀತ ಕೇಳಲು ಇಂಪಾದ ಮಧುರವಾದ ಆತ್ಮಕ್ಕೆ ಹಾಗೂ ಮನಸ್ಸಿಗೆ ನೆಮ್ಮದಿಯನ್ನುಂಟು ಮಾಡುವ ಶಕ್ತಿಸಾಗರವೆಂದು ಪ್ರಸಿದ್ಧಿ ಪಡೆದಿರುತ್ತದೆ.

ಇಂಥ ಪ್ರಸಿದ್ಧ ಮಧುರ ಸಂಗೀತ ಕಲೆಯಲ್ಲಿ ಒಳ್ಳೆ ಗಾಯಕನಾಗಬಯಸುವ ವ್ಯಕ್ತಿ ಪ್ರಥಮತಹ ತನ್ನ ಧ್ವನಿಯು ಇಂಪಾಗಿರುವದೆ ಹೇಗೆ ಎಂಬುದನ್ನು ಅರಿತುಕೊಳ್ಳುವುದಲ್ಲದೆ ತನ್ನ ಕಂಠ ಅಥವಾ ಧ್ವನಿಗೆ ಹೊಂದುವಂತಹ ಶೈಲಿಯನ್ನು ಗುರುವಿನಿಂದ ತಿಳಿದು ಅನುಸರಿಸಿ ಅವರ ಮಾರ್ಗದರ್ಶನದಲ್ಲಿ ಅನುಕರಣೆ ಮಾಡಿದಲ್ಲಿ ಪ್ರಸಿದ್ಧ ಗಾಯಕನಾಗುವಲ್ಲಿ ಸಂಶಯವಿಲ್ಲ. ಅದರಂತೆ ಕಂಠಕ್ಕೆ ಶೈಲಿಗೆ ಹಾಗೂ ಧ್ವನಿಗೆ ತಕ್ಕಂತಹ ಗಾಯನವನ್ನು ಅನುಸರಿಸುತ್ತಾ ಬಂದಿರುವುದರಿಂದ ಅಭಿರುಚಿಗೆ ತಕ್ಕಂತಹ ಗಾಯನದ ಪದ್ಧತಿ ಗಾಯನದ ಶೈಲಿಗನುಸಾರವಾಗಿ ವಿವಿಧ ಘರಾಣೆಗಳು ಉತ್ಪತ್ತಿಗಳಾದವೆಂಬುದು ಗಮನಾರ್ಹವಾಗಿದೆ.

ಭಾರತೀಯ ಹಿಂದಾಸ್ತಾನಿ ಗಾಯನದಲ್ಲಿ ಮುಖ್ಯವಾಗಿ ಕಂಡು ಬರುವ ಘರಾಣೆಗಳು.
೧. ಗ್ವಾಲೀರ್ , ೨ ಆಗ್ರಾ, ೩. ಜಯಪೂರ, ೪. ಕಿರಾಣ.

ಇವು ಪ್ರಚಲಿತದಲ್ಲಿರುವ ಘರಾಣಗಳು. ಇದರಲ್ಲಿ ಪ್ರತಿಯೊಂದು ಘರಾಣ ತನ್ನದೇ ಆದಂತಹ ಗಾಯನ ಶೈಲಿಯ ವೈಶಿಷ್ಟ್ಯತೆಯನ್ನು ಕಾಪಾಡಿಕೊಂಡು ಬಂದಿರುವುದು ವಿಶೇಷ.

೧. ಸ್ವರ ಹಚ್ಚುವ ಪದ್ಧತಿ
೨. ಬಂದೀಶದ ಸ್ವರೂಪ
೩. ರಾಗದ ವಿಸ್ತಾರ
೪. ತಾನಬೋಲ್ ತಾನ್‌ಗಳ ಪದ್ಧತಿ
೫. ತಾಳ ಲಯಗಳ ವಿಶೇಷತೆ, ಮುಂತಾದವುಗಳು.

ಘರಾಣೆಗಳು ಸಂಗೀತದ ಹಾಡುಗಾರಿಕೆಯ ಎಲ್ಲ ಸ್ವರೂಪಗಳಲ್ಲಿ ಪ್ರಭಾವಿತವಾಗಿ ಕಾಣುವುದಿಲ್ಲ. ಭಕ್ತಿಗೀತ, ಭಾವಗೀತೆ, ಲಾವಣಿ, ನಾಟ್ಯಸಂಗೀತದಲ್ಲಿ ಘರಾಣೆಗಳ ವಿಶಿಷ್ಟ ಗುಣಗಳು ಕಾಣುವುದಿಲ್ಲ. ಠುಮರಿ, ಟಪ್ಪ, ಗಜರಿ, ಜೈತಿ, ಹೋರಿ ಇನ್ನಿತರ ಸಂಗೀತ ಪದ್ಧತಿಯಲ್ಲಿ ಘರಾಣೆಯ ಯಾವುದೇ ಲಕ್ಷಣಗಳು ಕಂಡು ಬರುವುದಿಲ್ಲ. ಠುಮರಿ ಪದ್ಧತಿಯಲ್ಲಿ ಕಂಡುಬರುವ ಬಾಜ್ಯಗಳು ಘರಾಣಗಳು ಆಗಿರದೆ ಕೇವಲ ಶಾಸ್ತ್ರೀಯ ಖ್ಯಾಲಿ ಸಂಗೀತದಲ್ಲಿ ಮಾತ್ರ ಘರಾಣೆಗಳ ಬಗ್ಗೆ ಕೇಳುವುದುಂಟು. ಮೂಲ ಗ್ವಾಲೀರ್ ಘರಾಣೆಯನ್ನು ಧಾರವಾಗಿಟ್ಟುಕೊಂಡು ಸಾಕಷ್ಟು ಘರಾಣೆಗಳು ಅವಿಷ್ಕಾರವಾಗಿರುವುದನ್ನು ನಾವು ಕಾಣುತ್ತಿರುವೆವು.

ಪ್ರತಿಯೊಬ್ಬ ಗಾಯಕ ಆಯಾ ಘರಾಣೆಗೆ ತಕ್ಕಂತೆ ಸಂಗೀತ ಕಲೆಯನ್ನು ಅಭ್ಯಸಿಸಿ ಜನಮನ ಮಿಡಿಯವಂತೆ ಗಾಯನ ಶೈಲಿಯನ್ನು ಪ್ರಾರಂಭಿಸಿ ಘರಾಣದ ಘನತೆ ಗೌರವ ಕಾಪಾಡಿಕೊಂಡು ಬಂದಿರುವುದು ಸುಸ್ಪಷ್ಟ. ಆದರೆ ಸಾಹಿತ್ಯದ ದೃಷ್ಟಿಯಿಂದ ಗಮನಿಸಿದರೆ ಅತ್ತ ಕಡೆಗೆ ಹೆಚ್ಚಿನ ಗಮನ ಹರಿಸದೇ ಇರುವುದು ಸ್ಪಷ್ಟವಾಗಿ ಎದ್ದು ಕಾಣುತ್ತದೆ.

ಘರಾಣೆಗಳ ವಿಷಯದಲ್ಲಿ ಹೇಳುವುದಾದರೆ ಪ್ರತಿಯೊಂದು ಘರಾಣ ತನ್ನದೇ ಆದಂತಹ ವೈಶಿಷ್ಟತೆಯನ್ನು ಕಾಪಾಡಿ ಬೆಳೆಸಿಕೊಂಡು ಬಂದಿದೆ. ಈ ಪದ್ಧತಿಯು ರಕ್ತಗತ ವಾಗಿ ವಂಶಪಾರಂಪರೆ, ರಕ್ತ ಸಂಬಂಧದಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಬೆಳೆದು ಬಂದಿರುವುದು ರಿಂದ ಘರಾಣ ಪದ್ಧತಿ ಆಸ್ತಿತ್ವದಲ್ಲಿ ಉಳಿದಿರುತ್ತದೆ. ಈಗ ಘರಾಣ ಪದ್ಧತಿಯು ಗಾಯನ ಮತ್ತು ವಾದನಕಲೆಯೊಂದನ್ನು ಹೊರತು ಪಡಿಸಿ ಮತ್ತಾವ ಕಲೆಯಲ್ಲಿ ಘರಾಣ ಪದ್ಧತಿ ಕಾಣಸಿಗುವುದಿಲ್ಲ.

ಘರಾಣೆಗೆ ಸಂಬಂಧಿಸಿದಂತೆ ಗುರುಮುಖ ಪದ್ಧತಿ ಪ್ರಾರಂಭವಾದುದು (ಸಂಕ್ಷಿಪ್ತವಾಗಿ)

ಸಂಗೀತವನ್ನು ಗುರುಮುಖ ಪದ್ಧತಿಯಿಂದಲೇ ಕಲಿಯಬೇಕು. ಅಲ್ಲದೆ ಪುರಾತನ ಕಾಲದಿಂದ ಈ ಪದ್ಧತಿಗೆ ಬಹಳ ಮಹತ್ವವನ್ನು ಕೊಟ್ಟು ಸಂಗೀತವನ್ನು ಇಲ್ಲಿಯವರೆಗೆ ಬೆಳೆಸಿ ಪೋಷಿಸಿದ್ದಾರೆ. ಶಾಸ್ತ್ರೀಯ ಸಂಗೀತವನ್ನು ಅಭ್ಯಸಿಸುವಾಗ ಅಥವಾ ಕಲಿಯುವಾಗ ಗುರುಶಿಷ್ಯ ಪರಂಪರೆಯನ್ನು ಅನುಸರಿಸುವುದು ಅತಿ ಮುಖ್ಯವಾದುದಾಗಿದೆ. ಈ ಪದ್ಧತಿಯಲ್ಲಿ ಗುರುಶಿಷ್ಯನಿಗೆ ಮಾತ್ರ ಒಂದು ಸಮಯಕ್ಕೆ ಕಲಿಸುವುದುಂಟು. ಈ ಪದ್ಧತಿಯನ್ನು ಅನುಸರಿಸುತ್ತಾ ಬಂದಿರುವುದರಿಂದ ಸಂಗೀತ ಕ್ಷೇತ್ರಕ್ಕೆ ಒಂದು ಮಹತ್ವದ ಕೊಡುಗೆ. ಸಂಗೀತವನ್ನು ಅಭಿವೃದ್ಧಿ ಪಡಿಸಿ ಇಲ್ಲಿಯವರಿಗೆ ಹಾಗೂ ಮುಂದೆ ಸಾಗುವಂತೆ ಮಾಡಿದ ಒಂದು ಹೆಮ್ಮೆ ಗುರುಶಿಷ್ಯ ಪರಂಪರೆಯಿಂದಲೇ ಎಂದು ಹೇಳಬಹುದು.

ಘರಾಣೆಯಲ್ಲಿ ಬರುವ ಬಂದೀಶ್ ಸ್ವರೂಪದ ನಿಯಮ

ಪ್ರತಿಯೊಂದು ತಾಳದ ಆವರ್ತ ಇಲ್ಲವೆ ತಾಳಗಳ ಮಾತ್ರಗಳ ಸಮೂಹದಲ್ಲಿ ಸುಮಧುರವಾಗಿ ಹಾಡುವವರ ಅಥವಾ ಕೇಳುಗರ ಮನಸ್ಸಿಗೆ ಹಿಡಿಸುವಂತೆ ಲೆಕ್ಕಾಚಾರಕ್ಕೆ ಸರಿಹೊಂದುವ ಸುಸಜ್ಜಿತವಾದ ಒಂದು ಯೋಜನೆಯ ಸುಂದರವಾದ ನಿರ್ಮಾಣಕ್ಕೆ ಬಂದೀಶ್ ಎಂದು ಕರೆಯಲಾಗುತ್ತದೆ.

ಪ್ರತಿಯೊಂದು ತಾಳದ ಆವರ್ತದಲ್ಲಿ ಅಂತರ್‌ಗತವಾಗಿ ಬಂದೀಶನ್ನು ಹೆಣೆಯಲ್ಪಟ್ಟಿದೆ. ಹೀಗೆ ಹೆಣೆದಂತ ಬಂದೀಶ್ ತಾಳದ ಆವರ್ತಗಳ ಒಂದಕೊಂದ ಸಂಬಂಧವು ಹೂಮಾಲೆಯಂತಿದೆ.

ಉದಾ. ಬಂದೀಶ್ ಸ್ವರೂಪ.

ಉದಾ. ಬಂದೀಶದ ವಿಶಿಷ್ಟ ಗುಣ

ಬಂದೀಶದ ವಿಶಿಷ್ಟ ಮೊದಲನೆದ್ದು `ಚಹರ' ಅಥವಾ `ಮುಖಡ' ಅಂದರೆ ಭೀಜ್, ಸಾಹಿತ್ಯದ ಮೊದಲ ಭಾಗ ಚರಣ, ಎರಡನೆದ್ದು ಉಪಜ್ ಭಾಗವಾಗಿದೆ ಅಥವಾ ಅವುಗಳಿಂದ ಬಂದ ಶಬ್ದಗಳ ಸಮೂಹದ ಭಾಗವಾಗಿದೆ.

ಚಹರ ಇದು ಸ್ಥಿರವಾದದ್ದಾಗಿದೆ. ಆವರ್ತದಿಂದ ಆವರ್ತನೆಗೆ ಪುನರಾವರ್ತನೆ ಆಗುತ್ತಾ ಹೋಗುವುದು ಈ ವಿಶಿಷ್ಟ ಗುಣ ಪ್ರತಿಯೊಂದು ಬಂದೀಶ್‌ದಲ್ಲಿ ಇದ್ದು `ಚಹರ' ಅಥವಾ `ಮುಖಡಾ' ಇದು ರಾಗದ ಅತಿ ಮುಖ್ಯವಾದ ಪಕ್ಕದ ಸ್ವರಗಳ ಸಮೂಹದಿಂದ ಮಾಡಿದ್ದು, ಸಾಹಿತ್ಯದಲ್ಲಿ ಇದು ಬಹು ಮುಖ್ಯವಾದುದಾಗಿದೆ. `ಪಕ್ಕಡ' ಎಂದರೆ ರಾಗದ ಮುಖ್ಯ ಅಂಗವನ್ನು ಸೂಚಿಸುವ ಸ್ವರಗಳ ಸಮೂಹವಾಗಿದೆ. ಇದು ಇಲ್ಲದೆ ಹೋದರೆ ಬಂದೀಶ್ ಅಸ್ತಿತ್ವವೇ ಇಲ್ಲದಂತಾಗುತ್ತದೆ.

`ಉಪಜ್' ಈ ಭಾಗವನ್ನು ತೆಗೆದುಕೊಂಡಾಗ ಕಲಾಕಾರನು ನಿರ್ಮಿಸಿದ ತಾಳದ ಲಯದ ಗತಿಯಲ್ಲಿ ಲೀಲಾಜಾಲವಾಗಿ ಸಾಹಿತ್ಯದ ಶಬ್ದಗಳ ಸಮೂಹದ ಸಹಾಯದಿಂದ ಗಾಯಕನು ತನ್ನ ಚತುರತೆಯನ್ನು ಶ್ರೋತೃಗಳಿಗೆ ತಿಳಿಸಿ ಹಾಡುವಲ್ಲಿ ಸ್ವತಂತ್ರನಾಗಿದ್ದಾನೆ.

ಹೀಗೆ ಮೇಲೆ ತಿಳಿಸಿದ ಬಂದೀಶ್‌ದ ನಿಯಮದ ಪ್ರಕಾರ ಯಾವುದೇ ಪರಂಪರೆಯ ಕಲಾಕಾರನು ಬಂದೀಶ್ ಹಾಡುವಾಗ, ತಾನು ಹಾಡಲು ಇಚ್ಛಿಸುವ ರಾಗದ ರಸಭಾವ ಮತ್ತು ರಂಜಕತೆಯು ಪ್ರಭಾವಶಾಲಿಯಾಗಿರುವಂತೆ ಪ್ರಯತ್ನಿಸುವನು. ಇದು ಕಷ್ಟಕರವೆನಿಸಿದರೂ ಭಾವನಾಜೀವಿ ಎನಿಸಿಕೊಂಡ ಮಾನವನಿಗೆ ಸುಲಭಕರವಾಗಿದೆ. ನಿಶ್ಚಲ ಮನಸ್ಸಿನಿಂದ ತನ್ನಲ್ಲಿರುವ ಸಹಜಧರ್ಮ ಅಥವಾ ಮನಸ್ಸಿನ ಭಾವನೆಗಳಿಗೆ ಕಲೆಯ ಸುಂದರ ರೂಪವನ್ನು

ವಿಲಂಬಿತ್‌ತೀನ್ ತಾಲ :ಬಂದೀಶ್ ರಾಗ : ಗೌಡಮಲ್ಹಾರ್ ಛೀಜ್ : ಮಾನನ ಕರೋರಿ ಗೋರಿ ತೋರೆ ಕಾರಣ ಆಯೋ ಮೇಹಾ

ಅಂತರಾ

ಹರಿಹರಿಭೂಮಿಪೆ ಬರಸೋಹಿ ಭಾಯಿ ನಯಿನಾರಿ ನಯಾ ಮೇಹಾ

ಸ್ಥಾಯಿ 1 2X 3 4 5 6 7 8 9 O 10 11 12 13 14 15 16

ಮಮರಿ
ಮಾSನನ

ಕ SSSSSSSSSS ರೋSSSSSSSSSSSರೀSSSSSSS ಗೊSSರಿತೋರೆ ಕಾSSರ ನಆಯೊ SSS ಮೇS ಹಾSSS
ಪಾSSS ನಿಧ್ರ ನಿಧ್ರSSSSSSSS ಪSS ಗನಿದನಿ ಮಗರಿ ಪಾಪSSS ನುಗಮರೆಮ ನಿರೆಸಮಪಧ ನಿಸರೆ ಸನಿಸನಿಸ
ಧಪ ಮಪಮ ಮಗ

ಹರಿಹರಿಭ್ರ
ಪಪನಿಪನಿ
ಸಾದಾ

ಅಂತರಾ

ಪೆ SSSSSSSSS ಬರSS ಸೊSS ಹಿSS ಭಾSSಯಿSSS ನಯಿನಾರಿSS ನಯಾSSSSSSSSS ಮೇSSS ಹಾSSSSSSSS
ನಿಸಾಸಾSSSSSS ನಿಧ ಹಾ ಸಾಸಿSSS ರೆ ಸರೆ ಸಸ ಧಧ ಪಪಾ ಧಪಮಗಗರಿ ರಿಪಾಪಾSSSS ಮಪಧನಿಸರೆನಿಸನಿಸಪಧಸಸಮಗ

ಕೊಟ್ಟು ಕೇಳುಗರ ಮನಸ್ಸನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತಾನೆ. ಇದು ಯೋಗ್ಯ ಗುರು ಪರಂಪರೆಯನ್ನು ಹೊಂದಿದ್ದರೆ ಮಾತ್ರ ಸಾಧ್ಯವಾಗಬಹುದು ಯಾವುದೇ ಪರಂಪರೆಯನ್ನೊಳಗೊಂಡ ಕಲಾಕಾರನು ರಾಗದಲ್ಲಿಯ ಶುದ್ಧತೆ ಮತ್ತು ಸೌಂದರ್ಯ ಹೆಚ್ಚಿಸಲು ಗುರುಪರಂಪರೆಯು ಅತಿ ಮುಖ್ಯವಾದುದು.

ಒಂದು ಪರಂಪರೆಯ ಕಲಾಕಾರನು ತಾನು ಹಾಡುವ ರಾಗಿಣಿಗಳು ಇನ್ನೊಂದು ಘರಾಣೆಯ ಪರಂಪರೆಯ ರಾಗರಾಗಿಣಿಗಳಿಂದ ಭಿನ್ನವಾಗಿರುತ್ತದೆ. ಇದು ಘರಾಣೆಯ ಪರಂಪರೆಯ ವೈಶಿಷ್ಟತೆ ಹೀಗೆ ಎಲ್ಲ ಪರಂಪರೆಯ ಗಾಯನ ಶೈಲಿಯಿಂದ ರಾಗರಾಗಿಣಿಗಳನ್ನು ಪ್ರಸ್ತುತ ಪಡಿಸುವಿಕೆಯಲ್ಲಿ ಒಂದೇ ರೀತಿಯಿಂದಿರುವುದು ಕಂಡು ಬರುವುದಿಲ್ಲ. ಪ್ರತಿಯೊಂದು ಪರಂಪರೆಯ ರೀತಿನೀತಿಗಳನ್ನು ಪುರಸ್ಕರಿಸುತ್ತಾ ಬಂದಿರುತ್ತದೆ. ಇಲ್ಲಿ ಪ್ರತಿಯೊಂದು ಘರಾಣದವರು ಶಾಸ್ತ್ರಕ್ಕೆ ಅಷ್ಟೊಂದು ಮಹತ್ವ ಕೊಟ್ಟಿರುವರೋ ಅಥವಾ ಇಲ್ಲವೋ ಎನ್ನುವುದು ಎಂದು ಸಮಸ್ಯೆ.

ಪ್ರತಿಯೊಬ್ಬ ಕಲಾವಿದನು ತನ್ನ ಘರಾಣೆಯ ವೈಶಿಷ್ಟತೆ ಘನತೆ ಮತ್ತು ತತ್ವಗಳನ್ನು ಗಮನದಲ್ಲಿ ಇಟ್ಟುಕೊಂಡಿರುತ್ತಾನೆ. ಮತ್ತು ಈ ಸಂಗತಿಯನ್ನು ಸಂಗೀತ ಜ್ಞಾನವಿದ್ದ ವರ್ಗದವರಿಗೆ ಶ್ರೋತೃಗಳಿಗೆ ತಿಳಿಸಲು ಪ್ರಯತ್ನಿಸಿ ತನ್ನ ಪ್ರತಿಭೆಯ ಮಟ್ಟವನ್ನು ಬೆಳೆಸಿಕೊಂಡು ಸಂಗೀತ ಕ್ಷೇತ್ರಕ್ಕೆ ಶೋಭೆ ತರುವುದೇ ಅವನ ಮುಖ್ಯ ಗುರಿಯಾಗಿರುತ್ತದೆ.

ಧ್ವನಿ ಮಾಧ್ಯಮದ ಮಹತ್ವ

ಸಂಗೀತಕ್ಕೆ ಧ್ವನಿಯು ಮಾಧ್ಯಮವಾದದ್ದಾಗಿದೆ. ಧ್ವನಿಗೆ ಸ್ವರವು ವಾಹನಿಯಂತಿದ್ದು ಇವೆರಡರ ಸಂಬಂಧ ಅದ್ಭುತವಾದದ್ದಾಗಿದೆ. ಧ್ವನಿ ಮತ್ತು ಸ್ವರ ಇವೆರಡರ ಅಂತರ ತಿಳಿಸುವುದಾದರೆ ಸ್ವರ ಹಾಡುವ ಧ್ವನಿಯಾಗಿದ್ದು ಮಾತನಾಡುವ ಧ್ವನಿಗಿಂತ ವಿಭಿನ್ನವಾದದ್ದಾಗಿದೆ. ಗುರು ಶಿಷ್ಯನ ಧ್ವನಿಯಲ್ಲಿಯ ಸ್ವರವನ್ನು ತರಬೇತಿಗೊಳಿಸಿ ಹದಗೊಳಿಸುವುದರೊಂದಿಗೆ ಶಿಷ್ಯನ ಧ್ವನಿಗೆ ಸಂಸ್ಕರಣ ಕೊಡುವದು ಗುರುವಿನ ಮುಖ್ಯ ಪಾತ್ರವಾಗಿದೆ. ಅವ್ಯಾಹತವಾಗಿ ನಡೆಸುವ ಈ ತರಬೇತಿಗೆ ಶಿಷ್ಯಂದಿರಲ್ಲಿ ಈ ಕಲೆಯನ್ನು ಬೆಳೆಸಿ ಮುಂದುವರಿಸುವ ಈ ಕಾರ್ಯಕ್ಕೆ ಘರಾಣ ಪದ್ಧತಿ ಎಂದು ಕರೆಯಲಾಗಿದೆ.

ಧ್ವನಿಯು ಕೇವಲ ದೇಹಕ್ಕೆ ಸಂಬಂಧವಾದ ಸಂಗತಿಯಾಗಿದೆ. ಪ್ರತಿಯೊಬ್ಬನ ಧ್ವನಿ ಅಥವ ಧ್ವನಿಯ ಗುಣಧರ್ಮ ವಿಭಿನ್ನ ರೀತಿಯಿಂದ ಇರುವುದನ್ನು ಕಾಣಲಾಗುತ್ತಿದೆ. ಇದರಲ್ಲಿ ಒಂದಕ್ಕೊಂದು ಹೋಲಿಕೆ ಇರುವ ಗುಣಗಳು ಅತಿ ವಿರಳ. ಒಬ್ಬರ ಧ್ವನಿಯು ಇನ್ನೊಬ್ಬರ ಧ್ವನಿಯಂತಿರುವುದಿಲ್ಲ. ಪ್ರತಿಯೊಬ್ಬರ ಧ್ವನಿಯು ಸೂಕ್ಷ್ಮತೆ ಮತ್ತು ವಿವಿಧತೆಗಳು

ವಿಭಿನ್ನವಾಗಿರುತ್ತವೆ. ಸೌಂದರ್ಯ ಮತ್ತು ಸೂಕ್ಷ್ಮತೆಯನ್ನೊಳಗೊಂಡ ಧ್ವನಿಯು ಕೇಳುಗರ ಮನಸ್ಸನ್ನು ಸೂರೆಗೊಳ್ಳುವಂಥ ಸಾಮರ್ಥ್ಯತೆಯನ್ನು ಹೊಂದಿರುತ್ತದೆ. ಇದು ಸಾಮಾನ್ಯ ಧ್ವನಿಗಿಂತ ಹಾಡುವ ಧ್ವನಿ ಎಂದು ಗುರುತಿಸಬಹುದಾಗಿದೆ. ಈ ರೀತಿಯಿಂದ ಧ್ವನಿಯನ್ನು ವಿಶಿಷ್ಟ ರೀತಿಯಲ್ಲಿ ತರಬೇತಿಗೊಳಿಸಿದಾಗ್ಯು ಮಾತನಾಡುವ ಧ್ವನಿಯ ವಿಶಿಷ್ಟತೆಗಳನ್ನು ಪ್ರಕಟಗೊಳಿಸುವುದು ಒಂದು ರೀತಿಯ ಗುಣಮಟ್ಟದಲ್ಲಿರುವ ಒಬ್ಬರ ಧ್ವನಿಯಿಂದ ಬೇರೊಂದು ಗುಣ ಮಟ್ಟದ ಧ್ವನಿಗೆ ಕಲೆಯನ್ನು ತಿಳಿಸಿ ಹೇಳುವುದು ಅಥವಾ ವರ್ಗಾಯಿಸುವುದು ಅಷ್ಟೊಂದು ಸುಲಭ ಸಾಧ್ಯವಾಗಿರದೆ ಕಠಿಣವಾದ ಮತ್ತು ಸಾಕಷ್ಟು ಪರಿಶ್ರಮದಿಂದ ಬರುವಂಥದ್ದಾಗಿದೆ.

ಹೀಗೆ ಧ್ವನಿ ತರಬೇತಿ ಅಥವಾ ಧ್ವನಿ ಸಂಸ್ಕರಣಕ್ಕೆ ಸಂಬಂಧಿಸಿದಂತೆ ಹೇಳುವುದೆಂದರೆ, ಇಲ್ಲಿ ಗುರುಶಿಷ್ಯರ ಪಾತ್ರ ಬಹು ಮಹತ್ವದ್ದಾಗಿದೆ. ಇದಕ್ಕೆ ಸುಮಾರು ವರ್ಷಗಳಿಂದಲಿ ಬೇಕಾಗುವದು. ಗುರುವಿನಲ್ಲಿಯ ಕೆಲವೊಂದು ಗುಣಗಳನ್ನು ಶಿಷ್ಯ ತನ್ನ ಧ್ವನಿಗೆ ಅಳವಡಿಸಿಕೊಂಡು ಅನುಕರಣೆ ಮಾಡುವುದು ಹಾಗೂ ಸ್ವಾಭಾವಿಕವಾಗಿ ಹಾಡಿ ತೋರಿಸುವಂತಾಗ ಬೇಕಾದರೆ ಸುಮಾರು ವರ್ಷಗಳ ಕಾಲ ಬೇಕಾಗುವುದು. ಇಂಥ ಒಂದು ನಿಕಟವಾದ ಗುರು ಶಿಷ್ಯರ ಸಂಬಂಧವು ಒಂದೇಸವನೆ ಸಾಗಿ ಹೋಗುವ ಸಂಬಂಧವಾಗಿದ್ದು ಇದು ಕೇವಲ ಸಂಗೀತ ಕ್ಷೇತ್ರದಲ್ಲಿ ಮಾತ್ರ ಇರುವುದನ್ನು ನಾವು ಕಾಣುವೆವು.

ಪ್ರತಿಯೊಬ್ಬ ಗಾಯಕನ ಧ್ವನಿಗೆ ತನ್ನದೇ ಆದ ವಿಶಿಷ್ಟ ಗುಣಗಳು ಇರುವವು ಎಂದುದನ್ನು ಮತ್ತು ಅವನು ತನ್ನ ಗುರುವಿನ ಧ್ವನಿಯ ಎಲ್ಲ ಗುಣಧರ್ಮಗಳನ್ನು ಅಳವಡಿಸಿಕೊಳ್ಳುವಲ್ಲಿ ಸಂಪೂರ್ಣವಾಗಿ ಸಫಲನಾಗಬಲ್ಲನು ಎಂದು ಹೇಳುವುದು ಕಠಿಣ. ತನ್ನ ಕಂಠಕ್ಕೆ ಹೊಂದುವ ಗುಣಗಳನ್ನು ಮಾತ್ರ ಅಳವಡಿಸಿಕೊಂಡು ಉಳಿದೆಲ್ಲವುಗಳನ್ನು ಬಿಟ್ಟುಬಿಡುವ ಸಾಧ್ಯತೆ ಇದೆ. ಕೆಲವೊಮ್ಮೆ ಶಿಷ್ಯನ ಧ್ವನಿ ಗುಣ ಮಟ್ಟ ಮತ್ತು ಹಾಡುವ ವಿವಿಧ ಮಾದರಿಗಳು ಒಳ್ಳೆ ಪರಿಣಾಮಕಾರಿಯಾಗುವಲ್ಲಿ ಗುರುಗಳನ್ನು ಮೀರಿಸುವಂಥ ಗುಣಮಟ್ಟ ಬರುವುದುಂಟು.

ಸಾಕಷ್ಟು ಪರಿಶ್ರಮದಿಂದ ಕಲಿತು ನಾಲ್ಕು ಜನರ ಮುಂದೆ ತನ್ನ ವಿದ್ಯೆಯ ಸಾಧನೆಯನ್ನು ಪ್ರಸ್ತುತ ಪಡಿಸುವಲ್ಲಿ ಕಲಾಕಾರನು ಗಮನಿಸಬೇಕಾದ ಮುಖ್ಯ ಅಂಶಗಳು. ಸಂಗೀತ ಕಛೇರಿ ಪ್ರಾರಂಭಿಸುವ ಪೂರ್ವದಲ್ಲಿ ತಾನು ಹಾಡತಕ್ಕ ರಾಗವು ಸಂದರ್ಭಕ್ಕೆ ತಕ್ಕಂತೆ ಪರಿಣಾಮಕಾರಿಯಾಗಬಹುದೆ ಎಂಬುದನ್ನು ಅರಿತು ರಾಗವನ್ನು ಹಾಡಲು ಪ್ರಾರಂಭಿಸಿದ್ದರೆ ಹಾಡತಕ್ಕ ಕಲಾವಿದನಿಗೆ ಅಥವ ಸಂಗೀತ ಕಛೇರಿಗೆ ಒಂದು ಮೆರಗು ಬರುತ್ತದೆ. ಇದು ನಿಜವಾದ ಕಲಾವಿದನ ಗುಟ್ಟು.

ರಾಗವನ್ನು ಹಾಡುವಾಗ ಯಾವ ತಾಳ ಲಯದಲ್ಲಿ ಹಾಡಿದರೆ ಸಂಗೀತಕ್ಕೆ ಹೆಚ್ಚು ಮೆರಗು ಬರುತ್ತದೆ ಮತ್ತು ಶ್ರೋತೃಗಳಿಗೆ ಯಾವ ತರಹದ ಮನರಂಜನೆ ಹೆಚ್ಚಿಸಿದಂತಾಗುತ್ತದೆ. ಎನ್ನುವುದನ್ನು ತಿಳಿದು ತಾಳಲಯವನ್ನು ಸಾಥಿದಾರರಿಗೆ ತಿಳಿಸಿಕೊಡಬೇಕು ಸಾಥಿದಾರನು ಅಷ್ಟೇ ಚತುರನಿದ್ದರೆ ಮಾತ್ರ ಸಂಗೀತ ಕಲೆಗೆ ಮೆರಗು ಸಿಕ್ಕಂತಾಗುವುದು ಹಾಡುವವನಿಗೆ ಸಾಥಿದಾರನು ಸಹಕಾರ ಕೊಟ್ಟಾಗ ಮಾತ್ರ ಸಂಗೀತವಾಗಿ ಪರಿಣಮಿಸುವುದು.

ಕಲಾವಿದನು ತಾನು ಹಾಡುವಾಗ ರಾಗದ ಸ್ವರ ಸಮೂಹಗಳ ಸಣ್ಣ ಸಣ್ಣ ಆಲಾಪ ಮತ್ತು ತಾನುಗಳ ತುಕಡಿಗಳನ್ನು ತಾಳಲಯಕ್ಕೆ ಸರಿಯಾಗಿ ಹಾಡಿ ತೋರಿಸಿ ಪ್ರತಿಯೊಂದು ಕಾಗದ ಬಂದೀಶ್ ತನ್ನದೇ ಆದ ತಾಳಲಯದಲ್ಲಿ ನಿರ್ಮಾಣ ಗೊಂಡಿದ್ದನ್ನು ಕಲಾವಿದನು ಅರಿತುಕೊಂಡು ತಾನು ಹಾಡುವಾಗ ಅನಿರ್ದಿಷ್ಟವಾದ ಲಯವನ್ನು ನಿರ್ಮಾಣ ಮಾಡಿ ತನ್ನ ಬುದ್ಧಿ ಚತುರತೆಯಿಂದ ಕಾಗದದಲ್ಲಿ ಹಿಡಿತವನ್ನು ಸಾಧಿಸಿ ಜನರಿಗೆ ತನ್ನ ಎಲ್ಲ ಸೂಕ್ಷ್ಮ ಅನುಭವಗಳನ್ನು ಸ್ಪಷ್ಟವಾಗಿ ತಿಳಿಯುವ ರೀತಿಯಲ್ಲಿ ಜನರ ಮುಂದೆ ಸ್ಪಷ್ಟಪಡಿಸಬೇಕು. ಇದರಿಂದ ಕಲಾಕಾರನ ಬುದ್ಧಿಮಟ್ಟವು ತಿಳಿಯುವುದು. ಮತ್ತು ಸಂಗೀತದಲ್ಲಿ ತನ್ನ ಸಾಧನೆಯ ಮಟ್ಟವನ್ನು ನಿರೂಪಿಸಿಕೊಂಡಂತಾಗುವುದು.

ಇಂಥ ಕಠಿಣಮಯವಾದ ಸಾಧನೆಯು ತಪಸ್ಸಿನಿಂದಲೇ ಸಾಧಿಸುವ ವಿದ್ಯೆ ಗಂಧರ್ವ ವಿದ್ಯೆ ಎಂದು ಹೇಳಿದರೆ ತಪ್ಪಾಗಲಾರದು.

Reference Books:-

1. The Musical Heritage of India by. M.R. Goutham.

2. Universal History of Music - by. S. M. Tagore

ಬಾದಾಮಿ ಚಾಲುಕ್ಯರ ಕಾಲದ ಹಲವು ಸ್ಥಪತಿಗಳು ಮತ್ತು ಶಿಲ್ಪಿಗಳು

-ಡಾ. ಎಸ್. ಎಲ್. ಶಾಂತಕುಮಾರಿ

ಪ್ರಾಚೀನ ಕಾಲದಲ್ಲಿ ಕರ್ನಾಟಕವನ್ನು ಆಳಿದ ಅನೇಕ ಪ್ರಮುಖ ರಾಜಮನೆತನಗಳಲ್ಲಿ ಬಾದಾಮಿ ಚಾಲುಕ್ಯ ಮನೆತನವೂ ಒಂದು. ವಾತಾಪಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ.ಸು. ಆರನೆಯ ಶತಮಾನದಿಂದ ಎಂಟನೆಯ ಶತಮಾನದವರೆಗೆ ಕರ್ನಾಟಕವನ್ನು ಭವ್ಯರೀತಿಯಲ್ಲಿ ಆಳಿದ ಕೀರ್ತಿಗೆ ಇವರು ಪಾತ್ರರಾಗಿದ್ದಾರೆ. ದಕ್ಷಿಣದ ಪಲ್ಲವರೊಡನೆ ಸೆಣಸಿ ಉತ್ತರದಲ್ಲಿ `ಉತ್ತರಾಪಥೇಶ್ವರ' ನೆಂದೇ ಖ್ಯಾತಿವೆತ್ತಿದ್ದ ಹರ್ಷವರ್ಧನನ ಹರ್ಷವನ್ನು ಕಳೆಯುವಲ್ಲಿ ಯಶಸ್ವಿಯಾದ ಇವರು ಪೂರ್ವದಲ್ಲಿ ವೆಂಗಿ ಚಾಲುಕ್ಯ ಮತ್ತು ಪಶ್ಚಿಮದಲ್ಲಿ ಗುಜರಾತದ ಚಾಲುಕ್ಯರು ಎಂಬ ಎರಡು ಮನೆತನಗಳನ್ನು ಸ್ಥಾಪಿಸಿ ತಮ್ಮ ರಾಜ್ಯವನ್ನು ಭದ್ರಗೊಳಿಸಿದುದಲ್ಲದೆ ಈ ಎರಡೂ ರಾಜ್ಯಗಳು ತಮ್ಮ ರಾಜ್ಯದೊಂದಿಗೇ ಬೆಳೆಯುವಂತೆ ಮಾಡಿದ ಹಿರಿಮೆಗೆ ಪಾತ್ರರಾಗಿದ್ದಾರೆ. ಸಮರ್ಥ ಆಡಳಿತಗಾರರಾಗಿದ್ದ ಇವರು ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಸಾಕಷ್ಟು ಪರಿಶ್ರಮವನ್ನು ತೋರಿದುದು ತಿಳಿದ ವಿಚಾರವೇ ಆಗಿದೆ. ಇವರು ರಣರಂಗದಲ್ಲಿ ಮೆರೆದು ರಾಜ್ಯಗಳನ್ನು ಕಟ್ಟುವುದುರಲ್ಲಷ್ಟೇ ನಿಸ್ಸೀಮರಾಗಿರದೆ ಅನೇಕ ತೆರನಾದ ದೇವಾಲಯಗಳ ನಿರ್ಮಾಣ ಕಾರ್ಯದಲ್ಲೂ ಪ್ರಮುಖ ಪಾತ್ರವಹಿಸಿದ್ದುದು ಸರ್ವವಿದಿತ. ವಾಸ್ತು ಮತ್ತು ಮೂರ್ತಿಶಿಲ್ಪಕ್ಕೆ ಇವರು ನೀಡಿದ ಪ್ರೋತ್ಸಾಹ ಅಪಾರ. ಇದರಿಂದಾಗಿ ಇವರು ಮಹಾನ್ ಶಿಲ್ಪಿಗಳು, ಮಹಾನ್ ಸ್ಥಪತಿಗಳೆಂದು ಪ್ರಸಿದ್ಧಿ ಪಡೆದಿದ್ದಾರೆ. ಇವರ ವಿಶಾಲವಾದ ಧಾರ್ಮಿಕ ಮನೋಭಾವನೆಗೆ ಕುರುಹಾಗಿ ನಿಂತಿರುವ ಗುಹಾಂತರ ದೇವಾಲಯಗಳು. ವಿಭಿನ್ನ ಶೈಲಿಗಳನ್ನಳವಡಿಸಿಕೊಂಡು ನಿರ್ಮಾಣ ಮಾಡಿದ ಕಟ್ಟಡ ಶೈಲಿಯ ದೇವಾಲಯಗಳು, ಮೂರ್ತಿಶಿಲ್ಪಗಳು ಇಂದಿಗೂ ಸಂದರ್ಶಕರನ್ನು ಮಂತ್ರಮುಗ್ಧರನ್ನಾಗಿಸುತ್ತವೆ. ಈ ಕ್ಷೇತ್ರದಲ್ಲಿ ಇವರು ಗಳಿಸಿದ ಉತ್ಕೃಷ್ಟತೆಯಿಂದಾಗಿ ಇವರ ಹೆಸರಿನಿಂದಲೇ ಚಾಲುಕ್ಯರ ಕಲೆ ಮತ್ತು ವಾಸ್ತು ಎಂಬ ಹೆಸರು ಬಂದು ಇದು ದೇಶವಿದೇಶಗಳ ವಿದ್ವಾಂಸರು ಮತ್ತು ಸಂಶೋಧಕರ ಗಮನವನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಅಂದಿನ ಕಾಲದ ಅರಸರು, ಇತರೆ ದಾನಿಗಳು, ಸ್ಥಪತಿಗಳು ಮತ್ತು ಶಿಲ್ಪಿಗಳ ನಡುವಿನ ಸೌಹಾರ್ದತೆಯ ಕುರುಹಾಗಿ ನಿಂತಿರುವ

ದೇವಾಲಯಗಳು ಮತ್ತು ಶಿಲ್ಪಗಳು ಇಂದಿಗೂ ಉಳಿದುಕೊಂಡು ಬಂದಿರುವದು ಕರ್ನಾಟಕದ ಜನತೆ ಹೆಮ್ಮೆಪಡುವ ವಿಷಯವಾಗಿದೆ.

ಅಂದಿನ ಕಾಲದ ದೇವಾಲಯಗಳು ಮತ್ತು ಶಿಲ್ಪಗಳನ್ನೊಳಗೊಂಡು ಬಾದಾಮಿ, ಐಹೊಳೆ, ಪಟ್ಟದಕಲ್ಲು ಮತ್ತು ಮಹಾಕೂಟಗಳು ಐತಿಹಾಸಿಕ ಮಹತ್ವಪಡೆದ ಸ್ಥಳಗಳಾಗಿವೆ. ಈ ದೇವಾಲಯಗಳನ್ನು ಕಟ್ಟಿದ ಸ್ಥಪತಿಗಳು ಮತ್ತು ಶಿಲ್ಪಗಳನ್ನು ಕೆತ್ತಿದ ಶಿಲ್ಪಿಗಳು ಯಾರೆಂಬುದನ್ನು ತಿಳಿಯುವುದು ಕುತೂಹಲದ ವಿಷಯವಾಗಿದೆ. ಈ ದೇವಾಲಯಗಳ ಗೋಡೆಗಳು, ಶಿಲ್ಪಗಳು, ಮೆಟ್ಟಲುಗಳು ಮತ್ತು ಹತ್ತಿರದ ಬಂಡೆಗಲ್ಲುಗಳ ಮೇಲೆ ಹೆಸರುಗಳನ್ನು ಕೆತ್ತಿರುವುದನ್ನು ಕಾಣಬಹುದಾಗಿದೆ. ಈ ಹೆಸರುಗಳು ಸಂದರ್ಶಕರ ಹೆಸರುಗಳಿರಬಹುದೆಂಬ ಒಂದು ಅಭಿಪ್ರಾಯವಿದ್ದರೂ ಕೂಡ ಹಲವು ಹೆಸರುಗಳು ಸ್ಥಪತಿಗಳು ಮತ್ತು ಶಿಲ್ಪಗಳ ಹೆಸರುಗಳೆಂದು ಹೇಳಲು ಸಾಧ್ಯವಾಗುತ್ತದೆ. ಆದರೆ ಈ ನಿರ್ಮಾತೃಗಳ ಬಗ್ಗೆ ಹೆಚ್ಚಿನ ವಿವರಗಳು ದೊರೆಯುವುದಿಲ್ಲವಾದರೂ ಶಾಸನಗಳ ಆಧಾರದ ಮೇಲೆ ಅವರ ಬಗ್ಗೆ ಒಂದು ಚಿತ್ರಣವನ್ನು ಕೊಡುವ ಯತ್ನವನ್ನು ಇಲ್ಲಿ ಮಾಡಲಾಗಿದೆ.

ಬಾದಾಮಿಯಲ್ಲಿ ಗುಹೆಗಳ ಮೇಲೆ, ಮೆಟ್ಟಲುಗಳ ಮೇಲೆ ಮತ್ತು ಬಂಡೆಗಲ್ಲುಗಳ ಮೇಲೆ ಸುಮಾರು ೨೦೦ ಹೆಸರುಗಳು ಕಂಡು ಬರುತ್ತವೆ. ಉದಾ. ಅಯ್ಚಸಾಮಿಕಲ್ಕುಟ್ಟಿ[೧], ದತ್ತೋಜ[೨], ಬಿಜಯ ಓವಜ[೩] ಮುಂತಾದವು, ಈ ಹೆಸರುಗಳ ಮುಂದೆ ಸೂಚಿತವಾಗಿರುವ ಕಲ್ಕುಟ್ಟಿ, ಓಜ, ಓವಜ ಇವು ಅವರು ಮಾಡುತ್ತಿದ್ದ ಕಸುಬನ್ನು ಸೂಚಿಸುತ್ತವೆ. ಅದೇ ರೀತಿ ಕೋಳಿಮಞ್ಚಿ[೪], ಪೊಲಮಞ್ಚಿ[೫], ಸಿಂಗಿಮಞ್ಚಿ[೬] ಎಂಬ ಪದಗಳು ಕೂಡ ಅವರು ನಡೆಸುತ್ತಿದ್ದ ಕಸುಬನ್ನು ವ್ಯಕ್ತಪಡಿಸುತ್ತವೆ ಎಂದು ಹೇಳಬಹುದು. ಉದಾಹರಣೆಗೆ ಮಾಲಗಿತ್ತಿ ಸೂರ್ಯ ದೇವಾಲಯದಲ್ಲಿ ಕಂಡು ಬರುವ ಒಂದು ಶಾಸನವು

ಶ್ರೀ ಆರ್ಯಮಞ್ಚಿ ಉಪಾಧ್ಯಾಯ
ಪ್ರಾಶಾದ ನಿರ್ಮಿತ[೭]

ಎಂದು ಹೇಳುವುದರಿಂದ ಆರ್ಯಮಞ್ಚ ಎಂಬುವವನು ಈ ದೇವಾಲಯದ ಪ್ರಾಸಾದದ ನಿರ್ಮಾತೃ ಎಂದು ತಿಳಿದು ಬರುತ್ತದೆ.

ಈ ಮೇಲ್ಕಾಣಿಸಿದ ಹೆಸರುಗಳ ಜೊತೆಗೆ ಇನ್ನೂ ಅನೇಕ ಹೆಸರುಗಳು ಕಂಡು ಬಂದು ಅವುಗಳಲ್ಲಿ ಹಲವು ಪುನರಾವರ್ತನೆಗೊಂಡಿರುವುದನ್ನು ಕಾಣಬಹುದಾಗಿದೆ. ಉದಾ. ದೋಣಸಾಮಿ[೮] ದೋಣಾಸ್ ಶ್ರೀದೋಣಮ[೧೦] ಇವು ಬಾದಾಮಿಯ ಒಂದು, ಎರಡು ಮತ್ತು ಮೂರನೆಯ ಗುಹೆಗಳಲ್ಲಿ ಕಂಡುಬರುತ್ತವೆ. ಅದೇ ರೀತಿ ಕೋಳಿಮಞ್ಚಿ[೧೧] ಎಂಬ ಹೆಸರು ಮೂರು ಮತ್ತು ನಾಲ್ಕನೆಯ ಗುಹೆಗಳು ಮತ್ತು ಕೋಟೆಗೋಡೆಯ ಮೇಲೆ

ಕಂಡುಬಂದಲ್ಲಿ ಶ್ರೀ ಬೆಣ್ಣೆಯರ ಚಾಳುಗೇಸಿ ಕಲ್ಕುಟ್ಟಿ[೧೨] ಎಂಬುದು ಮೂರು ಮತ್ತು ನಾಲ್ಕನೆ ಗುಹೆಗಳಲ್ಲಿ ಕಂಡು ಬರುವ ಹೆಸರಾಗಿದೆ. ಮೇಗಣ ದೇವಾಲಯದ ದ್ವಾರ ಪಟ್ಟಿಕೆಯಲ್ಲಿ ಕಂಡು ಬರುವ ವಿಜಯನ್ ಎಂಬ ಹೆಸರು ಗುಹೆಗಳ ಬಳಿ ದೊರೆಯುವ ಬಿಜಯ ಓವಜನ್[೧೩] ಎಂಬ ಹೆಸರೂ ಒಬ್ಬನ ಹೆಸರೇ ಆಗಿರಬಹುದೆಂದು ಹೇಳ ಬಹುದಾಗಿದೆ. ಇದರಿಂದ ಹಲವು ಸ್ಥಪತಿಗಳು ಒಂದೇ ಗುಹೆಯ ನಿರ್ಮಾಣ ಕಾರ್ಯದಲ್ಲಿ ನಿರತರಾಗಿರದೆ ಉಳಿದ ಗುಹೆಗಳ ನಿರ್ಮಾಣ ಕಾರ್ಯದಲ್ಲಿ ಕೈಗೂಡಿಸಿದ್ದರೆಂದು ಇದರಿಂದ ತಿಳಿದು ಬರುತ್ತದೆ.

ಇಷ್ಟೆಲ್ಲ ಹೆಸರುಗಳು ಈ ಪ್ರದೇಶದಲ್ಲಿ ಕಂಡುಬಂದರೂ ಕೂಡ ಈ ಸ್ಥಪತಿಗಳು ಮತ್ತು ಶಿಲ್ಪಿಗಳು ವ್ಯಕ್ತಿಗತವಾಗಿ ಮಾಡಿದ ಕಾರ್ಯಗಳ ಬಗ್ಗೆ, ಒಂದೆರಡನ್ನು ಹೊರತುಪಡಿಸಿ, ಹೆಚ್ಚಿನ ವಿವರಗಳು ಕಂಡು ಬರುವುದಿಲ್ಲ. ಉದಾ. ನೆಲವರ್ಕೆ ಎಂಬ ಹೆಸರು ಮೂರನೆ ಗುಹೆಯಲ್ಲಿರುವ ಗರುಡನ ಉಬ್ಬು ಶಿಲ್ಪದ ಮೇಲೆ ಕೆತ್ತಿರುವುದರಿಂದ ಇದು ಮೂರ್ತಿಯನ್ನು ಕೆತ್ತಿದ ಶಿಲ್ಪಿಯ ಹೆಸರಾಗಿದೆ ಎಂದು ಹೇಳಬಹುದು. ಏಳು ಎಂಟನೆ ಶತಮಾನಕ್ಕೆ ಸೇರಿದ ಒಂದು ಶಾಸನವು

ಶ್ರೀ ಚಂದ್ರ
ಕೀರ್ತ್ತಿಯಭ
ಟ್ಟಂ ಮಾಡಿದ
ದುರ್ಗದೇ
ವಿಯನ್[೧೪]

ಎಂದು ತಿಳಿಸುವುದರಿಂದ ಚಂದ್ರಕೀರ್ತಿ ಭಟ್ಟನು ದುರ್ಗ ದೇವಿ ಮೂರ್ತಿಯ ನಿರ್ಮಾತೃ ಎಂದು ತಿಳಿದು ಬರುತ್ತದೆ. ಹೀಗೆ ಹಲವು ಹೆಸರುಗಳನ್ನುಳಿದು ಉಳಿದ ಹೆಸರುಗಳ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ.

ಐಹೊಳೆಯಲ್ಲಿ ಹಲವು ಸ್ಥಪತಿಗಳ ಮತ್ತು ಶಿಲ್ಪಿಗಳ ಹೆಸರುಗಳನ್ನು, ಮೇಗುತಿ ಗುಡ್ಡದ ಮೇಲಿರುವ ಜಿನಾಲಯ ಮತ್ತು ಬೌದ್ಧ ಚೈತ್ಯಾಲಯ, ದುರ್ಗ ದೇವಾಲಯ, ಹಲವು ಬಂಡೆಗಲ್ಲುಗಳ ಮೇಲೆ ಕಾಣಬಹುದಾಗಿದೆ. ಉದಾ. ಶ್ರೀ ಗುಣಪ್ರಿಯನ್[೧೫] ಬಿಣಅಮ್ಮನ್[೧೬] ಶ್ರೀಮಾರಪ[೧೭] ಶ್ರೀ ಚಿತ್ರಾಧಿಪ[೧೮] ಬಿಜ್ಜಡಿ ಓವಜ[೧೯] ಮುಂತಾದವು. ಬಿಜ್ಜಡಿ ಓವಜನು ಒಬ್ಬ ಹೆಸರಾಂತ ಸ್ಥಪತಿಯಾಗಿದ್ದನು. ನರಸೊಬ್ಬ ಎಂಬ ಸ್ಥಪತಿಯನ್ನು ಬಣ್ಣಿಸುವ ಒಂದು ಶಾಸನವು ಅವನು. ಬಿಜ್ಜಡಿ ಓವಜನ ಶಿಷ್ಯನಾಗಿದ್ದುದನ್ನು ಈ ಕೆಳಕಂಡಂತೆ ವಿವರಿಸುತ್ತದೆ-

ಶ್ರೀ ಬಿಕ್ಷಞ್ಜಿಡಿ ವಿದರ್ದ್ವರ ಚಟ್ಟನ್ ವಿಮಾನ
ರಞ್ಜಿಞಿನ್ ಶಾಸ್ತ್ರ ಮಹೇಶ್ವರನ್
ಗುಣರವಿ ರೂಪ ಸಂಘಾತನ್
ಪ್ರಮಾಣ ಭರನ್ ನರಸೊಬ್ಬನ್ [೨೦]

ಬಿಞ್ಜಿಡಿ ಓವಜನ ಶಿಷ್ಯನಾದ ಈ ನರಸೊಬ್ಬನು ವಾಸ್ತು ಪ್ರಸಾದ ನಿರ್ಮಾಣ ಕಾರ್ಯದಲ್ಲಿ ನಿಸ್ಸೀಮನಾಗಿದ್ದನೆಂದು ಶಾಸನವು ವಿವರಿಸುತ್ತಾ ಇಂಥ ಶ್ರೇಷ್ಠನಾದ ಸ್ಥಪತಿಯು ಹಿಂದೆ ಇರಲಿಲ್ಲ ಮತ್ತು ಮುಂದೆಂದೂ ಇರುವುದಿಲ್ಲ ಎಂಬುದನ್ನು ಈ ರೀತಿ ವಿವರಿಸುತ್ತದೆ -

ಸ್ವಸ್ತಿ ಜಮ್ಬಾ ದ್ವೀಪಾಂತರೇ ಕಶ್ಚಿದ್
ವಾಸ್ತು ಪ್ರಾಸಾದ ತದ್ಗತಃ
ನರಸೊಬ್ಬಸಮೋವಿದ್ವಾ
ನ್ನಭೂತೋ ನ ಭವಿಷ್ಯತಿ [೨೧]

ಇವನು ಬಹುಷಃ ಜೈನ ದೇವಾಲಯದ ನಿರ್ಮಾತೃವೆಂದು ಹೇಳಲಾಗಿದೆ. ಇವನು ಮೂರ್ತಿಗಳ ನಿರ್ಮಾಣ ಕಾರ್ಯದಲ್ಲಿ ಸಿಂಹದಂತಿದ್ದನೆಂಬ ಹೊಗಳಿಕೆಗೆ ಪಾತ್ರನಾಗಿದ್ದಾನೆ. [೨೨]

ಈ ಭಾಗದಲ್ಲಿ ಕಂಡು ಬರುವ ಮತ್ತೊಂದು ಹೆಸರೆಂದರೆ ಅನನ್ತ ಸ್ಥವಿರ [೨೩]. ಪಿಂಡ ಪಾಡಿ ಮಹೇಂದ್ರರ್ ಎಂಬುದನು ಈತನ ಶಿಷ್ಯನಾಗಿದ್ದನೆಂದು ಅದೇ ಶಾಸನದಿಂದ ತಿಳಿದುಬರುತ್ತದೆ.

ದುರ್ಗ ದೇವಾಲಯದಲ್ಲಿ ಕಂಡು ಬರುವ ಹಲವು ಹೆಸರುಗಳು ಗಮನಾರ್ಹವಾಗಿವೆ. ಉದಾ: ಮುದ್ಯಸಿಲಿ [೨೪] ಶ್ರೀಬಸಮಯ್ಯ [೨೫] ಸುರೇಂದ್ರಪಾದ [೨೬]. ಮುದ್ಯಸಿಲಿಯು ಪಟ್ಟದಕಲ್ಲಿನ ಶಾಸನದಲ್ಲಿ ಉಕ್ತವಾಗಿರುವ ಶಿಲೆಮುದ್ದನೆಂದು ಊಹಿಸಬಹುದಾಗಿದೆ. ಬಸಮಯ್ಯನು ಪಟ್ಟದಕಲ್ಲಿನಿಂದ ಬಂದವನೆಂಬುದನ್ನು ಒಂದು ಶಾಸನವು ಈ ರೀತಿ ವಿವರಿಸುತ್ತದೆ - [೨೭]

ಶ್ರೀ ಬಸಮಯ್ಯನ್
ಕಿಸುವೊಳಲ ಭಟ್ಟನ್

ಇವನು ದುರ್ಗ ದೇವಾಲಯದ ಭಿತ್ತಿಯ ಮೇಲಿರುವ ರಾಮಾಯಣದ ಸನ್ನಿವೇಶಗಳ ದೃಷ್ಯಗಳನ್ನು ಕೆತ್ತಿದವನೆಂದು ಹೇಳಲಾಗಿದೆ. ಅದೇ ದೇವಾಲಯದ ಕಂಬದ ಮೇಲೆ ಕಂಡು ಬರುವ ಸುರೇಂದ್ರ ಪಾದ [೨೮] ಎನ್ನುವ ಹೆಸರು ಉತ್ತರ

ಭಾರತದ ಲಿಪಿಯಲ್ಲಿರುವುದರಿಂದ ಇವನು ಉತ್ತರಭಾರತದಿಂದ ಬಂದವನು ಎಂದು ವಿಷದವಾಗುತ್ತದೆ. ವಿರೂಪಾಕ್ಷ ದೇವಾಲಯದ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸಿದ್ದನೆನ್ನಲಾದ ದೇವಪುತ್ರನೆಂಬುವನು ತಾನು ಆದಿತ್ಯ ಗೃಹಕ್ಕೆ ಸೇರಿದವನೆಂದು ಹೇಳಿಕೊಂಡಿರುವುದರಿಂದ ಇವನು ಐಹೊಳೆಯ ದುರ್ಗ ದೇವಾಲಯದ ಸ್ಥಪತಿಯಾಗಿರಬಹುದೆ ?

ಪಟ್ಟದಕಲ್ಲಿನಲ್ಲಿಯೂ ಅನೇಕ ಸ್ಥಪತಿಗಳ ಹಾಗೂ ಶಿಲ್ಪಿಗಳ ಹೆಸರುಗಳು ಕಾಣಸಿಗುತ್ತವೆ. ಇವರಲ್ಲಿ ಪ್ರಮುಖರಾದವರೆಂದರೆ ಗುಂಡ ಅನಿವಾರಿತಾಚಾರಿ,[೨೯] ಮತ್ತು ಸರ್ವಸಿದ್ಧಿ ಆಚಾರಿ[೩೦]. ಗುಂಡ ಅನಿವಾರಿತಾಚಾರಿಯು ಖ್ಯಾತಿವೆತ್ತ ಸ್ಥಪತಿಯಾಗಿದ್ದನೆಂದು ಹೇಳಬಹುದು. ಇವನು ವಿರೂಪಾಕ್ಷ ದೇವಾಲಯದ ಸೂತ್ರಧಾರಿಯಾಗಿದ್ದನು. ಇದನ್ನು ಒಂದು ಶಾಸನವು ಹೀಗೆ ವಿವರಿಸುತ್ತದೆ -

ಶ್ರೀ ಸ್ವಸ್ತಿ ವಿಕ್ರಮಾದಿತ್ಯಶ್ರೀ
ಪ್ರಿಥಿವೀವಲ್ಲಭ ಮಹಾದೇವಿ
ಯರಾ ದೇಗುಲಮಾನ್ ಮಾಡಿದ ಸೂತ್ರಧಾರಿ
ಶ್ರೀ ಗುಣ್ಡನ್ ಅನಿವಾರಿತಾಚಾರಿ
ಗೆ.........

ಬಾದಾಮಿ ಚಾಲುಕ್ಯರ ಅರಸನಾದ ಇಮ್ಮಡಿ ವಿಕ್ರಮಾದಿತ್ಯನು ಪಲ್ಲವರನ್ನು ಸೋಲಿಸಿದನೆಂದೂ ಆಗ ಅವನ ಅರಸಿ ಲೋಕಮಹಾದೇವಿಯು ಲೋಕೇಶ್ವರ ಅಂದರೆ ಇಂದಿನ ವಿರೂಪಾಕ್ಷ ದೇವಾಲಯವನ್ನು ಕಟ್ಟಿಸಿದಳೆಂದು ಶಾಸನದಿಂದ ತಿಳಿದು ಬರುತ್ತದೆ. ವಿಕ್ರಮಾದಿತ್ಯನು ಪಲ್ಲವ ಅರಸನನ್ನು ಮೂರು ಬಾರಿ ಸೋಲಿಸಿದನೆಂಬುದನ್ನು ಶಾಸನವು ಹೀಗೆ ತಿಳಿಸುತ್ತದೆ -

ಸ್ವಸ್ತಿ ಶ್ರೀ ವಿಕ್ರಮಾದಿತ್ಯ
ಭಟಾರರ್ಮೂಮೆ ಕಂಪಿಯನ್ಮೂಮೆ ಪರಾ
ಜಿಸಿದೊರಾ ಶ್ರೀಲೋಕಮಹಾದೇವಿಯರಾ
ಈ ಲೋಕೇಶ್ವರ ಮಾಡಿದ ಸೂತ್ರಧಾರಿಗೆ..

ಈ ದೇವಾಲಯವನ್ನು ಕಟ್ಟಿದ ಗುಂಡ ಅನಿವಾರಿತಾಚಾರಿ ಎಂಬುವನಿಗೆ ಮೂರು ಬಾರಿ `ಪೆರ್ಜೆಪ್ಪು' ಎಂಬ ಸನ್ಮಾನ ಮಾಡಿ ಅವನಿಗೆ `ತ್ರಿಭುವನಾಚಾರಿ' ಎಂಬ ಬಿರುದನ್ನು ಕೊಟ್ಟ ಬಗೆಯನ್ನು ಶಾಸನವು ಹೀಗೆ ವರ್ಣಿಸುತ್ತದೆ -

ಮಹಾದೇವಿ
ಯರಾ ದೇಗುಲ ಮಾಡಿದ ಸೂತ್ರಧಾರಿ
ಶ್ರೀ ಗುಣ್ಡನ್ ಅನಿವಾರಿತಾಚಾರಿ
ಗೆ ಮೂಮೆ ಪೆರ್ಜೆಜೆಪು ಪ್ರಪಟ್ಟಮಂ ತ್ರಿಭುವನಾಚಾರಿ
ಯೆನ್ದು ಪೆರಸಿತ್ತು[೩೧]....

ಇದರಿಂದ ಗುಂಡ ಅನಿವಾರಿತಾಚಾರಿಯು ಲೋಕೇಶ್ವರ ದೇವಾಲಯದ ನಿರ್ಮಾಣ ಕಾರ್ಯದಲ್ಲಿ ಪ್ರಮುಖಪಾತ್ರವಹಿಸಿದ್ದುದು ವಿಷದವಾಗುತ್ತದೆ.

ಇದೇ ಕಾಲಕ್ಕೆ ಸೇರಿದ ಸರ್ವಸಿದ್ಧಿ ಆಚಾರಿ ಎಂಬುವವನು ಕೂಡ ಹೆಸರಾಂತ ಸ್ಥಪಿತಿಯಾಗಿದ್ದನೆಂದು ಹೇಳಬಹುದು. ಇವನು ವಿರೂಪಾಕ್ಷ ದೇವಾಲಯದ ದಕ್ಷಿಣ ಭಾಗದ ಸೂತ್ರಧಾರಿಯಾಗಿದ್ದನೆಂದು ಒಂದು ಶಾಸನವು ತಿಳಿಸುತ್ತದೆ.

ಶ್ರೀ ಸರ್ವಸಿದ್ಧಿ ಆಚಾ
ರ್ಯ ತೆಂಕಣ ದಿಶೆಯ
ಸೂತ್ರಧಾರಿ॥

ಇದರಿಂದ ಇವನು ದೇವಾಲಯಗಳ ದಕ್ಷಿಣ ಭಾಗದ ನಿರ್ಮಾಣ ಕಾರ್ಯದಲ್ಲಿ ನಿಷ್ಣಾತನಾಗಿದ್ದನೆಂದು ಹೇಳಬಹುದು. ಒಂದು ಶಾಸನವು[೩೨] ಇವನನ್ನು ಸಕಲ ಗುಣಗಳಿಗೆ ಆಶ್ರಯದಾತನಾಗಿದ್ದನೆಂದೂ, ಅನೇಕ ಪುರಗಳು ಹಾಗೂ ವಾಸ್ತು ನಿರ್ಮಾಣಕ್ಕೆ ಬ್ರಹ್ಮನಂತಿದ್ದನೆಂದೂ, ಇವನು ಅನೇಕ ದೇವಾಲಯಗಳು, ವಾಹನ, ಆಸನ, ಮಂಚ ಮುಂತಾದುವುಗಳನ್ನು ತಯಾರಿಸುವಲ್ಲಿ ಹಾಗೂ ಮಣಿ ರತ್ನ ಖಚಿತವಾದ ಕಿರೀಟಗಳನ್ನು ಮಾಡುವಲ್ಲಿ ಪರಿಣತನಿದ್ದನೆಂದೂ ವರ್ಣಿಸುತ್ತದೆ. ಅದರ ಪಾಠ ಹೀಗಿದೆ-

ಸ್ವಸ್ತಿ ಶ್ರೀಸರ್ವಸಿದ್ಧಿ ಆಚಾರಿ ಸಕಲಗುಣಾಶ್ರಯ
ಅನೇಕ ಪುರ ವಾಸ್ತು ಪಿತಾಮಹನ್
ಸಕಳ ನಿಷ್ಕಳ ಸೂಕ್ಷ್ಮಾತಿ ಭಾಶಿತನ್ ವಸ್ತು
ಪ್ರಾಸಾದ ಯಾನಾಸನ ಶಯನ ಮಣಿ
ಮುಕುಟ ರತ್ನ ಚೂಡಾಮಣಿ ತೆಂಕಣ
ದಿಸೆಯ ಸೂತ್ರದಾರಿ...[೩೩]

ಇದರಿಂದ ಇವನ ಘನತೆ ವಿಷದವಾಗುತ್ತದೆ.

ಈ ಪ್ರಾಂತದಲ್ಲಿ ಕಂಡು ಬರುವ ಮತ್ತೊಂದು ಹೆಸರೆಂದರೆ ರೇವಡಿ ಓವಜ. ಶ್ರೀ ಶಿಲೆಮುದ್ದ ಎಂಬುವನ ಮೊಮ್ಮಗನಾದ ಇವನು ದಕ್ಷಿಣ ದಿಕ್ಕಿನ ದೇವಾಲಯ ನಿರ್ಮಾಣ ಕಾರ್ಯದಲ್ಲಿ ಪರಿಣತೆಯನ್ನು ಪಡೆದಿದ್ದನೆಂದು ಶಾಸನವು ಹೀಗೆ ವಿವರಿಸುತ್ತದೆ-

ಸ್ವಸ್ತಿ ಶ್ರೀ ಶಿಲೆಮುದರ್ದ
ಮರ್ಮನ್ ಸರ್ವಸಿಧಿ ಆ
ಚಾಜ್ಜರ ಚಟ್ಟರ್ ರೇವ
ದಿ ಓವಜ್ಜರ್ ತೆಂಕ
ಣದಿಶೆ ಮಾಡಿದೋರ್ [೩೫]

ಇಲ್ಲಿ ಸ್ಥಪತಿಗಳು ಪಡೆದ ನೈಪುಣ್ಯತೆ ಗಮನಾರ್ಹವಾದ ಅಂಶವಾಗಿದೆ. ಉದಾ: ಸರ್ವಸಿದ್ಧಿ ಆಚಾರಿಯು ವಿರೂಪಾಕ್ಷ ದೇವಾಲಯದ ದಕ್ಷಿಣ ದಿಕ್ಕಿನ ಭಾಗವನ್ನು ನಿರ್ಮಿಸುವುದರಲ್ಲಿ ಪ್ರಾವೀಣ್ಯತೆ ಪಡೆದಂತೆ ಅವನ ಶಿಷ್ಯನಾದ ರೇವಡಿ ಓವಜನೂ ಕೂಡ ಪಾಪನಾಥ ದೇವಾಲಯದ ತೆಂಕಣದಿಸೆಯ ದೇವಾಲಯವನ್ನು ನಿರ್ಮಾಣ ಮಾಡುವುದರಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದುದು ಗಮನಾರ್ಹವಾಗಿದೆ.

ಇವರಲ್ಲದೆ ಹಲವು ಶಿಲ್ಪಿಗಳ ಹೆಸರುಗಳು ಕೂಡ ಈ ಪ್ರದೇಶದಲ್ಲಿ ಕಂಡು ಬರುತ್ತವೆ. ಉದಾ: ಶಾಸನಗಳು, ಆದಿತ್ಯನ ಮೂರ್ತಿ ಮಾಡಿದ ದೇವಪುತ್ರ, ದಕ್ಷಿಣದ ಮುಖ ಮಂಟಪದ ದ್ವಾರ ಪಾಲರ ಶಿಲ್ಪಗಳನ್ನು ಕೆತ್ತಿದ ದುಗ್ಗಿ ಆಚಾರಿಯ ಮಗ ಬಲದೇವ, [೩೬] ದಕ್ಷಿಣ ದಿಕ್ಕಿನ ಭಿತ್ತಿಯಲ್ಲಿ ಶಿವನ ಮೂರ್ತಿಯನ್ನು ಕೆತ್ತಿದ ಶ್ರೀಚೆಂಜ್ಗಮ್ಮ, [೩೭] ಉತ್ತರದಿಕ್ಕಿನ ಭಿತ್ತಿಯಲ್ಲಿ ಶಿವನ ಮೂರ್ತಿಯನ್ನು ಕೆತ್ತಿದ ಪುಲ್ಲಪ್ಪ ಎಂದು ವಿವರಿಸುವುದರಿಂದ ಈ ಶಿಲ್ಪಿಗಳು ಈ ಎಲ್ಲ ಮೂರ್ತಿಗಳನ್ನು ಕೆತ್ತಿದವರೆಂದು ತಿಳಿದು ಬರುತ್ತದೆ. ಅದೇ ರೀತಿ ಬಲದೇವ ನಿರ್ಮಿತ ರೂಪ, ಶ್ರೀ ಪುಲ್ಲಪ್ಪನ್ ನಿರ್ಮಾಣ ದೇವನ್ಕಟ್ಟಿದ ಪ್ರತಿಮೆ, [೩೮] ಆಚಪ ನಿರ್ಮಿತ ರೂಪ, [೩೯] ದುಗ್ಗಿ ಆಚಾರಿಯ ಮಗ ವಿದ್ಯಾಧರನು ಮಾಡಿದ ವಿಗ್ರಹ ಎಂಬ ಬರಹಗಳು ಶಿಲ್ಪಿಗಳ ಹಾಗೂ ಶಿಲ್ಪಗಳ ಬಗೆ ಅರಿಯಲು ಸಹಾಯಕವಾಗಿವೆ.

ಈ ಮೇಲ್ಕಾಣಿಸಿದ ಶಿಲ್ಪಿಗಳ ಹೆಸರುಗಳು ಮತ್ತು ಇನ್ನಿತರ ಹೆಸರುಗಳನ್ನು ಗಮನಿಸಿದಾಗ ಹಲವು ಸ್ಥಪತಿಗಳು ಒಂದಕ್ಕಿಂತ ಹೆಚ್ಚು ದೇವಾಲಯಗಳಲ್ಲಿ ಕಾರ್ಯ ನಿರತರಾಗಿದ್ದುದು ಕಂಡುಬರುತ್ತದೆ. ಉದಾ: ಮೇಲೆ ಹೇಳಿದ ದೋಣ ಸಾಮಿ, ದೋಣ, ದೋಣಮ, ಇವು ಬಾದಾಮಿಯ ಒಂದು, ಎರಡು ಮತ್ತು ಮೂರನೆಯ ಗುಹೆಗಳಲ್ಲಿ ಕಂಡು ಬರುವ ಹೆಸರಾಗಿದೆ. ವಿರೂಪಾಕ್ಷ ಹಾಗೂ ಅದರ ಆವರಣದಲ್ಲಿರುವ ಬಸವಣ್ಣ ದೇವಾಲಯದ ಮೇಲೆ ಕಂಡು ಬರುವ ಸರ್ವಸಿದ್ಧಿ ಆಚಾರಿಯ ಹೆಸರೂ ಇದಕ್ಕೆ ಪೂರಕವಾಗಿದೆ. ಅಲ್ಲದೆ, ಸ್ಥಳೀಯ ಸ್ಥಪತಿಗಳು ಮತ್ತು ಶಿಲ್ಪಿಗಳ ಜೊತೆಗೆ ಹೊರಗಿನಿಂದ ಬಂದವರೂ ಇಲ್ಲಿಯ

ದೇವಾಲಯ ಮತ್ತು ಶಿಲ್ಪಗಳ ನಿರ್ಮಾಣ ಕಾರ್ಯದಲ್ಲಿ ಪಾಲ್ಗೊಂಡಿದ್ದುದು ಕಂಡು ಬರುತ್ತದೆ. ಉದಾ: ದುರ್ಗದೇವಾಲಯದ ಹರಿಹರ ಮತ್ತು ವಿಷ್ಣುವಿನ ಶಿಲ್ಪಿಗಳ ಮೇಲೆ ಕಂಡುಬರುವ ಸುರೇಂದ್ರ ಪಾದನ ಹೆಸರು ಉತ್ತರ ಭಾರತದ ಲಿಪಿಯಲ್ಲಿರುವುದರಿಂದ ಇವನು ಉತ್ತರ ಭಾರತದಿಂದ ಬಂದವನೆಂದು ಸ್ಪಷ್ಟವಾಗುತ್ತದೆ. ಐಹೊಳೆಯ ರಾವಳಫಡಿ ಗುಹಾಂತರ ದೇವಾಲಯವು ಬಾದಾಮಿಯ ಗುಹಾಂತರ ದೇವಾಲಯಗಳಿಗಿಂತ ಭಿನ್ನವಾಗಿರುವುದರಿಂದ ಬಹುಶಃ ಇದು ಬೇರೆ ಪರಂಪರೆಗೆ ಸೇರಿದುದೆಂದು ಹೇಳಬಹುದು. ಇದರಿಂದ ಹೊರಗಿನಿಂದ ಬಂದ ಸ್ಥಪತಿಗಳು ಈ ದೇವಾಲಯಗಳ ನಿರ್ಮಾಣಕಾರ್ಯದಲ್ಲಿ ಪಾಲುದಾರರಾಗಿದ್ದರೆಂದು ಹೇಳಬಹುದು. ಮತ್ತೊಂದು ಗಮನಾರ್ಹ ಅಂಶವೆಂದರೆ ಪಟ್ಟದಕಲ್ಲಿನಲ್ಲಿರುವ ದೇವಾಲಯಗಳನ್ನು ವಿವಿಧ ಶೈಲಿಗಳನ್ನು ಅಂದರೆ, ದ್ರಾವಿಡ, ನಾಗರ, ಕಳಿಂಗ ಶೈಲಿಗಳನ್ನು ಅಳವಡಿಸಿಕೊಂಡು ಕಟ್ಟಿರುವುದು. ಇದರಲ್ಲದೆ ಲೋಕೇಶ್ವರ ಮತ್ತು ತ್ರೈಲೋಕೇಶ್ವರ ದೇವಾಲಯಗಳ ನಡುವೆ ಇರುವ ಕಂಬದ ಮೇಲಿರುವ ಶಾಸನವನ್ನು ಮೃಗಥಣಿಕಾಹಾರದಿಂದ ಬಂದ ಜ್ಞಾನ ಶಿವಾಚಾರ್ಯ ಎಂಬುವನು ಬರೆದನೆಂದು ತಿಳಿದುಬರುತ್ತದೆ. ಮೃಗಥಣಿಕಾಹಾರ ಯಾವ ಸ್ಥಳ ಎಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಗಂಗಾನದಿಯ ಉತ್ತರ ತಡಿಯ ಮೇಲಿದ್ದ ಒಂದು ಪ್ರದೇಶವೆಂಬುದು ಶಾಸನದಿಂದಲೇ ಸ್ಪಷ್ಟವಾಗಿದೆ.

ಈ ಮೇಲಿನ ಅಂಶಗಳಿಂದ ಬಾದಾಮಿ ಚಾಲುಕ್ಯರ ಕಾಲದಲ್ಲಿ ಸ್ಥಳೀಯ ಸ್ಥಪತಿಗಳು ಹಾಗೂ ಶಿಲ್ಪಿಗಳ ಜೊತೆ ಬೇರೆ ಬೇರೆ ಪ್ರದೇಶಗಳಿಂದ ಬಂದವರೂ ಸೇರಿ ವಾಸ್ತುವಿನ ಅಭಿವೃದ್ಧಿ ಕಾರ್ಯದಲ್ಲಿ ಪಾಲುದಾರರಾಗಿದ್ದರೆಂಬುದು ನಿರ್ವಿವಾದದ ಅಂಶವಾಗಿದೆ.

೧. ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್ XV ಸಂ. ೨೭೭
೨. ಅದೇ ಸಂ. ೩೧೮, ೩೨೮
೩. ಅದೇ ಸಂ. ೩೫೬
೪. ಅದೇ ಸಂ. ೩೮೮
೫. ಅದೇ ಸಂ. ೩೫೭
೬. ಅದೇ ಸಂ. ೩೬೦
೭. ಅದೇ ಸಂ. ೪೭೩
೮. ಅದೇ ಸಂ. ೨೭೭
೯. ಅದೇ ಸಂ. ೩೦೭
೧೦. ಅದೇ ಸಂ. ೨೭೮
೧೧. ಅದೇ ಸಂ. ೩೩೮, ೩೬೪, ೩೯೦
೧೨. ಅದೇ ಸಂ. ೩೪೧
೧೩. ಅದೇ ಸಂ. ೩೫೬

೧೪. ಅದೇ ಸಂ. ೪೦೫
೧೫. ಅಣ್ಣಿಗೇರಿ ಐಹೊಳೆ ಸಂಸ್ಕೃತಿ ಮತ್ತು ಕಲೆ ಸಂ. ೪೩
೧೬. ಅದೇ ಸಂ. ೩೬
೧೭. ಅದೇ ೩೯
೧೮. ಅದೇ ೪೨
೧೯. ಅದೇ ೧೪೦
೨೦. ಅದೇ ೫೬
೨೧. ಅದೇ ೫೧
೨೨. ಅದೇ ಸಂ. ೪೬
೨೩. ಅದೇ ಸಂ. ೩೭
೨೪. ಅದೇ ಸಂ. ೭
೨೫. ಅದೇ ಸಂ. ೬
೨೬. ಅದೇ ಸಂ. ೫
೨೭. ಅದೇ ಸಂ. ೬
೨೮. ಇಂಡಿಯನ್ ಆಂಟಿಕ್ವೇರಿ ಸಂ. XII ಪು. ೧೬೪
೨೯. ಅದೇ
೩೦. ಅದೇ
೩೧. ಅದೇ
೩೨. ಅದೇ ಸಂ. ೪೮೮
೩೩. ಅದೇ
೩೪. ಅದೇ ಪು. ೧೬೪
೩೫. ಅಣ್ಣಿಗೇರಿ ಸಂಸ್ಕೃತಿ ಮತ್ತು ಕಲೆ ಸಂ. ೧೪
೩೬. ಸೌ. ಇಂ. ಇನ್. XVಸಂ. ೪೫೮
೩೭. ಅದೇ ಸಂ. ೪೮೬
೩೮. ಅದೇ ಸಂ. ೪೮೪
೩೯. ಅದೇ ಸಂ. ೪೮೭
೪೦. ಅದೇ ಸಂ. ೪೫೪

ಓರೆಗಲು :

ಆದಯ್ಯನ ಜನ್ಮಗ್ರಾಮ ಮತ್ತು ಕಾಲ ಮರುಪರಿಶೀಲನೆ

–ಡಾ. ಸಿ. ನಾಗಭೂಷಣ

ಮಧ್ಯಕಾಲೀನ ಯುಗದಲ್ಲಿ ಪುಲಿಗೆರೆಯು ಸಾಂಸ್ಕೃತಿಕವಾಗಿ, ಧಾರ್ಮಿವಾಗಿ ಮಹತ್ವದ ಸ್ಥಾನವನ್ನು ಪಡೆದುದಾಗಿದೆ. ಹನ್ನೊಂದನೆಯ ಶತಮಾನದ ಕೊನೆಯ ಭಾಗದಲ್ಲಿ ನಡೆಯಿತೆಂದು ಭಾವಿಸಲಾದ ಪುಲಿಗೆರೆಯಲ್ಲಿಯ ಸೋಮನಾಥನ ಪ್ರತಿಷ್ಠಾಪನೆ ವೀರಶೈವ ಧಾರ್ಮಿಕ ಚರಿತ್ರೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ. ಈ ಪ್ರತಿಷ್ಠಾಪನೆಯ ವಿವರ ಪ್ರತ್ಯಕ್ಷವಾಗಿ ಶಾಸನಗಳಲ್ಲಿ ಎಲ್ಲಿಯೂ ದೊರೆಯುವುದಿಲ್ಲವಾದರೂ ವೀರಶೈವ ಸಾಹಿತ್ಯದಲ್ಲಿ ಸಮಗ್ರವಾಗಿ ಮತ್ತು ಸಂಪೂರ್ಣವಾಗಿ ಇಪ್ಪತ್ತೈದು ಕಾವ್ಯ – ಪುರಾಣಗಳಲ್ಲಿ ನಿರೂಪಿತವಾಗಿದೆ. ಈ ಘಟನೆಯ ಕೇಂದ್ರ ವ್ಯಕ್ತಿಯಾದ ಆದಯ್ಯನ ಹೆಸರು ವೀರಶೈವ ಧಾರ್ಮಿಕ ಚರಿತ್ರೆಯಲ್ಲಿ ಮತ್ತು ವಚನಕಾರರ ಸಾಲಿನಲ್ಲಿ ಎದ್ದು ಕಾಣುವಂತಹದ್ದಾಗಿದೆ. ವೀರಮಾಹೇಶ್ವರ ನಿಷ್ಠೆಯ ಮೂಲಕ ಏಕದೇವನಲ್ಲಿ ಉಗ್ರನಂಬಿಕೆ ಇರಿಸಿ ಈಗಾಗಲೇ ಅಸ್ತಿತ್ವದಲ್ಲಿ ಇದ್ದ ಅನ್ಯಮತಗಳ ವಿರುದ್ಧ ಹೋರಾಡಿ ಶಿವಮತ ಮತ್ತು ಶಿವಸಂಸ್ಕೃತಿಯನ್ನು ರಕ್ಷಿಸಿದ ಶಿವಶರಣರುಗಳಲ್ಲಿ ಒಬ್ಬನಾದ ಆದಯ್ಯನು ನಾಲ್ಕುನೂರಐದು ವಚನಗಳನ್ನು ರಚಿಸಿದ್ದಾನೆ. ಪ್ರಸಕ್ತ ಲೇಖನದಲ್ಲಿ ಕಾವ್ಯಗಳು, ಪೂರಕಶಾಸನಗಳು ಮತ್ತು ಕ್ಷೇತ್ರಕಾರ್ಯದ ಮೂಲಕ ದೊರೆತ ಕೆಲವೊಂದು ಆಧಾರಗಳ ಬೆಳಕಿನಲ್ಲಿ ಆದಯ್ಯನ ಜನ್ಮಗ್ರಾಮ ಮತ್ತು ಜೀವಿಸಿದ್ದ ಕಾಲವನ್ನು ಪುನರ್ ಪರಿಶೀಲಿಸಲಾಗಿದೆ.

ಆದಯ್ಯನನ್ನು ಕುರಿತ ಕಾವ್ಯ–ಪುರಾಣಗಳಲ್ಲಿ ಜನ್ಮಗ್ರಾಮದ ಬಗೆಗೆ ವಿಭಿನ್ನ ಹೆಸರುಗಳಿವೆ. ರಾಘವಾಂಕನ ಸೋಮನಾಥ ಚಾರಿತ್ರದಲ್ಲಿ

'ನಾನೊಲಿದು ನೆಲಸಿರ್ಪ ಸೌರಾಷ್ಟ್ರವೆಂಬ ಸು[೧]

ಸ್ಥಾನವುಂಟದರೊಳಗೆ ಜನಿಸು ಹೋಗೆನೆ ' ಎಂಬ ಹೇಳಿಕೆ ಮತ್ತು

ಭೈರವೇಶ್ವರಕಾವ್ಯಕಥಾಮಣಿ ಸೂತ್ರರತ್ನಾಕರದಲ್ಲಿಯ ಉತ್ತರದೇಶದೊಳೊಪ್ಪುವ ಸೌರಾಷ್ಟ್ರಪುರದಲ್ಲಿ ಅನಾದಿ ಗಣೇಶ್ವರನೆಂಬಾತನೆ ಶಿವಭಕ್ತರುದರದಲ್ಲಿ ಜನಿಸಿ ಆದಯ್ಯನ

---

೧. ಸೋಮನಾಥ ಚಾರಿತ್ರ (ಸಂ. ಆರ್. ಸಿ. ಹಿರೇಮಠ, ಎಂ.ಎಸ್. ಸುಂಕಾಪುರ) ಸ್ಥ. ೧. ಪ. ಸಂ. ೫೬

ಹೆಸರಿನಿಂದ ..[೨] ಎಂಬ ಹೇಳಿಕೆಗಳಿಂದ ಸೌರಾಷ್ಟ್ರವು ಆದಯ್ಯನ ಜನ್ಮಗ್ರಾಮ ಎಂಬುದಾಗಿ ವ್ಯಕ್ತವಾಗುತ್ತದೆ.

ಸಿದ್ಧನಂಜೇಶನ ರಾಘವಾಂಕ ಚರಿತೆಯಲ್ಲಿ,

ಪೋಗೆಂದು ಬೀಳ್ಕೊಡಲು ಬಂದಾದಿಗಣನಾಥ
ನಾಗಭೂಷಣನ ನಚ್ಚಿನ ದೇಶ ಸೊರಟದೊಳ

ಗಾಗುಣೋತ್ತುಂಗ ಶಿವಭಕ್ತರುದರದಿ ಜನಿಸಿ... [೩] ಎಂಬ ಉಲ್ಲೇಖದಿಂದ ಸೊರಟೂರು ಆದಯ್ಯನ ಜನ್ಮ ಸ್ಥಳ ಎಂಬುದಾಗಿ ವ್ಯಕ್ತಪಡುತ್ತದೆ. ಸೊರಟ ಎಂಬುದು ಸೌರಾಷ್ಟ್ರದ ತದ್ಭವವಾಗಿ ಬಳಕೆಯಾಗಿದೆ. ಹಲವಾರು ಸೌರಾಷ್ಟ್ರಗಳು ಕಂಡು ಬರುವುದರಿಂದ ಆದಯ್ಯನ ಜನ್ಮಸ್ಥಳ ಯಾವುದು ? ಎಂಬುದನ್ನು ಗುರುತಿಸಲು ಸಂದೇಹ ಉಂಟಾಗಿದೆ. ಕೆಲವು ವಿದ್ವಾಂಸರು ಆದಯ್ಯನ ಜನ್ಮಗ್ರಾಮ `ಸೌರಾಷ್ಟ್ರವು' ಗುಜರಾತ್ ರಾಜ್ಯದಲ್ಲಿದ್ದು ಆದಯ್ಯನು ಕರ್ನಾಟಕದವನಾಗಿರದೆ ಹೊರನಾಡಿನವನು ಆಗಿದ್ದಾನೆ ಎಂದು ಊಹಿಸಿದ್ದಾರೆ.[೪] ಆದಯ್ಯನು ಸೌರಾಷ್ಟ್ರದಿಂದ ಬಂದಿರುವನಾಗಿರದೆ ಕನ್ನಡನಾಡಿನವನೇ ಎಂದೆನಿಸುತ್ತದೆ. ವೀ. ರು. ಕೊಪ್ಪಳರವರು 'ಆದಯ್ಯನ ವಚನಗಳು' ಪ್ರಸ್ತಾವನೆಯಲ್ಲಿ, `ಸೊರಟೂರು ಎಂಬ ಗ್ರಾಮಗಳು ಕನ್ನಡನಾಡಿನಲ್ಲಿ ಅನೇಕ ಕಡೆ ಇರುತ್ತವೆ. ಸೌರಾಷ್ಟ್ರದ ಸೋಮನಾಥನ ಮೇಲಿನ ಭಕ್ತಿಯಿಂದಾಗಿ ಇಂಥ ಊರುಗಳನ್ನು ಕಟ್ಟಿಸಿ ಅಲ್ಲಲ್ಲಿ ಸೋಮನಾಥ ದೇವಾಲಯಗಳನ್ನು ಸ್ಥಾಪಿಸಿದಂತಿದೆ. ಪುಲಿಗೆರೆಯ ಹತ್ತಿರವೆ ಸೊರಟೂರೆಂಬ ಗ್ರಾಮ ಇದೆ. ಇಲ್ಲಿ ಜಕ್ಕಣಾರ್ಯನ ಶೈಲಿಯಂತಿರುವ ಗುಡಿಗಳು ಇರುತ್ತವೆ. ಆದಯ್ಯನು ಇಲ್ಲಿಯಾಗಲೀ ಅಥವಾ ಸಮೀಪದ ಸೊರಟೂರೆಂಬ ಇನ್ನಾವುದಾದರೊಂದು ಗ್ರಾಮದಲ್ಲಾಗಲೀ ಇರುತ್ತಿದ್ದನೇ ಎಂಬವು'ಸಂಶೋಧನೆಯ ಸಂಗತಿಗಳಾಗಿರುತ್ತವೆ.[೫] ಎಂಬ ಸಂದೇಹವನ್ನು ವ್ಯಕ್ತಪಡಿಸಿದ್ದಾರೆ.

ಆದಯ್ಯನ ಜನ್ಮಗ್ರಾಮ ಹೊರನಾಡಿನ ಸೌರಾಷ್ಟ್ರವಾಗಿದ್ದರೆ ಚಿಕ್ಕಸಂದೇಹ ನಮ್ಮಲ್ಲಿ ಉಂಟಾಗುತ್ತದೆ. ಆದಯ್ಯನನ್ನು ಕುರಿತ ಕಾವ್ಯಗಳಲ್ಲಿ ಆದಯ್ಯ ಪದ್ಮಾವತಿಯರ ವಿವಾಹ

---

೨. ಭೈರವೇಶ್ವರಕಾವ್ಯ ಕಥಾಮಣಿಸೂತ್ರರತ್ನಾಕರ ಭಾಗ-೨ (ಸಂ.ಆರ್.ಸಿ.ಹಿರೇಮಠ, ಎಂ. ಎಸ್. ಸುಂಕಾಪುರ) ಪು. ೭೧

೩. ರಾಘವಾಂಕ ಚರಿತೆ (ಸಂ.ಸ.ಸ.ಮಾಳವಾಡ) ಸಂ.೧೩.ಪ. ಸಂ. ೩೦.

೪. ಸೋಮನಾಥ ಚರಿತ್ರ (ಸಂ. ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ) ಪ್ರಸ್ತಾವನೆ ಪು. XLVIII

೫. ಆದಯ್ಯನ ವಚನಗಳು (ಸಂ. ಉತ್ತಂಗಿ ಚೆನ್ನಪ್ಪ) ಪ್ರಸ್ತಾವನೆ ಪು. VI

ಪ್ರಸಂಗದ ನಂತರ ಬೋನದ ವಿಷಯದಲ್ಲಿ ಆದಯ್ಯ ಮತ್ತು ಮಾವ ಪಾರಿಸಪಂಡಿತನ ಜೊತೆಯಲ್ಲಿ ಉಂಟಾದ ವಾದ ವಿವಾದದಲ್ಲಿ ಸೌರಾಷ್ಟ್ರದ ಸೋಮೇಶನನ್ನು ಪುಲಿಗೆರೆಯ ಸುರಹೊನ್ನೆ ಬಸದಿಯಲ್ಲಿ ತಂದು ಪ್ರತಿಷ್ಠಾಪಿಸಿದ ಹೊರತು ಉಣ್ಣಲಾರ ಎಂಬ ಮಾವನ ಕಟಕಿ ನುಡಿಯನ್ನೇ ಪ್ರತಿಜ್ಞೆಯಾಗಿ ಸ್ವೀಕರಿಸಿ ಆದಯ್ಯನು ಕಾರ್ಯತತ್ಪರನಾಗುತ್ತಾನೆ. ಆದಯ್ಯನು ಪುಲಿಗೆರೆಯ ಸುರಹೊನ್ನೆ ಬಸದಿಗೆ ಸೋಮೇಶನನ್ನು ಕರೆತರಲು ಸೌರಾಷ್ಟ್ರಕ್ಕೆ ಹೋದ ಎಂಬುದು ಇಲ್ಲಿ ವಿದಿತವಾಗಿರುವ ಸಂಗತಿ. ಆದಯ್ಯನ ಜನ್ಮಗ್ರಾಮ ಸೌರಾಷ್ಟ್ರ ಎಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡರೆ ಸೋಮೇಶನನ್ನು ಕರೆತರಲು ತನ್ನ ಹುಟ್ಟೂರಾದ ಸೌರಾಷ್ಟ್ರಕ್ಕೆ ಪ್ರಯಾಣ ಬೆಳೆಸಿದನೆ ಎಂದೆನಿಸುತ್ತದೆ. ಈ ಸೌರಾಷ್ಟ್ರವು ಒಂದು ವೇಳೆ ಆದಯ್ಯನ ಜನ್ಮ ಗ್ರಾಮವಾಗಿದ್ದರೆ ಪಯಣ ಮಾರ್ಗದಲ್ಲಿ ಅನೇಕ ಕಷ್ಟಗಳನ್ನು ಎದುರಿಸದೆ ಸುಗಮವಾಗಿ ತಲುಪಬಹುದಾಗಿತ್ತು. ಆದರೆ ಆದಯ್ಯನು ಸೌರಾಷ್ಟ್ರ ಸೋಮಯ್ಯನನ್ನು ಕರೆತರಲು ಹೊರಟ ಪಯಣದ ವಿವರ ತ್ರಾಸದಾಯಕವಾಗಿತ್ತು ಎಂಬುದು ಕಾವ್ಯಗಳಿಂದ ವ್ಯಕ್ತವಾಗುತ್ತದೆ. ಏಕಾಂಗಿಯಾಗಿ ಹೊರಟ ಆದಯ್ಯ ಭಯಂಕರವಾದ ಕಾಡಿನಲ್ಲಿ ಹಸಿವು ನೀರಡಿಕೆಯಿಂದ ಹಾದಿಗೆಟ್ಟ ಹೊಲಬನಂತೆ ಪರಿತಪಿಸುವ ಪ್ರಸಂಗವು ಸೋಮನಾಥ ಚಾರಿತ್ರದಲ್ಲಿ[೬] ನಿರೂಪಿತವಾಗಿದೆ. ಸೌರಾಷ್ಟ್ರವು ಈತನ ಜನ್ಮಸ್ಥಳವಾಗಿದ್ದರೆ. ಪಯಣ ಮಾರ್ಗದ ಪರಿಚಯ ಇದ್ದೇ ಇರುತ್ತಿತ್ತು ಎಂದೆನಿಸುತ್ತದೆ. ಸೌರಾಷ್ಟ್ರವು ಆದಯ್ಯನ ಮನೆ ದೇವರು ಇರುವ ಸ್ಥಳ ಎಂಬುದು ಭೈರವೇಶ್ವರಕಾವ್ಯ ಮತ್ತು ಭೈರವೇಶ್ವರಕಾವ್ಯ ಕಥಾಮಣಿ ಸೂತ್ರರತ್ನಾಕರದಿಂದ ತಿಳಿದು ಬರುತ್ತದೆ. ಹೀಗಾಗಿ ಆದಯ್ಯನ ಜನ್ಮಸ್ಥಳವು ಕರ್ನಾಟಕದ ಒಂದು ಊರು ಆಗಿದೆ. ಆದಯ್ಯನು ಅಚ್ಚಗನ್ನಡದವನೇ ಆಗಿದ್ದಾನೆ ಎಂದು ಊಹೆಮಾಡಲು ಅವಕಾಶ ಇದೆ. ಈತನ ವಚನಗಳ ಭಾಷೆ, ಶೈಲಿ, ಪಾಂಡಿತ್ಯ ಇತ್ಯಾದಿಗಳನ್ನು ಪರಿಶೀಲಿಸಿದರೆ ಹೊರನಾಡಿನವನು ಎಂದೆನಿಸುವುದಿಲ್ಲ.

ಕರ್ನಾಟಕದ ಯಾವ ಊರು ಆದಯ್ಯನ ಜನ್ಮಸ್ಥಳವಾಗಿರಬೇಕು ಎಂದೆನಿಸುತ್ತದೆ. ವೀ.ರು.ಕೊಪ್ಪಳ ಅವರು ಹುಲಿಗೆರೆಗೆ ಹನ್ನೆರಡುಮೈಲಿ ದೂರದಲ್ಲಿರುವ ಸೊರಟೂರು ಆದಯ್ಯನ ಜನ್ಮಸ್ಥಳ ಎಂದಿದ್ದಾರೆ.[೭] ಸೊರಟೂರಿನಲ್ಲಿ ಆದಯ್ಯನ ಬಗೆಗೆ ಸಂಬಂಧಿಸಿದ ಕುರುಹುಗಳಾಗಲೀ, ಐತಿಹ್ಯಗಳಾಗಲೀ ಇದ್ದಂತೆ ತಿಳಿದು ಬರುವುದಿಲ್ಲ. ಲಬ್ಧವಿರುವ ಮಿತವಾದ ಆಧಾರಗಳಿಂದ `ಸಾಸಲು` ಆದಯ್ಯ' ನ ಜನ್ಮಗ್ರಾಮ ಎಂಬುದನ್ನು ಇಲ್ಲಿ

---

೬. ಸೋಮನಾಥ ಚಾರಿತ್ರ (ಸಂ. ಆರ್.ಸಿ. ಹಿರೇಮಠ. ಎಂ.ಎಸ್. ಸುಂಕಾಪುರ) ಸ್ಥಲ ೩ ಪ. ಸಂ. ೧೬ ರಿಂದ ೭೪

೭. ಆದಯ್ಯನ ವಚನಗಳು (ಸಂ. ಉತ್ತಂಗಿ ಚೆನ್ನಪ್ಪ) ಪ್ರಸ್ತಾವನೆ ಪು. ೬

ಸೂಚಿಸಲಾಗಿದೆ. ಸಾಸಲುವಿನಲ್ಲಿ ಸೋಮನಾಥ ದೇವಾಲಯ ಇದೆ. ಸೋಮನಾಥ ದೇವಾಲಯದ ನವರಂಗದಲ್ಲಿ ಆದಿಸೆಟ್ಟಿಯ ವಿಗ್ರಹ ಇದೆ ಎಂದು ಭೈರವೇಶ್ವರ ಕಾವ್ಯದ ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ.[೮] ಜೊತಗೆ Mysore Archaeological Report ನಲ್ಲಿಯೂ The Someswara temple in the navaranga figures of Adisetti' ಎಂಬ ಉಲ್ಲೇಖ ದಾಖಲಾಗಿದೆ.[೯] ಈ ಹೇಳಿಕೆಗಳನ್ನು ಆಧರಿಸಿ ಕ್ಷೇತ್ರಕಾರ್ಯ ಕೈಗೊಂಡಾಗ ಭೈರವೇಶ್ವರ ಕಾವ್ಯ ಮತ್ತು M.A.R ನ ಹೇಳಿಕೆಗಳು ಸತ್ಯಕ್ಕೆ ಹತ್ತಿರದಲ್ಲಿವೆ ಎಂದೆನಿಸಿತು. ಈ ಸಾಸಲು ಗ್ರಾಮ ಮಂಡ್ಯ ಜಿಲ್ಲೆಯ ಕೆ. ಆರ್. ಪೇಟೆ ತಾಲೂಕಿನ ಕಿಕ್ಕೇರಿಗೆ ಸಮೀಪದಲ್ಲಿದೆ. ಸಾಸಲುವಿನಲ್ಲಿ ಸೋಮೇಶ್ವರ ದೇವಾಲಯ ಇದೆ. ದೇವಾಲಯವು ಚೋಳರ ಕಾಲಕ್ಕೆ ಸೇರಿದುದಾಗಿ ಕಂಡುಬರುತ್ತದೆ. ನವರಂಗದ ಬಲಭಾಗದಲ್ಲಿ ಎರಡು ವಿಗ್ರಹಗಳು ಇದ್ದು. ವಿಗ್ರಹಗಳಲ್ಲಿನ ವ್ಯಕ್ತಿಗಳನ್ನು ಆದಿಸೆಟ್ಟಿ ಮತ್ತು ಕೋರಿಸೆಟ್ಟಿ ಎಂದು ಈಗಲೂ ಕರೆಯುತ್ತಾರೆ. ಗರ್ಭಗುಡಿಯಲ್ಲಿ ಲಿಂಗ ಇದೆ. ಈ ವಿಗ್ರಹಗಳಲ್ಲಿನ ವ್ಯಕ್ತಿಗಳ ಬಗೆಗೆ ಪ್ರಸ್ತಾಪಿಸಿದಾಗ ಜನರು ಹರಿಹರನ ಆದಯ್ಯನ ರಗಳೆ ಮತ್ತು ಸೋಮನಾಥ ಚಾರಿತ್ರದ ಆದಯ್ಯನ ಕಥೆಯನ್ನು ಹೋಲುವ ಆದಿಸೆಟ್ಟಿಯ ಕಥೆ ಹೇಳುತ್ತಾರೆ. ಕುತೂಹಲಕರ ಸಂಗತಿ ಎಂದರೆ ಶ್ರವಣಬೆಳ್ಗೊಳವು ಸಾಸಲುವಿಗೆ ಸುಮಾರು ಇಪ್ಪತ್ತು ಕಿ. ಮೀ. ದೂರದಲ್ಲಿದೆ. ಇಲ್ಲಿಯೂ ಮೊದಲು ಜೈನರಿದ್ದು ನಂತರ ಶೈವರಿಗೂ ಮತ್ತು ಜೈನರಿಗೂ ಕಲಹವಾಗಿ ಜೈನರೆಲ್ಲರೂ ಸಾಸಲನ್ನು ಬಿಟ್ಟು ಶ್ರವಣ ಬೆಳ್ಗೊಳದಲ್ಲಿ ನೆಲೆನಿಂತರು ಎಂಬ ಹೇಳಿಕೆಯನ್ನು ಸಾಸಲುವಿನಲ್ಲಿಯ ವೃದ್ಧರೊಬ್ಬರು ನಮಗೆ ತಿಳಿಸಿದರು. ಸಾಸಲುವಿನ ಸುತ್ತಮುತ್ತಲು ಈಗಲೂ ಶೈವರೇ ಅಧಿಕವಾಗಿದ್ದು ಸೋಮೇಶ್ವರದೇವರ ಭಕ್ತವೃಂದದವರೇ ಆಗಿದ್ದಾರೆ. ಆದಯ್ಯನಿಗೆ ಆದಿಸೆಟ್ಟಿ ಎಂಬುದು ಪರ್ಯಾಯ ಹೆಸರಾಗಿತ್ತು ಎಂಬುದು ಕಾವ್ಯ ಪುರಾಣಗಳಲ್ಲಿಯ

ಖುಲ್ಲ ಶ್ರವಣರ ಕೊಲ್ಪ ಮಿತ್ತಾದಿಸೆಟ್ಟಿ ಮುದದಲ್ಲಿರಲು
ಇಂದು ಪದ್ಮಾವತಿಯನಾದಿ ಸೆಟ್ಟಿಯನು ನಲವಿಂದೊಂದು
ಆದಿಸೆಟ್ಟಿಗೆ ಸೋತು ಪದ್ಮಾವತಿಯು ಶೈವೆಯಾದಳೆಂಬುದನವಳು
ಭಕ್ತಾದಿ ಸೆಟ್ಟಿಮಿಗೆ ನಿನ್ನ ಕಾಡಿದೆನು ತಪ್ಪುಂಟೆನ್ನೊಳು

---

೮. ಭೈರವೇಶ್ವರ ಕಾವ್ಯ (ಸಂ. ಶಿವರುದ್ರ ಸ್ವಾಮಿಗಳು) ಪ್ರಸ್ತಾವನೆ ಪು. ೨೮

9. Mysore Archaeological Report 1914 pp. 22-23

* ಲೇಖನದ ಕೊನೆಯಲ್ಲಿ ಕೊಟ್ಟಿರುವ ಚಿತ್ರಗಳನ್ನು ನೋಡಿ.

ಎಂಬ[೧೦] ಹೇಳಿಕೆಗಳು ಸಮರ್ಥಿಸುತ್ತವೆ. ಸೋಮನಾಥ ಚಾರಿತ್ರವನ್ನು ಒಂದೆಡೆ `ಆದಿಸೆಟ್ಟಿ ಪುರಾಣ' ಎಂದೆ[೧೧] ಕರೆದಿದ್ದಾರೆ. ಈ ಮೇಲಿನ ಹೇಳಿಕೆಯನ್ನು ಬೆಂಬಲಿಸುವಂತೆ ಭೈರವೇಶ್ವರಕಾವ್ಯ ಮತ್ತು ಭೈರವೇಶ್ವರಕಾವ್ಯ ಕಥಾಮಣಿಸೂತ್ರರತ್ನಾಕರಗಳಲ್ಲಿ ಆದಯ್ಯನ ವಂಶಜರು ಸಾಸಲುವಿನಲ್ಲಿ ಇದ್ದ ಬಗೆಗೆ ಉಲ್ಲೇಖ ಇದೆ. ಆದಯ್ಯನ ಮೇಲಿನ ಅಭಿಮಾನ ದಿಂದ ಹುಲಿಗೆರೆಯಲ್ಲಿರ್ದ ಆದಯ್ಯನ ಗುರು ಸಂಪ್ರದಾಯಕ್ಕೆ ಮುಖ್ಯವಾದ ಬಿಕ್ಕಣಾರ್ಯ ಮೊದಲಾದ ಭಕ್ತರು ಆದಯ್ಯನ ಜನ್ಮಸ್ಥಳವಾದ ಸಾಸಲಿಗೆ ಅಲ್ಲಿಯ ಸೋಮೇಶ್ವರದೇವರ ನೋಡಬೇಕೆಂದು ಶಿವಭಕ್ತರೊಡಗೂಡಿ ಬಂದಾಗ `ಆದಯ್ಯನ ವಂಶೋಜನಾದ ಬಿಕ್ಕೊಡೆಯರು' ಬಂದು ಸ್ವಾಗತಿಸಿದರು ಎಂದಿದೆ.[೧೨] ಆದಯ್ಯನ ವಂಶಜರಿಗೆ ಸೌರಾಷ್ಟ್ರ ಸೋಮೇಶನು ಮನೆದೇವರು ಆಗದ್ದಿರಬಹುದು ಎಂಬುದು

ಶಿವರಾತ್ರಿಯೊಳು ಪೋಗಿ
ಸೌರಾಷ್ಟ್ರಪತಿಯ ಪಾ
ದವ ಕಂಡು ವರುಷಕ್ಕೊಮ್ಮೊಮ್ಮೆ
ಅವರು ಬರಲು ...[೧೩]

ಎಂಬ ಹೇಳಿಕೆಯಿಂದ ವ್ಯಕ್ತಪಡುತ್ತದೆ. ಆದಯ್ಯನು ಸೌರಾಷ್ಟ್ರ ಸೋಮೇಶನನ್ನು ಸುರ ಹೊನ್ನೆ ಬಸದಿಯಲ್ಲಿ ಪ್ರತಿಷ್ಠಾಪಿಸಿ ಜಿನಾಲಯವನ್ನು ಶಿವಾಲಯವನ್ನಾಗಿ ಪರಿವರ್ತಿಸಿದ್ದರಿಂದ ಇವರಿಗೆ ಸೌರಾಷ್ಟ್ರ ಸೋಮನಾಥ ಒಂದು ರೀತಿಯಲ್ಲಿ ಮನೆದೇವರು ಎನಿಸಿರಬೇಕು. ವಿಶೇಷ ಸಂಗತಿ ಎಂದರೆ ಪುಲಿಗೆರೆಯ ಸೋಮೇಶ್ವರ ದೇವಾಲಯದ ದಕ್ಷಿಣ ಬಾಗಿಲ ಎಡಬದಿಯಲ್ಲಿ ಶಿಲ್ಪವೊಂದಿದ್ದು ಆ ಶಿಲ್ಪದಲ್ಲಿರುವ ವ್ಯಕ್ತಿಗಳ ಹೆಸರು ಶಿವರಾಮ ಒಡೆಯ, ಪೂಜಾರಿ ಚಿಕ್ಕಣ ಎಂಬುದಾಗಿ ಅಲ್ಲಿಯ ಕ್ರಿ. ಶ. ೧೪ನೆ ಶತಮಾನಕ್ಕೆ ಸೇರಿದ. ಶಾಸನದಲ್ಲಿ ಇದೆ.[೧೪] ಶಿಲ್ಪದಲ್ಲಿ ಈ ಇಬ್ಬರು ವ್ಯಕ್ತಿಗಳ ಜೊತೆ ಸೋಮನಾಥ ದೇವರ ಚಿತ್ರವು ಇದೆ. ಶಿವರಾಮ ಒಡೆಯರು ಮತ್ತು ಚಿಕ್ಕಣರು ಬಹುಶಃ ಆದಯ್ಯನ ವಂಶಜರೇ ಇರಬೇಕೆಂದು ಊಹಿಸಲು ಅವಕಾಶ ಇದೆ. ಈ ಮಿತವಾದ ಆಧಾರಗಳು ` ಸಾಸಲು' ಆದಯ್ಯನ

---

೧೦. ರಾಘವಾಂಕ ಚರಿತೆ (ಸಂ. ಸ. ಸ. ಮಾಳವಾಡ) ಸಂ. ೧೩, ಪ. ಸಂ., ೨೨, ೨೩, ೪೨, ೫೭

೧೧. ಆದಿಶೆಟ್ಟಿ ಪುರಾಣ (ಸಂ. ಬಿ. ಬಸವಾರಾಧ್ಯ) ಅಂಬಿಕಾ ಗ್ರಂಥಮಾಲೆ ೧೯೧೦

೧೨. ಭೈರವೇಶ್ವರಕಾವ್ಯ ಕಥಾಮಣಿಸೂತ್ರರತ್ನಾಕರ ಭಾಗ -೨ (ಸಂ. ಆರ್.ಸಿ. ಹಿರೇಮಠ, ಎಂ. ಎಸ್. ಸುಂಕಾಪುರ) ಪು. ೬೯

೧೩. ಅದೇ, ಪು. ೭೧

೧೪. South Indian Inscription, Vol. xx No. 366 ಲಕ್ಷ್ಮೇಶ್ವರ

ಜನ್ಮಸ್ಥಳವಾಗಿದ್ದಿರಬಹುದು ಎಂದೆನಿಸುತ್ತದೆ. ಸಾಸಲು ಸೌರಾಷ್ಟ್ರದ ಪರ್ಯಾಯ ನಾಮವಾಗಿದ್ದಿರಬಹುದೇ ಎಂಬ ಅನುಮಾನ ಕ್ಷಣಕಾಲ ನಮ್ಮಲ್ಲಿ ಉದ್ಭವಿಸದೇ ಇರದು. ಈ ಅಂಶವನ್ನು ಬೆಂಬಲಿಸುವ ಹೆಚ್ಚಿನ ಆಧಾರಗಳು ದೊರೆತರೆ `ಸಾಸಲು' ಆದಯ್ಯನ ಜನ್ಮಸ್ಥಳ ಎಂದು ಸ್ವೀಕರಿಸಬಹುದಾಗಿದೆ.

ಆದಯ್ಯನ ಕಾಲ

ಆದಯ್ಯನ ಕಾಲದ ಬಗೆಗೆ ವಿದ್ವಾಂಸರು ವಿಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

೧. ಕವಿಚರಿತೆಯಲ್ಲಿ ಆದಯ್ಯನ ಕಾಲ ಕ್ರಿ. ಶ. ೧೧೫೦ ಎಂದಿದೆ.[೧೫]

೨. ಫ. ಗು. ಹಳಕಟ್ಟಿಯವರು ಆದಯ್ಯನು ಸುಮಾರು ಕ್ರಿ. ಶ. ೧೧೭೦ ತರುವಾಯ ೧೦ -೨೦ ವರ್ಷಗಳಲ್ಲಿಯೇ ಪ್ರಸಿದ್ಧಿಗೆ ಬಂದಿರಬಹುದು.[೧೬]

೩. ಆದಯ್ಯನ ವಚನಗಳ ಪ್ರಸ್ತಾವನೆಯಲ್ಲಿ ಆದಯ್ಯತನ್ನ ಶರಣಸ್ತೋತ್ರದ ಒಂದು ವಚನದಲ್ಲಿ ಏಕೋರಾಮಯ್ಯಗಳ ನಿಷ್ಠೆಯನ್ನು, ಇನ್ನೊಂದರಲ್ಲಿ ಅಸಂಖ್ಯಾತರು ತನ್ನ ಅವಯವಗಳೆಂದು ಹೇಳಿಕೊಳ್ಳುವಾಗ ಆತನು ತನ್ನ ನಾಸಿಕ ಎಂದು ಹೇಳುತ್ತಾನೆ. ಏಕೋರಾಮನೇ ಏಕಾಂತ ರಾಮಯ್ಯನೆಂದು ತಿಳಿದು ಬರುತ್ತದೆ. ಆದಯ್ಯ ಏಕಾಂತ ರಾಮಯ್ಯನಿಗಿಂತ ನಂತರದವನು. ಆದಯ್ಯನ ಜೀವನ ಚರಿತ್ರೆಯನ್ನು ಕಾವ್ಯದಲ್ಲಿ ರಚಿಸಿದ ಹರಿಹರ - ರಾಘವಾಂಕರ ಕಾಲ ಕ್ರಿ. ಶ. ೧೧೯೦ -೧೨೨೫. ಹೀಗಾಗಿ ಶಿವಶರಣರು ಕಣ್ಮರೆಯಾದ ನಲವತ್ತು ಐವತ್ತು ವರ್ಷಗಳ ತರುವಾಯ ವಚನ ಕಾರನಾಗಿ ಪ್ರಸಿದ್ಧಿಗೆ ಬಂದಿರಬೇಕು ಎಂದು ಸೂಚಿಸಿದ್ದಾರೆ.[೧೭]

೪. ಸೋಮನಾಥ ಚಾರಿತ್ರದ ಸಂಪಾದಕರು ಪುಲಿಗೆರೆಯಲ್ಲಿ ದೊರೆಯುವ ಮೂರು ಶಾಸನಗಳ ಆಧಾರ ಹಾಗೂ ಸೋಮನಾಥ ಚಾರಿತ್ರದಲ್ಲಿ ಸೌರಾಷ್ಟ್ರ ಸೋಮನಾಥನು ಪುಲಿಗೆರೆಗೆ ಆಗಮಿಸಿದ ದಿನದ ಉಲ್ಲೇಖ ಇದ್ದು ಅದನ್ನು ಸ್ವಾಮಿ ಕಣ್ಣು ಪಿಳ್ಳೆರವರ ಜಂತ್ರಿಯ ಸಹಾಯದಿಂದ ಕ್ರಿ. ಶ. ೧೧೦೦ರಲ್ಲಿ ಸೋಮನಾಥನನ್ನು ಪುಲಿಗೆರೆಯಲ್ಲಿ ಸ್ಥಾಪಿಸಿದನೆಂದು ಬಸವಾದಿ ಪ್ರಮಥರ ಕ್ರಾಂತಿಯ ಪರಮಾವಧಿ ಕಾಲ ಕ್ರಿ.ಶ. ೧೧೬೭ ಈ ಮಾಲಿಕೆಯಲ್ಲಿ ಆದಯ್ಯನು ಕೊನೆಯವನೆಂದು ಮುಂದಿನವರ ಗ್ರಹಿಕೆ. ಕಾರಣ ಆದಯ್ಯ ಕ್ರಿ. ಶ. ೧೧೬೭ ರವರೆಗೆ ಜೀವಿಸಿರಬೇಕಾಗಿರುತ್ತದೆ. ಕ್ರಿ.ಶ. ೧೧೦೦ರಲ್ಲಿ

---

೧೫ ಆರ್. ನರಸಿಂಹಾಚಾರ್ಯ: ಕರ್ನಾಟಕ ಕವಿಚರಿತೆ (ಪರಿಷ್ಕೃತ ಮುದ್ರಣ) ೧೯೬೨ ಸಂ. ೧ ಪು. ೨೧೮

೧೬. ಫ. ಗು. ಹಳಕಟ್ಟಿ, ಶಿವಶರಣರ ಚರಿತ್ರೆಗಳು ಭಾಗ -೨ ಸಂ. ೧೯ ಸಂ. ೫

೧೭. ಆದಯ್ಯನ ವಚನಗಳು (ಸಂ. ಉತ್ತಂಗಿ ಚೆನ್ನಪ್ಪ) ಪ್ರಸ್ತಾವನೆ ಪು. ೭೮

ಪುಲಿಗೆರೆಯೊಳಗೆ ಸೌರಾಷ್ಟ್ರ ಸೋಮನಾಥನನ್ನು ಪ್ರತಿಷ್ಠಾಪನೆ ಮಾಡುವಂದು ಆದಯ್ಯನು ಸುಮಾರು ೨೦ ವರ್ಷದವನಿದ್ದರೆ ಕ್ರಿ. ಶ. ೧೧೬೭ರ ವೊತ್ತಿಗೆ ಆತನ ವಯಸ್ಸು ೮೭ ಆಗುತ್ತದೆ ಎಂದು ಹೇಳಿ ಆತನ ಕಾಲ ಕ್ರಿ. ಶ. ೧೧೦೦ -೬೭ ಎಂದಿದ್ದಾರೆ.[೧೮]

ಆದಯ್ಯನ ಕಾಲವನ್ನು ಚಿದಾನಂದಮೂರ್ತಿ ಅವರು ವೀರಶೈವ ಧರ್ಮವನ್ನು ನಾಲ್ಕು ಘಟ್ಟಗಳಾಗಿ ವಿಂಗಡಿಸಿದ್ದು ಬಸವಾದಿ ಪ್ರಮಥರ ನಂತರದ ಮೂರನೇ ಘಟ್ಟದಲ್ಲಿ ಅಂದರೆ ಹದಿಮೂರನೇ ಶತಕದ ಆದಿಯಲ್ಲಿ ಗುರಿತಿಸಿದ್ದಾರೆ.[೧೯]

ಆದಯ್ಯನು ವೀ. ರು. ಕೊಪ್ಪಳಿರವರ ಹೇಳಿಕೆಯಂತೆ ಏಕಾಂತರಾಮಯ್ಯನಿಗಿಂತ ನಂತರದವನಲ್ಲ. ಹರಿಹರನ ಏಕಾಂತರಾಮಿ ತಂದೆ ರಗಳೆ. ಗುಬ್ಬಿಮಲ್ಲಣಾರ್ಯನ ವೀರಶೈವಾಮೃತಮಹಾಪುರಾಣ ಮತ್ತು ಶಾಂತ ನಿರಂಜನನ ಅಬ್ಬಲೂರು ಚರಿತೆಗಳಲ್ಲಿ, ರಾಮಯ್ಯನ ರುಂಡವನ್ನು ಏಳು ಶೈವ ಕ್ಷೇತ್ರಗಳಲ್ಲಿ ಮೆರೆಸಿದರು ಎಂಬುದಾಗಿ ತಿಳಿದು ಬರುತ್ತದೆ. ಏಳು ಶೈವ ಕ್ಷೇತ್ರಗಳಲ್ಲಿ ಪುಲಿಗೆರೆಯ ಸೋಮೇಶ್ವರನೂ ಒಂದು ಎಂಬುದಾಗಿ ಆ ಕೃತಿಗಳಲ್ಲಿ ಉಲ್ಲೇಖ ಇದೆ. ಈ ವೇಳೆಗಾಗಲೇ ಆದಯ್ಯನು ಪುಲಿಗೆರೆಯಲ್ಲಿ ಸೋಮನಾಥನನ್ನು ಸ್ಥಾಪಿಸಿದ್ದನು ಎಂಬುದಾಗಿ ತಿಳಿದುಬರುತ್ತದೆ.

ಪಾಲ್ಕುರಿಕೆ ಸೋಮನಾಥನ ತೆಲುಗು ಬಸವ ಪುರಾಣಮುವಿನಲ್ಲಿ ``ಜೈನರು ಏಕಾಂತ ರಾಮಯ್ಯನಿಗೆ ತಲೆಯ ತರಿದು ಕೊಂಡು ಮಲಹರನಿಂದ ಪಡೆವೆಯಾ ಮತ್ತೆ' ಎಂದು ಸವಾಲೊಡ್ಡಿದಾಗ ಆತನು ಶಿರವಿತ್ತು ಪಡೆಯುವೆನು ಜಿನಸಮಯದ ಶಿರವ ಕಡಿದು ಭಾಷೆ ಸಲಿಸುವೆನೆನುತ... ಶಿರವಿತ್ತು ಪಡೆಯುವುದರಿದೆಂಬೆಯೇನು. ಪರವಾದಿ ಕೇಳೆಮ್ಮ ಭಕ್ತರ ಮಹಿಮೆ ಎಂದು ತನಗಿಂತ ಪೂರ್ವದಲ್ಲಿ ಸ್ವಸಮಯವನ್ನು ರಕ್ಷಿಸುವುದಕ್ಕೋಸ್ಕರ ಶಿರವನ್ನರಿದು ಕೊಂಡ ಭಕ್ತರ ಹೆಸರನ್ನು ಉಲ್ಲೇಖಿಸುವಾಗ ಆದಯ್ಯನ ವಿವರವು ಬಂದಿದೆ.[೨೦] ಹೀಗಾಗಿ ಆದಯ್ಯನು ಸ್ಮರಿಸಿರುವ ಏಕೋರಾಮನ ವಚನಕಾರ ಏಕಾಂತ ರಾಮಯ್ಯನಾಗಿರದೆ ಪಂಚಾಚಾರ್ಯರುಗಳಲ್ಲಿ ಒಬ್ಬನಾದ ಏಕೋರಾಮಾರಾಧ್ಯ ಎಂದೆನಿಸುತ್ತದೆ. ಏಕಾಂತ ರಾಮಯ್ಯನ ಕಾಲ ಕ್ರಿ. ಶ. ೧೧೨೦ ರಿಂದ ೧೧೯೦ ಎಂದ ಸದ್ಯಕ್ಕೆ ಭಾವಿಸಲಾಗಿದೆ.

---

೧೮. ಸೋಮನಾಥ ಚಾರಿತ್ರ (ಸಂ. ಆರ್.ಸಿ. ಹಿರೇಮಠ, ಎಂ.ಎಸ್. ಸುಂಕಾಪುರ) ಪ್ರಸ್ತಾವನೆ ಪ್ರ. XLV

೧೯. ಎಂ. ಚಿದಾನಂದಮೂರ್ತಿ - ಸಂಶೋಧನಾ ತರಂಗ ಭಾಗ -೧ ಪು. ೬೦

೨೦. ಪಾಲ್ಕುರಿಕೆ ಸೋಮನಾಥನ ಬಸವ ಪುರಾಣ (ಅನು. ಪಿ. ವಿ. ನಾರಾಯಣ) ಪು. ೩೨೯, ೩೬೨ -೬೩

ಆದಯ್ಯನ ಕಾಲವನ್ನು ಏಕಾಂತ ರಾಮಯ್ಯನು ಜೀವಿಸಿದ್ದ ಕಾಲಕ್ಕಿಂತ ಹಿಂದೆ ಹುಡುಕ ಬೇಕಾಗಿದೆ ಎಷ್ಟು ಹಿಂದೆ ಎಂದು ಕರಾರುವಾಕ್ಕಾಗಿ ಗುರುತಿಸಲು ಸಾಧ್ಯವಿಲ್ಲವಾದರೂ ಲಭ್ಯವಿರುವ ಮಿತವಾದ ಮಾಹಿತಿಗಳ ಮೂಲಕ ಅಭಿಜ್ಞಿಸಲಾಗಿದೆ. ಆದಯ್ಯನಿಂದ ಜರುಗಿತಲೆನ್ನಲಾದ ಪುಲಿಗೆರೆಯ ಸುರಹೊನ್ನೆ ಬಸದಿಯಲ್ಲಿ ಒಡಮೂಡಿದ ಸೌರಾಷ್ಟ್ರ ಸೋಮೇಶನ ಕಾಲವು ಹೆಚ್ಚಿನ ಶಾಸನಗಳಲ್ಲಿ ಉಲ್ಲೇಖವಿರದಿದ್ದರೂ ಉಳಿದ ಶಾಸನಗಳಲ್ಲಿನ ಪೂರಕ ಆಧಾರಗಳ ಪ್ರಕಾರ ಹನ್ನೊಂದನೆಯ ಶತಮಾನದ ಅಂತ್ಯಭಾಗಕ್ಕೆ ಹೋಗುತ್ತದೆ. ಬಳ್ಳಿಗಾವೆಯ ಕ್ರಿ. ಶ. ೧೦೯೬ರ ಶಾಸನವೊಂದರ[೨೧]ಲ್ಲಿ ಸರ್ವದೇವನೆಂಬುವನ ಮಗನಾದ ಸೋಮೇಶ್ವರನನ್ನು ಕುರಿತು ಪುಲಿಕರ ನಗರದ ಸೋಮೇಶ್ವರ ದೇವರ ಪ್ರಸಾದದಿಂದಂ ಸೋಮೆಶ್ವರ ನುದಯಿಸಲ್' ಎಂಬ ನಿರೂಪಣೆ ಇದೆ. ಇದರಿಂದ ಕ್ರಿ.ಶ.೧೦೯೬ ಕ್ಕಿಂತ ಹಿಂದೆಯೇ ಪುಲಿಗೆರೆಯಲ್ಲಿ ಸೋಮೇಶ್ವರ ದೇವರನ್ನು ಆದಯ್ಯನು ಪ್ರತಿಷ್ಠಾಪಿಸಿದ್ದನೆಂದೂ, ಸೋಮೇಶ್ವರ ದೇವರ ಮಹಿಮೆ ಎಲ್ಲೆಡೆ ಪ್ರಸಿದ್ಧಿಯಾಗಿದ್ದಿತೆಂದೂ ತಿಳಿಯಬಹುದಾಗಿದೆ. ಕ್ರಿ. ಶ. ೧೦೯೬ರ ಶಾಸನದಲ್ಲಿನ 'ಸೋಮಬುಧ ಜನ ವಾರಿಧಿ ಸೋಮಂ ಕವಿಗಮಕವಾದಿ ವಾಗ್ಮಿತ್ವ ಗುಣಾರಾಮಂ ವಾರ ವಧೂ ಜನ ಕಾಮಂ ಸಂಗ್ರಾಮ ರಂಗ ಹೊಡೆದೆಯೊಳ್ ಭೀಮಂ' ಎಂಬ ವಿವರಣೆಯನ್ನು ಗಮನದಲ್ಲಿಟ್ಟುಕೊಂಡು ಎಂ. ಎಂ.ಕಲಬುರ್ಗಿಯವರು ಆ ಶಾಸನದ ಕಾಲಕ್ಕೆ ಸೋಮೇಶ್ವರನ ವಯಸ್ಸು ಕನಿಷ್ಠ ಇಪ್ಪತ್ತೈದು- ಮೂವತ್ತು ವರ್ಷ ವಾದರೂ ಇರಬಹುದು ಹಾಗಿದ್ದರೆ ಪುಲಿಗೆರೆಯ ಸೋಮನಾಥನ ಪ್ರತಿಷ್ಠಾಪನೆ (೧೦೯೬ - ೩೦ : ೧೦೬೬) ಕ್ರಿ. ಶ. ೧೦೬೬ಕ್ಕೆ ಸರಿಯುತ್ತದೆ ಎಂದಿದ್ದಾರೆ.[೨೨] ಶಾಸನದಲ್ಲಿ ಉಕ್ತವಾಗಿರುವ ಸಂಗತಿಯಲ್ಲಿ ಸೋಮದೇವನು ಪ್ರೌಢನಾಗಿದ್ದನೆಂಬ ಅಂಶ ಮೇಲ್ನೋಟಕ್ಕೆ ನಮಗನ್ನಿಸಿದರೂ ಇದು ಕವಿಯ ಸಾಂಪ್ರದಾಯಿಕ ವರ್ಣನೆ ಎಂದೆನಿಸುತ್ತದೆ. ಸರ್ವದೇವನೇ ಶಾಸನದ ಹೇಳಿಕೆಯಲ್ಲಿರುವಂತೆ ಅತ್ಯಂತ ಪ್ರತಿಷ್ಠಿತ ವ್ಯಕ್ತಿಯಾಗಿರುವುದರ ಜೊತೆಗೆ ದಂಡ ನಾಯಕನಾಗಿಯೂ ಧರ್ಮಕಾರ್ಯದ ನಿರ್ಮಾತನೂ ಆಗಿದ್ದಾನೆ. ಸೋಮದೇವನು ಇಪ್ಪತ್ತೈದು ವರ್ಷದವನಾಗಿದ್ದ ಎಂಬುದನ್ನು ಒಪ್ಪಿಕೊಂಡರೆ ಈತನೇ ತಂದೆಯ ಹೆಸರಿನಲ್ಲಿ ದೇವಾಲಯ ಕಟ್ಟಿಸಬಹುದಾಗಿತ್ತು ಇವುಗಳ ಉಲ್ಲೇಖ ಶಾಸನದಲ್ಲಿ ಕಂಡುಬರುವುದಿಲ್ಲ. ಕ್ರಿ. ಶ. ೧೦೯೬ ಕ್ಕಿಂತ ಹಿಂದೆ ಐದಾರು ವರ್ಷಗಳಲ್ಲಿ ಸೋಮೇಶ್ವರ ದೇವಾಲಯವು ಸ್ಥಾಪಿತವಾಗಿರಬೇಕೆಂದು ಊಹಿಸಲು ಅವಕಾಶ ಇದೆ. ಪುಲಿಗೆರೆಯಲ್ಲಿ ಸೋಮನಾಥನ ಪ್ರತಿಷ್ಠಾಪನೆಯ ಕಾಲ ಹನ್ನೊಂದನೆಯ ಶತಮಾನದ ಅಂತ್ಯಭಾಗ ೧೦೯೦ ಎಂದು ಶಾಸನಗಳಲ್ಲಿ ದೊರೆಯುವ ಅಲ್ಪ ಪ್ರಮಾಣದ ಆಧಾರಗಳಿಂದ ನಿರ್ಧರಿಸಬಹುದಾಗಿದೆ. ಹೀಗಾಗಿ ಆದಯ್ಯನು

---

೨೧. ಇ. ಸಿ. ಸಂ. ೭ ಶಿಕಾರಿಪುರ ನಂ. ೧೧೪

೨೨. ಎಂ. ಎಂ. ಕಲಬುರ್ಗಿ : ಶಾಸನ ವ್ಯಾಸಂಗ ಭಾಗ -೨ ಪು. ೫೩

ಕ್ರಿ. ಶ. ೧೧೯೭ರ ವೇಳೆಗಾಗಲೇ ಜೀವಿಸಿದ್ದು ಬಸವಾದಿ ಪ್ರಮಥರ ಪ್ರಭಾವಕ್ಕೆ ಒಳಗಾಗಿ ತನ್ನ ಇಳಿವಯಸ್ಸಿನಲ್ಲಿ ವಚನರಚನೆಗೆ ತೊಡಗಿರಬೇಕು ಎಂದೆನಿಸುತ್ತದೆ.

ಆದಯ್ಯನು ಸೋಮೇಶ್ವರ ಪ್ರತಿಷ್ಠಾಪನೆಯ ಕಾಲಕ್ಕೆ ಇಪ್ಪತ್ತು ವರ್ಷದವನಾಗಿರಬೇಕು ಎಂಬ ಆರ್.ಸಿ. ಹಿರೇಮಠರ ಹೇಳಿಕೆಯನ್ನು ಒಪ್ಪಿಕೊಂಡು ಮುಂದುವರಿದರೆ ಬಸವಾದಿ ಪ್ರಮಥರ ಕಾಲದಲ್ಲಿ ವಚನ ರಚನೆಯಲ್ಲಿ ತೊಡಗಿರುವುದನ್ನು ಕಾಣಬಹುದು. ಈ ಆಧಾರದ ಮೇಲೆ ಆದಯ್ಯನ ಕಾಲವನ್ನು ಹನ್ನೊಂದನೇ ಶತಮಾನದ ಅಂತ್ಯಭಾಗದಿಂದ ಹನ್ನೆರಡನೇ ಶತಮಾನದ ಅಂತ್ಯಭಾಗದವರೆವಿಗೂ ಕೊಂಡೊಯ್ಯಬೇಕಾಗುತ್ತದೆ. ಈ ಹೇಳಿಕೆ ತಿರಸ್ಕರಿಸುವಂತಹ ಹೇಳಿಕೆ ಎಂದೆನಿಸುವುದಿಲ್ಲ. ಸಕಲೇಶಮಾದರಸರಂತಹವರು ಬಸವಪೂರ್ವಯುಗದಿಂದಲೇ ಜೀವಿಸಿದ್ದು ನಂತರ ಬಸವಣ್ಣನವರ ವಚನಗಳಿಂದ ಪ್ರಭಾವಿತರಾಗಿ ಇಳಿ ವಯಸ್ಸಿನಲ್ಲಿ ವಚನರಚನೆಯ ಕೈಗೊಂಡು ಹಿರಿಯ ಸಮಕಾಲೀನರಾದಂತೆ ಆದಯ್ಯನು ಅಲ್ಲಮಪ್ರಭು, ಚನ್ನಬಸವಣ್ಣ ಮುಂತಾದವರ ವಚನಗಳಿಂದ ಪ್ರಭಾವಿತನಾಗಿ* ಇಳಿ ವಯಸ್ಸಿನಲ್ಲಿ ವಚನ ರಚನೆಗೆ ತೊಡಗಿರಬೇಕು ಎಂದೆನಿಸುತ್ತದೆ. ಈ ಹೇಳಿಕೆಯನ್ನು ಸಮರ್ಥಿಸುವಂತೆ ಆದಯ್ಯನ ವಚನಗಳಲ್ಲಿ ಸಾಧನೆಯ ಮಾರ್ಗದಲ್ಲಿ ನಡೆಯುವ ಸಾಧಕನ ಆಂತರಿಕ ಹೋರಾಟ, ತಳಮಳ, ಶೋಧ, ವ್ಯಕ್ತಿತ್ವದ ವಿಕಾಸ ಗೋಚರವಾಗದೆ ಆಗಲೇ ಸಿದ್ಧಪುರುಷನಾದ ಉನ್ನತ ಆಧ್ಯಾತ್ಮಿಕ ನಿಲುವನ್ನು ಪಡೆದ ವ್ಯಕ್ತಿಯೊಬ್ಬನ ವಿವೇಕವಾಣಿ ಮತ್ತು ಅನುಭವಗಳು ಗೋಚರವಾಗಿರುವುದನ್ನು ಗುರುತಿಸಬಹುದಾಗಿದೆ. ಹೀಗಾಗಿ ಶಾಸನ ಮತ್ತು ಕಾವ್ಯಗಳಲ್ಲಿ ಉಕ್ತವಾಗಿರುವ ಪೂರಕ ಹೇಳಿಕೆಗಳಿಂದ ಸದ್ಯಕ್ಕೆ ಆದಯ್ಯನು ಕ್ರಿ. ಶ. ೧೧೭೦ರಿಂದ ಕ್ರಿ. ಶ. ೧೧೯೭ರ ವರೆಗೆ ಜೀವಿಸಿದ್ದನು ಎಂಬ ನಿಲುವಿಗೆ ಬರಬಹುದು ಎಂದೆನಿಸುತ್ತದೆ.

●●

---

* ಆದಯ್ಯನ ವಚನಗಳ ಮೇಲೆ ಅಲ್ಲಮಪ್ರಭು ಮತ್ತು ಚನ್ನಬಸವಣ್ಣನವರ ವಚನಗಳ ಪ್ರಭಾವವು ಯಥೇಚ್ಛವಾಗಿ ಆಗಿರುವುದನ್ನು ಗುರುತಿಸಬಹುದಾಗಿದೆ. ಆದಯ್ಯನು ಕೆಲವೆಡೆ ಇವರೀರ್ವರ ವಚನಗಳನ್ನು ಯಥಾವತ್ತಾಗಿ ಸ್ವೀಕರಿಸಿದ್ದರೆ, ಇನ್ನೂ ಹಲವೆಡೆ ಅಲ್ಪಸ್ವಲ್ಪ ಬದಲಾವಣೆಯೊಡನೆ ಸ್ವೀಕರಿಸಿದ್ದಾರೆ.

ಎಸ್. ಶಿವಣ್ಣನವರ ಲೇಖನ ಸೂಚಿ

ಲೇಖನಗಳು

-- 'ಸೂಕ್ತಿ ಸುಧಾರ್ಣವ'ದಲ್ಲಿನ ಕೆಲವು ಪದ್ಯಗಳ ಆಕರಗಳು

ಪ್ರಕ, ೪, ೫, ೩, ೧೯೬೩, ೧೨೨-೨೫

-- ಒಂದು ಊಹಾತ್ಮಕ ಟಿಪ್ಪಣಿ

ಕ ನು, ೨೮. ೨, ೧೯೬೫, ೯

-- 'ಸೂಕ್ತಿ ಸುಧಾರ್ಣ ವ'ದ ಕೆಲವು ಪದ್ಯಗಳಿಗೆ ಆಕರಗಳು

ಪ್ರಕ, ೪೭.೧, ೧೯೬೫, ೧೯೩ -೯೫

-- ಚಾವುಂಡರಾಯ ಮತ್ತು ಆತನ ಹಿಂದಿನ ಕೃತಿಕರ್ತರು

ಪ್ರಕ, ೪೮.೨, ೧೯೬೬, ೯೩ -೧೦೭

-- ಗದಾಯುದ್ಧದ ಒಂದು ಪದ್ಯ -ಟಿಪ್ಪಣಿ

ಪ್ರಕ, ೪೯.೨, ೧೯೬೭, ೧೫೯ -೬೦

-- ಕೊಂಡಗುಳಿ ಕೇಶಿರಾಜಕೃತ "ಲಿಂಗಸೋತ್ರದ ಕಂದ" ಒಂದು ಟಿಪ್ಪಣಿ

ಪ್ರಕ, ೫೧. ೧, ೧೯೬೯, ೧೫೭

-- ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯರ ಬೆಡಗಿನ ವಚನಗಳ ಟೀಕಾ ಕರ್ತೃತ್ವ -ಒಂದು ಟಿಪ್ಪಣಿ

ಪ್ರ ಕ, ೫೧. ೨, ೧೯೬೯, ೧೬೭ -೬೯

-- 'ಮಾಧುರ್ಯ ಬಿಂಬಾಧರೆ' - ಒಂದು ಟಿಪ್ಪಣಿ

ದೇವಗಂಗೆ, ೧೯೬೮, ೪೧೩

-- ಬಿ. ವೆಂಕಟಾಚಾರ್ಯರ ಅನುಕ್ತ ಕೃತಿಗಳು

ಕನು ೩೨.೮, ೧೯೬೯, ೨೩ -೪

-- ಒಂದು ಟಿಪ್ಪಣಿ ವಿನಾಶಕ್ತಿರಾಯ

ಜೀವನ, ೨೯.೨,೧೯೬೯, ೨೭- ೮

-- ಕೇಶಿರಾಜನ ಪ್ರಯೋಗಗಳ ಆಕರಗಳು

ಪ್ರಕ, ೫೨- ೪, ೧೯೭೦, ೧೨೭-೪೨

-- ವೀರಶೈವ ಅಪ್ರಕಟಿತ ಗ್ರಂಥಗಳು

ಕ ಭಾ, ೨.೨, ೧೯೭೦, ೧೮೨ -೨೧೦
೩.೧, ೧೯೭೦, ೧೧೨ -೨೭
೩.೨, ೧೯೭೦, ೯೯-೧೨೪

-- ಕಡಬದ ಅನಂತರಾಮದಾಸ - ಒಂದು ಟಿಪ್ಪಣಿ

ಪ್ರ. ಕ, ೫೩.೧, ೧೯೭೧, ೧೪೧ -೪೩

-- ``ಶಿವಲಿಂಗ ನಾಂದ್ಯ" ಮತ್ತು "ವಸ್ತುಕಪುರಾಣದ ನಾಂದ್ಯ"

(ಲಲಿತ ನಾಂದ್ಯ) ಕರ್ತೃತ್ವ ವಿಚಾರ

ಪ್ರ ಕ, ೫೩.೪, ೧೯೭೧, ೧೧೮ - ೧೯

-- ವೈದಿಕ ಅಪ್ರಕಟಿತ ಗ್ರಂಥಗಳು

ಕ ಭಾ, ೪.೩, ೧೯೭೨, ೧೧೫ - ೨೭
೪.೪, ೧೯೭೨, ೧೪೬ - ೫೯
೫.೧, ೧೯೭೨, ೧೪೨ - ೫೪
೫.೨, ೧೯೭೨, ೮೦ - ೧೦೩

-- ಪಾರ್ವತೀ ಸ್ತುತಿ - ಕರ್ತೃತ್ವ ವಿಚಾರ

ಸಾಧನೆ, ೨.೧, ೧೯೭೩, ೧೬೨

ಅಭವಕಂದದ ಕರ್ತೃತ್ವ- ಒಂದು ಟಿಪ್ಪಣಿ

ಪ್ರಕ, ೫೫.೧, ೧೯೭೩, ೧೧೨ -೧೩

-- ಗುಬ್ಬಿ ಮಲ್ಲಣ್ಣನ (೧೪೩೦) `ಏಕಾಕ್ಷರ ನಿಘಂಟು' ಟೀಕೆ -ಒಂದು ಟಿಪ್ಪಣಿ

ಸಾಧನೆ, ೨.೩, ೧೯೭೩, ೧೫೦ -೫೨

-- ಭಾರತ ಸಂಗ್ರಹ ಪದ್ಯಗಳು

ಕಭಾ, ೬.೧, ೧೯೭೩, ೧೦೮ - ೧೦೯

-- ಧಾರಾಪುರದ ತಿಮ್ಮಪ್ಪದಾಸನ ಲಾಕ್ಷಾಗೃಹ ದಹನ ಮತ್ತು ಬಕಾಸುರ ವಧೆಗಳು ಬೇರೆ

ಬೇರೆ ಕೃತಿಗಳೇ ?

ಕಭಾ, ೬.೧, ೧೯೭೩, ೧೦೯

-- ಮಾನಮಧುರೆದಾಸ -ಒಂದು ಟಿಪ್ಪಣಿ

ಪ್ರ ಕ, ೫೫.೩, ೧೯೭೩, ೯೬
-- ಮುಪ್ಪಿನಯ್ಯನ ಆಚರಣೆಯ ಸಂಬಂಧದ ವಚನಗಳು
ಸಾಧನೆ, ೩.೨, ೧೯೭೪, ೧೨೩ -೨೭
-- ಕಾವ್ಯಸಾರಂ (ಮಲ್ಲಕವಿ ಸಂಯೋಜಿತ) ಆಕರಗಳ ಸೂಚಿ
ಸಾಧನೆ, ೩.೩, ೧೯೭೪, ೧೩೨ -೬೧
-- ನೇಮರಸ : ಕಾಲವಿಚಾರ
ಕಭಾ, ೭.೩, ೧೯೭೫, ೧೫೭
-- ಸಮ್ಮಂಧಾಚರಣೆಯ ವಚನ - ಒಂದು ಪರಿಚಯ
ಚಿಂತನಾ, ೧೯೭೫, ೧೯೪ -೯೬
-- ಮುರಿಗೆ ಶಾಂತವೀರ
ಜಂಗಮ ಜ್ಯೋತಿ (ಶ್ರೀ ಜಗದ್ಗುರು ಜಯದೇವ ಪ್ರಶಸ್ತಿ) , ೧೯೭೫, ೩೩- 7
-- ಸರ್ವಜ್ಞನ ಜೀವನ: ದೇಶ -ಕಾಲವಿಚಾರ
ಸರ್ವಜ್ಞ-ಒಂದು ಸಮೀಕ್ಷೆ, ೧೯೭೫, ೧-೧೧
-- ಕೆಲವು ಅಪ್ರಕಟಿತ ರಗಳೆಗಳು -೧
ಸಿದ್ಧಲಿಂಗ ಕೃತ ಲಿಂಗನಮಸ್ಕಾರ ರಗಳೆ
ಹೇಮಕೂಟ { ೧.೬, ೧೯೭೫, ೨೧- ೨
೩.೬, ೧೯೭೭, ೧೧ -೧೨
-- ಷಡಕ್ಷರದೇವಕೃತ 'ಗುರು ರಗಳೆ'- ಒಂದು ಟಿಪ್ಪಣಿ
ಶಿವಕವಿ ಷಡಕ್ಷರಿ, ೧೯೭೮, ೫೭೮ -೮೦
-- ವೆಂಕಟಕವಿ -ಒಂದು ಟಿಪ್ಪಣಿ
ಸಾಹಿತ್ಯಜೀವಿ ೧೯೭೬, ೮೯ -೯೦
-- ಅಂಬುಲಿಗೆ ಚನ್ನಮಲ್ಲೇಶ ಮತ್ತು ಶಿವಸಿದ್ಧರಾಮರ ಕಾಲವಿಚಾರ
ಕಭಾ, ೮. ೩, ೧೯೭೬, ೧೨೧ -೨೨
ಮುನ್ನುಡಿ -ವೀಣೆ ಗುರುಬಸವರ ಪದಗಳು
(ಬಸವಾದಿ ಪ್ರಮಥರ ಪದಗಳು) ಭಾಗ -೨ ಯಲಬುರ್ಗಾ, ೧೯೭೬
-- ಕೆರೆಯ ಪದ್ಮರಸನ 'ದೀಕ್ಷಾ ಬೋಧೆ' ಯ ಒಂದು ಹಸ್ತಪ್ರತಿ
ಸಾಧನೆ, ೫.೨, ೧೯೭೬, ೧೭೮ -೭೯
-- ತಿಪ್ಪೇರುದ್ರನ ಪಲ್ಲಕ್ಕಿ ತಾರಾವಳಿ
ತರಳಬಾಳು, ೧.೩, ೧೯೭೬, ೬೦
-- ತೋಂಟದ ಸಿದ್ಧಲಿಂಗೇಶ್ವರರ ಕಾಲವಿಚಾರ: ಒಂದು ಮರುಪರಿಶೀಲನೆ

ಶ್ರೀಕಂಠತೀರ್ಥ, ೧೯೭೬, ೩೦೮-೧೩

-- ಮರಿರಾಚವಟ್ಟೇಶ

ಪ್ರಕ, ೫೬.೧, ೧೯೭೪, ೯೧-೩

-- ಶಾಂತಬಸವೇಶನ ಲಿಂಗಚಿದಮೃತಬೋಧೆ :

ಒಂದು ಟಿಪ್ಪಣಿ

ಕಭಾ, ೮.೪, ೧೯೭೬, ೧೬೨-೬೫

-- ಪರ್ವತ ಶಿವಯೋಗಿ: ಕಾಲವಿಚಾರ ಮತ್ತು ಕವಿಚರಿತೆಯ ಕೆಲವು ಅನುಕ್ತ ಕೃತಿಗಳು

ಕ. ಸಾ. ಪ, ೬೧, ೧. ೧೯೭೬, ೮೬-೮

-- ಸುಗಂಧ ಪಾರಿಜಾತ : ಒಂದು ಟಿಪ್ಪಣಿ

ಸಾಧನೆ, ೫.೨, ೧೯೭೬, ೧೭೧-೭೨

-- ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವ

ಸಮಗ್ರ ಕನ್ನಡ ಸಾಹಿತ್ಯಚರಿತ್ರೆ III, ಬೆಂ. ವಿ. ವಿ. ೧೯೭೬

-- ಹದಿನಾರನೆಯ ಶತಮಾನ ವೀರಶೈವ ಸಾಹಿತ್ಯ ಸಮೀಕ್ಷೆ, ೧೯೭೬, ೨೮೧-೩೧೪

-- ಅನುಪ್ರೇಕ್ಷೆಯ ಕರ್ತೃತ್ವ : ಒಂದು ಟಿಪ್ಪಣಿ

-- ಸಾಧನೆ, ೫.೪, ೧೯೭೬, ೧೪೨

-- ಕೆಲವು ಅಪ್ರಕಟಿತ ತ್ರಿಪದಿಗಳು

ಸ್ನೇಹ ಕಾರ್ತೀಕ, ೧೯೭೭, ೬೨೬-೩೨

-- ಗರಣಿ ಬಸವಲಿಂಗನ "ಸಿದ್ಧೇಶ್ವರನ ಪವಾಡದ ತಾರಾವಳಿ"ಯ ಒಂದು ಹಸ್ತಪ್ರತಿ

ಕಭಾ, ೯.೩, ೧೯೭೭, ೧೫೪

-- ಶಂಕರದೇವನ ``ಇಷ್ಟಲಿಂಗ ಚಾರಿತ್ರ" ದ ಒಂದು ಹಸ್ತಪ್ರತಿ

ಕ ಭಾ, ೯.೩, ೧೯೭೭, ೧೫೫

-- ಕೃತಿಕರ್ತೃಗಳಿಗೆ ಸಂಬಂಧಿಸಿದ ಕೆಲವು ಮಾತುಗಳು ಬಸವಾದಿ ಪ್ರಮಥರ ಪದಗಳು,

ಭಾಗ -೨ (ಸಂ.)

ಷ|| ಜ|| ಸಿದ್ಧರಾಮ್ಮ ಶಿವಾಚಾರ್ಯ, ಯಲಬುರ್ಗಿ, ೧೯೭೭,

-- ಕಾಶೀಕಾಂಡದ ಚನ್ನವೀರನ (ಸು. ೧೫೦೦) 'ಜಂಗಮ ಪಾರಾವಳಿ' : ಒಂದು ಟಿಪ್ಪಣಿ

ಪ್ರ ಕ. ೫೬.೩ ೧೯೭೪, ೯೩-೪

-- ಇಮ್ಮಡಿ ಮುರಿಗಾ ಗುರುಸಿದ್ಧಶಿವಯೋಗಿಕೃತ ಮುರಿಗೆ ತಾರಾವಳಿ (ಕೃತಿ ವಿಮರ್ಶೆ)

ಕ ನು. ೪೦.೧೯, ೧೯೭೭, ೧೫

-- ಪುಲಿಗೆರೆಯ ಶಂಬಜಿನೋದ್ಭವಕಾವ್ಯ (ಕೃತಿ ವಿಮರ್ಶೆ)

ಕನು, ೪೦. ೧೯, ೧೯೭೭, ೧೫೭೬

-- ಬಸವಲಿಂಗಾರಾಧ್ಯಕೃತ ಶಿವಯೋಗಾನಂದ ತ್ರಿವಿಧಿ- ಒಂದು ಟಿಪ್ಪಣಿ
ಕಭಾ, ೧೦.೧, ೧೯೭೭, ೧೫೯ -೬೦

-- ಕಲ್ಲುಮಠದ ಪ್ರಭುದೇವರ "ಪ್ರಭುದೇವರ ಮಂತ್ರಗೋಪ್ಯ" ದ ಟೀಕೆಯ ಒಂದು ಹಸ್ತಪ್ರತಿ
ಕಭಾ, ೧೦.೧, ೧೯೭೭, ೧೫೯

-- ವಚನ ಸಾಹಿತ್ಯದ ಸಂಕಲನಕಾರರು, ಸಂಗ್ರಹಕಾರರು, ಪ್ರಕಟಣೆಯ ಇತಿಹಾಸ
ಬಸವಜರ್ನಲ್, ೨.೩, ೧೯೭೭, ೨೭ -೭೩

-- ಉದ್ದಂಡನ "ಸುಜ್ಞಾನಿದೇವ ಕಾವ್ಯ"
`` ನನ್ನಯ್ಯನ ಕಾವ್ಯ "ದ ಒಂದು ಹಸ್ತಪ್ರತಿ ಸಾಧನೆ, ೬.೪, ೧೯೭೭, ೧೬೦ -೬೧

-- ಹರಿಹರನ ಎರಡು ರಗಳೆಗಳು (ಸಂ.) ಬಿ.ಸಿ. ಜವಳಿ, (ಕೃತಿ ವಿಮರ್ಶೆ)
ಕ. ನು, ೪೧.೪, ೧೯೭೮, ೨)

-- ಚೆನ್ನಸದಾಶಿವಯೋಗಿ ವಿರಚಿತ ಶಿವಯೋಗ
ಪ್ರದೀಪಿಕಾ(ಸಂ) ಎಂ. ಎಂ.ಕಲಬುರ್ಗಿ, ಪಂ. ನಾಗಭೂಷಣ ಶಾಸ್ತ್ರಿ (ಕೃತಿ ವಿಮರ್ಶೆ)
ಕನು, ೪೧.೪, ೧೯೭೮, ೨೧

-- ಅಂಬುಲಿಗೆ ಚನ್ನಮಲ್ಲೇಶನ 'ಶಿ. (=ಸಿ.) ರಿಯಾಳ ಸೆಟ್ಟಿಯ ವಾರ್ಧಕ'ದ ಒಂದು ಹಸ್ತಪ್ರತಿ
ಕಭಾ, ೧೦.೩, ೧೯೭೮, ೧೪೧ -೪೨

-- ಕದಂಬನೀತಿ : ಕರ್ತೃತ್ವ ವಿಚಾರ
ಕಭಾ, ೧೦.೩. ೧೯೭೮, ೧೪೨ -೪೪

-- ಅಭಿನವವಾದಿ ವಿದ್ಯಾನಂದನ `ಕಾವ್ಯಸಾರ'ದ ಆಕರಗಳ ಸೂಚಿ
ಪ್ರ ಕ, ೫೬.೪, ೧೯೭೯ (Pub. 1978) ೮೧ -೧೧೪

-- "ಇಷ್ಟಲಿಂಗ ಚಾರಿತ್ರ " ದ ಕರ್ತೃತ್ವ ವಿಚಾರ
ಸಾಧನೆ, ೭.೨, ೧೯೭೮, ೧೫೭

-- `ಅಂತರಂಗಾಷ್ಟಕ' ದ ಕಾಲದ ಬಗೆಗೆ
ಸಾಧನೆ, ೭.೨, ೧೯೭೮, ೧೫೭

-- ಉತ್ತರ ದೇಶದ ಬಸವಲಿಂಗನ ಕಾಲವಿಚಾರ
ಬಸವ ಜರ್ನಲ್, ೩.೨, ೧೯೭೮, ೨೨೧ -೨.೨

-- ಮಹಾಕವಿ ಹರಿಹರದೇವವಿರಚಿತ ಗಿರಿಜಾಕಲ್ಯಾಣ (ಸಂ.) ಎಂ. ಎಸ್. ಸುಂಕಾಪುರ (ಕೃತಿ ವಿಮರ್ಶೆ) ಕನು, ೪೧. ೧೬, ೧೯೭೮, ೧೮-೧೯

-- ಪ್ರಸಾದಿಸ್ಥಲದ ವಚನಗಳು(ಸಂ) ಎಂ. ಎಸ್.ಸುಂಕಾಪುರ (ಕೃತಿ ವಿಮರ್ಶೆ)

ಕನು, ೪೧. ೧೬, ೧೯೭೮, ೧೯ -೨೧.

-- ಮುಖಬೋಳು ಸಿದ್ಧರಾಮ(ಕವಿಕೃತಿ - ಕಾಲವಿಚಾರ)
ಕಸಾಪ, ೬೮.೧, ೧೯೭೮, ೩೪ - ೬

-- `ವಿರೂಪಾಕ್ಷ ಸ್ತುತಿ' ಕರ್ತೃತ್ವ ವಿಚಾರ
ಸಾಧನೆ, ೭.೩, ೧೯೭೮, ೧೫೧ - ೫೨

-- ಮೋಚಿನ ಸಿದ್ಧಲಿಂಗಸ್ವಾಮಿ -ಕಾಲವಿಚಾರ
ಸಾಧನೆ, ೭.೪, ೧೯೭೮, ೧೫೬ - ೫೭

-- ನಂದಪ್ಪನ `ಪ್ರಭುಚರಿತ್ರೆ'ಯ ಒಂದು ಹಸ್ತಪ್ರತಿ
ಸಾಧನೆ, ೮.೧, ೧೯೭೯, ೧೪೨
ಸಂಪಾದನೆ ಸಾರಾಮೃತ : ಒಂದು ಪರಿಚಯ
ಬಸವಪಥ, ೧.೧, ೧೯೭೯ .

-- ಸಂಪಾದನೆ ಸಿದ್ಧವೀರಣಾಚಾರ್ಯನ "ಆಚರಣೆಯ ಸಂಬಂಧದ ವಚನ " ಗಳ ಒಂದು ಹಸ್ತಪ್ರತಿ
ಸಾಧನೆ ೮.೨, ೧೯೭೯, ೧೫೭. ೫೮

-- ಕುಂತೂರು ಮಹತ್ತದೇವನ ಕಾಲವಿಚಾರ
ಬಸವಪಥ, ೧.೨, ೧೯೭೯, ೧೯೯ -೨೦೦

-- ದೇವಚಂದ್ರನ (೧೭೭೦-೧೮೪೧) "ಭಕ್ತಿಸಾರ ಶತಕತ್ರಯ"
ಕಭಾ, ೧೧.೩, ೧೯೭೯, ೧೫೨ -೫೪

-- ಪ್ರಭುದೇಶಿಕನ ಮೋಕ್ಷದರ್ಶನ ಮಹಾ ಸಂಗ್ರಹ ಕೃತಿ ಕರ್ತೃತ್ವ ಹಾಗೂ ಕಾಲವಿಚಾರ
ಬಸವಪಥ; ೧.೩. ೧೯೭೯, ೨೯೩ -೯೪

-- ಕಸ್ತೂರಿ ಸಿದ್ಧನ ಕಾಲವಿಚಾರ
ಸಾಧನೆ, ೮.೩, ೧೯೭೯, ೧೫೬ -೫೭

-- ಸಂದ್ಯಾಲ ಲಿಂಗಪ್ಪನ `ಉದ್ಭಟಯ್ಯನ ಚಾರಿತ್ರ' (ಕ್ರಿ.ಶ. ೧೫೨೩)
ಪ್ರಕ, ೯೭- ೨, ೧೯೭೫ (Pub. 1979), ೯೩- ೪

-- ಅಜ್ಞಾತ ಕರ್ತೃವಿನ 'ರುಕ್ಮಾಂಗದ ಚಾರಿತ್ರ' - ಒಂದು ಟಿಪ್ಪಣಿ
ಪ್ರದೀಪಿಕೆ, ೧೯೭೯, ೧೨೪ -೨೬

-- ಸರ್ವಜ್ಞನ ಕಾಲದ ಬಗೆಗೆ
ಸಾಧನೆ, ೮.೪, ೧೯೭೯, ೧೫೨ -೯೩

-- ರಜತಪುರೀಶಾಂಕಿತ `ಬಸವಸ್ತೋತ್ರ ರಸಾಯನ'
ಬಸವ ಪಥ ೨-೧, ೧೯೮೦, ೮೪- ೬

-- ಡಾ. ಫ. ಗು. ಹಳಕಟ್ಟಿಯವರ ಲೇಖನ, ಕೃತಿ ಇತ್ಯಾದಿಗಳ ಸೂಚಿ
ಬಸವ ಪಥ { ೨.೨, ೧೯೮೦, ೧೦೮ -೨೪
೨-೩, ೧೯೮೦, ೯೫ -೧೧೯
-- ೨೦ನೇ ಶತಮಾನದ ಒಂದು ಅಪೂರ್ವ ಕಲೆ ಹಸ್ತಪ್ರತಿ
ಸಾಧನೆ ೯.೨, ೧೯೮೦, ೧೪೫ -೪೬
-- ಚಂದ್ರಮನ ಕಾಲವಿಚಾರ ಮತ್ತು 'ಗಣಿತಸಾರ'ದ ಪರಿಚಯ
ಸಾಧನೆ, ೯.೨, ೧೯೮೦, ೧೪೬ -೪೭
-- ಪುಷ್ಪದಂತ ಪುರಾಣ- ಅಜ್ಞಾತ ಕರ್ತೃವಿನ ಅಲಭ್ಯ ಕೃತಿ
ಸಾಧನೆ, ೯.೩, ೧೯೮೦, ೧೪೨ -೪೩
-- ತೋಂಟದ ಸಿದ್ಧಲಿಂಗೇಶ್ವರರ ಕಾಲನಿರ್ಣಯಕ್ಕೆ ಸಂಬಂಧಿಸಿದ ಸಮಕಾಲೀನ ಸಾಕ್ಷ್ಯ
ಅಧ್ಯಯನ, ೧೯೮೦, ೫೧೮ -೨೧
ಶಾಲಿ ಚೆನ್ನಬಸವ -ಕಾಲವಿಚಾರ
ಸಾಧನೆ, ೯.೪, ೧೯೮೦, ೧೪೮
-- ತೋಂಟದ ಸಿದ್ಧಲಿಂಗರಿಗೆ ಸಂಬಂಧಿಸಿದ ಪುಸ್ತಕಗಳು ಹಾಗೂ ಲೇಖನಗಳು
ಬಸವಪಥ, ೩.೧, ೧೯೮೧, ೮೮- ೯೩
-- ಕ್ಷಾರಪಾನೀಯಂ ಕೃತಿ ಹೆಸರಿನ ಬಗೆಗೆ
ಸಾಧನೆ, ೧೦.೧, ೧೯೮೧, ೧೫೪ -೫೫
– ಬಸವಣ್ಣನವರನ್ನು ಕುರಿತು ಪುಸ್ತಕಗಳು
ಬಸವ ಪಥ { ೩.೨, ೧೯೮೧, ೮೯ -೯೨
೩.೩, ೧೯೮೧, ೭೧ -೭೯
-- ಶ್ರವಣಬೆಳಗೊಳ ಶ್ರೀಜೈನ ಮಠದ ತಾಡಪತ್ರೀಯ ಗ್ರಂಥ ಸೂಚಿ (ವಿಮರ್ಶೆ)
ಗೊಮ್ಮಟವಾಣಿ, ೧೫, ೫, ೧೯೮೧, ೩
-- ವೀರಶೈವ ಸ್ತೋತ್ರ ಸಾಹಿತ್ಯ
ಸಿದ್ಧಗಂಗಾಶ್ರೀ, ೧೯೮೧, ೯೧೬ -೩೩
-- ಸೋಮೇಕಟ್ಟೆ ಚನ್ನವೀರಸ್ವಾಮಿಗಳ ಗುರುಕರುಣಾಮೃತ
ಸಾಧನೆ, ೧೦,೩. ೧೯೮೧, ೧೪೭ -೪೮
-- ಶಾಂತಿಕೀರ್ತಿಮುನಿಯ `ಶಾಂತಿನಾಥ ಚರಿತೆ' ಯ ಒಂದು ಹಸ್ತಪ್ರತಿ
ಸಾಧನೆ, ೧೦. ೩, ೧೯೮೧, ೧೪೮
-- ತೋಂಟದ ಸಿದ್ಧಲಿಂಗರ ಕಾಲ : ಕೆಲವು ಟಿಪ್ಪಣಿಗಳು
ಪ್ರ ಕ, ೫೭.೪, ೧೯೭೬ (Pub. ೧೯೮೧), ೧೫ -೨೦

-- ಕನ್ನಡ ಹಸ್ತಪ್ರತಿ ಸೂಚಿಗಳು
ಮಣಿಹ, ೧೯೮೧, ೩೭೯- ೮೨

-- ಗದುಗಿನ ವೀರನಾರಾಯಣಾಂಕಿತ "ಸ್ವರ್ಗಾರೋಹಣ ಪರ್ವ": ಒಂದು ಟಿಪ್ಪಣಿ
ಬೆಳುವಲ, ೧೯೮೨, ೩೩೨ -೩೫

-- **ಈ ಕಾಲದ ಶಾಸ್ತ್ರ ಗ್ರಂಥಗಳು (೧೬೦೦- ೧೮೫೦)**
ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ ೫, ೧೯೮೨, ೨೭೨ -೮೯
ಅನುಬಂಧ : ಈ ಕಾಲದ ಕವಿಗಳು ಕ್ರಿ. ಶ. ೧೬೦೦ ರಿಂದ ಕ್ರಿ. ಶ. ೧೮೫೦ ರವರೆಗೆ

-- ಸಮಗ್ರಕನ್ನಡ ಸಾಹಿತ್ಯ ಚರಿತ್ರೆ,
ಸಂಪುಟದ ೫, ೧೯೮೨ ೪೬೦ -೯೪

-- ಪದ್ಮರಸನ `ಭವ್ಯಾಬ್ಜಮಿತ್ರನ ಚರಿತ್ರೆ' - ಕಾಲವಿಚಾರ
ಸಾಧನೆ, ೧೧- ೩, ೧೯೮೨, ೧೩೬ -೩೭

-- 'ಶಬ್ದಮಣಿದರ್ಪಣ' ದ ಒಂದು ಪ್ರಯೋಗದ ಆಕರ
ಸಾಧನೆ, ೧೧.೪, ೧೯೮೨, ೧೫೭- ೫೮

-- ಪಾಯಣ್ಣವ್ರತಿ -ಕಾಲವಿಚಾರ
ಕಸಾಪ, ೬೭.೨, ೧೯೮೨, ೧೪೦

-- ಗುಬ್ಬಿಯ ಮಲ್ಲಣ್ಣ (೧೪೩೦) ನ ಕಾಲಜ್ಞಾನ ತಂತ್ರ ಟೀಕೆ -
ಒಂದು ಟಿಪ್ಪಣಿ
ಸಾಧನೆ, ೧೨.೧, ೧೯೮೩, ೧೫೪ -೫೫

-- ಕನ್ನಡ ಹಸ್ತಪ್ರತಿ ಸೂಚಿಗಳು ಹಾಗೂ ಹಸ್ತಪ್ರತಿಗಳ ಸಮಗ್ರ ಗ್ರಂಥಸೂಚಿ ನಿರ್ಮಾಣ
ಹಸ್ತಪ್ರತಿ ಶಾಸ್ತ್ರ ೧೯೮೩, ೬೯- ೭೭

-- ಸದ್ಭಕ್ತ ಸದ್ವೀರ ಮಾಹೇಶ್ವರನ ಸತ್ಕ್ರಿಯಾ ಸಮ್ಯಕ್‌ಜ್ಞಾನ ಸಮರಸಭಕ್ತಿ ನಿಜಾಚರಣೆ
ವಚನ -ಒಂದು ಟಿಪ್ಪಣಿ
ಲೋಚನ, ೧.೧, ೧೯೮೩, ೩೫- ೬

-- ಕಟ್ಟಿಗೆ ಹಳ್ಳಿ ಸಿದ್ಧಲಿಂಗನ `ಏಕೋತ್ತರ ಸಾರ'
ಆಸ್ವಾದ, ೧೯೮೩, ೪೩೭ -೪೦

-- ಕೇಶವ ಚಂದ್ರಮುನಿ ಕೃತ `ಏಕಾಕ್ಷರ ನಿಘಂಟು ಟೀಕೆ ' ಯ ಹಸ್ತಪ್ರತಿಗಳು
ಸಾಧನೆ, ೧೨.೩, ೧೯೮೩, ೧೩೦

-- ಪ್ರಾಚೀನ ಲೇಖನ ಸಾಮಗ್ರಿ
ಕಭಾ, ೧೬, ೧- ೨, ೧೯೮೩, ೨೨ -೩೫

-- ಕವಿ ಲಿಂಗನ `ನಂಜುಂಡೇಶನ ಜಾತ್ರೆಯ ತಾರಾವಳಿ'- ಒಂದು ಟಿಪ್ಪಣಿ
ಬಸವಪಥ, ೫. ೧೦ -೧೧, ೧೯೮೪, ೨೯

-- 'ಚೆನ್ನಬಸವೇಶ್ವರ ಸ್ತೋತ್ರದ ವಚನ' ಗಳ ಒಂದು ಪರಿಚಯ
ಬಸವಪಥ, ೫.೧೦ -೧೧, ೧೯೮೪, ೪೪- ೫

-- ಕರಸ್ಥಲದ ನಾಗಲಿಂಗನ 'ಶಿವಜ್ಞಾನಾಂಜನ ರತ್ನಮಾಲೆ' - ಒಂದು ಕಿರುಪರಿಚಯ
ಸಾಧನೆ, ೧೩- ೨, ೧೯೮೪, ೧೨೩ -೨೫

-- ಅವಧೂತ ಶಿವಯೋಗಿ - ಕಾಲವಿಚಾರ
ಸಾಧನೆ, ೧೩.೨, ೧೯೮೪, ೧೨೫

-- ಗೇರಸೊಪ್ಪೆ ಶಾಂತಯ್ಯನ 'ಸೀತಾಸ್ವಯಂವರ'- ಒಂದು ಹಸ್ತ ಪ್ರತಿ
ಸಾಧನೆ, ೧೩.೩, ೧೯೮೪, ೧೪೯

-- ಇಷ್ಟ ಲಿಂಗರಗಳೆ -ಕರ್ತೃತ್ವ ವಿಚಾರ
ಸಾಧನೆ, ೧೩.೪, ೧೯೮೪, ೧೨೯ -೩೦

-- ಶ್ರೀ ಅವರ ವ್ಯಕ್ತಿತ್ವ ಮತ್ತು ಕೃತಿಗಳನ್ನು ಕುರಿತ ಲೇಖನ ಸೂಚಿ
ಶ್ರೀನಿಧಿ, ೧೯೮೫, ೩೮೪ -೪೦೬

-- ವಚನಕಾರ ಗೋಣಿಮಾರಯ್ಯ -ಒಂದು ಟಿಪ್ಪಣಿ
ಸಾಧನೆ, ೧೪.೨, ೧೯೮೫, ೧೩೮

-- ಕರ್ಣಾಟಕ ವೃತ್ತರತ್ನಾಕರ -ಒಂದು ಟಿಪ್ಪಣಿ
ಸಾಧನೆ, ೧೪.೨, ೧೯೮೫, ೧೩೯

-- ಚಂದ ಕೃತ ಬಸವಮಹಿಮಾಮೃತ
ಸಾಧನೆ, ೧೫.೧, ೧೯೮೬, ೧೪೬

-- ಸಂಪಾದಿತ ಕೃತಿಗಳು
ಸಾಹಿತ್ಯ ವಾರ್ಷಿಕ ೧೯೮೨, ೧೯೮೬, ೧೬೫ -೧೯೯

-- ಬಸನ ಸಮಿತಿ (ಬೆಂಗಳೂರು) ಯಲ್ಲಿನ ಓಲೆ/ ಕಾಗದಪ್ರತಿಗಳ ಸೂಚಿ
ಬಸವಪಥ, ೮, ೧೦, ೧೯೮೭, ೧೬ -೨೧

-- ಮೃತ್ತೀಶಕಂದ ಒಂದು ಟಿಪ್ಪಣಿ
(ಶ್ರೀ ಎಸ್. ಉಮಾಪತಿ ಅವರೊಡನೆ)
ವೀರಶೈವ ಸಮನ್ವಯ, ೧.೧, ೧೯೮೭, ೫೪

-- ಕೊಟ್ಟುರಯ್ಯನಷ್ಟಕ ದ್ವಯಗಳ ಕಾಲ ವಿಚಾರ
ವೀರಶೈವ ಸಮನ್ವಯ ೧.೧,೧೯೮೭, ೭೮

`ಬಸವನಪಥ'ದ ಲೇಖನ ಸೂಚಿ (ಶ್ರೀ ಸಿ. ಎಂ. ಕುಂದಗೋಳ ಅವರೊಡನೆ)
ಬಸವಪಥ, ೯.೧, ೧೯೮೭, ೪೯ -೧೦೭

-- ಗ್ರಂಥ ಸಂಪಾದನೆ
ಸಾಹಿತ್ಯ ವಾರ್ಷಿಕ, ೧೯೮೩, ೧೯೮೭, ೧೬೮ -೮೩

-- ರಾಚೂಟಿಕೃತ `ಬಸವ ಸ್ತೋತ್ರ' -ಒಂದು ಟಿಪ್ಪಣಿ
ಬಸವಪಥ, ೯.೨, ೧೯೮೭, ೫೮- ೯

-- ಶಾಂತಮಲ್ಲಸ್ವಾಮಿಗಳ ಕಾಲವಿಚಾರ
ಬಸವ ಪಥ, ೯.೩, ೧೯೮೭, ೬೧

-- ಕಂಪಿ ನಂಜಯ್ಯನ` ಮಂಗಳ ಜ್ಯೋತಿ ಅಷ್ಟಕ' - ಒಂದು ಟಿಪ್ಪಣಿ
ಸಾಧನೆ, ೧೫. ೩- ೪ ೧೬.೧ -೨ ೧೯೮೬ -೮೭ , ೨೪೮.

-- ಸಮಾಧಿ ಕ್ರಿಯದ ಭಾಮಿನಿಪದ - ಒಂದು ಟಿಪ್ಪಣಿ
ಬಸವಪಥ, ೧೦.೪, ೧೯೮೮, ೫೧-೨

-- ಚೆನ್ನಬಸವರಾಜದೇವ ಸಂಕಲಿತ 'ಏಕೋತ್ತರ ಶತಸ್ಥಲ ಸಾರಾಮೃತ'
ಶರಣಸಂಪದ, ೧೯೮೮, ೩೦

-- ಮಹಾದೇವಿಯಕ್ಕನನ್ನು ಕುರಿತ ಕೃತಿಗಳು
ಶ್ರೀ ಗಿರಿಮಂದಾರ, ತುಮಕೂರು, ೧೯೮೮, ೮೩ -೯೨

-- ಸೋಮೇಶ್ವರ ಶಿಶು ಪೆಮ್ಮಿಸೆಟ್ಟಿ -ಒಂದು ಟಿಪ್ಪಣಿ
ಬಸವಪಥ, ೧೦.೧೦,೧೯೮೯ ೪೦ -೧

-- ಪೆಮ್ಮಿಸೆಟ್ಟಿಯ ಕಾಲವಿಚಾರ
ಬಸವಪಥ, ೧೦.೧೦, ೧೯೮೯, ೪೨ -೩

-- ಶೂನ್ಯಸಂಪಾದನೆ ಸಂಶೋಧನೆಗಳು
ಶೂನ್ಯಸಂಪಾದನೆ. ಒಂದು ಅಧ್ಯಯನ (ಸಂ.) ಸಾ. ಶಿ. ಮರುಳಯ್ಯ, ೧೯೮೯, ೨೪೩ -೫೨

-- ವೀರಣಾರಾಧ್ಯನ ಕಾಲವಿಚಾರ : ಒಂದು ಟಿಪ್ಪಣಿ
ಸಾಧನೆ, ೧೮. ೩-೪, ೧೯೮೯, ೧೮೧

-- ಮೈಸೂರು ಅರಮನೆ ಪಂಚಗವಿಮಠದ ಶಿವಬಸವ ಸ್ವಾಮಿಗಳು :ಒಂದು ಟಿಪ್ಪಣಿ
ಇತಿಹಾಸ ದರ್ಶನ, ಸಂಪುಟ ೪ /೧೯೮೯, ೧೯೯೦, ೧೨೫-೨೬

-- ಕನಕದಾಸರ ಪುಸ್ತಕಗಳು ಮತ್ತು ಲೇಖನಗಳು
ಕನಕಸಾಹಿತ್ಯ ದರ್ಶನ, ಸಂಪುಟ ೧,(ಸಂ) ದೇ ಜವರೇಗೌಡ,
೧೯೯೦, ೮೯೯ -೯೦೧

-- ಸಿದ್ಧಲಿಂಗ ಶಿವಯೋಗಿ - ಕಾಲವಿಚಾರ
ಸತ್ಯಶುದ್ಧಕಾಯಕ, ೧.೧, ೧೯೯೦, ೬೧ -೨

-- ಕಸ್ತೂರಿ ಚೆನ್ನಪುತ್ರ ಕೃತ 'ಸರ್ವಜ್ಞಮೂರ್ತಿಯ ಯಾಲಪದ'- ಒಂದು ಟಿಪ್ಪಣಿ
ಬಸವಪಥ, ೧೨, ೭, ೧೯೯೦, ೧೯ -೨೦
-- ಎಂ. ಚಿದಾನಂದಮೂರ್ತಿಯವರ ಕೃತಿಗಳು ಮತ್ತು ಲೇಖನಗಳು
ಸಂಶೋಧನ, ೧೯೯೧, ೯೦೭- ೨೦
-- ಪಂಚಾಚಾರ್ಯ ಕೃತಿಸೂಚಿ (ಕ್ರಿ.ಶ. ೧೯೦೦ ರ ವರೆಗೆ)
ರಂಭಾಪುರಿ ಬೆಳಗು, ೧.೧, ೧೯೯೨, ೬೩- ೮.
-- ಕವಿ ಮಾದಣ್ಣನ ಕಾಲವಿಚಾರ : ಒಂದು ಟಿಪ್ಪಣಿ
ಸಂಶೋಧನ ವ್ಯಾಸಂಗ, ೪.೨-೩, ೧೯೯೨, ೪.
-- ಅಜಗಣ್ಣನ ವಚನಗಳ ಅಭಿಜ್ಞೆ (Identified)
(ಡಾ. ಎಂ. ಚಿದಾನಂದಮೂರ್ತಿಗಳವರೊಡನೆ)
-- ಶೂನ್ಯ ಸಂಪಾದನೆಯನ್ನು ಕುರಿತು, ೧೯೮೮, ದ್ವಿತೀಯ ಮುದ್ರಣ, ಅನುಬಂಧ ೫, ೧೯೫ -೨೨೦.
-- ಅನುಬಂಧ (ಗ್ರಂಥ ಸಂಖ್ಯಾ ವಿವರ ಸೂಚಿ)
-- ಕನ್ನಡ ಸಾಹಿತ್ಯ ಸಮೀಕ್ಷೆ
ಜಿ. ಎಸ್. ಶಿವರುದ್ರಪ್ಪ, ೧೯೭೫, ೧೮೧- ೮೭
-- ಉಳಿಯುಮೇಶ್ವರ ಚಿಕ್ಕಯ್ಯ
ಬಸವೇಶ್ವರರ ಸಮಕಾಲೀನರು, ೧೯೮೯, ೫೬೮ -೭೨
-- ಗ್ರಂಥ ಸಂಪಾದನೆ, ಸಂಪಾದಿತ ಕೃತಿಗಳು.
ಸಾಹಿತ್ಯ ವಾರ್ಷಿಕ ೧೯೭೧, ೧೯೭೩, ೧೭೯ -೧೯೮
-- ಚಿತ್ರದುರ್ಗ `ಬೃಹನ್ಮಠ' ಸಂಗ್ರಹದಲ್ಲಿನ ಕೆಲವು ಕೃತಿಗಳು.
-- ಇತಿಹಾಸ ದರ್ಶನ, ೭ /೧೯೯೨ ೧೨೦- ೨೨
-- ಬಿರುದಾವಳಿ ಸ್ತೋತ್ರದ ವಚನ : ಒಂದು ಪರಿಚಯ ಕಾಯಕ ಪರಿಣಾಮ ೧೯೯೧, ೬೩೨ -೩೩
ಮಹಾದೇವನ ಮಡಿವಾಳಯ್ಯನ ಸಾಂಗತ್ಯದ ಒಂದು ಹಸ್ತಪ್ರತಿ
ಸಾಧನೆ, ೧೭. ೩- ೪, ೧೯೮೮, ೨೮೮
-- ವಚನಾಂಕಿತ ಮತ್ತು ವಚನಕಾರರು ಕಾಯಕ ಪರಿಣಾಮಿ, ೧೯೯೧ ೬೦೩- ೭೭
-- ಶ್ರೀ ಚೆ. ಅವರ ಲೇಖನಗಳು ಮತ್ತು ಸಂಪಾದಿತ ಕೃತಿಗಳು (ಉಪಲಬ್ಧ ಸಾಮಾಗ್ರಿಗಳನ್ನು ಆಧರಿಸಿ) ಮಹಾನುಭಾವಿ ಶ್ರೀ ಚನ್ನಮಲ್ಲಿಕಾರ್ಜುನರು, ೧೯೮೩, ೯೦೭ -೨೮
-- ಸೋದೆಯ ಗುರುರಾಯನ ಕರ್ನಾಟಕ ಶಬ್ದ ಮಂಜರಿ ಟೀಕುಸುಧಾ
ಸಂತುಷ್ಟಿ ೧೯೯೩

-- ಸಮಗ್ರ ವಚನ ಸಾಹಿತ್ಯ (ಸಂಪುಟ ೧ ರಿಂದ ೧೪) ಸೂಚಿ
ಬಸವಪಥ ೧೫- ೭, ೧೯೯೩, ೪೬ -೬೯
-- ಚಿಕ್ಕನಂಜೇಶ (=ಸಿದ್ಧನಂಜೇಶ) ನ ಕಾಲ ವಿಚಾರ ಹಾಗೂ ಒಂದು ಹೊಸಕೃತಿ
ಬಸವಪಥ ೧೫- ೯, ೧೯೯೩, ೫೦ -೫೩
-- ನಿಜಗುಣರ ಕಾಲ: ಕೈವಲ್ಯ ಕೌಸ್ತುಭ -ಚಿಲುಕವಾಡಿ ೧೯೯೪ (೧- ೫)
-- ವೀರಭದ್ರ ವಾಙ್ಮಯ ಸೂಚಿ (೧೯೦೦ ರ ವರೆಗೆ) ವೀರಶ್ರೀ ೧೯೯೪ ಪು. ೧೩ -೧೪
-- ಟಿ. ಆರ್. ಮಹಾದೇವಯ್ಯನವರ ಕೃತಿಗಳು ಮತ್ತು ಲೇಖನಗಳು
`ಸ್ವಾತಿಕ' ಬೆಂಗಳೂರು, ೧೯೯೫, ೮೦ -೮೬
-- ಹಾಗಲವಾಡಿ ಅರಸ ರಾಜಗುರುಗಳು
ಸಿದ್ಧರಾಮ ಸಂಪದ ೧೯೯೫, ೧೦೯ -೧೧೪
-- ಗುರುಪಾದ ಕವಿಕೃತ ಬಸವರಾಜಾಷ್ಟೋತ್ತರ ಶತನಾಮಾವಳಿ: ಒಂದು ಟಿಪ್ಪಣಿ
ಮಾಮಿಡಿ ೧೫ -೪ -೮, ೧೯೯೪, ೪೦
-- ಸಿದ್ಧಾಂತ ಶಿಖಾಮಣಿ ಕೃತಿಗೆ ಸಂಬಂಧಿಸಿದಂತೆ ಕನ್ನಡದಲ್ಲಿನ ಕೆಲವು ಮಾಹಿತಿಗಳು
ಅಮರವಾಣಿ (ಪ್ರೊ. ಎಂ. ಜಿ. ನಂಜುಂಡಾರಾಧ್ಯರ ಸಂಭಾವನಾಕೃತಿ) ೧೯೯೪
-- ಗುಬ್ಬಿಮಲ್ಲಣ್ಣನ (೧೪೩೦) ದಿವ್ಯಾಗಮಸಾರದಲ್ಲಿನ ಪಂಚಮ ಪಟಲದ ಟೀಕೆ - ಒಂದು ಟಿಪ್ಪಣಿ
ಅಮರಸಿದ್ಧ ೧೯೯೫, ೧೫ -೬
-- ಮಹಾನಾಡು ಸಂಸ್ಥಾನಕ್ಕೆ ಸಂಬಂಧಿಸಿದ ಹಸ್ತಪ್ರತಿ ಪುಷ್ಪಿಕೆಗಳು ಹಾಗೂ ಶಾರದಾ ಭಂಡಾರ
-- ಮಹಾನಾಡ ಪ್ರಭುಗಳು, ಗುಬ್ಬಿ ೧೯೯೫, ೧೪೩ -೪೬

ಸಂಪಾದಿತ ಕೃತಿಗಳು

-- ಚಂದ್ರನಾಥಾಷ್ಟಕ (ಮೌಕ್ತಿಕ ಕವಿ)
ಜಿನವಾಣಿ, ೧೧. ೧. ೧೯೬೧, ೬- ೭
-- ಜಯತುಬಸವರಗಳೆ
ಕನು, ೩೦ -೧೦, ೧೯೬೭, ೧-೩
ಶಸಾ ೩೦.೯.೧೯೬೭, ೩೦೮ -೧೨
-- ಪ್ರಭುದೇವರ ರಗಳೆ
ಶಸಾ, ೩೦.೯.೧೯೬೭, ೩೩೧ -೩೫
-- ವೀರೇಶಾಷ್ಟಕಂ (ಅಳಿಯ ಲಿಂಗರಾಜ)
ಕನು, ೩೦.೧೨,೧೯೬೭, ೧೮

-- ಬಸವರಾಜ ರಗಳೆ (ಅಂ/ಮದ್ದುಗುರುಶಾಂತಾ)
ಕನು, ೩೧.೬.೭, ೧೯೬೮, ೯ -೧೧

-- ವೀರೇಶಾಷ್ಟಕಂ (ಅಳಿಯ ಲಿಂಗರಾಜ)
ಶಸಾ, ೩೧.೩- ೪, ೧೯೬೮, ೬೭- ೮

-- ಶಿವಾಪರಾಧ ಕ್ಷಮಾಪಣಸ್ತೋಪ್ರ (ಕಾಶಿಪತಿ)
ಕಸಾಪಸ, ೫೪, ೨. ೧೯೬೯, ೫೯ -೬೨

-- ಅಗಜಾಪತಿಯಷ್ಟಕ (ಅಳಿಯ ಲಿಂಗರಾಜ)
ಜೀವನ ೨೯, ೮, ೧೯೬೯, ೧ -೨

-- ಜಂಗಮ ರಗಳೆ (ಸ್ವತಂತ್ರ ಸಿದ್ಧಲಿಂಗೇಶ್ವರ)
ಕಭಾ, ೨೧, ೧೯ ೬೯, ೧೮೮ -೯೩

-- ಮಹಿಮಾಷ್ಟಕಂ
ಪ್ರಕ, ೫೩. ೧, ೧೯೭೧, ೩೧ -೩

-- ಅಳಿಯಲಿಂಗರಾಜನ ವೀರೇಶ ತಾರಾವಳಿ
ಪ್ರಕ, ೫೪.೨, ೧೯೭೨, ೫೫- ೯

-- ಮುರಿಗೆ ಶಾಂತವೀರೇಶ್ವರನ ಕಂದ
ಸಾಧನೆ, ೧ -೩, ೧೯೭೨

-- ಕರಸ್ಥಲದ ವೀರಣ್ಣೊಡೆಯರ ಕಂದ
ಕಭಾ, ೫-೪, ೧೯೭೩, ೧೧೫ -೧೯

-- ಅವಧಾರಭವಾಷ್ಟಕ
ಪ್ರಸಾದ, ೬. ೧ -೨, ೧೯೭೪, ೪೩ -೪

-- ಸೂಕ್ತಿ ಸುಧಾರ್ಣವದ ಒಂದು ಕಂದ
ಕಭಾ, ೬.೪, ೧೯೭೪, ೧೫೪

-- ನೀಲಮ್ಮನ ಒಂದು ಹೊಸ ವಚನ
ಸಾಧನೆ, ೪.೨, ೧೯೭೫, ೭೩

-- ಚೆನ್ನಬಸವೇಶ್ವರರ ಕೆಲವು ಹೊಸ ವಚನಗಳು
ಚಿಂತನಾ, ೧೯೭೫, ೮ -೧೩

-- ಶೀಲವಂತಯ್ಯನ ಕಂದ ಚೆನ್ನಮಲ್ಲ
ಕಭಾ, ೮.೧, ೧೯೭೫, ೫೬ -೭೬

-- ಶಿವಶರಣೆಯರ ಕೆಲವು ವಚನಗಳು
ಸಾಧನೆ, ೪.೪, ೧೯೭೫, ೧೨೭ -೩೦

-- ಲೀಲಾವತಿಯ ಒಂದು ಪದ್ಯ
ಕಭಾ, ೮.೨, ೧೯೭೫, ೧೫೫ -೫೬

-- ರಾಚೂಟಿ ಶಾಸ್ತ್ರಿ ಕೃತ 'ಕವಿಕರ್ಣ ರಸಾಯನ
ಟೀಕೆ'- ಒಂದು ಟಿಪ್ಪಣಿ
ಶಿವಕವಿ ಷಡಕ್ಷರಿ, ೧೯೭೫, ೫೮೧ -೮೩

-- `ಶಿವಯೋಗ ಪ್ರದೀಪಿಕೆ'ಯ ಹಾಡೊಂದನ್ನು ಕುರಿತು
ಸಾಧನೆ, ೬.೧, ೧೯೭೭, ೧೪೭

-- ಅಪ್ರಮಾಣಕೂಡಲಸಂಗಮದೇವಾಂಕಿತ ವಚನವೊಂದನ್ನು ಕುರಿತು
ಸಾಧನೆ, ೬.೨, ೧೯೭೭, ೧೫೯ -೬೦

-- ಎಳಂದೂರು ಷಡಕ್ಷರಿಕೃತ ಗುರುರಗಳೆ
ಬಸವಜರ್ನಲ್, ೩.೩, ೧೯೭೮, ೩೬೧ -೬೬

-- ಜೇಡರ ದಾಸಮಯ್ಯನ ಮೂರು ಅಪ್ರಕಟಿತ ವಚನಗಳು
ಸಾಧನೆ, ೭.೪, ೧೯೭೮, ೧೫೧

-- 'ಶೂದ್ರಕ'ದ ಒಂದು ಅಪೂರ್ಣ ಕಂದಪದ್ಯ
ಸಾಧನೆ ೮.೧, ೧೯೭೯, ೧೪೧

-- ವಿರೂಪಾಕ್ಷ ಪ್ರೇಮಾಷ್ಟಕ -ಹಂಪೆಯ ಹರಿಹರ
ಬಸವಪಥ, ೧.೪, ೧೯೭೯, ೪೫೦ -೫೨

-- ತಿಪ್ಪೇರುದ್ರನ ಪಲ್ಲಕ್ಕಿ ತಾರಾವಳಿ (ಬಸವಲಿಂಗ ಕೃತ)
ಬಸವಪಥ, ೧.೫, ೧೯೭೯, ೯೪- ೮

-- ಎರಡು ಅಪ್ರಕಟಿತ ವಚನಗಳು
ಬಸವಪಥ, ೧-೬, ೧೯೮೦, ೬೩

-- ಅಂಬಿಗರ ಚೌಡಯ್ಯನ ಅಪ್ರಕಟಿತ ವಚನಗಳು
ಬಸವಪಥ, ೨.೪, ೧೯೮೦, ೫ ೫- ೭

-- ಗುರುಬಸವಾಂಕಿತ ಸ್ವರ ಬೊಲ್ಲಿಗಳು
ಬಸವಪಥ, ೨.೫, ೧೯೮೦, ೪೭ -೬೨

-- ಶಿವಾಷ್ಟಕ
ಬಸವಪಥ, ೨.೬, ೧೯೮೧, ೫೪ -೫೫
ತರಳಬಾಳು, ೬.೩.೧೯೮೧, ೭೦- ೧

-- ಕುಮಾರಪದ್ಮರಸನ ಸಾನಂದ ಚರಿತೆಯಲ್ಲಿನ ಕುಸುಮಷಟ್ಪದಿಯ ಪದ್ಯಾರ್ಥ
ಸಾಧನೆ ೧೦.೧, ೧೯೮೧, ೧೫೪

-- ಕುಡುತಿನಿ ಬಸವೇಶನ ದಂಡಕ
ಬಸವಪಥ, ೩.೩, ೧೯೮೧, ೬೭

-- ಮರಿರಾಚವಟ್ಟೇಶನ ಪ್ರಭುದೇವರ ಸ್ತೋತ್ರದ ತ್ರಿವಿಧಿ
ಬಸವಪಥ ೩.೪, ೧೯೮೧, ೬೦ -೮

-- ಚಿಕ್ಕಬಸವ ತ್ರಿವಿಧಿ
ಬಸವಪಥ, ೩.೫.೧೯೮೧, ೩೦- ೬

-- ಸಿದ್ಧಲಿಂಗಕೃತ ಬಸವಸ್ತೋತ್ರದ ತ್ರಿವಿಧಿ
ಬಸವಪಥ, ೩.೬, ೧೯೮೧, ೨೦ -೮

-- ಕರಿಬಸವಾರ್ಯ ಕೃತ `ಬಸವೇಶ್ವರ ರಘಟಾಬಂಧ'
ಬಸವಪಥ, ೩.೭, ೧೯೮೧, ೩೯ -೫೫

-- ಕರಿಬಸವಾರ್ಯ ಕೃತ `ಗಣನಾಮರತ್ನಾವಳಿ ರಗಳೆ'
ಬಸವಪಥ ೩.೮, ೧೯೮೧, ೬೭ -೭೭

-- ಶಾಂತಬಸವರಾಜೇಂದ್ರ ದೇವನ ಶ್ರೀ ಸೋದೆ ಬಸವಲಿಂಗರಾಜನ ಭಕ್ತಿ ಚಂದ್ರೋದಯ
ಬಸವಪಥ, ೩.೧೦, ೧೯೮೨, ೪೯ -೫೪

-- ಸಿದ್ಧಲಿಂಗಕೃತ ಲಿಂಗನಮಸ್ಕಾರ ರಗಳೆ
ಬಸವಪಥ, ೩.೧೧-೧೨, ೧೯೮೨, ೪೨-೪೫

-- ಇಮ್ಮಡಿ ಗುರುಸಿದ್ಧಸ್ವಾಮಿಗಳ, 'ಶಿವರಹಸ್ಯ'
ಬಸವಪಥ, ೪.೨, ೧೯೮೨, ೩೮- ೫೦

-- ಸೂಕ್ತಿ ಸುಧಾರ್ಣವದ ಒಂದು ವೃತ್ತ
ಸಾಧನೆ, ೧೧.೪. ೧೯೮೨, ೧೫೮ -೫೯

-- ಕವಿ ಪವಾಡನ (ತೋಂಟದ ಸಿದ್ಧಲಿಂಗ ತಾರಾವಳಿ)
ಬಸವಪಥ, ೪.೧೦, ೧೯೮೦, ೧-೫

-- ಕೃಷ್ಣದೇವರ ಅಷ್ಟಕ
ಸಪ್ತಗಿರಿ, ೧೩. ೧೦, ೧೯೮೩, ೮

-- ಭಕ್ತಿಬಿನ್ನಹ ದಂಡಕ -ಮೈಲಾರದ ಬಸವಲಿಂಗ
ಕಸಾಪ, ೬೮.೧, ೧೯೮೩, ೯೯-೧೦೧

-- ಕೊಟ್ಟೂರ ಬಸವೇಶ್ವರನ ದಂಡಕ
ಕಸಾಪ, ೬೮.೨, ೧೯೮೩, ೬೧-೩

-- ತೋಂಟದ ಸಿದ್ಧೇಶ್ವರನ ಅಷ್ಟಕ
ಬಸವಪಥ, ೬.೧, ೧೯೮೪, ೪೨- ೪

-- (ವಿರೂಪಾಕ್ಷಾಷ್ಟಕ) - ಹಂಪೆಯ ಹರಿಹರ
ಬಸವಪಥ, ೬.೩, ೧೯೮೪, ೩೩- ೫

-- ಅಜ್ಞಾತ ಕೃತ ಕಲಿಗಣನಾಥ ಸಾಂಗತ್ಯ
ಕಸಾಪ, ೬೯.೧, ೧೯೮೪ ೬೮ -೭೫

-- ಕೊಂಡಗುಳಿ ಕೇಶಿರಾಜಕೃತ `ಅಳಲಾಷ್ಟಕ' (ಬಿ. ಬಿ. ಬಿರಾದಾರರೊಡನೆ)
ಬಸವಪಥ, ೬.೬. ೧೯೮೪, ೨೬- ೮

-- ಕೊಂಡಗುಳಿ ಕೇಶರಾಜನ ಕೆಲವು ಅಪ್ರಕಟಿತ ಷಡಕ್ಷರ ಕಂದಗಳು
ಬಸವಪಥ, ೬.೧೦, ೧೯೮೫, ೧೮ - ೯

-- ಶಾಂತಮಹಲಿಂಗಮಲ್ಲೇಶ್ವರ ಕೃತ ಗಣಾಷ್ಟೋತ್ತರ
ಪ್ರಸಾದ, ೨೩ -೧೯, ೧೯೮೫, ೨೨- ೯,

-- ಕೇಶಿರಾಜ ಡಣ್ಣಾಯಕರ ಕಂದ
ಸಾಧನೆ, ೧೪.೧, ೧೯೮೫, ೧೧೮ -೧೩೭

-- ಸಿದ್ಧನಂಜೇಶನ ಗಂಗಮ್ಮನ ತ್ರಿವಿಧಿ
ಬಸವಪಥ, ೭.೧, ೧೯೮೫, ೩೧- ೪೪

-- ಭೈರವೇಶ್ವರನ ಪವಾಡ
ಕಸಾಪ, ೭೦.೧, ೧೯೮೫, ೭೫ -೮೪

-- ಉಳಿಯುಮೇಶ್ವರದ ಚಿಕ್ಕಣ್ಣನ ಕೆಲವು ಅಪ್ರಕಟಿತ ವಚನಗಳು
ಬಸವಪಥ, ೭.೫, ೧೯೮೫, ೨೦- ೧

-- ಕೆಲವು ಅಲಭ್ಯ ಶತಕಗಳ ಉಲ್ಲೇಖಗಳು
ಪ್ರಕ, ೬೫. ೧- ೨-೩, ೧೯೮೩, ೨೩೪ -೪೫

-- ಗುರುಸ್ತೋತ್ರಾಷ್ಟಕ
ತರಳಬಾಳು, ೩೯, ೧೯೮೫, ೬೩- ೪

-- ಜೇಡರದಾಸಿಮಯ್ಯನ ಕೆಲವು ಅಪ್ರಕಟಿತ ವಚನಗಳು
ಸಾಧನೆ, ೧೪. ೩, ೧೯೮೫, ೧೦೬ -೧೦೮

-- ಸಕಲೇಶಮಾದರಸರ ಅಪ್ರಕಟಿತ ವಚನಗಳು
ಸಾಧನೆ, ೧೪. ೩ ೧೯೮೫, ೧೦೮ -೧೦೯

-- 'ಕೊಂಡಗುಳಿಕೇಶಿರಾಜನ ೨ ಅಪ್ರಕಟಿತ ಕಂದಗಳು
ಸಾಧನೆ, ೧೪. ೪, ೧೯೮೫, ೧೫೫

-- ವಿರಕ್ತ (ತ) ತೋಂಟದಾರ್ಯನ ಏಕೋತ್ತರ ಶತಸ್ಥಲ
ಸಾಧನೆ, ೧೪. ೪, ೧೯೮೫, ೧೫೫ -೫೯,

-- ಪಾಲ್ಕುರಿಕೆ ಸೋಮನಾಥ ಕೃತ ಸದ್ಗುರು ರಗಳೆ, ಸೋಸಲೆ ರೇವಣಾರಾಧ್ಯಕೃತ
ಮೂಲಾಟೀಕಾ ಸಹಿತ
ಪ್ರಸಾದ, ೨೪ -೩, ೧೯೮೬, ೩೨- ೪೮
೨೪, ೪, ೧೯೮೬, ೩೫ -೪೩

-- ಶಂಭು ತೆಲುಗೇಶ್ವರಾಂಕಿತದ ಅಪ್ರಕಟಿತ ವಚನಗಳು
ಬಸವಪಥ, ೭.೧೨, ೧೯೮೬, ೧೮

-- ನಿವೃತ್ತಿ ಸಂಗಯ್ಯನ ಅಪ್ರಕಟಿತ ವಚನಗಳು
ಬಸವಪಥ, ೭.೧೨, ೧೯೮೬, ೧೯

-- ಅಗತಕಲ್ಯಭೂಜನಂ, -ಅಷ್ಟಕ
ಬಸವಪಥ, ೮.೧, ೧೯೮೬, ೫೧ -೨

-- ತ್ರಿಭುವನತಾತನ `ಪಗಲ್ಪೋಳ ರಗಳೆ'
ಕಭಾ, ೧೮, ೨-೩, ೧೯೮೫ -೮೬, ೯೧- ೭

-- ಜೇಡರದಾಸಿಮಯ್ಯನ ಎರಡು ಅಪ್ರಕಟಿತ ವಚನಗಳು
ಬಸವಪಥ, ೮.೮, ೧೯೮೬, ೫೫

-- ಶ್ರೀ ಬಸವಲಿಂಗಾಂಕಿತದ ಒಂದು ಅಪ್ರಕಟಿತ ವಚನ
ಬಸವಪಥ, ೮.೮, ೧೯೮೬, ೫.೫

-- ಷಡಕ್ಷರಲಿಂಗಾಂಕಿತ ಶಿವಗಣಂಗಳ ರಗಳೆ
ವೀರಶೈವ ಸಮನ್ವಯ, ೧.೧, ೧೯೮೭, ೪೪ -೫೪

-- ಸುಪ್ಪಿಮಲ್ಲನ ಸಿದ್ಧೇಶ್ವರನ ಸಾಂಗತ್ಯ
ಬಸವಪಥ, ೯.೧, ೧೯೮೭, ೨೩ -೩೫

-- ಗರಣಿ ಬಸವಲಿಂಗನ ತೋಂಟದ ಸಿದ್ದೇಶ್ವರನ ಪವಾಡದ ತಾರಾವಳಿ
ವೀರಶೈವ ಸಮನ್ವಯ, ೧.೪, ೧೯೮೭, ೪೦ -೯

-- ಶಂಕರದೇವ ಕೃತ ಶಂಕರಶತಕ ಮತ್ತು ಶಂಕರೇಶ ಶತಕ
ವೀರಶೈವ ಸಮನ್ವಯ ೧.೨, ೧೯೮೭, ೪೫ -೫೪

-- ಕುಮಾರರಾಮನಿಗೆ ಸಂಬಂಧಿಸಿದ ಒಂದು ಹೊಸ ಉಲ್ಲೇಖ
ಹರನಸಿರಿ ೧೯೮೭, ೧೪೭- ೫೪

-- ಶಂಕರದೇವರ -------- ಅಪ್ರಕಟಿತ ಮೂರು ಕಂದಗಳು
ಬಸವಪಥ, ೧೦.೭- ೮, ೧೯೮೮, ೧೭- ೮

-- ಗೋಣಿಮಾರಯ್ಯನ ಮೂರು ಅಪ್ರಕಟಿತ ವಚನಗಳು
ಬಸವಪಥ, ೧೦.೯, ೧೯೮೮, ೨೧- ೩

-- ದ್ಯಾಂಪುರದ ಕಲ್ಲಿನಾಥ ಕವಿಗಳ ಗುರುತೋಂಟದಾರ್ಯರ ವಂಶಾವಳಿ ರೂಪಕ ಪದಗಳು
ಪ್ರಸಾದ, ೨೩.೬, ೧೯೮೮, ೨೨- ೪
ಬಸವಪಥ,೧೦.೧೨, ೧೯೮೯, ೧೮ -೨೦

-- ಪ್ರಭುರಾಯನಷ್ಟಕ
ಬಸವಪಥ, ೧೦.೧೧, ೧೯೮೯, ೨೭. ೮

-- ಗುರುವಿಶ್ವೇಶ್ವರಾ ಅಂಕಿತದ ಒಂದು ಅಪ್ರಕಟಿತ ವಚನ
ಜ್ಞಾನದೇಗುಲ, ೧೯೮೯, ೭೩೭- ೩೮

-- ಇಮ್ಮಡಿ ಮುರಿಗಾ ಗುರುಸಿದ್ಧಸ್ವಾಮಿಗಳ ಸ್ಕಂದಕಲ್ಯಾಣದೊಳಗಣ ಚೌಪದಿವರ್ಗದ ಶಿವ ಸ್ತೋತ್ರ
ಚಿನ್ಮೂಲಾದ್ರಿಚೇತನ, ೧೯೮೯ ೬೩- ೫

-- ಇಮ್ಮಡಿ ಗುರುಸಿದ್ಧಸ್ವಾಮಿಗಳ ಅಮ್ಮವ್ವೆಚರಿತೆಯೊಳಗಣ `ಶಿವಸ್ತೋತ್ರ' ಮತ್ತು `ಜೋಗುಳ ಪದ'
ಸಾಧನೆ, ೧೮. ೩- ೪, ೧೯೮೯, ೧೨೧ -೨೩

-- ಇಮ್ಮಡಿ ಗುರುಸಿದ್ಧಸ್ವಾಮಿಗಳ `ಶಿವರಹಸ್ಯ ಪುರಾಣ'
ಕಸಾಪ, ೭೪.೧-೨, ೧೯೮೯, ೨೪ -೭

-- ಇಮ್ಮಡಿ ಗುರುಸಿದ್ಧಸ್ವಾಮಿಗಳ `ಸ್ಕಂದಕಲ್ಯಾಣ' ದಲ್ಲಿನ ಶಿವಸ್ತೋತ್ರ
ಬಸವಪಥ, ೧೧.೧೨, ೧೯೯೦, ೫೪ -೬

-- ನಿಜಗುರುಶಾಂತಮಲ್ಲಿಕಾರ್ಜುನ ಅಂಕಿತದ ಒಂದು ಅಪ್ರಕಟಿತ ವಚನ
ಸಾಧನೆ ೧೯.೩-೪, ೧೯೯೦, ೨೧೬ -೨೭

-- ಎರಡು ಅಪ್ರಕಟಿತ ಶತಕಗಳು
ಧನ್ಯಜೀವಿ, ೧೯೯೧, ೩೭೭ -೭೯

-- ಅಪ್ರಕಟಿತ ನಾಲ್ಕು ವೃತ್ತಗಳು
ಕರ್ನಾಟಕಲೋಚನ, ೪.೨, ೧೯೯೧, ೧೩
ಹರೀಶ್ವರ ದೇವರ ಕಂದ
ತರಳಬಾಳು { ೧೭.೨, ೧೯೯೧- ೯೨ , ೪೦ -೮
೧೭.೩, ೧೯೯೨, ೩೭ -೪೪ }

-- ಬಾಳೆಹಳ್ಳಿ ವೀರಭದ್ರನ ಬಿರುದಾವಳಿ
ರಂಭಾಪುರಿ ಬೆಳಗು ೧.೨, ೧೯೯೨, ೧೦-೬

-- ಪ್ರಸನ್ನದೇಶಿಕನ ಹೊನ್ನವಳ್ಳಿ ಸಿದ್ಧವೀರೇಶ್ವರನ ಪವಾಡ
ಪರಂಜ್ಯೋತಿ ೨೪.೧೨, ೧೯೯೨, ೬೮೪ -೯೩

-- ಎರಡು ಅಪ್ರಕಟಿತ ವಚನಗಳು
ಕಭಾ ೨೪.೪, ೧೯೯೨, ೧೬೪ -೬೬

-- ಹಂಪೆಯ ಹರಿಹರನ (?) (ವಿರೂಪಾಕ್ಷಾಷ್ಟಕ)
ಬಸವಪಥ, ೧೪.೬. ೧೯೯೨, ೬೪-೫

-- ಜ್ವಲಕಂಠ ಮಹಂತ ಸ್ವಾಮಿಗಳ 'ಛಂದಸ್ಸಿನ ಗಣನೆಯ ವಾರ್ಧಿಕ'

-- ಸತ್ಯಶುದ್ಧ ಕಾಯಕ, ೨.೪, ೧೯೯೨, ೬೫-೭
ನಿ:ಕಲ ವಚನ ರಂಭಾಪುರಿ ಬೆಳಗು ೧.೪, ೧೯೯೨, ೩೫ -೮

-- ಮುರಿಗೇಂದ್ರ ಸ್ತುತಿ
ಸತ್ಯಶುದ್ಧ ಕಾಯಕ, ೨. ೫-೬, ೧೯೯೨, ೬೪- ೬

-- ಸಂಪಾದನೆ ಸಿದ್ಧೇಶ್ವರೇಶ್ವರ ದೇವನ ಸಂಕಲಿತ ಕೊಂಡಗುಳಿ ಕೇಶಿರಾಜನ
ಲಿಂಗಸೋತ್ರದಕಂದ
ಸಾಧನೆ, ೨೧.೧-೪ (೧೯೯೨) ಹಾಗೂ ೨೨. ೧. ೨. (೧೯೯೩), ೧೬೬- ೬೯

-- ಮೋಳಿಗೆ ಮಾರಯ್ಯನ ಎರಡು ಅಪ್ರಕಟಿತ ವಚನಗಳು
ಬಸವಪಥ, ೧೪ -೧೧, ೧೯೯೩, ೧೧ -೧೨

-- ಚೆನ್ನವೀರನ ಮುದ್ವೀರ ತಾರಾವಳಿ
ಸತ್ಯಶುದ್ಧಕಾಯಕ, ೨. ೧-೨,೧೯೯೧, ೧೦೫ -೧೪

-- ಶಾಂತದೇವನ ಸಿದ್ಧವೀರೇಶ್ವರ ದೇವರ ನವರತ್ನಮಾಲೆ
ಗುರುಶ್ರೀ ೧೯೯೩, ೫ -೬

-- ಸೋಸಲೆರೇವಣಾರಾಧ್ಯನ ಶರಣುಬಸವ ರಗಳೆ ಟೀಕೆ
ಅಮರಪ್ರಕಾಶ, ಸಂಪುಟ ೧, ೧೯೮೧

-- ಹಂಪಿಯ ಹರಿಹರನ ಅಕ್ಷರಮಾಲಿಕಾ ಗದ್ಯ
ಶರಣ ಸೌರಭ, (ಸಂ) ಎಂ. ಚಿದಾನಂದಮೂರ್ತಿ, ೧೯೮೯, ೬೨ -೩

-- ಹಂಪೆಯ ಹರಿಹರ ಕೃತ (?) ಹಂಪೆಯ ರಾಯನ ಶತಕ
ಬಸವಪಥ, ೧೫ -೪, ೧೯೯೩, ೧೯-೨೩

-- ನಿರಾಳಪ್ರಿಯ ಸೊಡ್ಡಳಯ್ಯ ಅಂಕಿತದ ಅಪ್ರಕಟಿತ ವಚನ
ಬಸವಪಥ, ೧೫- ೪, ೧೯೯೩, ೨೪

-- ಘನಲಿಂಗ ಶಿವಯೋಗಿಗಳವರ ಒಂದು ಅಪ್ರಕಟಿತ ವಚನ
ಪ್ರಸಾದ, ೬.೫, ೧೯೯೧, ೨೨-೩

-- ವಿರಕ್ತ ತೋಂಟದಾರ್ಯನ (ಕ್ರಿ.ಶ. ೧೬೧೬) ನೂತನ ಪುರಾತನರ ರಗಳೆ
ಬಸವಪಥ, ೧೫-೯, ೧೯೯೩,೫೪ -೬೫

-- ವಿರೂಪಾಕ್ಷಯ್ಯನವರು ನಿರೂಪಿಸಿದ ಶಾರ್ದೂಲವೃತ್ತ
ಬಸವ ಪಥ, (೧೫ -೧೧) ಫೆ ೧೯೯೪ (೪೨ -೪೪)

ಸ್ವರವಚನ / ಹಾಡು

-- ಶರಣರ ಹಾಡು
ಶಸಾ, ३೧.३-೪, ೧೯೬೮, ೬೮

-- ಕರಪೀಠಕೆ ಬಾಬಾ -- ಶಂಕರ ದೇವ
ಹೇಮಕೂಟ, ೧.೪, ೧೯೭೫, ೨೨ -३

-- ಬಸವನೆ ಗುರುವೆನಗೆ
ಹೇಮಕೂಟ ೧.೧೧,೧೯೭೬, ೪

-- ಎಳಂದೂರ ಷಡಕ್ಷರಿದೇವರ ಒಂದು ಪ್ರಕಟಿತ ಸ್ವರವಚನ
ಪ್ರಸಾದ, ೧३-೯, ೧೯೮೧, ३೪ -೫

-- ಚಿಲ್ಹಾಳೇಶ್ವರ ಅಂಕಿತದ ಸ್ವರವಚನಗಳು
ಬಸವಪಥ, ३.೯, ೧೯೮೧, ೬೭ -೮೨

-- ಮಲ್ಲೇಶ್ವರಾಂಕಿತ ಸ್ವರವಚನ
ಬಸವಪಥ, ೪.೮, ೧೯೮೨, ೫೨ -೬

-- ಶಾಂತೇರಾಂಕಿತ ಸ್ವರವಚನ
ತರಳಬಾಳು, ३೦, ೧೯೮೦, ೨೯ -३೧

-- ನೀಲಗ್ರೀವಾಂಕಿತ ಒಂದು ಸ್ವರವಚನ
ಸಮಾಜ ಸಂಗಮ, ೧೯೮೪

-- ಇಮ್ಮಡಿ ಗುರುಸಿದ್ಧಸ್ವಾಮಿಗಳು ನಿರೂಪಿಸಿದ ಶೋಭನದ ಪದಗಳು
ಪ್ರಸಾದ, ೨೨-೧೮, ೧೯೮೪, ३೯ -೪೨

-- ಬೆಂಗಳೂರು ಮುದ್ವೀರ ಸ್ವಾಮಿಗಳ ಸ್ವರವಚನಗಳು
ಬಸವಪಥ, ೬.೧, ೧೯೮೫, ೨೦-೪

-- ಮಗ್ಗೆ ಮಾಮಿದೇವನ ಎರಡು ಸ್ವರ ವಚಗಳು(ಒಂದು ಟಿಪ್ಪಣಿ)
ಲೋಚನ, ३.೨, ೧೯೮೫, ೧-೨, ೪೮ -೯

-- ಕಾರುಗಹಳ್ಳಿ ಶಾಂತಯ್ಯನ ಕಾಲ ವಿಚಾರ ಮತ್ತು ಕೃತಿಯ ಬಗೆಗೆ ಒಂದು ಟಿಪ್ಪಣಿ
ಬಸವಪಥ, ೮.೯, ೧೯೮೬, ೪೮ -೫೧

-- ಬಸವೇಶ್ವರರಾಂಕಿತದ ಸ್ವರವಚನ
ವೀರಶೈವ ಸಮನ್ವಯ, ೧.೨, ೧೯೮೭, ೪೪

-- ಕೋರಾಣ್ಯದ ಶಿವಲಿಂಗಾಂಕಿತ ಅಪ್ರಕಟಿತ ಸ್ವರವಚನಗಳು
ಕರ್ನಾಟಕ ಲೋಚನ, ೧.೧, ೧೯೮೮, ೫೨- ೪
-- ಎರಡು ಸ್ವರ ವಚನಗಳು
ರಜತಮಹೋತ್ಸವ ಸ್ಮರಣ ಸಂಚಿಕೆ, ಜೆ.ಎಸ್.ಎಸ್. ಸಂಯುಕ್ತ ಕಿರಿಯ ಕಾಲೇಜು, ಜಯನಗರ, ೧೯೮೮, ೨೨ -೩
-- ಮೈಲಾರದ ಬಸವಲಿಂಗ ಶರಣರ ಎರಡು ಅಪ್ರಕಟಿತ ರಚನೆಗಳು
ಬಸವಪಥ, ೧೦.೬, ೧೯೮೮, ೨೭ -೩೧
-- ಶಂಕರದೇವರ ಒಂದು ಅಪ್ರಕಟಿತ ಸ್ವರ ವಚನ
ಬಸವ ಪಥ, ೧೦.೭- ೮, ೧೯೮೮, ೧೭- ೮
-- ಇಮ್ಮಡಿ ಗುರುಸಿದ್ಧಸ್ವಾಮಿಗಳ ಒಂದು ಅಪ್ರಕಟಿತ ಸ್ವರವಚನ
ಪ್ರಸಾದ, ೨೩- ೬, ೧೯೮೮, ೨೦ -೧
-- ಹೆಳವನಕಟ್ಟೆ ಗಿರಿಯಮ್ಮನ ಒಂದು ಅಪ್ರಕಟಿತ ಹಾಡು
ಕರ್ನಾಟಕ ಲೋಚನ, ೧.೨, ೧೯೮೮, ೬೩
-- ಮೂರು ಅಪ್ರಕಟಿತ ಸ್ವರ ವಚನಗಳು
ಬಸವಪಥ, ೧೧.೧, ೧೯೮೯, ೨೨ -೮
-- ಶಂಕರದೇವರ ಮತ್ತೆರಡು ಅಪ್ರಕಟಿತ ಸ್ವರವಚನಗಳು ಮತ್ತು ತೋಂಟದಾರ್ಯ ಅಂಕಿತದ ಸ್ವರವಚನ
ಬಸವಪಥ, ೧೧. ೪ -೫, ೧೯೮೯, ೫೯ -೬೨
-- ಇಮ್ಮಡಿ ಮುರಿಗಾ ಗುರುಸಿದ್ಧಸ್ವಾಮಿಗಳ ಕೆಲವು ಅಪ್ರಕಟಿತ ಸ್ವರವಚನಗಳು
ಚಿಮ್ಮೂಲಾದ್ರಿ ಚೇತನ, ೧೯೮೯, ೬೧ -೬೩.
-- ಕೆಂಪುಗಂಬಳಿ ಬಸವಲಿಂಗೇಶಾಂಕಿತದ ಸ್ವರವಚನಗಳು
ಬಸವಪಥ ೧೧.೭, ೧೯೮೯, ೪೫ -೮
-- ಆರು ಅಪ್ರಕಟಿತ ಸ್ವರ ವಚನಗಳು,
ಕರ್ನಾಟಕ ಲೋಚನ, ೩.೨, ೧೯೯೦, ೯೨ -೭
-- ಶಿವಪೂಜೆದೇವ -ಶಿವಪೂಜೇಶಾಂಕಿತದ ಎರಡು ಸ್ವರವಚನಗಳು
ಬಸವಪಥ, ೧೨.೧೧, ೧೯೯೧, ೩೬ -೮
-- ಮೂರು ಅಪ್ರಕಟಿತ ಸ್ವರವಚನಗಳು
ಸತ್ಯಶುದ್ಧಕಾಯಕ, ೧.೫, ೧೯೯೧, ೬೨ -೪
-- ಐದು ಅಪ್ರಕಟಿತ ಸ್ವರವಚನಗಳು
ಸತ್ಯಶುದ್ಧಕಾಯಕ, ೧.೬, ೧೯೯೧, ೮೮ -೯೨

-- ಕೆಲವು ಅಪ್ರಕಟಿತ ಸ್ವರವಚನಗಳು
ಬಸವಪಥ, ೧೩.೬, ೧೯೯೧, ೪೨ -೮

-- ಕೆಲವು ಅಪ್ರಕಟಿತ ಸ್ವರವಚನಗಳು
ಬಸವಪಥ, ೧೩.೭,೧೯೯೧, ೫-೭

-- ಆರೂಢಮಲ್ಲಾಂಕಿತ ಮೂರು ಸ್ವರವಚನಗಳು
ಬಸವಪಥ, ೧೩.೯, ೧೯೯೧, ೧೯ -೨೧

-- ಐದು ಅಪ್ರಕಟಿತ ಸ್ವರವಚನಗಳು
ಬಸವಪಥ, ೧೩.೧೧, ೧೯೯೨,೫೧ -೫೫

-- ಐದು ಅಪ್ರಕಟಿತ ಸ್ವರವಚನಗಳು
ಬಸವಪಥ, ೧೪೦ ೧., ೧೯೯೨, ೧೮ -೨೨

-- ಹೊಸಪುರದ ನೆಲೆ ವಾಸಾಂಕಿತ ಮಂಗಳಾರತಿ
ರಂಭಾಪುರಿ ಬೆಳಗು, ೧.೨, ೧೯೯೨, ೨೭

-- ಕವಿಲಿಂಗನ ಮೂರು ಅಪ್ರಕಟಿತ ಸ್ವರವಚನಗಳು
ಸತ್ಯಶುದ್ಧಕಾಯಕ, ೨.೩, ೧೯೯೨, ೭೭- ೮
ಬಸವಪಥ, ೧೪.೪, ೧೯೯೨, ೯೪೮ -೫೧

-- ಐದು ಅಪ್ರಕಟಿತ ಸ್ವರ ವಚನಗಳು
ಬಸವಪಥ, ೧೪.೮, ೧೯೯೨, ೫೫- ೮

-- ಕೆಲವು ಅಪ್ರಕಟಿತ ಸ್ವರವಚನಗಳು
ಕಭಾ, ೨೫.೧, ೧೯೯೨, ೧೯೪-೨೦೦

-- ಮೂರು ಅಪ್ರಕಟಿತ ಸ್ವರವಚನಗಳು
ಬಸವಪಥ, ೧೪.೧೧, ೧೯೯೩, ೧೨ -೧೪

-- ಸ್ವಾದಿ ಸದಾಶಿವರಾಯನ ರಚನೆಗಳು
ಕಭಾ, ೨೪.೩, ೧೯೯೨, ೧೬೫ -೬೭

-- ಮರಿಶಾಂತಬಸವ ದೇವನ ಒಂದು ಅಪ್ರಕಟಿತ ಸ್ವರವಚನ
ಬಸವಪಥ, ೧೫ -೪, ೧೯೯೩, ೨೩ -೪

-- 'ನಿರ್ವಾಣಿ ಅಲ್ಲಮಪ್ರಭು' ಅಂಕಿತದ ಸ್ವರವಚನ
ಬಸವಪಥ ೧೫ -೯, ೧೯೯೩, ೪೯.

-- ಕವಿಲಿಂಗನ (ಕ್ರಿ. ಶ. ೧೫೫೦) ಮೂರು ಅಪ್ರಕಟಿತ ಸ್ವರವಚನಗಳು
ಸತ್ಯ ಶುದ್ಧಕಾಯಕ (೩+ ೩,೪) ಮಾ -ಅಗಸ್ಟ ೧೯೯೩ (೭೩ -೭೪)

-- ಗುರುಬಸವಾಷ್ಟಕ : ಕಾಯಕ (ಸಂ) ಟಿ. ಆರ್. ಮಹಾದೇವಯ್ಯ ೧೯೯೪, ಪುಟ, ೩೩
-- ಸೋದೆ ಬಸವಲಿಂಗರಾಜನ (೧೬೯೭-೧೭೪೫) ಶ್ರೀಗುರುಸಿದ್ಧೇಶ್ವರ ಸ್ತೋತ್ರ (ಸಂ.)
ಬಸವಪಥ, ೧೬ -೬, ೧೯೯೪, ೪೨ -೩
-- ಸಾಸಿರಲಿಂಗನ ಪದ್ಯ (ಸಂ)
ಬಸವಪಥ, ೧೬ -೬, ೧೯೯೪, ೩೮ -೪೧
-- ಇಮ್ಮಡಿ ಗುರುಸಿದ್ಧಸ್ವಾಮಿಗಳ ಪಾದಸ್ತೋತ್ರ (ಸಂ)
ಸಾಧನೆ, ೨೩ -೧, ೨ -೧೯೯೪ ೭೧ -೮೫
-- ಚೆನ್ನಬಸವಣ್ಣನವರ ಒಂದು ಅಪ್ರಕಟಿತ ವಚನ (ಓಂ ಬ್ರಹ್ಮಾಂಡದಲ್ಲಿ...)
ಸತ್ಯಶುದ್ಧಕಾಯಕ ೪, ೧-೪, ೧೯೯೩ -೯೪ ೧೦೪ -೧೦೫
-- ಅಂಬಿಗರ ಚೌಡಯ್ಯನ ನಾಲ್ಕು ಅಪ್ರಕಟಿತ ವಚನಗಳು
ಸುಕೃತಿ, ೧೯೯೪ (೪೬-೪೭)
-- ಚತುರಾಚಾರ್ಯರ ಮಂಗಳ
ರಂಭಾಪುರಿ ಬೆಳಗು -೩-೬, ಡಿಸೆಂಬರ್ -೧೯೯೪, ೪೩ -೪
-- ನಿಡುಗಲ್ಲ ವೀರಭದ್ರಾಷ್ಟಕ (ಸಂ)
ಬಸವಪಥ ೧೬ -೧೦, ೧೯೯೫, ೩೭- ೮
-- ಶಾಂತಲಿಂಗಾಷ್ಟಕ(ಸಂ)
ಬಸವಪಥ ೧೬ -೧೦, ೧೯೯೫, ೩೮ -೯
-- ಕೂಡ್ಲೂರು ಸಂಗಮದೇವರ ವಚನ
(ಸಂ.) ಬಸವಪಥ ೧೭ -೧, ೧೯೯೫, ೩೯-೪೨
-- ಮೂರು ಅಪ್ರಕಟಿತ ವಚನಗಳು
(ಸಂ.) ಸಂಶೋಧನ ವ್ಯಾಸಂಗ, VII, ೧ -೨, ೧೯೯೫, ೩
-- ವಾಟಾಳ ಬಸವಲಿಂಗ ಸ್ವಾಮಿಗಳ ತಾರಾವಳಿ
(ಸಂ.) ಶ್ರೀಮರಳೇಗವಿ ದೀಪ್ತಿ, ೧೯೯೫

ಪ್ರಸ್ತುತ

'ಕರ್ನಾಟಕ ಭಾರತಿ'ಯ ೨೭ನೆಯ ಸಂಪುಟದ ಕೊನೆಯ ಸಂಚಿಕೆಯಿದು. ಇದರಲ್ಲಿ ಎಂದಿನಂತೆ ಸಾಹಿತ್ಯ, ಸಂಶೋಧನೆ, ಜಾನಪದ, ವಿಮರ್ಶೆ, ಶಾಸನ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ೧೭ ಲೇಖನಗಳನ್ನು ಅಳವಡಿಸಲಾಗಿದೆ. ಸಂಗೀತ ಶಾಸ್ತ್ರಕ್ಕೆ ಸಂಬಂಧಿಸಿದ ಎರಡು ಲೇಖನಗಳು ಈ ಸಂಚಿಕೆಯಲ್ಲಿ ಎಡೆ ಪಡೆದುದು ವಿಶೇಷ.

ಶ್ರೀ ಎಸ್. ಶಿವಣ್ಣ ಅವರು ನಮ್ಮ ನಾಡಿನ ಹಸ್ತಪ್ರತಿ ಸಂಶೋಧಕರಲ್ಲಿ ಅಗ್ರಗಣ್ಯರು. ಅವರು ಈ ವರೆಗೆ ಈ ಕುರಿತು ಬರೆದ ಲೇಖನ ಮತ್ತು ಟಿಪ್ಪಣಿಗಳು ಸಂಶೋಧಕರಿಗೆ ಮಹತ್ವದ ಆಕರಗಳೆನಿಸಿವೆ. ಕಾರಣ ಈ ಸಂಚಿಕೆಯಲ್ಲಿ ಅವರ ಲೇಖನ ಸೂಚಿಯೊಂದನ್ನು ಅಳವಡಿಸಲಾಗಿದೆ.

ಶ್ರವಣಬೆಳ್ಗೊಳದ ಮಹತ್ವ - ಅದನ್ನು ಕುರಿತು ಆಗಿರುವ, ಆಗಬೇಕಾದ ಶೋಧಗಳು, ಗ್ರಾಮಾಂತರ ವಸ್ತು ಸಂಗ್ರಹಾಲಯ ಸಂಶೋಧನಾ ಕೇಂದ್ರ, ನುಲಿಯ ಚಂದಯ್ಯ ಚರಿತ್ರಾತ್ಮಕ ನೋಟ, ಕರಡಿಕಲ್ಲು ಬಿಲ್ಲಮರಾಯ, ಸಂಗಮದ ಶಾಸನಗಳು, ಬಾದಾಮಿ ಚಾಲುಕ್ಯರ ಕಾಲದ ಹಲವು ಸ್ಥಪತಿಗಳು ಮತ್ತು ಶಿಲ್ಪಿಗಳು, ಆದಯ್ಯನ ಜನ್ಮಗ್ರಾಮ ಮತ್ತು ಕಾಲ ಮರುಪರಿಶೀಲನೆ - ಮೌಲಿಕ ಸಂಶೋಧನಾತ್ಮಕ ಲೇಖನಗಳೆನಿಸಿದರೆ, ಮಾಸ್ತಿಯವರ ಕೆಲವು ನಾಟಕಗಳು, ಪಿ. ಲಂಕೇಶರ ಕಲ್ಲುಕರಗುವ ಸಮಯ ಮತ್ತು ಇತರ ಕತೆಗಳು ಉತ್ತಮ ವಿಮರ್ಶೆಗಳಾಗಿವೆ. ಪಾಶ್ಚಾತ್ಯ 'ಮಾದರಿ' ಪರಿಕಲ್ಪನೆಗೊಂದು ಚೌಕಟ್ಟು, ಜನ ಜಾನಪದ, ಕದರಮಂಡಲಗಿ ಹನುಮಂತ - ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದ ಗಮನಾರ್ಹ ಬರಹಗಳೆನಿಸಿವೆ.

ಲೇಖನಗಳನ್ನು ಬರೆದು ಕೊಟ್ಟ ಎಲ್ಲ ಲೇಖಕರಿಗೆ ಅಭಿನಂದನೆ ಸಲ್ಲಿಸುತ್ತ, ಈ ಸಂಚಿಕೆಯನ್ನು ಸಾರಸ್ವತಲೋಕ ಪ್ರೀತಿಯಿಂದ ಬರಮಾಡಿಕೊಳ್ಳಬೇಕೆಂದು ಕೋರುತ್ತೇವೆ.

ಸಂಪಾದಕರು

ಲೇಖಕರ ವಿಳಾಸಗಳು

೧. ಡಾ. ಚಂದ್ರಮೌಳಿ ನಾಯ್ಕರ
ಅಧ್ಯಾಪಕರು, ಸಂಸ್ಕೃತ ವಿಭಾಗ
ಕರ್ನಾಟಕ ಆರ್ಟ್ಸ್ ಕಾಲೇಜ, ಧಾರವಾಡ

೨. ಡಾ. ವೀರಣ್ಣ ದಂಡೆ
ಅಧ್ಯಾಪಕರು, ಕನ್ನಡ ಅಧ್ಯಯನಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೩. ಡಾ. ಬಿ. ವ್ಹಿ. ಶಿರೂರ
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕ. ವಿ. ವಿ. ಧಾರವಾಡ

೪. ಡಾ. ಜಯಪ್ರಕಾಶ ಮಾವಿನಕುಳಿ
ಸೀನಿಯರ್ ಪ್ರಾಧ್ಯಾಪಕರು, ಮಹಾವೀರ ಕಾಲೇಜ,
ಮೂಡಬಿದಿರೆ - ೫೭೪೨೨೭ (ದ.ಕ)

೫. ಡಾ. ಶಶಿಕಲಾ ವೀ. ಚವಡಿ
ಅಧ್ಯಾಪಕಿಯರು, ಸಂಗೀತ ಮಹಾವಿದ್ಯಾಲಯ
ಧಾರವಾಡ

೬. ಡಾ. ಮಂಜುನಾಥ ಬೇವಿನಕಟ್ಟಿ
ಉಪನ್ಯಾಸಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ಕಾಮಲಾಪುರ -೫೮೩೨೨೧

೭. ಕೆಳದಿ ಗುಂಡಾ ಜೋಯಿಸ
ಇತಿಹಾಸ ತಜ್ಞರು, ಕೆಳದಿ

೮. ಡಾ. ವ್ಹಿ. ಜಿ. ಪೂಜಾರ
ಪ್ರವಾಚಕರು, ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ - ೫೮೫೧೦೬

೯. ಡಾ. ಬಸವಲಿಂಗ ಸೊಪ್ಪಿಮಠ
ಅಧ್ಯಾಪಕರು, ಕನ್ನಡ ವಿಭಾಗ
ಎಲ್. ವ್ಹಿ. ಡಿ. ಕಾಲೇಜ, ರಾಯಚೂರು- ೫೮೪೧೦೧

೧೦. ಡಾ. ನಗುವನಹಳ್ಳಿ ರತ್ನನಾಗರಾಜ್
ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು- ೫೭೦೦೦೬

೧೧. ಡಾ. ಎಸ್. ಎಲ್. ಎಂ. ಪಾಟೀಲ
೬೩೪, ಆರ್.ಸಿ. ನಗರ, ಎರಡನೆಯ ಹಂತ
ಬೆಳಗಾಂವ -೫೯೦೦೦೬

೧೨. ಡಾ. ಬಿ. ಪಿ. ಪಾಟೀಲ
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕ. ವಿ. ವಿ. ಧಾರವಾಡ

೧೩. ಹನುಮಾಕ್ಷಿ ಗೋಗಿ
ಸಹಕಾರ ಸಂಘಗಳ ಸಹಾಯಕ ನಿಬಂಧಕರು
ಮನೆ. 'ಕಾರ್ತಿಕಶ್ರೀ' ಎಚ್. ಆಯ್. ಜಿ. -೨೭,
ನವನಗರ, ಹುಬ್ಬಳ್ಳಿ

೧೪. ಶ್ರೀಮತಿ ಮೀರಾಗುಂಡಿ
ಉಪನ್ಯಾಸಕರು,
ಸಂಗೀತ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೫. ಡಾ. ಎಸ್. ಎಲ್. ಶಾಂತಕುಮಾರಿ
ಪ್ರಾಧ್ಯಾಪಕರು,
ಪ್ರಾಚೀನ ಇತಿಹಾಸ ವಿಭಾಗ
ಕ. ವಿ. ವಿ. ಧಾರವಾಡ

೧೬. ಡಾ. ಸಿ. ನಾಗಭೂಷಣ
ಉಪನ್ಯಾಸಕರು, ಕನ್ನಡ ಅಧ್ಯಯನ ಸಂಸ್ಥೆ
ಸ್ನಾತಕೋತ್ತರ ಕೇಂದ್ರ, ಕೃಷ್ಣದೇವರಾಯನಗರ,
ಸೊಂಡೂರು- ೫೮೩೧೧೯
ಜಿ. ಬಳ್ಳಾರಿ